ರಾಜದಂಡ.

[ಐತಿಹಾಸಿಕ ಕಾದಂಬರಿ.]

ಲೇಖಕ:—

ರಾ. ತ್ರ್ಯ. ಕರ್ಪೂರ..

1929

ಬೆಲೆ ೧ ರೂಪಾಯಿ.

~~Raghurama Mallya B~~

U Narayana Rao

Car Street

Mangalore

ರಾಜದಂಡ!

(ಐತಿಹಾಸಿಕ ಕಾದಂಬರಿ.)

ಲೇಖಕ:—

ರಾ. ತ್ರ್ಯ. ಕರ್ಪೂರ,

ಮ್ಯಾನೇಜರ, ಸ. ಚ, ಆನಂದವನ

ಪ್ರಕಾಶಕ:—

ಯ. ಗು. ಕುಲಕರ್ಣಿ,

ಎಡಿಟರ, ಸ. ಚ., ಆನಂದವನ.

೧೯೨೯

ಬೆಲೆ ರೂ. ೧-೦-೪

Printed by
B. P, KALE, at the
Shri Sheshachal Press
Anandvan.

ಮುನ್ನುಡಿ.

ಸ್ವಾತಂತ್ರ್ಯಸಂಗ್ರಾಮದ ಒಂದು ಐತಿಹಾಸಿಕ ಪ್ರಸಂಗದ ಚಿತ್ರವಿದು! ರಜಪೂತರು ಎಷ್ಟು ಸ್ವಾಭಿಮಾನಿಗಳು, ಎಷ್ಟು ಸ್ವಾತಂತ್ರ್ಯಪ್ರಿಯರು ಎಂಬದು ಈ ಪ್ರಸಂಗದಿಂದ ಚನ್ನಾಗಿ ಗೊತ್ತಾಗುವಂತಿದೆ. ಅದರಂತೆ ಪರದಾಸ್ಯರೂಪವಾದ ಆವರಣವನ್ನು ಹೊದ್ದುಕೊಂಡವರು ಹ್ಯಾಗೆ ಸ್ವಜನದ್ರೋಹಿಗಳಾಗುವರೆಂಬದೂ ತಿಳಿದುಬರುತ್ತದೆ.

ಸ್ವಾತಂತ್ರ್ಯಸುಖವು ಸಿಗಬೇಕಾದರೆ ನಿರ್ದುಷ್ಟವಾದ ಸ್ವಾಭಿಮಾನವು ಬೇಕು. ಐಕ್ಯವು ಬೇಕು. ಇವೆರಡು ಸಾಧನಗಳಿಲ್ಲದೆ ಸ್ವಾತಂತ್ರ್ಯಸುಖವನ್ನು ಗಳಿಸಬೇಕೆನ್ನುವವರ ಕಲ್ಪನೆಗಳು ವ್ಯರ್ಥವಾಗುವವು. ಮಾಳವಾದ ರಜಪೂತರು ಅಂಥ ಸ್ವಾಭಿಮಾನಶೂನ್ಯರಾಗಿದ್ದರೆ-ಅನೈಕ್ಯದ ಭಕ್ತರಾಗಿದ್ದರೆ ಪ್ರಸ್ತುತ ಕಾದಂಬರಿಯಲ್ಲಿ ವರ್ಣಿಸಿದ ಸ್ವಾತಂತ್ರ್ಯಸುಖವನ್ನು ಎಂದೂ ಪಡೆಯುತ್ತಿದ್ದಿಲ್ಲ. ನಿಜವಾದ ಕ್ಷಾತ್ರವೃತ್ತಿಯು ಆ ವೀರರಿಗೆ ಇದು ಭೂಷಣವಾದದ್ದೇ ಸರಿ!

ಮಹಾತ್ಮರು ನಂದಕುಮಾರನಿಗೆ ಉಪದೇಶಿಸಿದ ಅಂಶವು ಮನನೀಯವಾಗಿರುವದು. ಅವರ ಉಪದೇಶದಲ್ಲಿಯ ನೀತಿಯ ಭಾಗವನ್ನು ಸರ್ವರೂ ಆಚರಿಸಲು ಶಕ್ಯವಿರುವದು. ಇಂಥ ಉದಾತ್ತ ನೀತಿತತ್ವವು ಎಂದು ನಮ್ಮಲ್ಲಿ ನೆಲೆಗೊಳ್ಳುವದೋ ಅಂದೇ ನಮ್ಮ ಉದ್ಧಾರವಾಗುವದರಲ್ಲಿ ಸಂಶಯವಿಲ್ಲ.

ಶ್ರೀ· ಕ್ಷೇತ್ರ ಆನಂದವನ
ತಾ|| ೪-೨ ೧೯೨೯

ಸಜ್ಜನ ವಿಧೇಯ,
ರಾ. ತ್ರ್ಯ. ಕರ್ಪೂರ.

ವಿಷಯಾನುಕ್ರಮಣಿಕೆ.

ರಾಜದಂಡ.

(ಐತಿಹಾಸಿಕಕಾದಂಬರಿ)

೧—ಖುಷರೋಜ ಉರುಸು.

ದಿಲ್ಲೀ ನಗರವು; ಜನಸಮ್ಮರ್ದವು ಹೆಚ್ಚಾಗಿದೆ, ವಿಶಾಲವಾದ ರಾಜಬೀದಿಗಳು ಸಾಲದಂತಾಗಿವೆ. ಎಲ್ಲೆಲ್ಲಿ ನೋಡಿದರೂ ಸೌಂದರ್ಯದ ಸೊಬಗು ವ್ಯಕ್ತವಾಗುತ್ತಲಿದೆ. ಅಂಗಡಿಕಾರರು ತಮ್ಮ ಅಂಗಡಿಗಳನ್ನು ಒಳ್ಳೇ ಅಲಂಕಾರಗೊಳಿಸಿದ್ದಾರೆ. ಆ ಅಂಗಡಿಗಳಲ್ಲಿ ಪದಾರ್ಥಗಳನ್ನು ಮಾರುವದಕ್ಕಾಗಿ ಸುಂದರ ಯುವತಿಯರು ವಸ್ತ್ರಾಲಂಕಾರಗಳಿಂದ ಅಲಂಕೃತರಾಗಿ ಕುಳಿತು ಗ್ರಾಹಕರ ಮನಸ್ಸನ್ನು ಆಕರ್ಷಿಸತೊಡಗಿದ್ದಾರೆ. ಆ ಯುವತಿಯರ ನಕ್ಷತ್ರಗಳನ್ನು ನಾಚಿಸುವ ತೇಜಕ್ಕೆ ಮನಸೋತು ಮೂಢಮಾನವರು ಕಮಲಗಳ ಬಳಿಯಲ್ಲಿ ಸುಳಿದಾಡುವ ಭ್ರಮರಗಳಂತೆ ಅವರ ಬಳಿಯಲ್ಲಿಯೇ ಸುಳಿದಾಡಹತ್ತಿದ್ದಾರೆ. ಎಷ್ಟೋ ಜನರು ಆ ತರುಣಿಯರ ಹಸ್ತಸ್ಪರ್ಶವಾದರೆ ಸಾಕೆಂದು ಪದಾರ್ಥಗಳ ಅವಶ್ಯಕತೆಯಿರದಿದ್ದರೂ ಯಾವದೊಂದು ಪದಾರ್ಥವನ್ನು ಕೊಂಡು ತರುಣಿಯು ಹೇಳಿದಷ್ಟು ಬೆಲೆಯನ್ನು ಆಕೆಯ ಕೈಯಲ್ಲಿಟ್ಟು ಧನ್ಯತೆಯನ್ನು ಹೊಂದಲುಪಕ್ರಮಿಸಿದ್ದಾರೆ. ಅಂಗಡಿಗಳಲ್ಲಿ ಸುಂದರ ಸ್ತ್ರೀಯರು, ಬೀದಿಗಳಲ್ಲಿ ಸುಂದರ ಸ್ತ್ರೀಯರು, ಮಾರುವವರೂ ಸುಂಬರ ಯುವತಿಯರು, ಗ್ರಾಹಕರೂ ಸುಂದರ ಯುವತಿಯರು. ಇದೇನು ಇಂದು ದಿಲ್ಲಿಯಲ್ಲಿ ಸುಂದರ ಸ್ತ್ರೀಯರ ಪ್ರದರ್ಶನವೋ ಎಂಬ ಭ್ರಮವು ನೋಡುವವರಲ್ಲಿ ಉತ್ಪನ್ನವಾಗುತ್ತಿತ್ತು.

ಪ್ರಿಯವಾಚಕರೇ, ಪ್ರಮೀಲಾರಾಜ್ಯದ ನೆನೆಪುಮಾಡಿಕೊಡುವ ಈ ಖುಷರೋಜಿನ ಉದ್ದೇಶವೇನಿರಬಹುದು? ಈ ಬಗ್ಗೆ ಇತಿಹಾಸವು ಏನು ಹೇಳುತ್ತದೆಂಬುದನ್ನು ನೋಡೋಣ ಬನ್ನಿರಿ.

ದಿಲ್ಲಿಯಲ್ಲಿ ವರ್ಷಪ್ರತಿಪದೆಯಿಂದ ನವಮಿಯವರೆಗೆ ನೌರೋಜ ಎಂಬ ಉರುಸು ಆಗುತ್ತಿತ್ತು. ಅಕಬರಬಾದಶಹನ ಕಾಲದಲ್ಲಿ ಈ ಉರುಸು ಒಂದಲ್ಲದೆ ಖುಷರೋಜ (ಆನಂದದ ದಿವಸ) ಎಂಬ ಬೇರೊಂದು ಉರುಸು ಪ್ರಾರಂಭವಾಗಿತ್ತು. ಈ ಉರುಸಿನಲ್ಲಿ ಅರಮನೆಯ ಸ್ತ್ರೀ-ಪುರುಷರೂ ಭಾಗತೆಗೆದುಕೊಳ್ಳುತ್ತಿದ್ದರು. ಅರಮನೆಯ ಸ್ತ್ರೀ-ಪುರುಷರು ತಯಾರಿಸಿದ ಕಲಾಕೌಶಲ್ಯದ ಒಡವೆಗಳು ಈ ಉರುಸಿನಲ್ಲಿ ಮಾರಲಿಕ್ಕೆ ಇಡಲ್ಪಡುತ್ತಿದ್ದವು. ಈ ಉರುಸಿನಲ್ಲಿ ಎಲ್ಲ ಸಾಮಂತ ರಾಜರೂ ಭಾಗತೆಗೆದುಕೊಳ್ಳಬೇಕೆಂದು ಅಕಬರನ ಕಟ್ಟಪ್ಪಣೆಯಿತ್ತು. ಆದ್ದರಿಂದ ಸಮಸ್ತ ರಜಪೂತ ಸ್ತ್ರೀ-ಪುರುಷರು ಈ ಉರುಸಿನ ರಮಣೀಯತೆಯನ್ನು ಹೆಚ್ಚಿಸುವದಕ್ಕೆ ವಸ್ತ್ರಾಲಂಕಾರ ವಿಭೂಷಿತರಾಗಿ ಬರುತ್ತಿದ್ದರು.

ಅಕಬರನು ಈ ಉರುಸಿನಲ್ಲಿ ಸ್ತ್ರೀವೇಷವನ್ನು ಧರಿಸಿ, ಚಲುವೆಯರಾದ ರಜಪೂತ ಹೆಂಗಳೆಯರಲ್ಲಿ ಬೆರೆತುಕೊಳ್ಳುತ್ತಿದ್ದನು. ರಜಪೂತ ಸ್ತ್ರೀಯರ ಸ್ವರ್ಗೀಯ ಸೌಂದರ್ಯವನ್ನು ಕಂಡು ಆತನು ದಂಗುಬಡಿದು ಹೋಗುತ್ತಿದ್ದನು. ಪ್ರಸಂಗದೊರೆತರೆ ಎಷ್ಟೋಜನ ಸುಂದರ ಯುವತಿಯರನ್ನು ಆತನು ತನ್ನವರನ್ನಾಗಿ ಮಾಡಿಕೊಂಡು ಬಿಡುತ್ತಿದ್ದನು. ಎಂದೂ ನೋಡಲಿಕ್ಕೆ ಶಕ್ಯವಿಲ್ಲದ ರಜಪೂತ ಹೆಂಗಳೆಯರನ್ನು ಅಕಬರನು ಈ ಉರುಸಿನಲ್ಲಿ ಸಹಜವಾಗಿ ಅವರ ಮೈದಡವಿ ಸ್ಪರ್ಶಸುಖವನ್ನನುಭವಿಸುತ್ತಿದ್ದನು. ಅಕಬರನ ಈ ನೀಚತನವನ್ನು ಇತಿಹಾಸಕಾರರು ಬಹಳವಾಗಿ ಧಿಕ್ಕರಿಸಿರುವರು. ಆತನಿಗೆ ಪರಮಸ್ತ್ರೈಣನೆಂದೂ ಕರೆದಿರುವರು.

ಈ ಪ್ರಕಾರದ ನೀಚ ಹಾಗು ಸ್ವಾರ್ಥೀ ರೂಢಿಯು ಮೊಗಲರಿಂದ ಒಂದುಸ್ಥಾನದಲ್ಲಿ ಪ್ರಾದುರ್ಭವಿಸಿತು. ಮೊದಲು ಈ ಉರುಸಿನ ಮುಖಾಂತರವಾಗಿ ಸುಂದರಯುವತಿಯರ ಪ್ರದರ್ಶನವನ್ನೇ ನೆರೆಯಿಸಿ ತಮ್ಮ ನೀಚ ಸ್ವಾರ್ಥವಾದ ವಿಷಯವಾಸನೆಯನ್ನು ತೃಪ್ತಿಗೊಳಿಸಿಕೊಳ್ಳುತ್ತಿದ್ದರು. ತಮ್ಮ ಪ್ರೇಮಕ್ಕೆ ಪಾತ್ರಳಾದ ಯುವತಿಯನ್ನು ಹರಣಮಾಡದೆ ಬಿಡುತ್ತಿದ್ದಿಲ್ಲ. ಪ್ರಸಂಗಬಂದರೆ ಆ ಯುವತಿಯ ಗಂಡನಿಗೆ ಆತನು ಕೇಳಿದಷ್ಟು ದ್ರವ್ಯಕೊಡುತ್ತಿದ್ದರು. ಆತನು ಸ್ವಾಭಿಮಾನದಿಂದ ದ್ರವ್ಯಸ್ವೀಕಾರಕ್ಕೆ ಒಪ್ಪದಿದ್ದರೆ ಅವನಿಗೆ ಕಂಠಸ್ನಾನಮಾಡಿಸಿ ಆ ಯುವತಿಯನ್ನು ಜನಾನಖಾನೆಯಲ್ಲಿ ಸೇರಿಸಿಕೊಳ್ಳುತ್ತಿದ್ದರು. ಅಕಬರನ ಕಾಲದಲ್ಲಿ ಈ ನೀಚ

ಸ್ವಾರ್ಥೀ ರೂಢಿಯು ವಿಚಿತ್ರಪ್ರಕಾರವನ್ನು ಹೊಂದಿತ್ತು. ಅಕಬರನು ಉಪಾಯಾಂತರಗಳಿಂದಲೇ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದನು. ಅಂತೇ ಪೃಥ್ವೀರಾಜ ಕವಿಯು ರಾಣಾ ಪ್ರತಾಪಸಿಂಗನಿಗೆ ಬರೆದ ಪತ್ರದಲ್ಲಿ "ನಮ್ಮ ಮಾನ-ಮರ್ಯಾದೆಗಳು ಖುಷರೋಜ ಉರುಸಿನಲ್ಲಿ ಮಾರಲ್ಪಡುತ್ತವೆ" ಎಂದು ಬರೆದಿರುವನು. ಇರಲಿ,

ಇಂಥ ಖುಷರೋಜ ಉರುಸು ಇಂದು ದಿಲ್ಲಿಯಲ್ಲಿ ಪ್ರಾರಂಭವಾಗಿರುವದು. ಮೇಲೆ ಹೇಳಿದಂತೆ ಉರುಸಿನ ಬೀದಿಗಳು, ಅಂಗಡಿಗಳು ಜನರಿಂದ ಸಂದಣಿತವಾಗಿರಲು ಅಲ್ಲಿಗೆ ಒಬ್ಬ ರಜಪೂತನು ಓರ್ವ ತರುಣಿಯನ್ನು ಕರೆದುಕೊಂಡು ಬಂದನು. ರಜಪೂತನು ಸ್ವಲ್ಪ ವಿಸೆಹೋದವನಿದ್ದನು. ಆದರೂ ಆತನು ಒಳ್ಳೇ ಹುರಿಕಟ್ಟಿನವನಾಗಿದ್ದನು. ಅವನ ಮುಖಮುದ್ರೆಯಲ್ಲಿ ಸ್ವಾಭಿಮಾನವು ತುಂಬಿತುಳುಕುತ್ತಿತ್ತು. ಅವನು ಆ ಉರುಸಿನ ಹೇಯ ಉದ್ದೇಶವನ್ನೇ ಅರಿಯದವನಾಗಿದ್ದನು. ಉರುಸಿನ ಯಾವ ವಿಷಯವೂ ತಿಳಿಯದ್ದರಿಂದ ಅವನು ಸ್ವಾಭಾವಿಕ ಕುತೂಹಲದಿಂದ ಸಾಗಿದ್ದನು. ಅವನ ಹಿಂದೆ ಓರ್ವ ತರುಣಿಯು ನಡೆದಿದ್ದಳು. ತರುಣಿಯು ಹದಿನಾರು ಹದಿನೇಳು ವರುಷದ ಪ್ರಾಯದವಳಾಗಿದ್ದಳು. ಆಕೆಯು ಅತ್ಯಂತ ರೂಪವತಿಯಾಗಿದ್ದಳು. ತಾರುಣ್ಯದ ಭರದಲ್ಲಿ ಅವಳು ಅತ್ಯಂತ ಮನಮೋಹನಳಾಗಿ ತೋರುತ್ತಿದ್ದಳು.

ಆ ರಜಪೂತವೀರನು ತರುಣಿಯೊಡನೆ ಸಾಗಿರಲು ಜನಸಮ್ಮರ್ದದಲ್ಲಿ ಆಕೆಗೂ ಆ ವೀರನಿಗೂ ಸ್ವಲ್ಪ ಅಂತರವಾಯಿತು. ಮುಂದೆ ಆಕೆಯೊಂದು ಮಾರ್ಗವ ಹಿಡಿದಳು. ಆ ವೀರನೊಂದು ಮಾರ್ಗವ ಹಿಡಿದನು. ಹೀಗಾಗಿ ಅವರಿಬ್ಬರೂ ಒಬ್ಬರನ್ನೊಬ್ಬರು ಅಗಲಿದರು. ತರುಣಿಯು ಗಾಬರಿಯಾದಳು. ಇಂಥ ದಟ್ಟಣೆಯಲ್ಲಿ ನನ್ನ ತಂದೆಯನ್ನು ಹ್ಯಾಗೆ ಕಾಣುವೆನೆಂದು ಚಡಪಡಿಸತೊಡಗಿದಳು. ಇತ್ತ ಆ ವೀರನೂ ಮಗಳನ್ನು ಕಾಣದೆ ಅಲ್ಲಲ್ಲಿ ಅಂಡಲೆಯಲಾರಂಭಿಸಿದನು.

ಖುಷರೋಜ ಉರುಸಿನಲ್ಲಿ ಅನೇಕಜನ ಸುಂದರಯುವತಿಯರು ಬರುತ್ತಿದ್ದದ್ದರಿಂದ ವಿಷಯಲಂಪಟೀ ತರುಣರಿಗೆ ಇದೊಂದು ಮಹಾಪರ್ವಣಿಯಂತೆ ಭಾಸವಾಗುತ್ತಿತ್ತು. ಎಷ್ಟೋ ಜನ ತರುಣರು ಸ್ವಾರ್ಥವನ್ನು ಸಾಧಿಸುವದಕ್ಕಾಗಿ ಅಲ್ಲಿ ಸುಳಿದಾಡುತ್ತಿದ್ದರು. ಹೀಗೆ ವಿಷಯಲಂಪಟೀ

ತರುಣರು ಆಳಿಮನದಿಂದ ಹೆಂಗಳೆಯರನ್ನು ನೋಡುತ್ತ ನಡೆದಿರಲು ಓರ್ವ ಮುಸಲ್ಮಾನ ತರುಣನ ದೃಷ್ಟಿಗೆ ಮೇಲೆ ಹೇಳಿದ ರಜಪೂತ ತರುಣಿಯು ಬಿದ್ದಳು. ತರುಣಿಯು ಗಾಬರಿಯಾಗಿ ಅತ್ತಿತ್ತ ನೋಡುತ್ತಿದ್ದದರಿಂದ ಈಕೆಯು ಈ ಉರುಸಿಗೆ ಹೊಸಬಳೆಂದೂ, ಯಾರನ್ನೋ ಆಗಲಿ ಗಾಬರಿಯಾಗಿರುವಳೆಂದೂ ತರ್ಕಿಸಿ ಆತನು ಈಕೆಯನ್ನು ಅಪಹರಿಸ ಬೇಕೆಂದು ಯೋಚಿಸಿದನು. ಆ ಮುಸಲ್ಮಾನೀ ತರುಣನು ದೇಹದಿಂದ ಸ್ಥೂಲನಿದ್ದನು. ಅವನು ಅಕಬರನ ದರ್ಬಾರದಲ್ಲಿ ಸರದಾರನಿದ್ದನು. ಆಂದಬಳಿಕ ಅವನಿಗೆ ಆ ಸ್ತ್ರೀಯನ್ನು ಅಪಹರಿಸಲಿಕ್ಕೆ ಸ್ವಲ್ಪವೂ ಅಂಜಿಕೆ ಬರಲಿಲ್ಲ. ಮನಸ್ಸಿನಲ್ಲಿ ಆಕೆಯ ಮೇಲೆ ಮೋಹವುತ್ಪನ್ನವಾಗುವದೊಂದೇ ತಡ; ಆ ತರುಣನು ಆ ತರುಣಿಯ ಕಡೆಗೆ ಧಾವಿಸಿದನು. ಮತ್ತು ಆಕೆಯ ಕೈಯನ್ನು ಹಿಡಿದು ಜಗ್ಗಿದನು.

ತರುಣಿಯು ಬೆಚ್ಚಿಬಿದ್ದು, ಹಿಂತಿರುಗಿ ನೋಡಿದಳು. ಓರ್ವ ಮುಸಲ್ಮಾನ ತರುಣನು ತನ್ನ ಕೈಹಿಡಿದು ಜಗ್ಗುತ್ತಿರುವನೆಂಬದು ಗೊತ್ತಾಯಿತು. ಕೂಡಲೆ ಅವಳು ಕೆರಳಿದ ಸಿಂಹಿಣಿಯಂತೆ ತಪ್ತಳಾಗಿ ಕೈಯನ್ನು ಕೊಸರಿಕೊಂಡು ಆ ಅಧಮಾಧಮನನ್ನು ನಿಂದಿಸಹತ್ತಿದಳು. ಕಾಮಾಂಧನಾದ ಆ ತರುಣನು ಆ ತರುಣಿಯ ನಿಂದೆಯನ್ನು ಸ್ವಲ್ಪವೂ ಲಕ್ಷಿಸಲಿಲ್ಲ. "ಏ ಸುಂದರೀ, ಹೀಗೇಕೆ ಕೊಸರಿಕೊಳ್ಳುತ್ತೀ" ಎಂದು ನುಡಿಯುತ್ತ ಮತ್ತೆ ಆಕೆಯ ಕೈ ಹಿಡಿಯ ಹೋದನು. ತರುಣಿಯು ಅವನನ್ನು ಧಿಕ್ಕರಿಸುತ್ತ ಮುಂದ ಮುಂದಕ್ಕೆ ಸಾಗಿದಳು. ಆ ತರುಣನೂ ಆಕೆಯ ಬೆನ್ನಟ್ಟಿದ್ದನು.

ಇಬ್ಬರೂ ಜನರ ದಟ್ಟಣೆಯನ್ನು ದಾಟಿ ಸ್ವಲ್ಪ ಬೈಲುಪ್ರದೇಶಕ್ಕೆ ಹೋದರು. ತರುಣಿಯ ಮುಖವು ಅತ್ಯುಗ್ರವಾಗಿತ್ತು. ಆದರೆ ಆ ತರುಣನು ಮಾತ್ರ ಹಸನ್ಮುಖಿಯಾಗಿದ್ದನು. ಈ ಬೇಟೆಯು ತನ್ನಿಂದ ತಪ್ಪಿಸಿಕೊಂಡು ಹೋಗಲಾರದೆಂದು ಆ ತರುಣನು ಖಂಡಿತವಾಗಿ ತಿಳಿದಿದ್ದನು. ಅವನು ಲಜ್ಜಾ-ಭಯಗಳೆರಡನ್ನೂ ತೊರೆದು ಶೀಘ್ರವಾಗಿ ನಡೆದು ಮತ್ತೆ ಆ ತರುಣಿಯ ಕೈಯನ್ನು ಹಿಡಿದನು ಈ ಸಾರೆ ಕೈಯನ್ನು ಗಟ್ಟಿಯಾಗಿ ಹಿಡಿದದ್ದರಿಂದ ತರುಣಿಯು ಎಷ್ಟು ಪ್ರಯತ್ನಪಟ್ಟರೂ ಆತನಿಂದ ಆಕೆಗೆ ಕೈಕೊಸರಿಕೊಳ್ಳಲಿಕ್ಕಾಗಲಿಲ್ಲ. ತರುಣಿಯು ಕೈಕೊಸರಿಕೊಳ್ಳುವದಕ್ಕಾಗಿ ಪ್ರಯತ್ನಪಡುತ್ತಿರುವಾಗ ಆ ತರುಣನು ಅತ್ಯಂತ ಕಾಮಾಂಧನಾಗಿ ಆಕೆಯ

ಕೋಮಲ ಗಲ್ಲವನ್ನು ಚುಂಬಿಸ ಹೋದನು; ಆದರೆ ಆ ಸ್ವಾಭಿಮಾನಿಯಾದ ತರುಣಿಯು ಅವನ ಆ ಇಚ್ಛೆಯನ್ನು ನೆರವೇರಿಸಗೊಡದೆ ತೆರವಿದ್ದ ಒಂದು ಕೈಯಿಂದ ಆತನ ಕೆನ್ನೆಯ ಮೇಲೆ ಹೊಡೆದಳು. ತರುಣನು ಆಕೆಯ ಆ ಪ್ರಹಾರವನ್ನು ಮಹಾಪ್ರಸಾದವೆಂದು ಭಾವಿಸಿದನು. ಆತನಿಗೆ ಎಷ್ಟು ಮಾತ್ರಕ್ಕೂ ಸಿಟ್ಟು ಬರಲಿಲ್ಲ. ಮತ್ತೆ ಆಕೆಯ ಮುಖವನ್ನು ಚುಂಬಿಸಲು ಪ್ರಯತ್ನಪಡತೊಡಗಿದನು. ಆತನ ಆ ಪೈಶಾಚಿಕ ವೃತ್ತಿಯನ್ನು ನೋಡಿ ತರುಣನಿಗೆ ತುಂಬಾ ತ್ವೇಷವುಂಟಾಗಿತ್ತು. ಆದರೆ ಆಕೆಯು ಎಷ್ಟು ದಿಟ್ಟಳಾಗಿದ್ದರೂ ಅಬಲೆಯು; ಪುರುಷನ ಸಾಮರ್ಥ್ಯದ ಮುಂದೆ ಆಕೆಯ ಆಟವು ಹ್ಯಾಗೆ ನಡೆಯಬೇಕು? ಆದರೂ ಅವಳು ಪ್ರಯತ್ನದಿಂದ ಆತನ ಅತ್ಯಾಚಾರವನ್ನು ನಡೆಯಗೊಡಲಿಲ್ಲ.

ಓರ್ವ ಮುಸಲ್ಮಾನ ತರುಣನು ಒಬ್ಬ ರಜಪೂತ ತರುಣಿಯ ಮೇಲೆ ಬಲಾತ್ಕಾರ ನಡಿಸಿರುವನೆಂಬದನ್ನು ಆ ಬೀದಿಯಿಂದ ಹೋಗುವ ಪ್ರತಿಯೊಬ್ಬನೂ ನೋಡುತ್ತಿದ್ದನು. ಮುಸಲ್ಮಾನರು ನೋಡಿ ಆ ತರುಣಿಯ ಮೂರ್ಖತನಕ್ಕೆ ನಕ್ಕು, ಮುಂದಕ್ಕೆ ಸಾಗುತ್ತಿದ್ದರು. ಹಿಂದುಗಳಲ್ಲನೇಕರು ನೋಡಿದರೂ ನೋಡದವರಂತೆ ತಲೆ ತಗ್ಗಿಸಿಕೊಂಡು ಸಾಗುತ್ತಿದ್ದರು. ಕೆಲವರು ಆ ತರುಣನ ನೀಚತನಕ್ಕೆ ತ್ವೇಷಗೊಂಡರೂ ಆತನ ಶಾಸನಮಾಡುವ ಸಾಮರ್ಥ್ಯವಿಲ್ಲದೆ ಸುಮ್ಮನೆ ಹೊರಟು ಹೋಗುತ್ತಿದ್ದರು. ಹೀಗೆ ಕೆಲ ಹೊತ್ತಿನವರೆಗೆ ಆ ತರುಣನು ಆ ತರುಣಿಯ ಕೈಹಿಡಿದು ಜಗ್ಗುತ್ತಿದ್ದನು. ಒಬ್ಬರೂ ಆಕೆಯನ್ನು ಬಿಡಿಸಲು ಮುಂದರಿಯಲಿಲ್ಲ. ಬಳಿಕ ಆ ತರುಣಿಯು ದೀನಮುಖದಿಂದ—“ಒಬ್ಬರಾದರೂ ವೀರರು ಮುಂದೆ ಬಂದು ನನ್ನನ್ನು ಈ ನೀಚನಿಂದ ಬಿಡಿಸಿರಿ!” ಎಂದು ಹಿಂದುಗಳನ್ನು ಕುರಿತು ಅಂಗಲಾಚಿ ಬೇಡಿಕೊಳ್ಳತೊಡಗಿದಳು. ಅದರಿಂದ ಆವ ಪ್ರಯೋಜನವೂ ಆಗಲಿಲ್ಲ. ಸಾವಿರಾರು ಜನರು ಆ ತರುಣಿಯ ವಿಟಂಬನೆಯನ್ನು ನೋಡುತ್ತಲೇ ನಡೆದರಲ್ಲದೆ ಆಕೆಯ ಮುಕ್ತತೆಗಾಗಿ ಒಬ್ಬರೂ ಪ್ರಯತ್ನಪಡಲಿಲ್ಲ. ಹಿಂದುಗಳ-ರಜಪೂತರ ಈ ನಿರ್ವೀರತ್ವವನ್ನು ನೋಡಿ ಆ ತರುಣಿಯು ಅವರನ್ನು ಮನದಲ್ಲಿಯೇ ಶಪಿಸತೊಡಗಿದಳು. ತಮ್ಮ ಅಕ್ಕ-ತಂಗಿಯರ ಮಾನವನ್ನು ರಕ್ಷಿಸದ ಈ ಮೂರ್ಖರು ಯಾವ ಪೌರುಷವನ್ನು ಸಂಪಾದಿಸುವರು! ಎಂದು ನುಡಿದಳು. ಬಳಿಕ ಆ ತರುಣಿಯು ನಿರುಪಾಯಳಾಗಿ ತನ್ನ ಬಿಡು

ಗೆಡೆಯು ಸಲುವಾಗಿ ಆ ಮುಸಲ್ಮಾನ ತರುಣನನ್ನೇ ಪ್ರಾರ್ಥಿಸತೊಡಗಿದಳು. ತನ್ನ ಪಾತಿವ್ರತ್ಯಕ್ಕೆ ಭಂಗವನ್ನುಂಟಮಾಡಬೇಡವೆಂದು ಹೇಳಿಕೊಂಡಳು. ನಾನು ನಿನ್ನ ಭಗಿನೀಸಮಾನಳೆಂದು ತಿಳಿ, ಸ್ತ್ರೀ ಪಾತಿವ್ರತ್ಯವು ಹಿಂದುಗಳಲ್ಲಿಯೂ ಮುಸಲ್ಮಾನರಲ್ಲಿಯೂ ಒಂದೇ ಬಗೆಯಾಗಿರುವದು. ಸ್ತ್ರೀಯ ಪಾತಿವ್ರತ್ಯವನ್ನು ಕಾಯುವದು ಪ್ರತಿಯೊಬ್ಬ ಪುರುಷನ ಕರ್ತವ್ಯವಾಗಿರುವದು, ಎಂದು ಧರ್ಮೋಪದೇಶ ಮಾಡಿದಳು. ಆದರೆ ಆ ಕಾಮಾಂಧನಿಗೆ ಹೆಚ್ಚಿನ ವಿಚಾರವೆಲ್ಲಿ? ಪ್ರಕೃತ ತನ್ನ ವಿಷಯತೃಪ್ತಿಯಾದರೆ ಸಾಕೆಂದು ಬಯಸುವ ಅವನು ಇಷ್ಟೆಲ್ಲ ಸುವಿಚಾರಗಳನ್ನು ಕಟ್ಟಿಕೊಂಡು ಮಾಡುವದೇನು? ಆ ಸ್ತ್ರೀಯು ದೈನ್ಯದಿಂದ ಬಾಯಿ ತೆರೆದು ಹೇಳಿಕೊಂಡಂತೆ ಆ ಮೂರ್ಖನ ವಿನೋದವು ಹೆಚ್ಚತೊಡಗಿತು. ಈಕೆಯು ಕೊನೆಗೆ ನನಗೆ ಶರಣಾಗತಳಾಗಿ ನನ್ನ ಮನೋಬಯಕೆಯನ್ನು ಈಡೇರಿಸದೆ ಇರಲಾರಳು, ಎಂದು ಭಾವಿಸಿ ವಿಕಟಹಾಸ್ಯ ಮಾಡಿದನು ಆತನ ಆ ಹಾಸ್ಯದಲ್ಲಿ ಭಯಂಕರ ನೀಚವೃತ್ತಿಯು ವ್ಯಕ್ತವಾಗುತ್ತಿತ್ತು. ಆತನ ವಿಕಟಹಾಸ್ಯದಿಂದ ಆ ತರುಣಿಯು ಎಚ್ಚತ್ತಳು. ಈ ನೀಚನಿಗೆ ಹೀಗೆ ಹೇಳಿಕೊಳ್ಳುವದು ಮಹಾ ಅಪರಾಧವೆಂದು ಭಾವಿಸಿ, ಅತ್ಯಂತ ತ್ವೇಷದಿಂದ ಒಮ್ಮೆ ಕೈ ಕೊಡವಿದಳು. ತರುಣನು ಸ್ವಲ್ಪ ವೈಮನಸ್ಯದಿಂದ ಆಕೆಯ ಕೈಯು ತರುಣನ ಕೈಯಿಂದ ಬಿಡುಗಡೆ ಹೊಂದಿತು. ಕೂಡಲೆ ಆ ತರುಣಿಯು ಓಡತೊಡಗಿದಳು.

ತರುಣಿಯು ಓಡಿಹೋಗುವದಾದರೂ ಎಲ್ಲಿಗೆ? ತನ್ನ ಮುಕ್ತತೆಗೆ ಯಾವನಾದರೂ ಹಿಂದೂ ವೀರನು ಕೂಡುವನೋ ಅಥವಾ ತನ್ನ ತಂದೆಯು ಭೆಟ್ಟಿಯಾದರೂ ಆಗುವದೋ ಎಂದು ಅವಳು ಬಯಸಿ ಓಡಹತ್ತಿದ್ದಳು. ತರುಣಿಯ ಈ ವಿಟಂಬನೆಯನ್ನು ದೂರಿನಿಂದಲೇ ಒಬ್ಬ ರಜಪೂತ ತರುಣನು ನೋಡಿ ವಿಲಕ್ಷಣ ಸಂತಾಪವನ್ನು ತಾಳಿದ್ದನು. ಸಾವಿರಾರು ಜನ ಹಿಂದುಗಳು ಆ ತರುಣಿಯ ವಿಟಂಬನೆಯನ್ನು ನೋಡುತ್ತ ಹಾಗೇ ಹೋದದ್ದರಿಂದಂತೂ ಆತನ ಸಂತಾಪಾಗ್ನಿಯು ಹೆಚ್ಚಾಗಿತ್ತು. ಅಹಾ! ಕಾಲವೇ! ಹಿಂದುಗಳು-ಭಾರತ ಪುತ್ರರು ಎಷ್ಟು ನಿರ್ವೀರ್ಯರಾದರು, ಎಷ್ಟು ನಿರ್ಲಜ್ಜರಾದರು! ಅವರಿಗೆ ತಮ್ಮ ಅಕ್ಕತಂಗಿಯರ, ತಾಯಂದಿರ ಮಾನವನ್ನು ಉಳಿಸಲಿಕ್ಕೆ ಸಾಮರ್ಥ್ಯವಿಲ್ಲದೆ ಹೋಯಿತೆ? ನಾಮರ್ದರು! ಅತ್ಯಂತ ನಾಮರ್ದರು! ಎಂದು ಮನಸ್ಸಿನಲ್ಲಿ ವಿಷಾದ-ಕೋಪೋದ್ರೇಕಗಳಿಂದ ವಿಚಾ

ರಮಾಡುತ್ತಿದ್ದನು. ಈಗಲೇ ಧಾವಿಸಿಹೋಗಿ ಆ ತರುಣನನ್ನು ತುಂಡರಿಸ ಬೇಕೆಂಬ ದ್ವೇಷವು ಅವನಲ್ಲಿ ಉಂಟಾಗಿತ್ತು. ತರುಣಿಯು ಕೈಕೊಸರಿ ಕೊಂಡು ಓಡಿಹೋದದ್ದನ್ನೂ ಮುಸಲ್ಮಾನ ತರುಣನು ಮತ್ತೆ ಆಕೆಯ ಬೆನ್ನ ಹತ್ತಿದ್ದನ್ನೂ ನೋಡಿ ಆತನ ಸಂತಾಪಾಗ್ನಿಯು ಹೆಚ್ಚಿತು. ಕೂಡಲೆ ಅವನು ತನ್ನ ಕುದುರೆಯನ್ನೋಡಿಸುತ್ತ ಆ ತರುಣಿಯ ಬಿಡುಗಡೆಗಾಗಿ ಧಾವಿಸಿದನು. ಆ ಮುಸಲ್ಮಾನ ತರುಣನು ಧಾವಿಸಿ ತರುಣಿಯ ಕೈಹಿಡಿ ಯುವಷ್ಟರಲ್ಲಿ ಅಶ್ವಾರೂಢನಾದ ರಜಪೂತ ತರುಣನು ತನ್ನ ಖಡ್ಗದಿಂದ ಆ ಮುಸಲ್ಮಾನ ತರುಣನ ಕೈಯನ್ನು ತುಂಡರಿಸಿದನು. ರಜಪೂತ ತರು ಣನು ಆತನ ಕೈ ಖಂಡಿಸುವದಕ್ಕೂ ಆ ತರುಣಿಯ ತಂದೆಯು ಅಲ್ಲಿಗೆ ಬರುವದಕ್ಕೂ ಮೇಳಬಿದ್ದಿತು. ಈ ಪ್ರಚಂಡ ಜನಸಮ್ಮರ್ದದಲ್ಲಿ ತನ್ನ ಸುಂದರ ಮಗಳ ಗತಿಯು ಏನಾಯಿತೋ ಎಂದು ಆ ರಜಪೂತನು ಗಾಬರಿ ಯಾಗಿ ಓಡಿಬರುತ್ತಿದ್ದನು. ಆತನ ತರ್ಕದಂತೆ ಮಗಳು ಮಹಾವಿಪತ್ತಿಗೆ ಗುರಿಯಾಗಿದ್ದು ಪುಣ್ಯಾತ್ಮನಾದ ಓರ್ವ ರಜಪೂತ ತರುಣನು ಆಕೆಯ ಸಂಕಟನಿವಾರಣ ಮಾಡಿದನೆಂಬದು ದೃಷ್ಟಿಗೆ ಬಿದ್ದಕೂಡಲೆ ಆ ರಜಪೂತನಿಗೆ ಪರಮಾನಂದವಾಯಿತು. ಆ ತರುಣಿಗೆ ಆದ ಆನಂದವನ್ನಂತೂ ವರ್ಣಿ ಸಲೇ ತೀರದು ತನ್ನನ್ನು ಬಂಧಮುಕ್ತಳನ್ನಾಗ ಮಾಡಿದ ಆ ರಜಪೂತ ತರುಣನು ಆಕೆಗೆ ದೇವತುಲ್ಯನಾಗಿ ತೋರಿದನು.

ಬಳಿಕ ಆ ರಜಪೂತವೀರನು ಆ ತರುಣನನ್ನು ಕೊಂಡಾಡಿ, ತಮ್ಮಾ ನಿನಗೆ ದೇವರು ದೀರ್ಘಾಯುಷ್ಯವನ್ನು ಕೊಡಲಿ! ನನ್ನ ಮಗಳ ಪಾತಿವ್ರ ತ್ಯವನ್ನು ಉಳಿಸಿದ ನೀನು ಧನ್ಯನಿರುತ್ತೀ; ಪತಿವ್ರತೆಯರ ಆಶೀರ್ವಾದವು ನಿನ್ನ ಮೇಲೆ ಅಖಂಡವಾಗಿರಲಿ ಎಂದು ನುಡಿದು ಮಗಳೊಡನೆ ತನ್ನ ದಾರೀ ಹಿಡಿದು ಸಾಗಿದನು. ಕೈಕಡಿಸಿಕೊಂಡ ಆ ಕಾಮಾಂಧ ಮುಸಲ್ಮಾನ ತರು ಣನು ತನ್ನ ನೀಚತನಕ್ಕಾಗಿ ಪಶ್ಚಾತ್ತಾಪಪಟ್ಟು ಆ ರಜಪೂತ ತರುಣನನ್ನು ಕೆಂಗಣ್ಣುಗಳಿಂದ ನೋಡುತ್ತ ಹೊರಟು ಹೋದನು.

ನಡೆದ ಪ್ರಸಂಗದಿಂದ ಆ ಅಶ್ವಾರೂಢ ತರುಣನಿಗೆ ಒಂದು ಬಗೆ ಯಿಂದ ಸಮಾಧಾನವೂ ಮತ್ತೊಂದು ಬಗೆಯಿಂದ ಅಸಮಾಧಾನವೂ ಆಯಿತು. ಕೂಡಲೆ ಆತನ ಮನಸ್ಸಿನಲ್ಲಿ ಮತ್ತೊಂದು ವಿಚಾರವು ಬಂದಿ ತು. ಆಗ ಅವನು ಕುದುರೆಯನ್ನೋಡಿಸುತ್ತ ಆ ತಂದೆ-ಮಗಳು ಹೋದ

ಮಾರ್ಗವನ್ನು ಅನುಸರಿಸಿ ನಡೆದನು. ಸ್ವಲ್ಪ ಹೊತ್ತಿನಲ್ಲಿ ಅವನು ಅವರನ್ನು ಮುಟ್ಟಿದನು. ತಮ್ಮ ಉಪಕಾರಕರ್ತೃವು ಹೀಗೆ ಧಾವಿಸಿ ಬರಲು ಅವರು ಕೃತಜ್ಞೆಯಿಂದ ಅಲ್ಲಿಯೇ ನಿಂತುಕೊಂಡರು. ತರುಣನು ಬಂದ ಕೂಡಲೆ ಕುದುರೆಯಿಂದಿಳಿದು ನೀವು ಈಗ ಎಲ್ಲಿಗೆ ಹೋಗುವಿರಿ! ಹೀಗೆ ನೀವು ಹೋಗುವದರಿಂದ ನಿಮ್ಮ ಮೇಲೆ ತ್ವೇಷಗೊಂಡ ಆ ಮುಸಲ್ಮಾನ ಸರದಾರನು ದಾರಿಯಲ್ಲಿ ನಿಮಗೆ ಅಪಾಯವನ್ನುಂಟುಮಾಡಬಹುದು. ಇಲ್ಲವೆ ಸೈನಿಕರ ಸಹಾಯದಿಂದ ಈ ತರುಣಿಯನ್ನು ಹಿಡತರಿಸಿಕೊಳ್ಳ ಬಹುದು. ಆದ್ದರಿಂದ ಈಗಲೇ ನೀವು ದಾರಿಯನ್ನು ಹಿಡಿಯುವದು ನನಗೆ ಸರಿಯಾಗಿ ತೋರುವದಿಲ್ಲ. ಈಗಿನ ಕಾಲವು ಬಲು ಸೂಕ್ಷ್ಮವಾಗಿದೆ. ವಿಷಯಲಂಪಟರ ಹಾವಳಿಯಿಂದ ಹಿಂದೂರಮಣಿಯರ ಪಾತಿವ್ರತ್ಯವನ್ನು ಉಳಿಸುವದು ಬಲುಕಷ್ಟಕರ ಕೆಲಸವಾಗಿದೆ. ನೀವು ಅಸ್ಸಲ ರಜಪೂತರಿದ್ದು, ಸ್ವಾಭಿಮಾನವಂತರಿರುವಿರೆಂಬದು ನಿಮ್ಮ ಸ್ವಭಾವದಿಂದಲೇ ಕಂಡು ಬರುತ್ತದೆ. ಹೀಗಿದ್ದು ಈಗ ನೀವು ಈ ಉರುಸಿಗೆ ಯಾಕೆ ಬಂದಿರಿ. ಈ ಉರುಸಿನ ವಿಷಯವು ನಿಮಗೆ ಗೊತ್ತಿಲ್ಲವೆಂಬಂತೆ ತೋರುತ್ತದೆ. ಇಲ್ಲಿ ರಜಪೂತ ತರುಣಿಯರ ಸೌಂದರ್ಯ ಮಾನ-ಮರ್ಯಾದೆಗಳು ಮಾರಲ್ಪಡುತ್ತವೆ. ಎಂದು ನುಡಿದನು.

ತರುಣನ ಈ ಮಾತುಗಳನ್ನು ಕೇಳಿ ಆ ರಜಪೂತ ವೀರನಿಗೂ, ತರುಣಿಗೂ ತುಂಬಾ ಅಸಹ್ಯವಾಯಿತು. ನಾವು ಯಾಕೆ ಇಲ್ಲಿಗೆ ಬಂದಿರಬಹುದೆಂದು ಅವರು ಪಶ್ಚಾತ್ತಾಪವನ್ನು ಹೊಂದಿ—ಘನವಂತನೇ, ನಾವು ಇಲ್ಲಿಗೆ ಬುದ್ಧಿಪೂರ್ವಕವಾಗಿ ಬಂದವರಲ್ಲ. ಮಾರ್ಗಸ್ತ್ವೇನ ಬಂದವರು. ಇಲ್ಲಿ ಜಾತ್ರೆಯು ನೆರೆದಿರುವದರಿಂದ ಸಹಜವಾಗಿ ಒಳಹೊಕ್ಕೆವು. ನಮಗೆ ಈ ಉರುಸಿನ ವಿಷಯವಾಗಿ ಏನೊಂದೂ ಗೊತ್ತಿರುವದಿಲ್ಲ. ಈಗ ನಾವು ಹ್ಯಾಗೆ ಮಾಡೋಣ? ನೀನು ನಮಗೆ ಉಪಕಾರಕರ್ತೃವಾದ್ದರಿಂದ ನಿನ್ನ ಒಪ್ಪಿಗೆಯಂತೆ ನಾವು ವರ್ತಿಸುವೆವು, ಎಂದರು. ಆಗ ಆತರುಣನು ಅವರನ್ನು ಮುಂದಕ್ಕೆ ಹೋಗಗೊಡದೆ ದಿಲ್ಲಿಯಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋದನು.

೨—ರಾಹುಗ್ರಸ್ತ ರಾಜವಂಶ.

ಅಕಬರಬಾದಶಹನು ಶೂರನಿದ್ದಂತೆ ಅತ್ಯಂತ ಮಹತ್ವಾಕಾಂಕ್ಷಿಯಾಗಿದ್ದನೆಂಬದನ್ನು ಇತಿಹಾಸಜ್ಞರಿಗೆ ಹೊಸದಾಗಿ ಹೇಳುವಕಾರಣವಿಲ್ಲ. ಆತನು ಸಾರ್ವಭೌಮ ಪದತೃಷ್ಣೆಯಿಂದ ಅಸಂಖ್ಯಜನ ರಜಪೂತರಾಜರನ್ನು ಪಾದಾಕ್ರಾಂತವಾಗಮಾಡಿಕೊಂಡಿದ್ದನು. ಹೀಗೆ ಪರಾಜಿತರಾದ ರಜಪೂತರಾಜರಲ್ಲಿ ಕೆಲವರು ಅಕಬರಬಾದಶಹನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಆತನ ಮಾಂಡಲಿಕರಾಗಿದ್ದರು. ಕೆಲವರು ಅಕಬರನ ಸ್ವಾಮಿತ್ವವನ್ನು ಒಪ್ಪಿಕೊಳ್ಳದೆ ಅರಣ್ಯಕ್ಕೆ ಓಡಿಹೋಗಿ ಬಾವಾಬೈರಾಗಿಗಳಂತೆ ಕಾಲಕಳೆಯುತ್ತಿದ್ದರು. ಕೆಲವರು ಅಕಬರನ ಸೆರೆಮನೆಯಲ್ಲಿ ಅಭ್ಯಾಗತರಾಗಿ ವಿಷಕೃಮಿನ್ಯಾಯದಂತೆ ಕಾಲಹರಣ ಮಾಡುತ್ತಿದ್ದರು.

ಈ ಪ್ರಕಾರ ಕಾಲಹರಣ ಮಾಡುವ ಸೆರೆಮನೆಯ ಅಭ್ಯಾಗತರಲ್ಲಿ ಚಂದ್ರಪಾಲನೆಂಬ ರಾಜವಂಶೀಯನೊಬ್ಬನಾಗಿದ್ದನು ಈತನು ಮಧ್ಯಮವಯಸ್ಸಿನವನಾಗಿದ್ದನು. ನಾಮಾಂಕಿತ ಶೂರನು. ಅಕಬರನು ಮಾಳವಾದೇಶದ ಮೇಲೆ ಸ್ವಾರೀಮಾಡಿದಾಗ್ಗೆ ಇವನ ಅಣ್ಣನಾದ ಜಯಸಿಂಹನು ಸಿಂಹಾಸನಸ್ಥನಾಗಿದ್ದನು. ಅಕಬರನ ಹೆಬ್ಬುಲಕ್ಕೆ ಜಯಸಿಂಹನು ಈಡಾಗಲಿಲ್ಲ. ರಣಭೂಮಿಯಲ್ಲಿ ಪತನ ಹೊಂದಿದನು. ಆಗ ಅಕಬರನು ಜಯಶೀಲನಾಗಿ ಜಯಸಿಂಹನ ರಾಜ್ಯವನ್ನು ಕೈವಶಮಾಡಿಕೊಂಡು ರಾಜವಂಶೀಯರನ್ನು ಸೆರೆಹಿಡಿದನು. ಆಗ ಯುದ್ಧದಲ್ಲಿ ಪರಾಜಿತನಾದ ಚಂದ್ರಪಾಲನೂ ಸಕುಟುಂಬವಾಗಿ ಅಕಬರನ ಸೆರೆಯಲ್ಲಿ ಸಿಕ್ಕನು. ಜಯಸಿಂಹರಾಜನ ತಮ್ಮನಾದ ಇವನನ್ನು ಅಕಬರನು ಬೇರೆ ಸೆರೆಯಾಳುಗಳೊಡನೆ ದಿಲ್ಲಿಗೆ ಕಳುಹಿಸಿದನು. ಆ ಸೆರೆಮನೆಯಲ್ಲಿಯೇ ಚಂದ್ರಪಾಲನ ಹೆಂಡತಿಯು ಮರಣಹೊಂದಿದಳು. ಮುಂದೆ ಕೆಲದಿನಗಳು ಕ್ರಮಿಸಿದ ಬಳಿಕ ಚಂದ್ರಪಾಲನು ಬಲದೇವನೆಂಬ ವಿಶ್ವಾಸುಕ ಸೇವಕನ ತಂತ್ರಗಳಿಂದ ಸೆರೆಮನೆಯಿಂದ ಮುಕ್ತನಾಗಿ ದಿಲ್ಲಿಯಲ್ಲಿಯೇ ಛದ್ಮವೇಷದಿಂದ ವಾಸಿಸುತ್ತಿದ್ದನು. ಈತನಿಗೆ ನಂದಕುಮಾರನೆಂಬ ಒಬ್ಬನೇ ಒಬ್ಬ ಮಗನಿದ್ದನು. ಚಂದ್ರಪಾಲನು ದಿಲ್ಲಿಯಲ್ಲಿ ಯಾವ ಮನೆಯಲ್ಲಿ ವಾಸಿಸುತ್ತಿದ್ದನೋ ಆ

ಮನೆಯಲ್ಲಿ ಚಂದ್ರಪಾಲ, ಅವನ ಮಗನಾದ ನಂದಕುಮಾರ, ಸ್ವಾಮಿನಿಷ್ಠ ಸೇವಕನಾದ ಬಲದೇವ, ಇನ್ನೊಬ್ಬ ಪರಿಚಾರಕ ಹೀಗೆ ನಾಲ್ವರೇ ವಾಸಿಸುತ್ತಿದ್ದರು. ಚಂದ್ರಪಾಲನು ಶಿಲ್ಪವಿದ್ಯೆಯಲ್ಲಿ ಒಳ್ಳೇ ನಿಷ್ಣಾತನಿದ್ದನು. ಆತನಿಗೆ ಶಿಲೆಗಳಲ್ಲಿ ಮೂರ್ತಿಗಳನ್ನು ಮಾಡುವ ಕಲೆಯು ಚನ್ನಾಗಿ ಸಾಧಿಸಿತ್ತು. ಈ ವಿದ್ಯೆಯಿಂದ ಅವನು ಚರಿತಾರ್ಥವನ್ನು ಸಾಗಿಸುವ ನಿಶ್ಚಯ ಮಾಡಿ ತನ್ನ ಹೆಸರನ್ನು ಬೇರೆ ಇಟ್ಟುಕೊಂಡು ಮೂರ್ತಿಕಾರನಾದನು. ಬಲದೇವನು ಚಂದ್ರಪಾಲನು ಮಾಡಿದ ಮೂರ್ತಿಗಳನ್ನು ಬಹು ಕುಶಲತೆಯಿಂದ ದಿಲ್ಲಿಯಲ್ಲಿಯ ಅಮೀರ ಉಮರಾವರ ಮನೆಗೆ ಹೋಗಿ ಮಾರಿ ದ್ರವ್ಯ ಸಂಪಾದಿಸುತ್ತಿದ್ದನು. ಬಲದೇವನು ಒಳ್ಳೇ ವ್ಯವಹಾರಕುಶಲನಿದ್ದನು. ತನ್ನ ಒಡೆಯನು ಯಾರೆಂಬ ನಿಜಸಂಗತಿಯ ಸುತ್ರಾಮ ಸುದ್ದಿಯಾದರೂ ಜನರಿಗೆ ಹತ್ತದಂತೆ ತಕ್ಕ ಏರ್ಪಾಡನ್ನು ಇಟ್ಟಿದ್ದನು. ಬಲದೇವನ ಯುಕ್ತಿಯಿಂದ ಚಂದ್ರಪಾಲನು ಅಲ್ಪಾವಕಾಶದಲ್ಲಿ ಪ್ರಸಿದ್ಧ ಮೂರ್ತಿಕಾರನೆಂದು ಹೆಸರಾದನು. ದಿಲ್ಲಿಯೊಳಗಿನ ಶ್ರೀಮಂತರು, ಬಾದಶಹನ ಅಧಿಕಾರಿಗಳು ಚಂದ್ರಪಾಲನು ಎಲ್ಲಿಂದಲೋ ಇಲ್ಲಿಗೆ ಬಂದಿರುವ ಪ್ರಸಿದ್ಧ ಮೂರ್ತಿಕಾರನೆಂದು ತಿಳಿದು ಅವನ ಬಳಿಗೆ ಹೋಗಿ ಬರುವ ಕ್ರಮಪನಿಟ್ಟರು. ಚಂದ್ರಪಾಲನು ಪಾಷಾಣಮೂರ್ತಿಗಳ ನಿಮಿತ್ತವಾಗಿ ತನ್ನ ಬಳಿಗೆ ಬರುವ ಅಮೀರ-ಉಮರಾವರನ್ನು ಒಳ್ಳೇ ಆದರದಿಂದ ಆದರಿಸಿ ಅವರ ಕೆಲಸವನ್ನು ಮನಃಪೂರ್ವಕವಾಗಿ ಮಾಡಿಕೊಡುತ್ತಿದ್ದನು. ಆದರೆ ತಾನು ಯಾರೆಂಬದು ಯಾರಿಗೂ ಗೊತ್ತುಹತ್ತದಂತೆ ಒಳ್ಳೇ ಜಾಗರೂಕನಾಗಿ ವರ್ತಿಸುತ್ತಿದ್ದನು.

ಕಾಲಗತಿಯು ವಿಚಿತ್ರವಿರುತ್ತದೆ, ತಿಪ್ಪಿಯು ಉಪ್ಪರಿಗೆಯಾಗುತ್ತದೆ. ಉಪ್ಪರಿಗೆಯು ತಿಪ್ಪಿಯಾಗುತ್ತದೆ. ತಿರುಕನು ರಾಜನಾಗುತ್ತಾನೆ. ರಾಜನು ತಿರುಕನಾಗುತ್ತಾನೆ. ಕಾಲಗತಿಗೆ ಒಳಗಾದ ಪ್ರಾಣಿಯ ಭವಿತವ್ಯವು ಹೀಗೆಯೇ ಆಗುವದೆಂಬ ಭರವಸೆಯನ್ನು ಯಾರೂ ಹೇಳಲಾರರು. ರಾಜಾಧಿರಾಜರಾದ ಪಾಂಡವರು ವಿರಾಟರಾಜನ ಮನೆಯಲ್ಲಿ ಸೇವಕರಾಗಿ ಉದರಪೋಷಣೆ ಮಾಡಿಕೊಳ್ಳಬೇಕಾಯಿತು. ಕಾಲಗತಿಯು ಗಹನವಿರುತ್ತದೆ. ರಾಜಾನುಜನಾದ ಚಂದ್ರಪಾಲನು ಈ ಕಾಲಗತಿಯಿಂದ ಈಗ ಶಿಲ್ಪಿಯಾಗಿ ಹೊಟ್ಟೆ ಹೊರಕೊಳ್ಳುತ್ತಿದ್ದರಲ್ಲಿ ಆಶ್ಚರ್ಯವೇನು! ಸಮಯ ನಿರೀಕ್ಷಣೆ ಮಾಡುವ ಮನುಷ್ಯನು ಪ್ರಸಂಗೋಚಿತ ವೇಷಹಾಕಿ ಕಾಲಹರಣಮಾಡಲೇ

ಬೇಕಾಗುತ್ತದೆ. ಅದರಂತೆ ಚಂದ್ರಪಾಲನಾದರೂ ಸುದಿನಗಳ ದಾರಿಯನ್ನು ನಿರೀಕ್ಷಿಸುತ್ತ ಶಿಲ್ಪಿಗನಾಗಿ ಜೀವಿಸುತ್ತಿದ್ದನು.

ಚಂದ್ರಪಾಲನ ಮಗನಾದ ನಂದಕುಮಾರನು ಈಗ ಪ್ರಾಯಕ್ಕೆ ಬಂದಿದ್ದನು. ತಾವು ಯಾರು? ಹೀಗೆ ಶಿಲ್ಪಿಕಾರ್ಯದಿಂದ ಜೀವಿಸಿಕೊಂಡಿರುವದಕ್ಕೆ ಕಾರಣವೇನು? ಎಂಬ ಸಂಗತಿಯನ್ನು ಬಲದೇವನ ಮುಖಾಂತರವಾಗಿ ತಿಳಿದು ಹಗಲಿರಳೂ ಮನಸ್ಸಿನಲ್ಲಿ ತಳಮಳಿಸುತ್ತಿದ್ದನು. ಅತನು ಒಳ್ಳೇ ತೇಜಸ್ವಿಯಾಗಿದ್ದನು. ಸ್ವಾಭಿಮಾನವು ಅವನಲ್ಲಿ ನಖಶಿಖಾಂತವಾಗಿ ತುಂಬಿಕೊಂಡಿತ್ತು. ಈ ಸ್ವಾಭಿಮಾನಕ್ಕೆ ತಕ್ಕ ಪರಾಕ್ರಮವೂ ಅವನಲ್ಲಿತ್ತು. ಆದರೆ ಒಬ್ಬನ ಪರಾಕ್ರಮ, ಒಬ್ಬನ ಸ್ವಾಭಿಮಾನಗಳಿಂದ ಕಾರ್ಯವು ಕೈಗೂಡುವವಿಲ್ಲೆಂಬದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಅವನು ಪ್ರಾಯದಮಬ್ಬಿನಲ್ಲಿ ವಿವೇಕಶೂನ್ಯನಂತೆ ಆಚರಿಸುತ್ತಿದ್ದಿಲ್ಲ. ಕಳೆದು ಹೋದ ತಮ್ಮ ವರ್ಚಸ್ಸು ಹ್ಯಾಗಾದರೆ ತಿರುಗಿ ಪ್ರಾಪ್ತವಾದೀತೆಂಬ ವಿಚಾರದಲ್ಲಿ ಅವನು ಬಹು ಎಚ್ಚರದಿಂದ ಹೆಜ್ಜೆಗಳನ್ನಿಕ್ಕುತ್ತಿದ್ದನು. ತಂದೆಯು ಹೀಗೆ ಪ್ರಚ್ಛನ್ನನಾಗಿರುವದು ಉಚಿತವೆಂದು ಅವನಿಗೆ ತೋರುತ್ತಿದ್ದರೂ ಪ್ರಸಂಗದಲ್ಲಿ ಒಮ್ಮೊಮ್ಮೆ ಅವನಿಗೆ ಈ ಅಜ್ಞಾತವಾಸದಿಂದ ಬಹಳ ಸಂತಾಪವಾಗುತ್ತಿತ್ತು. ಆದರೂ ಅವನು ಮತ್ತೆ ವಿವೇಕತಂದುಕೊಂಡು ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿರುವ ಮನಸ್ಸನ್ನು ಆವರಿಸಿಕೊಳ್ಳುತ್ತಿದ್ದನು.

ಪ್ರಬಲವಾಸನೆಯನ್ನೂ, ಪ್ರಬಲೇಚ್ಛೆಯನ್ನೂ, ಆವರಿಸುವದು ಅತ್ಯಂತ ಕಠಿಣವು. ನಂದಕುಮಾರನು ಎಷ್ಟು ಮನಸ್ಸನ್ನು ಬಿಗಿಹಿಡಿದರೂ ಅವನ ಪ್ರಬಲ ಇಚ್ಛೆಯು ಆಗಾಗ್ಗೆ ಪ್ರಕಾಶಕ್ಕೆ ಬರದೆ ಇರುತ್ತಿದ್ದಿಲ್ಲ. ನಂದಕುಮಾರನ ಈ ಆಚರಣೆಯಿಂದ ನಮ್ಮ ಹೂರಣವು ಎಲ್ಲಿ ಹೊರಬೀಳುವದೋ ಎಂದು ಚಂದ್ರಪಾಲನು ಮನದಲ್ಲಿಯೇ ಚಡಪಡಿಸುತ್ತಿದ್ದನು.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಖುಷರೋಜ ಉರುಸಿನಲ್ಲಿ ರಜಪೂತ ತರುಣಿಯ ಮಾನರಕ್ಷಣೆಗಾಗಿ ಮುಸಲ್ಮಾನ ಸರದಾರನ ಕೈಯನ್ನು ಯಾವ ತರುಣನು ಕತ್ತರಿಸಿದನೋ ಆ ತರುಣನು ಬೇರೆ ಯಾರೂ ಆಗಿರದೆ ಸ್ವಾಭಿಮಾನಿಯಾದ ನಂದಕುಮಾರನೇ ಆಗಿದ್ದನು. ಇಂಥ ಸಾಹಸದ ಕೆಲ

ಷಗಳನ್ನು ಅವನು ಆಗಾಗ್ಗೆ ಮಾಡುತ್ತಲೇ ಇದ್ದನು. ಬೀದಿಯಲ್ಲಿ ಕಟಕರು ಆಕಳವನ್ನು ಕೊಲ್ಲುತ್ತಿದ್ದರೆ ನಂದಕುಮಾರನು ಕಟಕನನ್ನು ದಂಡಿಸಿ ಆಕಳವನ್ನು ಬಿಡಿಸುತ್ತಿದ್ದನು. ಆತನ ಹಸ್ತಕೌಶಲ್ಯ, ಮುಖಮುದ್ರೆಯು ದರ್ಪ ಇತ್ಯಾದಿಗಳನ್ನು ನೋಡಿ ಜನರು ದಂಗುಬಡಿದು ಅವನಿಗೆ ಪ್ರತಿಕ್ರಿಯೆಯನ್ನು ತೋರಿಸ ಹೋಗುತ್ತಿರಲಿಲ್ಲ. ದಿಲ್ಲಿಯಲ್ಲಿ ಸಾಮಾನ್ಯಜನರು ಇವನು ಯಾವನೋ ಒಬ್ಬ ದೊಡ್ಡ ಸರದಾರನ ಮಗನೆಂದೂ ಇವನು ಬಾದಶಹನಿಗೆ ಬೇಕಾದವನೆಂದೂ ತಿಳಿಯುತ್ತಿದ್ದರು. ಈ ತಿಳವಳಿಕೆಯೇ ಆತನ ಪುಂಡತನವು ಬಾದಶಹನ ಕಿವಿವರೆಗೆ ಹೋಗದಿರುವದಕ್ಕೆ ಕಾರಣವಾಗಿತ್ತು. ಇರಲಿ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ನಂದಕುಮಾರನು ಯಾವ ರಜಪೂತ ಗೃಹಸ್ಥನನ್ನು ಆತಿಥ್ಯಕ್ಕಾಗಿ ಮನೆಗೆ ಕರೆದೊಯ್ದಿದ್ದನೋ ಆ ಗೃಹಸ್ಥನ ಹೆಸರು ರಣಮಲ್ಲ; ಅವನ ಮಗಳ ಹೆಸರು ರೂಪಮತಿ. ರಣಮಲ್ಲನು ವಿಜಯಸಿಂಹನ ಸರದಾರರಲ್ಲಿ ಒಬ್ಬನು. ಮಾಳವದೇಶವು ಅಕಬರನ ದೋರ್ದಂಡಗಳಿಗೆ ಆಹುತಿಯಾದ ಬಳಿಕ ರಣಮಲ್ಲನು ದೇಶಭ್ರಷ್ಟನಾಗಿ ಪುತ್ರಿಯೊಡನೆ ಹೀಗೆಯೇ ಅಲೆದಾಡುತ್ತಿದ್ದನು. ಇವನಂತೆ ಎಷ್ಟೋ ಜನ ಸರದಾರರು ಅರವಲೀಪರ್ವತದ ಗುಹೆಗಳಲ್ಲಿ ಕಾಲ ಕಳೆಯುತ್ತಿದ್ದರು. ಈಗ ರಣಮಲ್ಲನು ಅರವಲೀ ಪರ್ವತದಲ್ಲಿರುವ ತನ್ನೊಬ್ಬ ಸ್ನೇಹಿತನ ಭೆಟ್ಟಿಗಾಗಿ ಹೊರಟಿದ್ದನು; ಆದರೆ ದಿಲ್ಲಿಯಲ್ಲಿ ವರ್ತಿಸಿದ ವಿಚಿತ್ರಪ್ರಕಾರದಿಂದ ಅವನು ತನ್ನ ಒಡೆಯನ ಮನೆಗೇ ಆತಿಥ್ಯಕ್ಕಾಗಿ ಹೋಗಬೇಕಾಯಿತು; ಆದರೆ ಒಡೆಯನ ಗುರುತು ರಣಮಲ್ಲನಿಗೆ ಹತ್ತಲಿಲ್ಲ. ಯಾಕಂದರೆ ಚಂದ್ರಪಾಲನು ಮಾಳವದೇಶವನ್ನು ಬಿಟ್ಟು ಎಷ್ಟೋವರುಷಗಳಾಗಿದ್ದವು. ಮೇಲಾಗಿ ಅವನು ವಿಲಕ್ಷಣ ಕಷ್ಟಕ್ಕೊಳಗಾಗಿ ಸೊರಗಿ ಕಡ್ಡಿಯಾಗಿದ್ದನು ಶಿಲ್ಪಿಯಾಗಿ ಜೀವಿಸುತ್ತಿದ್ದದರಿಂದ ಅವನ ವೇಷವು ತೀರ ರೂಪಾಂತರಿಸಿ ಹೋಗಿತ್ತು.

ನಂದಕುಮಾರನು ರಣಮಲ್ಲನನ್ನೂ ರೂಪಮತಿಯನ್ನೂ ಮನೆಗೆ ಕರೆದುಕೊಂಡು ಹೋದಾಗ ಚಂದ್ರಪಾಲನು ಸುಂದರವಾದ ಒಂದು ಮೂರ್ತಿಯನ್ನು ಬಲದೇವನಿಗೆ ತೋರಿಸುತ್ತಿದ್ದನು. ಅವರಿಬ್ಬರೂ ಆ ಮೂರ್ತಿಯ ಸೌಂದರ್ಯದಲ್ಲಿ ತಲ್ಲೀನರಾಗಿದ್ದರು. ಅಷ್ಟರಲ್ಲಿ ಹೊರಗೆ

ಕುದುರೆಯ ಖುರಪುಟಗಳ ಸಪ್ಪಳವಾಗಲು ಚಂದ್ರಪಾಲನು ಮೇಲಕ್ಕೆಮುಖ ವೆತ್ತಿ ನೋಡಿದನು. ಮನೆಯ ಒಳಂಗಳದಲ್ಲಿ ನಂದಕುಮಾರನು ಯಾರ ನ್ನೋ ಕರೆತಂದಿರುವಂತೆ ತೋರಿತು. ಆಗ ಅವನು ಅವರನ್ನು ದಿಟ್ಟಿಸಿ ನೋಡಿ ಬಲದೇವನನ್ನು ಕುರಿತು—ಹೊರಗೆ ಬಂದವರು ಯಾರು? ಎಂದು ಪ್ರಶ್ನೆ ಮಾಡಿದನು. ಬಲದೇವನು ಚನ್ನಾಗಿ ದಿಟ್ಟಿಸಿ ನೋಡಿ ಯಾರೋ ಅರ ವಲೀ ಬೆಟ್ಟದ ವಾಸಿಗಳೆಂಬಂತೆ ತೋರುತ್ತಿದೆ. ಬಹಳ ಸಾವಧರಾ ಗಿರ್ರಿ. ಬಂದವರು ನಿಮ್ಮ ಗುರ್ತುಹಿಡಿಯಬಹುದು. ಎಂದನು. ಆಗ ಚಂದ್ರಪಾಲನು ಸಣ್ಣಮೋರೆ ಮಾಡಿ ಬಲದೇವಾ, ನಂದಕುಮಾರನಿಂದ ನಮಗೆ ಸುಖವಿಲ್ಲ. ಅವನು ನನ್ನನ್ನು ಎಲ್ಲಿ ಬೈಲಿಗೆಳೆಯುವನೋ ಎಂದು ಹಗಲಿರಳೂ ನನಗೆ ಅಂಜಿಕೆಯಿದೆ. ಈಗ ಆತನು ಅವರ ಮುಂದೆ ನಮ್ಮ ನಿಜವೃತ್ತಾಂತವನ್ನು ಹೇಳಿದ್ದರೆ ಹ್ಯಾಗೆ ಮಾಡಬೇಕು? ಎಂದು ನುಡಿಯುತ್ತಿರುವಷ್ಟರಲ್ಲಿ ಅವರು ಒಳಗೆ ಬಂದರು. ಆಗ ಚಂದ್ರಪಾಲನೂ ಬಲದೇವನೂ ಅವರ ದೃಷ್ಟಿಗೆ ಬೀಳದಂತೆ ಬೇರೊಂದು ಸ್ಥಳಕ್ಕೆ ಹೋದರು. ನಂದಕುಮಾರನು ಮನೆಯಲ್ಲಿ ತಂದೆಯನ್ನು ಕಾಣದೆ ತಾನೇ ಅವರ ಆತಿ ಥ್ಯವನ್ನು ಮಾಡಿದನು. ನಂದಕುಮಾರನ ಧೈರ್ಯವನ್ನೂ ಪೌರುಷವನ್ನೂ ನೋಡಿ ಸಂತೋಷಬಟ್ಟ ಆ ರಣಮಲ್ಲ-ರೂಪಮತಿಯರು ಅವನ ಈ ಆದ ರೋಪಚಾರಕ್ಕೆ ತುಂಬಾ ಸಂತೋಷಪಟ್ಟು ಅಂದು ಅಲ್ಲಿ ವಾಸಿಸಿದರು.

ನಂದಕುಮಾರನು ಇಂಥ ತೇಜಸ್ವಿಯಾಗಿರಲು ಈತನ ತಂದೆಯು ಎಂಥವನಿರುವನೋ ನೋಡಬೇಕೆಂಬ ಕುತೂಹಲವು ರಣಮಲ್ಲನ ಮನಸ್ಸಿ ನಲ್ಲಿ ಹೆಚ್ಚಿತು; ಆದರೆ ಮಾಳವಾಪ್ರದೇಶದವರಾದ ಇವರು ಯಾರೆಂಬದನ್ನು ತಿಳಿದುಕೊಳ್ಳದೆ ಭೆಟ್ಟಿಯಾಗುವದಕ್ಕೆ ಸಂಶಯ ಬಂದದ್ದರಿಂದ ಚಂದ್ರ ಪಾಲನು ಅವರ ಭೆಟ್ಟಿಯ ಲಾಭವನ್ನು ಬುದ್ಧಿಪೂರ್ವಕವಾಗಿ ತಪ್ಪಿಸಿದನು. ಬಲದೇವನು ಯುಕ್ತಿಯಿಂದ ನಂದಕುಮಾರನಿಂದ ಎಲ್ಲ ಸಂಗತಿಯನ್ನು ತಿಳಿ ದುಕೊಂಡನು. ಬಂದವನು ರಣಮಲ್ಲನೆಂಬಸರದಾರನಿದ್ದು, ರೂಪಮತಿಯು ಅವನ ಮಗಳೆಂಬದು ಆತನಿಗೆ ಗೊತ್ತಾಯಿತು. ಈ ಸಂಗತಿಯಿಂದ ರಣ ಮಲ್ಲನ ಗುರ್ತನ್ನು ಬಲದೇವನು ಹಿಡಿದನು; ಆದರೆ ಬಲದೇವನ ಗುರ್ತು ರಣಮಲ್ಲನಿಗೆ ಹತ್ತಲಿಲ್ಲ. ಆಗ ಬಲದೇವನು ರಣಮಲ್ಲನನ್ನು ಕರೆದೊಯ್ದು ಚಂದ್ರಪಾಲನಿಗೆ ಭೆಟ್ಟೀಮಾಡಿಸಿದನು. ನಿಮ್ಮ ಮಗನು ಇಂದು ನನ್ನ

ಕುವರಿಯು ಶೀಲಸಂರಕ್ಷಣೆ ಮಾಡಿ ರಜಪೂತಕುಲಕ್ಕೆ ಒಳ್ಳೇ ಗೌರವವನ್ನು ತಂದನೆಂದು ರಣಮಲ್ಲನು ನಂದಕುಮಾರನ ಸ್ತುತಿಯನ್ನು ಮಾಡಿದನು. ಆತನ ಸ್ತುತಿಯಿಂದ ಚಂದ್ರಪಾಲನ ಮನಸ್ಸಿಗೆ ಹುಳಕಡಿದಂತಾಯಿತು. ಯಾಕಂದರೆ ಅಜ್ಞಾತಾವಸ್ಥೆಯಲ್ಲಿದ್ದ ತನ್ನ ಮಗನ ಸ್ತುತಿಯು ಅವನಿಗೆ ಬೇಕಾಗಿತ್ತು. ಈ ಕ್ಷಾತ್ರತೇಜಸ್ಸಿನ ಪ್ರಕಟನದಿಂದ ತನ್ನ ಮಗನು ಎಲ್ಲಿ ಸಂಕಟಕ್ಕೀಡಾಗುವನೋ! ಎಂದು ಆತನು ಹಗಲಿರುಳೂ ಚಿಂತಿಸುತ್ತಿದ್ದನು. ರಣಮಲ್ಲನ ಮಾತುಮುಗಿದ ಬಳಿಕ ಚಂದ್ರಪಾಲನು ವಿಶೇಷ ಸಂತೋಷವನ್ನು ಪ್ರಕಟಿಸದೆ ನೀವು ಯಾರು? ಎಲ್ಲಿಗೆ ಹೋಗತಕ್ಕವರು! ಈ ಊರಿಗೆ ಬರಲಿಕ್ಕೆ ಕಾರಣವೇನು? ಆ ಮುಸಲ್ಮಾನನು ನಿಮ್ಮ ಮಗಳ ಮೇಲೆ ಯಾಕೆ ಬಲಾತ್ಕಾರ ಮಾಡಿದನು? ಎಂಬ ಪ್ರಶ್ನೆಗಳ ಮಳೆಯನ್ನೇ ಕರೆದನು. ಒಂದೇ ಉಸಲಿಗೆ ಕೇಳಿದ ಇಷ್ಟು ಪ್ರಶ್ನೆಗಳಿಗೆ ಹ್ಯಾಗೆ ಉತ್ತರ ಕೊಡಬೇಕೆಂದು ರಣಮಲ್ಲನು ಯೋಚಿಸುತ್ತ ಕ್ರಮವಾಗಿ ಒಂದೊಂದಕ್ಕೆ ಉತ್ತರ ಕೊಡತೊಡಗಿದನು. ನಾನು ಅರವಲೀ ಪರ್ವತ ಪ್ರದೇಶದ ನಿವಾಸಿಯು; ನನಗೆ ರಣಮಲ್ಲನೆಂಬ ಹೆಸರು. ನಾನು ಇಷ್ಟುದಿನ ನನ್ನ ಬಂಧುಗಳ ಮನೆಯಲ್ಲಿದ್ದು, ಈಗ ನಮ್ಮ ಅರವಲೀಬೆಟ್ಟದ ಪ್ರದೇಶಕ್ಕೆ ಹೋಗಬೇಕೆಂದು ಹೊರಟು ಈ ಊರಿಗೆ ಬಂದೆನು. ಆದರೆ ಇಂಥ ಪ್ರಸಂಗ ಒದಗಿತು. ಎಂದು ಒಂದೂ ಉಳಿಯದಂತೆ ಎಲ್ಲ ಸಂಗತಿಗಳನ್ನೂ ನಿವೇದಿಸಿದನು. ಚಂದ್ರಪಾಲನು ಆತನು ಹೇಳುವ ಸಂಗತಿಗಳನ್ನೆಲ್ಲ ಕೇಳಿ—ರಣಮಲ್ಲಜೀ, ನೀವು ಶೂರಪುರುಷರು. ನಿಮ್ಮ ಯೋಗ್ಯತೆಯು ಹೀನಾವಸ್ಥೆಯಲ್ಲಿದ್ದ ನಮ್ಮಂತಹರಿಗೆ ಬರಲಾರದು. ನಾವು ರಜಪೂತರೆಂದು ಹೇಳಿಕೊಳ್ಳುವದೇ ನಮಗೆ ಲಾಂಛನಾಸ್ಪದವಾಗಿದೆ. ಹೆಸರಿನ ತಕ್ಕಹಾಗೆ ನಮ್ಮಲ್ಲಿ ಶಕ್ತಿ-ಪೌರುಷಗಳಿರಬೇಕು. ವಸ್ತುಸ್ಥಿತಿಯು ಹಾಗಿಲ್ಲ. ಹೆಸರಿಗೆ ಹಾಲಪ್ಪನೆಂಬಂತೆ ನಮ್ಮ ಸ್ಥಿತಿಯಾಗಿದೆ. ರಣಮಲ್ಲಜೀ, ಸತ್ವಹೀನರಾದ ನಮ್ಮ ಬಾಳು ತಕ್ಕೊಂಡು ಮಾಡುವದೇನು? ನಾವು ಸದ್ಯಕ್ಕೆ ನಾಮಧಾರೀ ರಾಜಪುತ್ರರಾಗಿದ್ದೇವೆ. ನಮ್ಮ ಕ್ಷಾತ್ರತೇಜವು ಎತ್ತ ಮಾಯವಾಯಿತೋ ತಿಳಿಯದು! ಯಾರಲ್ಲಿ ಯಾವಶಕ್ತಿ ಇರಬೇಕೋ ಅದು ಇದ್ದರೇ ಅವರಿಗೆ ಭೂಷಣವು. ಬ್ರಾಹ್ಮಣರಲ್ಲಿ ತಪಶ್ಶಕ್ತಿಯಿರಬೇಕು. ಕ್ಷತ್ರಿಯರಲ್ಲಿ ಬಾಹು

ಸಾಮರ್ಥ್ಯವಿರಬೇಕು. ಸ್ತ್ರೀಯರಲ್ಲಿ ಪಾತಿವ್ರತ್ಯವೆಂಬ ಶಕ್ತಿಯಿರಬೇಕು. ಈಗ ಈ ಶಕ್ತಿಗಳು ಆಯಾಸ್ಥಳಗಳನ್ನು ತ್ಯಜಿಸಹತ್ತಿವೆ. ಆದ್ದರಿಂದ ಶಕ್ತಿ ಶೂನ್ಯವಾದ ಆಸ್ಥಳಗಳು ಲೋಕವಿಡಂಬನೆಗೆ ಪಾತ್ರವಾಗತೊಡಗಿವೆ ಏನು ಮಾಡುವದು! ನನಗಂತೂ ಇದು ಕಾಲಚಕ್ರದ ಮಾಹಾತ್ಮ್ಯಯಿರಬೇಕೆಂದು ಅನಿಸುತ್ತದೆ. ಒಮ್ಮೊಮ್ಮೆ ನಮ್ಮ ದೌರ್ಬಲ್ಯಕ್ಕೆ ಕಾಲಚಕ್ರವಾದರೂ ಏನು ಮಾಡುತ್ತದೆಂದು ಸಂತಾಪವಾಗುತ್ತದೆ. ಬರಿಯ ಸಂತಾಪದಿಂದ ಕಾರ್ಯವಾಗುವದಿಲ್ಲ. ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿದ್ದರೆ ಕಾರ್ಯ ವಾಗುವದು. ನಿಮಗೆ ದಿಲ್ಲಿಯ ವಾತಾವರಣವು ಸೋಂಕದ್ದರಿಂದ ವಿಷಯ ಸುಖಾಭಿಲಾಷೆಯು ನಿಮ್ಮನ್ನು ಅಂಟಿಕೊಂಡಿರುವದಿಲ್ಲ. ಬೆಟ್ಟದಪ್ರದೇಶ ವಾಸಿಗಳಾದ ನೀವು ಸೃಷ್ಟಿಯ ನೈಸರ್ಗಿಕ ಸುಖಾನುಭವಹೊಂದಿ ಅದರ ಲ್ಲಿಯೇ ಸಂತುಷ್ಟಚಿತ್ತರಾಗುತ್ತೀರಿ. ಆದರೆ ಪಟ್ಟಣವಾಸಿಗಳಾದ ನಮ್ಮ ಸ್ಥಿತಿಯು ಹಾಗಿಲ್ಲ. ನಾವು ಮೂರ್ಖರಲ್ಲಿ ಮಹಾ ಮೂರ್ಖರು. ಬಗೆ ಬಗೆಯ ಕೃತ್ರಿಮ ವಿಷಯ ಸುಖೋಪಭೋಗಗಳ ಬಯಕೆಯು ನಮಗೆ ಹೆಚ್ಚುತ್ತಿರುವದು. ಎಷ್ಟು ವಿಷಯ ಸುಖಭೋಗಮಾಡಿದರೂ ನಮಗೆ ತೃಪ್ತಿಯೇ ಇರುವದಿಲ್ಲ ವಿಷಯ ಸುಖವು ಒದಗಿದಂತೆ ಭೋಗಲಾಲ ಸೆಯು ಹೆಚ್ಚುತ್ತ ಹೋಗುವದು, ನಿಜವೆಂದು ನಮ್ಮಂಥ ಮೂರ್ಖರ ಆಚ ರಣೆಯಿಂದಲೇ ಸಿದ್ಧವಾಗುವದು.

ಈ ಮೇರೆಗೆ ಮಾತನಾಡಿ ಚಂದ್ರಪಾಲನು ಸುಮ್ಮನಾಗಲು ರಣ ಮಲ್ಲನು ನಿಮ್ಮ ಮಾತು ನಿಜವೆಂದು ನುಡಿದು ನೀವು ದಿಲ್ಲಿಯಲ್ಲಿರಹತ್ತಿ ಎಷ್ಟು ವರ್ಷಗಳಾದವೆಂದು ಕೇಳಿದನು. ರಣಮಲ್ಲನ ಈ ಪ್ರಶ್ನೆಯಿಂದ ಚಂದ್ರಪಾಲನು ಸ್ವಲ್ಪ ಯೋಚನೆಗೊಳಗಾದನು. ಆದರೆ ಅವನು ಯೋಚನೆ ಮಾಡಿದರೂ ಮಾಡದವನಂತೆ ನಟಿಸಿ ನಮ್ಮ ತಾಯಿತಂದೆಗಳೇ ಇಲ್ಲಿಗೆ ಬಂದಿದ್ದರು. ಯಾವ ಕಾರಣದಿಂದ ಬಂದಿದ್ದರೋ ತಿಳಿಯದು. ನಮ್ಮ ತಂದೆಯು ಇದೇ ಶಿಲ್ಪಿಗ ಹೋರೆಯನ್ನು ಮಾಡುತ್ತಿದ್ದದರಿಂದ ನಾನೂ ಇದನ್ನೇ ಉಪಜೀವಕೆಗಾಗಿ ಇಟ್ಟುಕೊಂಡಿದ್ದೇನೆ. ಆದರೆ ನನ್ನ ಮಗನಿಗೆ ಮಾತ್ರ ಇದರ ಲಕ್ಕು ಹತ್ತುವಂತೆ ತೋರುವದಿಲ್ಲ, ಎಂದು ನುಡಿ ದನು. ಈ ಮಾತು ಆಡುವಾಗ ಚಂದ್ರಪಾಲನಿಗೆ ಮೇಲಿಂದಮೇಲೆ ಕಂಠವು ಬಿಗಿದು ಬರುತ್ತಿತ್ತು. ರಣಮಲ್ಲನು ಚಾಣಾಕ್ಷನಿದ್ದನು. ಚಂದ್ರ

ಪಾಲನು ಹೇಳುವ ಸಂಗತಿಯು ಸುಳ್ಳಿರಬೇಕೆಂದು ಅವನು ನಿಶ್ಚಯಿಸಿದನು. ಈತನ ಲಕ್ಷಣಗಳನ್ನೂ ಈತನ ಮಗನ ಲಕ್ಷಣಗಳನ್ನೂ ನೋಡಿದರೆ ಇವರು ದೊಡ್ಡ ಮನೆತನದವರಾಗಿ ತೋರುವರು. ಇವರಿಗೆ ಈಗ ಹೀನದೆಶೆಯು ಬಂದಿದ್ದರೂ ಇವರ-ರೂಪ ತೇಜವು ಇವರ ಪೂರ್ವದ ಸ್ಥಿತಿಯ ಸ್ಮರಣ ವನ್ನು ತಂದು ಕೊಡುವದು, ಎಂಬದಾಗಿ ಅವನಲ್ಲಿ ಶಂಕೆಯು ಉತ್ಪನ್ನ ವಾಯಿತು. ಆದರೆ ಈ ಶಂಕೆನಿವಾರಣೆಗೆ ಅವನಿಗೆ ಯಾರನ್ನು ಕೇಳಬೇ ಕೆಂಬದು ತೋಚದಾಯಿತು. ನಂದಕುಮಾರನಾದರೂ ಈ ವಿಷಯದಲ್ಲಿ ಏನೂ ಹೇಳಲಾರನೆಂದು ತಿಳಿದನು. ಆ ಹೊಸಬನಿಗೆ ಗುಪ್ತಸಂಗತಿಯು ತಿಳಿಯುವ ಬಗೆಹ್ಯಾಗೆ? ಆ ರಾಹುಗ್ರಸ್ತ ರಾಜವಂಶವನ್ನು ತಿಳಿಯಲಾರದೆ ರಣಮಲ್ಲನು ಬಹಳ ಯೋಚನೆಯಲ್ಲಿ ಬಿದ್ದನು.

೩—ವಿಲಕ್ಷಣ ಯೋಗ.

ರಣಮಲ್ಲನು ಚಂದ್ರಪಾಲನಿಂದ ಆತಿಥ್ಯವನ್ನು ಹೊಂದಿ ಅಂದು ಅಲ್ಲಿಯೇ ವಾಸಿಸಿದನು. ರಾತ್ರಿಯಲ್ಲಿ ಅವನಿಗೆ ನಿದ್ರೆಯೇ ಬರಲಿಲ್ಲ. ಚಂದ್ರಪಾಲನ ಗೂಢರಹಸ್ಯವನ್ನು ಆಲೋಚಿಸುವದರಲ್ಲಿಯೇ ಕಾಲಕಳೆ ದನು. ಆತನು ಎಷ್ಟು ನಿರಾಶನಾದರೂ ಆ ಬಗ್ಗೆ ಆಲೋಚಿಸುವದನ್ನು ಬಿಡಲಿಲ್ಲ. ರಣಮಲ್ಲನು ಅಜ್ಞಮನುಷ್ಯನಾಗಿದ್ದಿಲ್ಲ. ಜನರ ಪರೀಕ್ಷೆಯಲ್ಲಿ ಗಡ್ಡ ಬೆಳ್ಳಗಾಗುವವರೆಗೆ ಕಾಲಕಳೆದವನಾಗಿದ್ದನು. ಅತನಲ್ಲಿ ಊಹನಾ ಶಕ್ತಿಯು ವಿಶೇಷವಾಗಿತ್ತು. ಕಡೆಗೆ ಅವನು ಮಾಳವಾ ದೇಶದಲ್ಲಿಯ ಸಂಗತಿಗಳನ್ನು ನೆನಪಿಗೆ ತಂದುಕೊಂಡು ಈ ಚಂದ್ರಪಾಲನು ಬಹುಶಃ ನಮ್ಮ ಮಾಳವಾಧೀಶನಾದ ಜಯಸಿಂಹನ ಕನಿಷ್ಠ ಬಂಧುವಾಗಿರಬೇಕು. ಈತನ ರಾಜತೇಜವನ್ನೂ ಇವನ ಮಗನ ಲಕ್ಷಣಗಳನ್ನೂ ನೋಡಿದರೆ ನನ ಗಂತೂ ಹೀಗೇ ಇರಬಹುದೆಂದು ತೋರುತ್ತದೆ. ಆದರೆ ವಸ್ತುಸ್ಥಿತಿಯು ಹೇಗಿರುವದೋ ಪರಮೇಶ್ವರನೊಬ್ಬನಿಗೇ ಗೊತ್ತು. ಎಂದು ಯೋಚಿಸಿ ಅನುಮಾನಿಸುತ್ತಿರುವಷ್ಟರಲ್ಲಿ ಬೆಳ್ಳಗೆ ಬೆಳಗಾಯಿತು ಅಷ್ಟರಲ್ಲಿ ಚಂದ್ರ ಪಾಲನು ಎದ್ದು ಬಂದನು. ರಣಮಲ್ಲನು ಲಗೆಬಗೆಯಿಂದ ಎದ್ದು, ಮಗ

ಳನ್ನು ಎಬ್ಬಿಸಿ ಪ್ರಾತರ್ವಿಧಿಯನ್ನು ತೀರಿಸಿ ಕುದುರೆಗಳನ್ನು ಸಜ್ಜುಗೊಳಿಸಲು ಅಶ್ವಶಾಲೆಗೆ ಹೋದನು. ಅಷ್ಟರಲ್ಲಿ ನಂದಕುಮಾರನು ಸ್ನಾನ ತೀರಿಸಿಕೊಂಡು ತಂದೆಯ ಬಳಿಗೆ ಬಂದು—ನಾನು ಈ ಅತಿಥಿಗಳನ್ನು ಕಳಿಸುವದಕ್ಕೋಸ್ಕರ ಸರಹದ್ದಿನ ವರೆಗೆ ಹೋಗಿ ಬರುವೆನು ಎಂದು ನುಡಿದನು. ಆಗ ಚಂದ್ರಪಾಲನು ತಮ್ಮಾ ಸರಹದ್ದೆಂದರೆ ಇಲ್ಲಿಗೆ ಸಮೀಪವಿಲ್ಲ. 40|45 ಮೈಲು ದೂರವಿರುವದು. ಸುಮ್ಮನೆ ಯಾಕೆ ಆಯಾಸಹೊಂದುವಿ ಎಂದನು. ತಂದೆಯ ಮಾತಿಗೆ ನಂದಕುಮಾರನು ನಿರಾಶನಾಗದೆ—ಅಪ್ಪಾ, 40|45 ಮೈಲುಗಳೆಂದರೆ ನನ್ನ ಶ್ಯಾಮಕರ್ಣನಿಗೆ ಹಿಂದೇತಾಸಿನ ದಾರಿಯು. ಮುಂಜಾನೆಯ ತಂಪು ಹೊತ್ತು ಇರುವದರಿಂದ ಬಿಸಿಲೇರುವಷ್ಟರಲ್ಲಿ ತಿರುಗಿ ಬರುತ್ತೇನೆ. ಎಂದು ನುಡಿದನು. ಮಗನ ಔತ್ಸುಕ್ಯವನ್ನು ತಿಳಿದು ಚಂದ್ರಪಾಲನು—ತಮ್ಮಾ, ನಿನಗೆ ಹೋಗುವದಕ್ಕೇನೂ ಬೇಡೆನ್ನುವದಿಲ್ಲ. ರಣಮಲ್ಲನು ಚಾಣಾಕ್ಷನಿದ್ದಂತೆ ಕಾಣುವನು. ಅವನು ನಿನಗೆ ಅಡ್ಡತಿಡ್ಡ ಪ್ರಶ್ನೆಮಾಡಿ ನಮ್ಮ ನಿಜಸಂಗತಿಯನ್ನು ತಿಳಿದುಕೊಳ್ಳಬಹುದು. ಈ ಬಗ್ಗೆ ನೀನು ಬಹಳ ಎಚ್ಚರದಿಂದಿರು. ಇಷ್ಟೇ ನಿನಗೆ ಹೇಳುವದು ಎಂದನು. ಈ ಮಾತು ಕೇಳಿ ನಂದಕುಮಾರನು ನಕ್ಕು—ಅಪ್ಪಾ, ನಾನು ಹುಡುಗನಾದರೂ ನಮ್ಮ ಮೇಲಿರುವ ಪ್ರಸಂಗವು ನನಗೆ ಗೊತ್ತಿರುವದು. ರಾಜಕರಣದಲ್ಲಿ ಹ್ಯಾಗೆ ಗೌಪ್ಯವನ್ನು ಕಾಯ್ದುಕೊಳ್ಳಬೇಕೆಂಬದು ನನಗೆ ಗೊತ್ತಿದೆ. ಈ ಬಗ್ಗೆ ನೀನು ಸ್ವಲ್ಪ ಮಾತ್ರಕ್ಕೂ ಯೋಚನೆ ಮಾಡಬೇಡ ಎಂದು ನುಡಿಯುತ್ತಿರಲು ರಣಮಲ್ಲನು ಎರಡು ಕುದುರೆಗಳನ್ನು ಸಜ್ಜುಗೊಳಿಸಿ ಹೆಬ್ಬಾಗಿಲ ಬಳಿಗೆ ತಂದನು. ಚಂದ್ರಪಾಲನು ಮಗನಿಗೆ ಹೋಗಲಪ್ಪಣೆಕೊಟ್ಟು ತಾನು ರಣಮಲ್ಲನ ಬಳಿಗೆ ಹೋದನು.

ನಂದಕುಮಾರನು ಮೊದಲೇ ಸಜ್ಜಗೊಳಿಸಿದ್ದ ತನ್ನ ಶಾಮಕರ್ಣವನ್ನು ಹತ್ತಿಕೊಂಡು ಅಲ್ಲಿಗೆ ಬಂದನು. ಆಗ ರಣಮಲ್ಲನು ರೂಪಮತಿಯನ್ನು ಕುರಿತು—ತಂಗೀ, ಬಿಸಿಲಾಗುವದು. ಬೇಗನೆ ಚಂದ್ರಪಾಲ ಮಹಾಶಯರನ್ನು ನಮಸ್ಕರಿಸಿ ಕುದುರೆಯನ್ನೇರು. ಎಂದು ನುಡಿದನು. ರೂಪಮತಿಯು ಚಂದ್ರಪಾಲನನ್ನು ನಮಸ್ಕರಿಸಿದಳು. ಚಂದ್ರಪಾಲನು ಆಕೆಯನ್ನು ಆಶೀರ್ವದಿಸಲು ಆಕೆಯು ಚಟ್ಟನೆ ಕುದುರೆಯನ್ನೇರಿದಳು. ಬಳಿಕ

ರಣಮಲ್ಲನು ಚಂದ್ರಪಾಲನನ್ನು ಕುರಿತು—ಮಹಾಶಯ, ನಿಮ್ಮ ಉಪಕಾರವು ಬಹಳವಾಯಿತು. ಅಪ್ಪಣೆಕೊಡಬೇಕು. ಎಂದು ನುಡಿದು ನಮಸ್ಕರಿಸಿ ಕುದುರೆಯನ್ನೇರಿ ಮುಂದಕ್ಕೆ ಸಾಗಿದನು. ನಂದಕುಮಾರನು ರಣಮಲ್ಲನ ಹಾಗು ರೂಪಮತಿಯರ ಕುದುರೆಗಳಹಿಂದೆ ತನ್ನ ಕುದುರೆಯನ್ನು ಸಾಗಿಸಿದನು.

ಮೂವರ ಕುದುರೆಗಳೂ ಬಲಿಷ್ಠವಾಗಿದ್ದವು. ಅವುಗಳ ವೇಗವಾದರೂ ಅತಿಶಯವಿತ್ತು. ಊರದಾಟುವದೊಂದೇ ತಡ! ಆ ಕುದುರೆಗಳು ವಾಯುವೇಗವನ್ನನುಸರಿಸಿ ಓಡಲಾರಂಭಿಸಿದವು. ಅವುಗಳ ಖುರಪುಟಗಳ ಆಘಾತಕ್ಕೆ ಕೆಂಧೂಳವು ಹೊರಟು ಗಗನಾಂಗಣವನ್ನು ಅಡರತೊಡಗಿತು. ನಂದಕುಮಾರನು ಕುದುರೆಯನ್ನು ಓಡಿಸುವದರಲ್ಲಿ ಒಳ್ಳೇ ನಿಷ್ಣಾತನಿದ್ದನು. ಅವನು ತನ್ನ ವಿದ್ಯೆಯನ್ನು ರಣಮಲ್ಲನಿಗೂ ರೂಪಮತಿಗೂ ತೋರಿಸಬೇಕೆಂಬ ಹೌಸಿನಿಂದ ಕುದುರೆಯನ್ನು ಚಪ್ಪರಿಸಿದನು. ಕುದುರೆಯು ಸುಯ್‌ಗುಡುವ ಬಾಣದಂತೆ ದಾರಿಯನ್ನು ಕ್ರಮಿಸಲಾರಂಭಿಸಿತು. ಆತನ ಕುದುರೆಯನ್ನು ಬೆನ್ನಟ್ಟಬೇಕಾದರೆ ರೂಪಮತಿಗೂ ರಣಮಲ್ಲನಿಗೂ ಸಾಕುಸಾಕೆನಿಸಿತು. ಅವರು ನಂದಕುಮಾರನನ್ನು ಬಹಳವಾಗಿ ಹೊಗಳಿದರು. ಮತ್ತು ಈತನು ನಿಶ್ಚಯವಾಗಿ ನಮ್ಮ ರಾಜವಂಶದವನೇ ಇರಬಹುದೆಂದು ಭಾವಿಸಿದರು. ಇದರಿಂದ ಆ ಪಿತಾಪುತ್ರಿಯರಲ್ಲಿ ಆತನ ವಿಷಯವಾಗಿ ತುಂಬಾ ಆದರವುಂಟಾಯಿತು.

ಈ ಮೇರೆಗೆ ಆ ಮೂವರು ಮಾರ್ಗಕ್ರಮಿಸುತ್ತಿರಲು ಅರವಲಿಯ ಸರಹದ್ದು ಸಮೀಪಿಸಿತು. ಆಗ ಅಲ್ಲಿ ಎರಡು ದಾರಿಗಳು ಒಡೆದಿದ್ದವು, ಒಂದು ದಾರಿಯು ರಣಮಲ್ಲನ ನಿವಾಸಸ್ಥಾನದ ಕಡೆಗೆ ಹೋಗುತ್ತಿತ್ತು. ಇನ್ನೊಂದು ಅರವಲೀಪರ್ವತದಲ್ಲಿರುವ ಒಂದು ಪ್ರಸಿದ್ಧಗುಹೆಯ ಕಡೆಗೆ ಹೋಗುತ್ತಿತ್ತು. ರಣಮಲ್ಲನು ಅಲ್ಲಿ ತನ್ನ ಕುದುರೆಯನ್ನು ನಿಲ್ಲಿಸಿ, ನಂದಕುಮಾರನಿಗೂ ನಿಲ್ಲಿಸಲಿಕ್ಕೆ ಒದರಿ ಹೇಳಿದನು. ಅದರಂತೆ ನಂದಕುಮಾರನು ತನ್ನ ಕುದುರೆಯನ್ನು ನಿಲ್ಲಿಸಿ, ರಣಮಲ್ಲಜೀ ಈ ಎರಡು ದಾರಿಗಳಲ್ಲಿ ನಿಮ್ಮ ದಾರಿಯಾವದು? ಎಂದು ಪ್ರಶ್ನೆಮಾಡಿದನು. ಆಗ ರಣಮಲ್ಲನು ಅತ್ಯಂತ ಕೃತಜ್ಞತೆಯಿಂದ ತನ್ನ ದಾರಿಯಾವುದೆಂಬದನ್ನು ತೋರಿಸಿ-ನಂದಕುಮಾರ, ಇನ್ನು ನೀವು ಇಲ್ಲಿಯೇ ನಿಂತುಕೊಳ್ಳಿರಿ, ನೀವು ನನ್ನೊಡನೆ

೪೦-೪೫ ಮೈಲು ದೂರಬಂದಂತಾಯಿತು. ನಿಮ್ಮ ಪರೋಪಕಾರ ಬುದ್ಧಿಯನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ಮುಂದೆ ನಮ್ಮ ನಿಮ್ಮ ಭೆಟ್ಟಿಯು ಯಾವಾಗ ಆಗುವದೋ ತಿಳಿಯದು. ನಿಮ್ಮ ಉಪಕಾರವನ್ನು ನಾನು ಆಮರಣ ಮರೆಯಲಾರೆನು. ಎಂದು ಕೃತಜ್ಞತೆಯಿಂದ ಅವನನ್ನು ಶ್ಲಾಘಿಸಿದನು. ರೂಪಮತಿಯು ಅತ್ಯಂತ ವಿನಯದಿಂದ ತನ್ನ ಉಪಕಾರ ಕರ್ತೃವಿನ ಉಪಕಾರ ಸ್ಮರಣೆಮಾಡಿದಳು. ತನ್ನ ಉಪಕಾರ ಕರ್ತೃವಾದ ತರುಣನನ್ನು ಬಿಟ್ಟು ಹೋಗಬೇಕಾಯಿತೆಂದು ಆಕೆಗೆ ತುಂಬಾ ಅಸಮಾಧಾನವಾಯಿತು. ನಂದಕುಮಾರನಿಗಾದರೂ ರಣಮಲ್ಲನ ಮಾತಿನಿಂದ ಸ್ವಲ್ಪ ಅಸಮಾಧಾನವಾಯಿತು. ನಂದಕುಮಾರನಲ್ಲಾಗಲಿ, ರೂಪಮತಿಯಲ್ಲಾಗಲಿ ಪಾಪಬುದ್ಧಿಯು ಸ್ವಲ್ಪಮಾತ್ರಕ್ಕೂ ಇರಲಿಲ್ಲ. ಅವರ ಪರಿಶುದ್ಧ ಮನಸ್ಸಿನಲ್ಲಿ ಸ್ವಾಭಾವಿಕ ಪ್ರೇಮವು ಅಂಕುರಿಸಿ ಕ್ಷಣಕ್ಷಣಕ್ಕೆ ವೃದ್ಧಿಂಗತವಾಗತೊಡಗಿತ್ತು. ಆದ್ದರಿಂದ ಅವರಿಬ್ಬರೂ ವಿಯೋಗ ಸಮಯ ಬಂದದ್ದರಿಂದ ಖಿನ್ನರಾದರು. ಆದರೆ ಆ ಖಿನ್ನತೆಯನ್ನು ಬಹಿರಂಗ ಪಡಿಸಬಾರದೆಂದು ಇಬ್ಬರೂ ಸಾವರಿಸಿಕೊಂಡು ನಗೆಮೊಗದಿಂದ ಒಬ್ಬರೆನ್ನೊಬ್ಬರು ನೋಡಲಾರಂಭಿಸಿದರು. ಈ ವೇಳೆಯಲ್ಲಿ ರಣಮಲ್ಲನು ತನ್ನ ಕುದುರೆಯ ಲಗಾಮನ್ನು ಸರಿಪಡಿಸುವದರಲ್ಲಿದ್ದನು.

ಪರಸ್ಪರರು ಪರಸ್ಪರರ ನಿರೂಪ ತಕ್ಕೊಂಡಬಳಿಕ ರಣಮಲ್ಲನು ತನ್ನ ನಿವಾಸಸ್ಥಾನದ ಕಡೆಗೆ ಕುದುರೆಯನ್ನು ತಿರುಗಿಸಿದನು. ತಂದೆಯ ಹಿಂದಿನಿಂದ ರೂಪಮತಿಯೂ ಸಾಗಿದಳು. ನಂದಕುಮಾರನು ಅವರಿಬ್ಬರನ್ನು ನೋಡುತ್ತ ಅಲ್ಲಿಯೇ ನಿಂತುಕೊಂಡನು. ದಾರಿಯನ್ನು ಕ್ರಮಿಸಹತ್ತಿದ್ದ ರಣಮಲ್ಲ, ರೂಪಮತಿಯರಾದರೂ ನಂದಕುಮಾರನು ಕಾಣುವವರೆಗೆ ಕೃತಜ್ಞತೆಯಿಂದ ಆಗಾಗ್ಗೆ ಹೊರಳಿ ನೋಡುತ್ತಿದ್ದರು. ಅಷ್ಟರಲ್ಲಿ ಕುದುರೆಯು ಒಂದು ಪರ್ವತಶಿಖರವನೇರಿ ಕೆಳಗಿಳಿಯಲಾರಂಭಿಸಿತು. ಇನ್ನು ನಂದಕುಮಾರನು ಮರೆಯಾಗುವನೆಂದು ಅಲ್ಲಿಂದಲೇ ಅವರು ಆತನಿಗೆ ಪ್ರಣಾಮಗಳನ್ನು ಸಮರ್ಪಿಸಿದರು. ನಂದಕುಮಾರನಾದರೂ ನಿಂತ ಸ್ಥಳದಲ್ಲಿಯೇ ನಿಂತು ಅವನನ್ನು ನೋಡುತ್ತಿದ್ದದರಿಂದ ಅವರ ಪ್ರಣಾಮಗಳನ್ನು ಸ್ವೀಕರಿಸಿ ತಾನೂ ಪ್ರತಿಪ್ರಣಾಮಗಳನ್ನು ಸಮರ್ಪಿಸಿದನು. ಅಷ್ಟರಲ್ಲಿ ಕುದುರೆಗಳು ಕೆಳಗಿಳಿದದ್ದರಿಂದ ಒಬ್ಬರಿಗೊಬ್ಬರು ಕಾಣದಂತಾದರು. ಬಳಿಕ

ನಂದಕುಮಾರನು ಆ ಸ್ಥಳದಿಂದ ಕುದುರೆಯನ್ನು ತಿರುಗಿಸಿ ದಿಲ್ಲಿಗೆ ಹೋಗುವದಕ್ಕಾಗಿ ಕುದುರೆಯನ್ನು ಬಿಟ್ಟನು. ಆ ಬುದ್ಧಿವಂತಪ್ರಾಣಿಯು ಒಡೆಯನ ಆಶಯವನ್ನು ತಿಳಿದು ವೇಗದಿಂದ ಸಾಗಿತು

ಹೀಗೆ ನಂದಕುಮಾರನ ಶಾಮಕರ್ಣವು ದಿಲ್ಲಿಯ ಕಡೆಗೆ ಭರದಿಂದ ಸಾಗಿರಲು, ದಾರಿಯಲ್ಲಿ ಅದಕ್ಕೆ ಏನಾಯಿತೋ ತಿಳಿಯದು! ಸುಮ್ಮನೆ ದಾರೀಹಿಡಿದು ಓಡುತ್ತಿದ್ದ ಕುದುರೆಯು ಒಮ್ಮೆಲೆ ಬೆದರಿ ದಾರೀಬಿಟ್ಟು ಅಡ್ಡತಿರುಗಿ ಕಡಿವಾಣಕ್ಕೂ ಅಸಗೊಳ್ಳದೆ ಹುಚ್ಚೆದ್ದು ಓಡಲಾರಂಭಿಸಿತು. ತನ್ನ ಪ್ರೀತಿಯ ಶಾಮಕರ್ಣವು ಈ ದಿನ ಹೀಗೇಕೆ ಮಾಡುವದೆಂಬದು ನಂದಕುಮಾರನಿಗೆ ತಿಳಿಯದಾಯಿತು. ಅವನು ಕುದುರೆಯನ್ನು ರಮ್ಮಿಸುವದಕ್ಕಾಗಿ ವಿಶ್ವಪ್ರಯತ್ನ ಮಾಡಿದನು. ಅವನ ಜಾಣತನವೂ-ಪ್ರಯತ್ನವೂ ಒಂದೂ ಫಲಿಸಲಿಲ್ಲ. ಕೊನೆಗೆ ಅವನು ಬೇಸತ್ತು ಒಯ್ದತ್ತ ಒಯ್ಯಲೆಂದು ಗಟ್ಟಿಯಾಗಿ ಕುಳಿತುಕೊಂಡನು.

ನಂದಕುಮಾರನು ಎಷ್ಟು ಬುದ್ಧಿವಂತನಾದರೂ ಈ ದಿನ ಕುದುರೆಯ ಮುಂದೆ ಅವನ ಆಟ ಸಾಗದಂತಾಯಿತು. ಕುದುರೆಯು ಆರು ತಾಸು ಹೊತ್ತಾಗುವ ವರೆಗೆ ಒಂದೇ ಸವನೇ ಓಡಿತು. ಇನ್ನೂ ಅದರ ಹುಚ್ಚು ಅಡಗಿದ್ದಿಲ್ಲ. ಅಷ್ಟರಲ್ಲಿ ಎದುರಿಗೆ ಒಂದು ರಮಣೀಯವಾದ ವೃಕ್ಷಸಮುದಾಯವು ಕಂಡಿತು. ನಂದಕುಮಾರನು ಬಿಸಿಲಿನ ತಾಪದಿಂದ ವಿಶೇಷ ತ್ರಾಸಗೊಂಡು ಹೋಗಿದ್ದನು, ಆತನಿಗೆ ನೀರಡಿಕೆಯಾಗಿ ಗಂಟಲು ಸೆಳೆಯಲಾರಂಭಿಸಿತ್ತು. ಅವನು ಕೇವಲ ಮಂಕುಹಿಡಿದವನಂತೆ ಕುದುರೆಯ ಮೇಲೆ ಕುಳಿತುಬಿಟ್ಟದ್ದನು. ಈ ಎದುರಿಗಿನ ಗಿಡಗಳ ಗುಂಪಿಗಾದರೂ ಕುದುರೆಯು ಹೋದರೆ ಅಲ್ಲಿ ಕೆಳಗೆ ಹಾರಿಕೊಂಡು ಬಿಡಬೇಕೆಂದು ಅವನು ಎಣಿಕೆ ಹಾಕಲಾರಂಭಿಸಿದನು. ನಂದಕುಮಾರನ ಇಚ್ಛೆಯಂತೆ ಶಾಮಕರ್ಣವು ಆ ವೃಕ್ಷಸಮುದಾಯದಕಡೆಗೇ ಓಡಿ ಅಲ್ಪಾವಕಾಶದಲ್ಲಿ ಅದನ್ನು ಮುಟ್ಟಿತು.

ಆ ವೃಕ್ಷಗಳ ಸಮುದಾಯವು ಎರಡು ಗುಡ್ಡಗಳ ಪಕ್ಕದಲ್ಲಿತ್ತು. ಅಲ್ಲಿ ಮೂರುನಾಲ್ಕು ದೊಡ್ಡ ದೊಡ್ಡ ಆಲದ ಮರಗಳೂ ನಾಲ್ಕಾರು ನೇರಿಲ ಮರಗಳೂ ಇದ್ದವು. ಅವುಗಳ ದಟ್ಟಾದ ನೆಳಲಿನಿಂದ ಆ ಪ್ರದೇಶಕ್ಕೆ ಒಳ್ಳೇ ರಮಣೀಯತೆಯು ಪ್ರಾಪ್ತವಾಗಿತ್ತು. ಅಲ್ಲಿ ಒಂದು ವಿಶಾಲವಾದ ಆಲದವೃಕ್ಷದ ಕೆಳಗೆ ಒಂದು ಸುಂದರವಾದ ಸಮಾಧಿಯು ಇದ್ದಿತು.

ಬಳಿಯಲ್ಲಿ
ಆ ಸಮಾಧಿಯು ಹೊಳಪುಳ್ಳ ಕರೀಕಲ್ಲಿನಿಂದ ಕಟ್ಟಲ್ಪಟ್ಟದ್ದ ಕುಡಿಸಿ ಬಳಿಕ
ಸೊಬಗು ಪ್ರೇಕ್ಷಣೀಯವಾಗಿತ್ತು. ಆ ಸಮಾಧಿಯಸುತ್ತುವಗೆ ಕುಡಿದನು.
ಬನವಿದ್ದಿತು. ಅಲ್ಲಿ ಮಲ್ಲಿಗೆ ಜಾಜಿಮಲ್ಲಿಗೆಯು ಬಳ್ಳಿಜೀರ ಮೊದಲಾದ
ಬೆಳೆದಿದ್ದವು. ಆಗ ಹೂವಿನ ಹಂಗಾಮವಿದ್ದ ದರಿಂದ ಮಾರ್ಗಪ್ರತೀಕ್ಷೆ
ಬಳ್ಳಿಗಳ ಮೇಲೂ ಬುಡದಲ್ಲೂ ಮಲ್ಲಿಗೆಯ ಹೂಗಳಪಕುಮಾರನು ಅಲ್ಲಿಗೆ
ಸುರಿದಿದ್ದವು. ಅವುಗಳ ಸುವಾಸನೆಯಂತೂ ಆ ಸಮರ್ಪಿಸಿದಳು.
ಬಿಟ್ಟಿತ್ತು. ಆ ಪ್ರದೇಶಕ್ಕೆ ಬಂದಕೂಡಲೆ ಆ ರಾ ಸುಂದರಿಯು ಪ್ರೇಮಾ
ಸೊಗಸಾದ ತಂಪನ್ನೂ, ಆನಂದಕರವಾದ ಸುಗಂಧದರೂ ಅವನು ತರು
ತಿಳಿದು, ಆಘ್ರಾಣಿಸಿ ನಂದಕುಮಾರನಿಗೆ ಹಿಡಿಸಲಾನಲಗಳು ಅತ್ಯಂತ
ವಾಯಿತು. ತನ್ನ ಕುದುರೆಯು ತನ್ನನ್ನು ಇಂದ್ರನ ಂದಕುಮಾರನು
ತಂದುಬಿಟ್ಟಿತೋ ಎಂಬ ಭ್ರಾಂತಿಯು ಆತನಲ್ಲಿ ಸ್ವಾಭಾವಿಕವಾಳಿಕ ಅವನು
ಯಿತು. ಅವನಿಗಾದ ತಾಪವೆಲ್ಲ ಆ ರಮಣೀಯ ಪ್ರದೇಶದಲ್ಲೀ ಇರಲು
ಕೂಡಲಿ ನಿವಾರಣೆಯಾಗಿ ಹೋಯಿತು. ಶಾಮುಕರ್ಣವು ಮಾನ್ನು ನನಗೆ
ತ್ತಲೇ ಇದ್ದಿತು. ಅದು ಇನ್ನು ಅಲ್ಪಾವಕಾಶದಲ್ಲಿ ಈ ರಮಣೀಳಿದನು.
ದೇಶವನ್ನು ದಾಟ ಮುಂದೆ ಹೋಗಬಹುದೆಂದು ನಂದಕುಪಾಕ್ಕೇನೂ
ತೋರಿತು. ಆಗ ಅವನು ಕೆಳಕ್ಕೆ ಧುಮುಕಿ ಒಮ್ಮೆ ಈ ಶ್ಯಾಮು ಕುದು
ಕೈಯೊಳಗಿಂದ ಪಾರಾಗಬೇಕೆಂದು ಯೋಚಿಸುತ್ತಿರಲು ಒಮ್ಮೆಲೆ ಕಾನು
ರೆಯು ಗಕ್ಕನೆ ನಿಂತಿತು. ನಂದಕುಮಾರನು ಯೋಚನೆಯನ್ನು ಬಿಟ್ಟು
ಮೇಲಕ್ಕೆ ಮುಖವನ್ನೆತ್ತಿ ಕುದುರೆಯು ಯಾಕೆ ನಿಂತಿತೆಂಬದನ್ನು ನೋಡಿ
ದನು. ಎದುರಿಗೆ ಒಂದು ಸುಂದರವಾದ ದೃಶ್ಯವು ಅವನ ಕಣ್ಣಿಗೆ ಬಿದ್ದಿತು.

ಹದಿನಾರು ಹದಿನೇಳು ವರುಷದ ಓರ್ವ ಸುಂದರ ತರುಣಿಯು ಕುದುರೆಯ ಕಡಿವಾಣದಲ್ಲಿ ಕೈಹಾಕಿ ಗಟ್ಟಿಯಾಗಿ ಹಿಡಿದಿದ್ದಳು. ಕುದುರೆಯು ಕಡಿವಾಣವನ್ನು ಆಕೆಯಿಂದ ಬಿಡಿಸಿಕೊಳ್ಳಬೇಕೆಂದು ಮುಂಗಾಲು ಕೊಡವಿ ಪ್ರಯತ್ನಿಸುತ್ತಿತ್ತು. ತರುಣಿಯು ಒಳ್ಳೇ ಧೈರ್ಯಶಾಲಿನಿಯಾಗಿದ್ದಳು. ಆಕೆಯು ಕೋಮಲೆಯಾಗಿದ್ದರೂ ಶಕ್ತಿಸಂಪನ್ನಳಾಗಿದ್ದಳು. ಆಕೆಯು ಮಂದಹಾಸದಿಂದ ಕುದುರೆಯನ್ನು ರಮ್ಮಿಸುತ್ತಿದ್ದಳು.

ತರುಣಿಯ ದರ್ಶನದಿಂದ ನಂದುಕುಮಾರನಿಗೆ ವಿಲಕ್ಷಣ ಸಂತೋಷವಾಯಿತು. ಅವನು ಚಟ್ಟನೆ ಕುದುರೆಯಿಂದಿಳಿದು ಶಾಮುಕರ್ಣನ ಆಯಾ

ಡಿ—ಮಗನೇ, ಇಂದು ಹೀಗೇಕೆ ಅಗಡುತನಮಾಡಿದಿ? ಎಂದು ಕಿಯಿಂದ ಮುದ್ದು ಕೊಟ್ಟು ತರುಣಿಯ ಎದುರಿಗೆ ನಿಂತು ನು ನೀವೇ ನನ್ನ ಪ್ರಾಣ ಉಳಿಸಿದ ಹಾಗಾಯಿತು ಎಂದು ನುಡಿದನು. ತರುಣಿಯು ಕುದುರೆಯ ಕಡಿವಾಣ ನ್ಯ ಅಬಲೆಯಾದ ನಾನು ನಿಮ್ಮ ಪ್ರಾಣಗಳನ್ನು ನಿಮ್ಮ ಆಯುಸ್ಸೂತ್ರವು ನಿಮ್ಮನ್ನು ರಕ್ಷಿಸಿತು ದುರೆಯನ್ನು ಇಲ್ಲಿಯೇ ಮರಕ್ಕೆ ಕಟ್ಟಿಹಾಕಿ ಹೀಗೆ ಧಿಯ ಬಳಿಯಲ್ಲಿರುವ ಝರಿಯಲ್ಲಿ ಕೈಕಾಲು ತೊಳೆದು ಭಕ್ಷಿಸಿ ನೀರು ಕುಡಿದು ಶಾಂತರಾಗಿರಿ ಎಂದು ಆದರ ತರುಣಿಯ ವಿನಯವನ್ನೂ, ಆದರವನ್ನೂ ಕಂಡು ರನಿಗೆ ಅಮೃತಪಾನ ಮಾಡಿದಷ್ಟು ಸಂತೋಷವಾಯಿತು. ಲೂ ಕ್ಷುಧೆಯಿಂದಲೂ ಕಂಗೆಟ್ಟ ಆತನಿಗೆ ಆ ರಮಣಿಯ ಸ್ಥಾನ ಆನಂದವಾಗಿದ್ದು, ಆದರಲ್ಲಿ ಆ ತರುಣಿಯ ದರ್ಶನದಿಂದ ವಿಶೇಷ ನವಾಗಿತ್ತು. ಅದರಲ್ಲಿಯೂ ಆ ಸುಂದರಿಯ ಪ್ರೇಮಾದರಗಳಿಂದ ವಶಿಷ್ಟ ತಾಪವೆಲ್ಲ ಪರಿಹೃತವಾಗಿ ಹೋಯಿತು. ಆಗ ಅವನು ಸಲ್ಲಿ—ಆಹಾ! ನಾನು ಎಷ್ಟು ಧನ್ಯನು! ಬಿಸಿಲಿನ ತಾಪದಿಂದ ಮವಾಗ ಇಷ್ಟು ಅಲ್ಪಾವಕಾಶದಲ್ಲಿಯೇ ನನಗೆ ಇಂಥ ಸ್ವರ್ಗೀಯ ಸುಖವು ಸಿಗಬಹುದೆಂಬ ಕಲ್ಪನೆಯು ಎಷ್ಟು ಮಾತ್ರಕ್ಕೂ ಇರಲಿಲ್ಲವಲ್ಲ? ಈ ಬನವು ಯಾರದು? ಈ ಸುಂದರಿಯಾರು? ಅಹಾ! ಇವಳ ಮುಖವೆಷ್ಟು ಮನೋಹರವಾಗಿದೆಯಲ್ಲ? ಈಕೆಯ ಮುದ್ದು ಮಾತುಗಳು ಎಷ್ಟು ಕಿವಿಗಿಂಪಾಗಿವೆಯಲ್ಲ? ಇವುಗಳಿಂದಲೇ ನನ್ನ ಶ್ರಮಪರಿಹಾರವಾಗಿಹೋಗಿರಲು ನಾನು ಇನ್ನು ನೀರು ಫಲಾಹಾರಗಳಿಂದ ಯಾವ ಶ್ರಮವನ್ನು ಪರಿಹರಿಸಿಕೊಳ್ಳಲಿ! ಈ ಬನವು ಧನ್ಯವಾದದ್ದು! ಈ ಸುಂದರಿಯೂ ಧನ್ಯಳು!! ಈ ಪ್ರಕಾರ ಯೋಚಿಸಿ ಪ್ರಕಾಶವಾಗಿ—ದೇವೀ ನಿನ್ನಿಂದಲೇ ರಕ್ಷಿತನಾದ ನಾನು ನಿನ್ನ ಮಾತುಗಳನ್ನು ಹ್ಯಾಗೆ ಮೀರಲಿ? ನನ್ನ ಸಂರಕ್ಷಣೆಗಾಗಿಯೇ ನೀನು ಇಲ್ಲಿ ಪ್ರಕಟಳಾಗಿರುವೆಯೋ ಎಂಬಂತೆ ನನಗೆ ಭಾಸವಾಗುತ್ತದೆ. ಇಲ್ಲದಿದ್ದರೆ ನಿನ್ನಂಥ ಸುಕುಮಾರಿಯು ಇಂಥ ನಿರ್ಜನ ಪ್ರದೇಶದಲ್ಲಿ ವಾಸ ಮಾಡುವ ಬಗೆ ಹ್ಯಾಗೆ? ಇರಲಿ. ಮೊದಲು ನಿನ್ನಾಜ್ಞೆಯ ಮೇರೆಗೆ ಕುದುರೆ

ಯನ್ನು ಕಟ್ಟಿ ಝರಿಗೆ ಹೋಗಿ ಬರುತ್ತೇನೆ ಎಂದು ನುಡಿದು ಬಳಿಯಲ್ಲಿರುವ ಗಿಡಕ್ಕೆ ಕುದುರೆಯನ್ನು ಕಟ್ಟಿ ಮೊದಲು ಅದಕ್ಕೆ ನೀರು ಕುಡಿಸಿ ಬಳಿಕ ತಾನು ಝರಿಗೆ ಹೋಗಿ ಕೈಕಾಲು ತೊಳೆದು ಸ್ವಲ್ಪ ನೀರು ಕುಡಿದನು. ಇತ್ತ ತರುಣಿಯು ಉತ್ತಮವಾದ ಪೇರಿಲ, ನೇರಿಲ, ಅಂಜೀರ ಮೊದಲಾದ ಹಣ್ಣುಗಳನ್ನು ತಂದು ಸಮಾಧಿಯ ಮುಂದಿಟ್ಟು ತರುಣನ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತುಕೊಂಡಳು. ಅಷ್ಟರಲ್ಲಿ ನಂದಕುಮಾರನು ಅಲ್ಲಿಗೆ ಬರಲು ಆ ಸುಂದರಿಯು ಆ ಫಲಗಳನ್ನು ಆತನಿಗೆ ಸಮರ್ಪಿಸಿದಳು.

ನಂದಕುಮಾರನು ಒಳ್ಳೇ ಹಸಿದಿದ್ದನಾದರೂ ಸುಂದರಿಯ ಪ್ರೇಮಾದರಗಳಿಂದ ಉಂಡಷ್ಟು ತೃಪ್ತಿಯನ್ನು ಹೊಂದಿದ್ದನು. ಆದರೂ ಅವನು ತರುಣಿಯ ಆಗ್ರಹಕ್ಕಾಗಿ ಫಲಗಳನ್ನು ಭಕ್ಷಿಸತೊಡಗಿದನು ಫಲಗಳು ಅತ್ಯಂತ ಮಧುರವಿದ್ದವು. ಆ ಸುಂದರಿಯೊಡನೆ ಹರಟೆಕೊಚ್ಚುತ್ತ ನಂದಕುಮಾರನು ಎಲ್ಲ ಫಲಗಳನ್ನು ಸಾವಕಾಶವಾಗಿ ತಿಂದು ತೇಗಿದನು. ಬಳಿಕ ಅವನು ಆ ಸುಂದರಿಯನ್ನು ಕುರಿತು—ನೀವು ಯಾರು? ಇಲ್ಲಿ ಒಬ್ಬರೇ ಇರಲು ಕಾರಣವೇನು? ಈ ಸಮಾಧಿಯು ಯಾರದು? ಎಂಬ ಸಂಗತಿಗಳನ್ನು ನನಗೆ ಹೇಳಿ ನನ್ನ ಮನಸ್ಸನ್ನು ಸಮಾಧಾನಗೊಳಿಸುವಿರಾ? ಎಂದು ಕೇಳಿದನು. ತರುಣನ ಈ ಮಾತುಗಳನ್ನು ಕೇಳಿ ಆ ಸುಂದರಿಯು ಹೇಳಲಿಕ್ಕೇನೂ ಅಡ್ಡಿಯಿಲ್ಲ. ಆದರೆ ಮೊದಲು ನೀವು ಯಾರೆಂಬದನ್ನೂ ನಿಮ್ಮ ಕುದುರೆಯು ಹೀಗೇಕೆ ಬೆದರಿ ಇಲ್ಲಿಗೆ ಬಂತೆಂಬದನ್ನೂ ಹೇಳಿದಹೊರತು ನಾನು ನನ್ನ ಸಂಗತಿಯನ್ನು ಹೇಳಲಾರೆನು. ನಿಮ್ಮ ಕುದುರೆಯು ಬರುವದನ್ನು ನಾನು ದೂರಿನಿಂದಲೇ ನೋಡಿದೆನು. ಆಗ ನಾನು ಈ ಸಮಾಧಿಯ ಬಳಿಯಲ್ಲಿ ಕುಳಿತು ಸ್ತೋತ್ರಪಠಣ ಮಾಡುತ್ತಿದ್ದೆನು. ನಿಮ್ಮ ಕುದುರೆಯು ನಿಮ್ಮ ಅಂಕೆಗೊಳಗಾಗಿರದೆ ಹುಚ್ಚೆದ್ದು ಓಡುತ್ತದೆಂಬದು ನನ್ನ ಲಕ್ಷ್ಯದಲ್ಲಿ ಬಂದಿತು ಅದು ನಮ್ಮ ಬನದಕಡೆಗೇ ಓಡಿಬರುತ್ತಿದ್ದದರಿಂದ ಇಲ್ಲಿಗೆ ನನ್ನ ಸಮೀಪಕ್ಕೆ ಬಂದರೆ ಕುದುರೆಯನ್ನು ನಿಲ್ಲಿಸಿ ಮೇಲೆಕುಳಿತ ಗೃಹಸ್ಥನ ಪ್ರಾಣವುಳಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಮನಸ್ಸಿನಲ್ಲಿ ಯೋಚಿಸಿದ್ದೆನು. ಆದರಂತೆ ಕುದುರೆಯು ಬನಕ್ಕೆ ಬರಲು ನಾನು ಧಾವಿಸಿ ಬಂದು ಯುಕ್ತಿಯಿಂದ ಕುದುರೆಯನ್ನು ನಿಲ್ಲಿಸಿದೆನು. ನಿಮ್ಮ ಆಯುಸ್ಸೂತ್ರವು ಗಟ್ಟಿಯಾಗಿದ್ದದರಿಂದ ನನ್ನ ಪ್ರಯತ್ನವು ಫಲಿಸಿತು. ನೀವು ಬಹು

ದೊಡ್ಡ ಗಂಡಾಂತರದಿಂದ ಪಾರಾದಿರಿ. ಇದೆಲ್ಲ ಏಕಲಿಂಗಜಿಯ ಕೃಪೆಯ ಫಲವೇ ಸರಿ. ನಿಮ್ಮ ಕುದುರೆಯು ಹೀಗೇಕೆ ಬೆದರಿ ಬಂದಿತೆಂಬದೇ ನನಗೆ ತಿಳಿಯದಾಗಿದೆ. ಮನೆಗೆ ಬಂದ ಅತಿಥಿಗಳ ಸೇವೆ ಮಾಡುವದು ನನ್ನ ಕರ್ತವ್ಯವಾದ್ದರಿಂದ ನಾನು ನಿಮ್ಮನ್ನು ಯಥಾಶಕ್ತಿ ಸತ್ಕರಿಸಿದೆನು. ಇನ್ನು ನಿಮ್ಮ ಸಂಗತಿಯು ನನಗೆ ತಿಳಿದರೆ ನೀವುಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ. ಎಂದು ನುಡಿದಳು.

ಸುಂದರಿಯ ಈ ಮಾತುಗಳನ್ನು ಕೇಳಿ ನಂದಕುಮಾರನು-ಈಕೆಯು ಸಾಹಸಿಯೂ, ಚಾಣಾಕ್ಷಳೂ ಇರುವಳು. ಈಕೆಯ ಮುಂದೆ ಸುಳ್ಳಸಂಗತಿ ಯನ್ನು ಹೇಳುವದರಿಂದ ಪ್ರಯೋಜನವಿಲ್ಲ. ಈಗ ನಾವು ಜನರಲ್ಲಿ ನಮ್ಮ ವಿಷಯವಾಗಿ ಯಾವ ಅಭಿಪ್ರಾಯವನ್ನು ಪ್ರಕಟ ಮಾಡಿರುವೆವೋ ಆ ಅಭಿ ಪ್ರಾಯವನ್ನೇ ಇಲ್ಲಿ ಹೇಳಲಿಕ್ಕೆ ಅಡ್ಡಿಯಿಲ್ಲ. ಎಂದು ಯೋಚಿಸಿ ತಾನು ಖುಷರೋಜ ಉರುಸಿನಲ್ಲಿ ರಜಪೂತ ತರುಣಿಯ ಮಾನರಕ್ಷಣೆ ಮಾಡಿದ ಸಂಗತಿ ಮೊದಲುಮಾಡಿ ಬನಕ್ಕೆ ಬರುವವರೆಗೆ ಒದಗಿದ ಸಂಗತಿಗಳನ್ನೆಲ್ಲ ಹಿಂದೂ ಬಿಡದಂತೆ ಹೇಳಿದನು. ನಂದಕುಮಾರನು ಹೇಳುವ ಈ ಸಂಗತಿ ಯನ್ನು ಆ ತರುಣಿಯು ಬಹಳ ಚಿತ್ತಗೊಟ್ಟು ಕೇಳುತ್ತಿದ್ದಳು. ಬಳಿಕ ಅವಳು—ನೀವು ಯಾವ ರಜಪೂತ ತರುಣಿಯ ಮಾನರಕ್ಷಣೆ ಮಾಡಿದಿರೋ ಆ ತರುಣಿಯ ಪುಣ್ಯವೇ ಈಗ ನಿಮಗೆ ಒದಗಿದಂತೆ ತೋರುತ್ತದೆ. ಹಾಗಿಲ್ಲ ದಿದ್ದರೆ ಇಂದು ನೀವು ನಿಶ್ಚಯವಾಗಿ ಮೃತಿಯನ್ನು ಹೊಂದುತ್ತಿದ್ದಿರಿ. ಮನುಷ್ಯನಿಗೆ ಸತ್ಕರ್ಮಾಚರಣೆಯ ಫಲವು ಶೀಘ್ರವಾಗಿ ಲಭಿಸುವದು. ಇರಲಿ. ನಿಮ್ಮ ಪೌರುಷ-ಸಾಹಸ ಪ್ರಿಯತೆಗಳನ್ನು ನೋಡಿ ನನಗೆ ಸಂತೋಷವಾಗುತ್ತದೆ.

ಈ ಮೇರೆಗೆ ತರುಣಿಯು ಮಾತನಾಡುತ್ತಿರಲು ದೊಡ್ಡ ಬಿರುಗಾಳಿ ಬೀಸಿತು. ಆಗ ಸಮಾಧಿಯ ಮೇಲಿನ ಮಾಲೆಗಳು ಅಸ್ತವ್ಯಸ್ತವಾಗಲು ಆ ಸುಂದರಿಯು ಚಟ್ಟನೆದ್ದು ಅವನ್ನೆಲ್ಲ ಸರಿಪಡಿಸಿದಳು. ಸಮಾಧಿಯ ವಿಷಯವಾಗಿ ಆಕೆಯಲ್ಲಿ ಪೂಜ್ಯಬುದ್ಧಿಯು ವಿಶೇಷವಾಗಿರುವದೆಂದು ನಂದ ಕುಮಾರನು ತರ್ಕಿಸಿದನು. ತರುಣಿಯು ಪುನಃ ಬಂದು ತನ್ನ ಸ್ಥಳದಲ್ಲಿ ಕುಳಿತುಕೊಳ್ಳಲು ಆತನು ಉತ್ಸುಕತೆಯಿಂದ—ಭಗಿನೀ, ಈ ಸ್ಥಳವನ್ನು ನೋಡಿ ನನಗೆ ವಿಚಿತ್ರ ಆನಂದವಾಗುತ್ತದೆ. ಈ ಸಮಾಧಿಯು ಯಾರದು?

ಸಮಾಧಿಸ್ಥ ವ್ಯಕ್ತಿಯ ಪುಣ್ಯಪ್ರಭಾವವು ವಿಶೇಷವಾಗಿದ್ದಂತೆ ತೋರುತ್ತದೆ. ನನ್ನ ಮುಂದೆ ನಿಮ್ಮ ಎಲ್ಲ ಸಂಗತಿಗಳನ್ನು ಹೇಳಲಿಕ್ಕೆ ಸಂಕೋಚವಾಗದಿದ್ದರೆ ಹೇಳಿರಿ. ನನಗಂತೂ ನಿಮ್ಮ ಹಾಗೂ ಈ ಸಮಾಧಿಯ ದರ್ಶನವಾದದ್ದೆಂದರೆ ಇದೊಂದು ವಿಲಕ್ಷಣ ಯೋಗವೆಂದೇ ಭಾವನೆಯಾಗಿದೆ, ಎಂದು ನುಡಿದನು. ಆ ಸುಂದರಿಯಾದರೂ ಮಂದಹಾಸದಿಂದ ಯುಕ್ತಳಾಗಿ ಆಕಸ್ಮಾತ್ತಾಗಿ ಒದಗಿದ ಈ ವಿಲಕ್ಷಣ ಯೋಗದಲ್ಲಿ ಏನಾದರೂ ಭಗವತ್ಸಂಕಲ್ಪವಿರಲಿಕ್ಕೇಬೇಕು. ಯಾರು ಕನಸು-ಮನಸುಗಳಲ್ಲಿ ಈ ಸ್ಥಾನವನ್ನು ನೋಡಿದ್ದಿಲ್ಲವೋ ಅಂಥವರು ವಿಪದ್ಗ್ರಸ್ತರಾಗಿ ಈ ಸ್ಥಾನಕ್ಕೆ ಬಂದು ಉಪಕೃತರಾಗಿ ಆತ್ಮೀಯ ಭಾವವನ್ನು ವ್ಯಕ್ತಗೊಳಿಸಬೇಕಾದರೆ ಇದು ವಿಲಕ್ಷಣ ಯೋಗವಲ್ಲದೆ ಮತ್ತೇನು! ಎಂದು ನುಡಿದಳು. ನಂದಕುಮಾರನೂ, ಆ ಸುಂದರಿಯೂ ಈ ವಿಲಕ್ಷಣ ಯೋಗವು ಯಾವ ಶುಭಸೂಚನೆಯನ್ನು ಪ್ರಕಟಗೊಳಿಸುವದೋ ಎಂಬ ಯೋಚನೆಯಲ್ಲಿ ಕೆಲಹೊತ್ತು ಮಗ್ನರಾದರು.

೪—ಸಮಾಧಿಯ ವೃತ್ತಾಂತ.

ಹೀಗೆ ವಿಚಾರಮಗ್ನರಾದ ಆ ನಂದಕುಮಾರ ಹಾಗು ತರುಣಿಯರ ಮನಸ್ಸುಗಳಲ್ಲಿ ಬಗೆಬಗೆಯ ವಿಚಾರಗಳುತ್ಪನ್ನವಾಗತೊಡಗಿದವು. ತರುಣಿಯ ಮನಸ್ಸಂತೂ ವಿಲಕ್ಷಣ ಸಮಾಧಾನವನ್ನೇ ಹೊಂದಿತು. ತನ್ನ ಮನಸ್ಸು ಇಷ್ಟೊಂದು ಪ್ರಸನ್ನತೆಯನ್ನು ಹೊಂದಲಿಕ್ಕೆ ಯಾವ ಕಾರಣವಿರಬಹುದೆಂಬದೇ ಆಕೆಗೆ ತಿಳಿಯದಾಯಿತು. ಅರಣ್ಯದಲ್ಲಿಯೇ ೧೦-೧೪ ವರುಷ ಬೆಳೆದವಳು. ಮುನಿವೃತ್ತಿಯಿಂದ ಜೀವಿಸಿದವಳು. ನಿರ್ವಿಕಾರ ಮನಸ್ಸು; ನಿಷ್ಪಾಪಬುದ್ಧಿಯುಳ್ಳ ಆ ತರುಣಿಯು ಮನಸ್ಸಿನಲ್ಲಿಯೇ ಇಂತು ಯೋಚಿಸತೊಡಗಿದಳು—“ಈ ತರುಣನ ದರ್ಶನದಿಂದ ಯಾವನೋ ಒಬ್ಬ ಪರಮಾಪ್ತನ ಭೆಟ್ಟಿಯಾದಂತೆ ನನಗೆ ಸಮಾಧಾನವಾಗಲು ಕಾರಣವೇನು? ಇದು ನವತಾರುಣ್ಯದ ಪ್ರಭಾವವೆಂದು ತಿಳಿಯಬಹುದೇ? ಛೇ; ಅದಕ್ಕೆ ಮನಸ್ಸಿನಲ್ಲಿ ಸ್ವಲ್ಪವೂ ಸ್ಥಳ ದೊರೆಯುವಂತಿಲ್ಲ. ನಾನು ನಿರ್ವಿಕಾರ

ಮನಸ್ಕಳಾಗಿದ್ದೇನೆ. ಹೀಗಿದ್ದರೂ ಗುಪ್ತಪ್ರೇಮ ಪ್ರವಾಹವು ಪ್ರವಹಿಸು ವದಕ್ಕೆ ಆವ ಕಾರಣವಿರಬಹುದು? ಈ ತರುಣನು ಜಾತಿವಂತ ರಜಪೂತ ನಿದ್ದಂತೆ ತೋರುತ್ತಿದೆ. ಈ ತರುಣನನ್ನು ಹೀಗೆ ಇಲ್ಲಿಗೆ ಬರಮಾಡುವದ ರಲ್ಲಿ ದೇವರ ಸಂಕಲ್ಪವು ಏನಿರಬಹುದು? ಆ ಭಗವತ್ಸಂಕಲ್ಪವನ್ನು ತಿಳಿ ಯುವವರಾರು!"

ಇಂತು ತರುಣಿಯು ಯೋಚಿಸುತ್ತಿರಲು ನಂದಕುಮಾರನಾದರೂ ಇದರಂತೆಯೇ ಯೋಚನೆಗೊಳಗಾಗಿದ್ದನು. ಅವನು ಮನಸ್ಸಿನಲ್ಲಿ—ಈ ತರುಣಿಯನ್ನು ನೋಡಿದ ಕೂಡಲೆ ನನ್ನ ಮನಸ್ಸಿನಲ್ಲಿ ಸ್ವಕೀಯಭಾವನೆ ಯುಂಟಾಗಿ ಮನಸ್ಸು ಪೂರ್ಣ ಸಮಾಧಾನವನ್ನು ಹೊಂದಿತಲ್ಲ! ಈ ತರು ಣಿಯು ಯಾರಾಗಿರಬಹುದು? ಈಕೆಯು ಹೀಗೆ ಈ ಅರಣ್ಯದಲ್ಲಿ ವಾಸ ವಾಗಿರಬೇಕಾದರೆ ವಿಪದ್‌ಗ್ರಸ್ತಳಾಗಿರಬೇಕು. ಇದು ವರೆಗೆ ನಾನು ಅನೇಕಜನ ಸುಂದರತರುಣಿಯರನ್ನು ' ನೋಡಿದ್ದೇನೆ ಅನೇಕ ಜನರಿಗೆ ಕೈಲಾದಮಟ್ಟಿಗೆ ಉಪಕಾರವನ್ನೂ ಮಾಡಿದ್ದೇನೆ. ಆ ಎಲ್ಲ ಹೆಂಗಳೆಯರ ದರ್ಶನಕ್ಕಿರತ ಈ ಸುಂದರಿಯ ದರ್ಶನವು ಬೇರೆ ತರದ್ದಾಗಿದೆ. ಇದರಲ್ಲಿ ಯಾವದೋ ಗೂಢಸಂಕೇತವಿರಬಹುದೆಂದು ನನಗಂತೂ ಕಾಣುತ್ತದೆ. ಈ ಸ್ತ್ರೀಯು ನನಗೆ ಯಾವಬಗೆಯಿಂದ ಆಪ್ತಳಾಗಬೇಕೋ ತಿಳಿಯದು. ಮನಸ್ಸಂತೂ ಈಕೆಯ ವಿಷಯವಾಗಿ ತುಂಬಾ ಅಭಿಮಾನತಾಳಿ ಪೂರ್ಣ ಶಾಂತಿಯನ್ನು ಹೊಂದಿರುತ್ತದೆ ಈಕೆಯೊಡನೆ ಸಂಭಾಷಣ ನಡಿಸಿ ಎಲ್ಲ ವಿಚಾರ ತಿಳಿದರೆ ನನ್ನ ಸಮಾಧಾನದ ಕಾರಣವು ಹೊರಬಿದ್ದರೆ ಹೊರಬೀಳ ಬಹುದು. ಇಲ್ಲದಿದ್ದರೆ ಆ ಕಾರಣ ಗೊತ್ತುಹಚ್ಚಲು ಶಕ್ಯವೇ ಇಲ್ಲ.

ಈ ಮೇರೆಗೆ ಯೋಚಿಸಿ ಆ ನಂದಕುಮಾರನು ತರುಣಿಯನ್ನು ಕುರಿತು—

"ನೀವು ಒಬ್ಬರೇ ಇರುವಿರೇನು?"

"ನಾನೂ ನನ್ನ ತಂದೆಯೂ ಇರುವೆವು."

"ನಿಮ್ಮ ತಂದೆಯು ಈಗ ಇಲ್ಲಿರುವನೇನು?"

"ಈಗ ಇಲ್ಲಿರುವದಿಲ್ಲ ಬೆಳಗಿನಲ್ಲಿ ಹಳ್ಳಿಗೆ ಹೋಗಿರುವನು. ಸಂಜೆಗೆ ಬರುವನು."

"ಜಾಹಗೀರ ಗ್ರಾಮಕ್ಕೆ ಹೋಗಿರುವರೇನು?"

"ಛೀ, ನಮಗೆಲ್ಲಿಯ ಜಾಹಗೀರವು? ರಾಜದ್ರೋಹಿಗಳೆಂದು ದೂಷಣೆ ಹೊಂದಿದ ನಮಗೆ ಜಾಹಗೀರವೇ?"

"ಏನು? ನೀವು ರಾಜದ್ರೋಹಿಗಳೇ? ಅದು ಹೇಗೆ?"

"ಈಗಿನ ಕಾಲವೇ ಹಾಗಿರುವದು. ರಾಜನಿಷ್ಠರು ರಾಜದ್ರೋಹಿಗಳು; ರಾಜದ್ರೋಹಿಗಳು ರಾಜನಿಷ್ಠರು. ಆಗುವರು."

"ನಿಮ್ಮ ಮಾತಿನ ಅರ್ಥವೇ ನನಗಾಗಲಿಲ್ಲ."

"ನಿಮಗೆ ನಮ್ಮ ಪೂರ್ವೇತಿಹಾಸ ತಿಳಿದ ಹೊರತು ನನ್ನ ಮಾತಿನ ಅರ್ಥವಾಗಲಾರದು. ನಿಮಗೆ ವಿರಾಮವಿದ್ದರೆ ನನ್ನ ಸಂಗತಿಯನ್ನು ಹೇಳುವೆನು."

"ಅವಶ್ಯವಾಗಿ ಹೇಳಬೇಕು; ನಾನು ನಿಮ್ಮ ಸಂಗತಿಯನ್ನು ಕೇಳಿಕೊಳ್ಳಲಿಕ್ಕೆ ಉತ್ಸುಕನಾಗಿರುತ್ತೇನೆ."

"ಹೌದು; ನಿಜ; ನಾನು ಹೇಳುವ ಸಂಗತಿಯು ನಮಗೇ ಮಾರಕವಾದರೆ?"

"ಆ ಸಂಗತಿಯು ನಿಮಗೆ ಯಾಕೆ ಮಾರಕವಾಗುವದು."

"ನೀವು ಶತ್ರುಪಕ್ಷದ ಗುಪ್ತಹೇರರಾಗಿದ್ದರೆ"

"ಛೀ; ದೇವೀ! ಇಂಥ ಮಾತುಗಳನ್ನು ಮಾತ್ರ ಆಡಬೇಡ, ಪ್ರಾಣ ಹೋದರೂ ನಾನು ಪರರಿಗೆ ಅಹಿತವನ್ನು ಮಾಡತಕ್ಕವನಲ್ಲ; ಕೆಲವು ಸ್ವಾರ್ಥಪರಾಯಣರು ತಮ್ಮ ಹೊಟ್ಟೆ ಹೊರಕೊಳ್ಳುವದಕ್ಕಾಗಿ ಇಂಥ ಘಾತಕೀ ಕೆಲಸಮಾಡುವದು ನಿಜ; ಆದರೆ ಅಂಥ ಸ್ವಾರ್ಥೀಜನರ ಮಾಲಿಕೆಯಲ್ಲಿ ನನ್ನನ್ನು ಸೇರಿಸಬಾರದು. ಒಂದು ವೇಳೆ ಅಂಥ ನೀಚತನವು ನನ್ನಲ್ಲಿದೆ ಎಂದು ತಮಗೆ ಸಂಶಯ ಬಂದರೆ ತಾವು ನನ್ನ ಮುಂದೆ ಏನನ್ನೂ ಹೇಳಬಾರದು."

"ಹಾಗೆ ನನಗೆ ಸಂಶಯಬಂದಿದ್ದರೆ ನಿಮ್ಮೊಡನೆ ಇಷ್ಟು ಮಾತನಾಡುತ್ತಿರಲೇ ಇಲ್ಲ. ಹಾಗೆ ನನ್ನ ಮನೋದೇವತೆಯು ನನಗೆ ಹೇಳದ್ದರಿಂದ ನಾನು ನಿಮ್ಮೊಡನೆ ಮನಬಿಚ್ಚಿ ಮಾತಾಡಲುಪಕ್ರಮಿಸಿದ್ದೇನೆ."

"ವಿಶ್ವಾಸವು ಕುರುಡವಿರುತ್ತದೆ. ಅಲ್ಲಿ ಯಾವ ಬಗೆಯ ಪ್ರಕಾಶದ ಆಟವೂ ನಡೆಯುವದಿಲ್ಲ. ನಾನು ಅಸ್ಸಲ ರಜಪೂತನು- ನಂಬಿಗೆಗೆ ಪಾತ್ರನು ಎಂಬ ಭರವಸೆ ಅಥವಾ ಆತ್ಮವಿಶ್ವಾಸವಿದ್ದರೆ ಸಂಕೋಚವಿಲ್ಲದೆ ಮಾತನಾಡಬೇಕು."

"ನನ್ನ ತಂದೆಯು ಮಾಳವಾಸಿಂಹಾಸನದ ಸ್ವಾಮಿನಿಷ್ಠ ಸೇವಕನು. ಜಯಸಿಂಹಮಹಾರಾಜರು ರಾಜ್ಯವಾಳುತ್ತಿರುವಾಗ ಈತನು ನಾಮಾಂಕಿತ ಸರದಾರನೆಂದು ಪ್ರಸಿದ್ಧಿಯನ್ನು ಹೊಂದಿದ್ದನು. ನನ್ನ ತಂದೆಯ ಹೆಸರು ಕೀರ್ತಿಸಿಂಹನೆಂಬದು; ಆದರೆ ಏನು ಮಾಡುವದು? ಕಾಲವು ವಿಪರೀತವಾದಾಗ ಎಲ್ಲವೂ ಕನಸಿನಂತಾಗುತ್ತದೆ. ನನ್ನ ತಂದೆಯ ಮಾನಮರ್ಯಾದೆಗಳೂ, ವೈಭವವೂ ಎತ್ತ ಹೋಯಿತೋ ಎಂಬ ಹಾಗಾಗಿದೆ. ರಾಜ್ಯವೇ ಪರಕೀಯರ ಕೈವಶವಾದ ಬಳಿಕ ನಮ್ಮ ವೈಭವವು ಹೋಯಿತೆಂದು ಮರಗುವದು ದಡ್ಡತನವೇ ಸರಿ! ರಾಜನು ಪ್ರಜೆಗಳ ತಾಯಿತಂದೆಯು! ಅವನೇ ವಿಪತ್ತಿನಲ್ಲಿ ಸಿಕ್ಕಬಳಿಕ ನಮ್ಮಂಥವರ ಪಾಡೇನು? ಅಕಬರಬಾದಶಹನು ಮಾಳವಾದೇಶಕ್ಕೆ ಯಾವಾಗ ಮುತ್ತಿಗೆ ಹಾಕಿದನೋ ಆಗ ರಾಜ್ಯವನ್ನು ರಕ್ಷಿಸುವದಕ್ಕಾಗಿ ನಮ್ಮ ತಂದೆಯೂ ಮಿಕ್ಕರಜಪೂತ ಸರದಾರರೂ ಶಕ್ತಿಮೀರಿ ಪ್ರಯತ್ನ ಮಾಡಿದರು. ಆದರೆ ಜಯಸಿಂಹಮಹಾರಾಜರಿಗೆ ಜಯಲಕ್ಷ್ಮಿಯು ಒಲಿಯಲಿಲ್ಲ. ಮಹಾರಾಜರು ರಣದಲ್ಲಿ ಮಡಿದುಹೋದರು. ಬಳಿಕ ಕೇಳುವದೇನು? ಸೈನಿಕರ-ಸರದಾರರ ದುರ್ದೆಶೆಯು ಹೇಳಕೂಡದಷ್ಟಾಯಿತು. ಮುಸಲ್ಮಾನೀ ಸೈನ್ಯವು ಮಾಳವಾರಾಜಧಾನಿಯಲ್ಲಿ ಧೈಧೈ ನರ್ತಿಸಲಾರಂಭಿಸಿತು. ಯುದ್ಧದಲ್ಲಿ ಬಲಿಷ್ಠರೂ ವಿಶೇಷ ಸಂಖ್ಯಾಕರೂ ಆದ ಆ ದಂಡಾಳುಗಳ ಮುಂದೆ ಅಲ್ಪಸಂಖ್ಯಾಕರಾದ ರಜಪೂತರು ನಿಲ್ಲಲಾರದವರಾದರು. ರಜಪೂತರು ಯುದ್ಧದಲ್ಲಿ ಬಲಿಷ್ಠರಾದರೂ ಅಲ್ಪಸಂಖ್ಯಾಕರಾದ್ದರಿಂದ ರಾಜ್ಯವನ್ನು ಬಿಟ್ಟು ಓಡಿದರು. ಯುದ್ಧದಲ್ಲಿ ಬದುಕಿ ಉಳಿದ ಸರದಾರರೆಲ್ಲರೂ ತಮ್ಮ ಹೆಂಡಿರು ಮಕ್ಕಳೊಡನೆ ಅಡವೀ ಸೇರಿದರು. ಹಾಗೆ ಮಾಡದಿದ್ದರೆ ಅವರು ಮುಸಲ್ಮಾನರ ಸೆರೆಯಲ್ಲಿ ಬೀಳಬೇಕಾಗುತ್ತಿತ್ತು. ಓಡಿಹೋಗಲಿಕ್ಕೆ ಸಂಧಿಸಿಗದ ಕೆಲಜನ ಸರದಾರರೂ ರಾಜವಂಶೀಯರೂ ಶತ್ರುಗಳ ಕೈಗೆ ಸಿಕ್ಕರು. ಆಗಿನ ಕಾಲದಲ್ಲಿ ರಾಜಧಾನಿಯಲ್ಲಾದ ಕೋಲಾಹಲವನ್ನು ನಾನು ವರ್ಣಿಸಲಾರೆನು. ನಮ್ಮ ತಂದೆಯು ಹೇಳುತ್ತಿರುವದನ್ನು ಕೇಳಿಯೇ ನನಗೆ ವಿಲಕ್ಷಣ ಸಂತಾಪವೂ ಆವೇಶವೂ ಉತ್ಪನ್ನವಾಗಿರುತ್ತದೆ. ನಾನು ಸ್ತ್ರೀಯಾಗಿದ್ದರೂ ಖಡ್ಗಧಾರಿಣಿಯಾಗಿ ನಮ್ಮ ರಾಜವಂಶವನ್ನು ಉಧ್ವಸ್ಥಗೊಳಿಸಿದ ನೀಚರ ಶಿರಗಳನ್ನು ಹರಿಗೆಡಿಯಬೇಕೆಂಬ ತ್ವೇಷವುಂಟಾಗುತ್ತಿದೆ. ಆದರೆ ಬರಿಯ ತ್ವೇಷದಿಂದ

ಕಾರ್ಯಸಾಧನೆಯಾಗುವದಿಲ್ಲೆಂದು ಈ ಅರಣ್ಯದಲ್ಲಿ ಅಜ್ಞಾತವಾಸದಂತೆ ಕಾಲಕ್ರಮಿಸುತ್ತಿದ್ದೇವೆ. ಮುಂದಿನ ಸಂಗತಿಯು ಕಡೆಗೆ ಅವಧಾನವಿರಲಿ.

ನಮ್ಮ ರಾಜವಂಶವು ಪದಚ್ಯುತವಾದ ಬಳಿಕ ನನ್ನ ತಂದೆಯು ಮೊಟ್ಟಮೊದಲು ಇದೇ ಸ್ಥಳಕ್ಕೆ ಬಂದನು. ಆಗ ನಾನು ಮೂರುನಾಲ್ಕು ವರುಷದವಳಿದ್ದೆನು. ಆಗಿನ ಸಂಗತಿಯು ನನಗೇನೂ ತಿಳಿಯುತ್ತಿದ್ದಿಲ್ಲ. ಆದರೆ ನನ್ನ ತಂದೆಯು ತಾನು ಅನುಭವಿಸಿದ ಕಷ್ಟನಷ್ಟಗಳನ್ನೆಲ್ಲ ನನ್ನ ಮುಂದೆ ಹೇಳುತ್ತಿರುವದರಿಂದ. ಈಗ ನನಗೆ ಹಿಂದಿನ ಸಂಗತಿಯಲ್ಲ ಕಣ್ಣ ಮುಂದೆ ಕಟ್ಟಿದಂತಾಗಿದೆ. ಇಲ್ಲಿಗೆ ನನ್ನ ತಂದೆಯು ಬಂದು ಹದಿನೈದು ವರುಷಗಳಾಗಿರಬಹುದು. ಅಂದಿನಿಂದ ಆತನು ಇಲ್ಲಿಯೇ ನೆಲಿಸಿದ್ದಾನೆ. ಮುಸಲ್ಮಾನರು ನಮ್ಮ ರಾಜವಂಶವನ್ನು ಪದಚ್ಯುತ ಮಾಡಿದ ಬಳಿಕ ಜಯಸಿಂಹರಾಜನ ಪಕ್ಷವನ್ನು ವಹಿಸಿ ಯಾರು ಯಾರು ಅಭಿಮಾನದಿಂದ ಕಾದಿದರೋ ಅವರೆಲ್ಲರೂ ರಾಜದ್ರೋಹಿಗಳೆಂದು ನಿರ್ಣಯಿಸಿ ಅವರನ್ನು ಹಿಡಿಯಲಿಕ್ಕೆ ಅನೇಕರನ್ನು ನಿಯಮಿಸಿದರು. ಸುದೈವದಿಂದ ನಮ್ಮ ತಂದೆಯು ಮಾತ್ರ ಯಾರ ಕೈಗೂ ಸಿಕ್ಕಿರುವದಿಲ್ಲ. ಈಗ ಆ ಮಾತಾಗಿ ಬಹಳ ವರುಷಗಳು ಕ್ರಮಿಸಿದ್ದರಿಂದ ಆ ಮಾತು ಹಳೇದಾಗಿ ಹೋಯಿತು. ಯಾರು ಜಯಸಿಂಹ ಮಹಾರಾಜರ ಉಪ್ಪನ್ನು ಉಂಡು ಅವರ ಮೇಲೆ ತಿರುಗಿಬಿದ್ದು, ಮುಸಲ್ಮಾನರನ್ನು ಕೂಡಿಕೊಂಡರೋ ಅಂಥವರನ್ನು ಮುಸಲ್ಮಾನರು ರಾಜನಿಷ್ಠರೆಂದು ಕೊಂಡಾಡುವರು. ಹಾಯ್! ಹಾಯ್! ಇದಕ್ಕಾಗಿಯೇ ಬಲ್ಲವರು ಕಾಲಾಯತಸ್ಮೈನಮಃ ಎನ್ನುವರು. ಇರಲಿ.

ನಾನು ಹತ್ತು ವರುಷದವಳಿದ್ದಾಗ ನನ್ನ ತಾಯಿಯು ಇಹಲೋಕ ಯಾತ್ರೆಯನ್ನು ಮುಗಿಸಿದಳು. ನನ್ನ ತಾಯಿಯು ಸತ್ತದ್ದು ನನಗೆ ಚನ್ನಾಗಿ ತಿಳಿಯುತ್ತದೆ. ಆಕೆಯ ಪತಿಭಕ್ತಿ-ದೈವಭಕ್ತಿಗಳು ನನ್ನ ಹೃದಯದಲ್ಲಿ ಸ್ಥಿರವಾಗಿ ನೆಲೆಗೊಂಡಿವೆ. ಆಕೆಯ ಸುಗುಣಗಳನ್ನು ವರ್ಣಿಸುವ ಯೋಗ್ಯತೆಯು ನನಗೆ ಸ್ವಲ್ಪವೂ ಇರುವದಿಲ್ಲ. ಆಕೆಯು ಪ್ರಾತಃಸ್ಮರಣೀಯ ಹೆಂಗಸರಲ್ಲಿ ಗಣಿಸಲ್ಪಡಲು ಅರ್ಹಳೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಾನು ಪೂಜಿಸುವ ಈ ಪವಿತ್ರ ಸಮಾಧಿಯು ಆಕೆಯದೇ ಆಗಿರುತ್ತದೆ. ನನ್ನ ತಂದೆಯು ತಾನೊಬ್ಬನೇ ಈ ಸಮಾಧಿಯನ್ನು ಕಟ್ಟಿರುತ್ತಾನೆ. ಸೃಷ್ಟಿಕರ್ತನ ಕೃಪಾವಿಶೇಷದಿಂದ ಈ ಸ್ಥಳದಲ್ಲಿ ನೀರೂ ನೆಳಲೂ

ವಿಪುಲವಾಗಿದ್ದದರಿಂದ ಈ ಸ್ಥಳವು ಅತ್ಯಂತ ರಮ್ಯವಾಗಿದೆ. ಪೂರ್ವದಲ್ಲಿ ಇದು ತಪೋವನವೇ ಇರಬಹುದೆಂದು ನನಗನಿಸುತ್ತದೆ. ಈಗಾದರೂ ನಾವು ವೈಭವಚ್ಯುತರಾಗಿ ಈ ವನದಲ್ಲಿ ತಪಸ್ಸನ್ನೇ ಮಾಡಬೇಕಾಗಿದೆ. ಪೂಜ್ಯರಾದ ಋಷಿಗಳ ತಪಸ್ಸಿಗೂ, ನಮ್ಮ ತಪಸ್ಸಿಗೂ ಮಹದಂತರಮಾತ್ರ ವುಂಟು. ಅವರ ತಪಸ್ಸು ಲೋಕಹಿತಕಾರಕವಾದದ್ದು; ಅಧ್ಯಾತ್ಮವಿಚಾರ ಪೂರಿತವಾದದ್ದು. ಆದರೆ ನಮ್ಮ ತಪಸ್ಸು ಸ್ವಾರ್ಥಪರವಾದದ್ದು, ಐಹಿಕ ಭೋಗ ತೃಷ್ಣೆಯುಳ್ಳದ್ದು. ನಾನಾಗಲಿ, ನನ್ನ ತಂದೆಯಾಗಲಿ, ಇಲ್ಲಿ ಭಗವದುಪಾಸನೆಯನ್ನು ಮಾಡಿ ನಮ್ಮ ರಾಜ್ಯವನ್ನು ನಮಗೆ ತಿರುಗಿ ಕೊಡು; ನಮ್ಮ ರಾಜವಂಶವನ್ನು ರಕ್ಷಿಸು, ಎಂದು ಬೇಡಿಕೊಳ್ಳುವೆವಲ್ಲದೆ ನಮಗೆ ಮೋಕ್ಷ ಕೊಡು, ಅಥವಾ ಸ್ವರ್ಗಸುಖವ ಕೊಡು, ಎಂದು ಬೇಡಿ ಕೊಳ್ಳುವದಿಲ್ಲ. ನಮ್ಮ ಈ ಪ್ರಾರ್ಥನೆಯು ಜ್ಞಾನಿಗಳ ದೃಷ್ಟಿಯಿಂದ ಗೌಣವಿರಬಹುದು; ಆದರೆ ನಮ್ಮ ದೃಷ್ಟಿಯಿಂದ ಇದು ಯೋಗ್ಯವೆಂದು ನನಗನಿಸುತ್ತದೆ. 'ನಮಗೆ ದೇಹಾಭಿಮಾನವಿದೆ. ಸುಖಪಡಬೇಕೆಂಬ ಇಚ್ಛೆಯಿದೆ. ಸ್ವದೇಶವು ಉನ್ನತಿಯನ್ನು ಹೊಂದಬೇಕೆಂಬ ಅಭಿಲಾಷೆ ಯಿದೆ. ನಮ್ಮ ರಾಜವಂಶವು ಬಲಿಷ್ಠವಾಗಿ ಮಾಳವಾ ನಿವಾಸಿಗಳೆಲ್ಲರೂ ಮೊದಲಿನಂತೆ ಸುಖಸಂಪನ್ನರಾಗಿರಬೇಕೆಂದು ಆಶೆಯಿದೆ. ಇಷ್ಟೆಲ್ಲ ಆಶೆ ಗಳನ್ನು ಧರಿಸಿದ ನಾವು ಮೋಕ್ಷಸುಖವನ್ನು ಬಯಸುವದೆಂತು! ಇವೆಲ್ಲ ಲಭಿಸಿದ ಮೇಲೆ ಮೋಕ್ಷವು ತಾನಾಗಿಯೇ ನಮ್ಮ ಕಡೆಗೆ ನಡೆದು ಬಂದರೆ ಬರಲೊಲ್ಲದೇಕೆ? ರಜಪೂತ ಶ್ರೇಷ್ಠನೇ, ನನ್ನ ಈ ವಿಚಾರ ಸರಣಿಯು ನಿನ್ನ ಮನಸ್ಸಿಗೆ ಸರಿಬರಲಿಕ್ಕಿಲ್ಲ. ಆದರೆ ನಾನು ತಿಳಿದುಕೊಂಡದ್ದನ್ನು ಹೇಳಲಿಕ್ಕೆ ಅಭ್ಯಂತರವೇನು?''

ನಂದಕುಮಾರನು ನಡುವೇ ಬಾಯಿಹಾಕಿ—ದೇವೀ, ನೀನು ತಿಳಿದು ಕೊಂಡದ್ದರಲ್ಲಿ ಸ್ವಲ್ಪವೂ ಬಿಡತಕ್ಕದ್ದಿರುವದಿಲ್ಲ. ನಿನ್ನಂಥ ಅಬಲೆಯು ಈರೀತಿ ಸ್ವದೇಶಪ್ರೇಮವನ್ನು ತಳೆದಿರುವದನ್ನು ನೋಡಿದರೆ ಮೀಸೆಹೊತ್ತ ನಮ್ಮಂಥ ಗಂಡಸರು ನಾಚಬಹುದಾಗಿದೆ. ನಿನ್ನ ವೀರೋಚಿತವಾದ ಮಾತುಗಳನ್ನೂ ಶೀಲವನ್ನೂ ತಿಳಿದು ನಿನ್ನ ತಾಯಿಯು ಎಷ್ಟೊಂದು ಘನ ತರವಾದ ಯೋಗ್ಯತೆಯುಳ್ಳವಳಿದ್ದಳೋ ಎಂಬ ಕಲ್ಪನೆಯನ್ನು ಮಾಡು ವದೇ ನನಗೆ ಅಶಕ್ಯವಾಗಿದೆ. ಸ್ವದೇಶಹಿತಚಿಂತನೆಯಲ್ಲಿಯೇ ಇದ್ದು

ಕೊಂಡು ಭಗವದಾರಾಧನೆ ನಡಿಸಿದ ನೀವೇ ಧನ್ಯರು! ನೀವೇ ಪುಣ್ಯವಂತರು!! ನಿಮ್ಮಂಥ ಪುಣ್ಯಶಾಲಿಗಳ ಮುಂದೆ ಮಾತಾಡುವ ಶಕ್ತಿಯು ನಂನ್ನಥ ಹತಭಾಗ್ಯನಿಗೆ ಎಷ್ಟು ಮಾತ್ರಕ್ಕೂ ಇರುವದಿಲ್ಲ. ಆದರೆ ಯಾವ ಪೂರ್ವಸಂಚಿತದಿಂದಲೋ ನಾನು ಇಲ್ಲಿಗೆ ಬಂದಿದ್ದೇನೆ. ನಿಮ್ಮ ಪೂಜ್ಯ ತಾಯಿಯವರ ಸಮಾಧಿಯ ದರ್ಶನದಿಂದ ನಾನು ಧನ್ಯನಾದೆನು. ನಿಮ್ಮ ಮುಖದಿಂದ ಇದರ ಮುಂದಿನ ಸಂಗತಿಗಳನ್ನು ಕೇಳಬೇಕೆಂಬ ಇಚ್ಛೆಯುಂಟಾಗಿದೆ, ಎಂದು ನುಡಿದನು.

ತರುಣಿಯು ಪುನಃ ಹೇಳತೊಡಗಿದಳು—ಸಮಾಧಿಯು ಸಿದ್ಧವಾದ ಬಳಿಕ ನಾನಿದರ ಪೂಜೆಯನ್ನು ಕೈಕೊಂಡೆನು. ನನ್ನ ಪೂಜ್ಯಮಾತೆಯ ಸೇವೆಯು ನನಗೆ ಈ ಸಮಾಧಿಯ ರೂಪದಿಂದ ದೊರೆಯುತ್ತಿರುವದು. ಸಮಾಧಿಯ ದರ್ಶನದಿಂದ ನನ್ನ ತಾಯಿಯ ಸದ್ಗುಣಗಳ ಸ್ಮರಣವು ನನಗೆ ಹೆಜ್ಜೆ ಹೆಜ್ಜೆಗೆ ಆಗುತ್ತಿರುವದು. ಮಹಾಪುರುಷರ ಸ್ಮಾರಕದಿಂದ ಮನುಷ್ಯನಲ್ಲಿ ನವಚೈತನ್ಯವುಂಟಾಗುತ್ತದೆಂದು ಹಿರಿಯರಾಡುವ ಮಾತಿನಲ್ಲಿ ಬಹು ಅರ್ಥವಿರುತ್ತದೆಂಬದು ನನ್ನ ಅನುಭವಕ್ಕೆ ಬಂದಿರುತ್ತದೆ. ನನ್ನ ತಾಯಿಯ ಸ್ಮಾರಕವನ್ನು ಈ ಸಮಾಧಿಯ ರೂಪದಿಂದ ಮಾಡದಿದ್ದರೆ ನನಗೆ ಆಕೆಯ ಸದ್ಗುಣಗಳು ಅಡಿಗಡಿಗೆ ನೆನಪಾಗುತ್ತಿದ್ದವೋ ಇಲ್ಲವೋ ಎಂಬದನ್ನು ಹೇಳಲಿಕ್ಕಾಗದು. ನನ್ನ ತಾಯಿಯ ಈ ಸಮಾಧಿಯಿಂದ ನಾನು ಎಷ್ಟೋ ಸುಗುಣಗಳನ್ನು ಕಲಿತುಕೊಂಡಿರುವೆನು. ಆಕೆಯು ವೀರಪತ್ನಿಯಾಗಿದ್ದಳು. ಶತ್ರುಗಳಿಗೆ ಎಂದೂ ಶರಣು ಹೋಗಕೂಡದೆಂದು ನನ್ನ ತಾಯಿಯು ಆಗಾಗ್ಗೆ ಅನ್ನುತ್ತಿದ್ದಳು. ಚದರಿ ಹೋದ ರಜಪೂತ ಸರದಾರರನ್ನೆಲ್ಲ ಒಂದುಗೂಡಿಸಿ ನಮ್ಮ ರಾಜವಂಶವು ಎಲ್ಲಿಯಾದರೂ ಬೂದಿಮುಚ್ಚಿದ ಕೆಂಡದಂತೆ ಗೌಪ್ಯವಾಗಿದ್ದರೆ ಶೋಧಿಸಿ ಪುನಃ ರಜಪೂತ ರಾಜದಂಡವನ್ನು ಮೆರೆಯಿಸಬೇಕೆಂದು ನನ್ನ ತಾಯಿಯು ನನ್ನ ತಂದೆಗೆ ಆಗಾಗ್ಗೆ ಪ್ರೋತ್ಸಾಹನೆ ಕೊಡುತ್ತಿದ್ದಳು. ಆಕೆಯ ಧೈರ್ಯವು ಅತುಲವಾದದ್ದು; ಆಕೆಯು ಸ್ವತಃ ಅಶ್ವಾರೂಢಳಾಗಿ ಯುದ್ಧಮಾಡಿದವಳಾದ್ದರಿಂದ ಆಕೆಯಲ್ಲಿ ಎಷ್ಟರ ಮಟ್ಟಿಗೆ ವೀರಶ್ರೀಯಿತ್ತೆಂಬದನ್ನು ಬಿಚ್ಚಿ ಹೇಳುವ ಕಾರಣವಿಲ್ಲ. ಇಂಥ ಘನತರ ಯೋಗ್ಯತೆಯ ನನ್ನ ತಾಯಿಯನ್ನು ನಾನು ದುರ್ದೈವದಿಂದ ಕಳೆದುಕೊಂಡೆನು. ವಿಧಾತನು ಆಕೆಗೆ ಇನ್ನೂ ಕೆಲದಿನಗಳ ಆಯುಷ್ಯ

ವನ್ನು ದಯಪಾಲಿಸಿದ್ದರೆ ಆ ವೀರವನಿತೆಯು ನನ್ನ ತಂದೆಗೆ ಅನೇಕ ಬಗೆಯಿಂದ ಸಹಾಯ ಮಾಡುತ್ತಿದ್ದಳು. ಆದರೆ ಈಶ್ವರೇಚ್ಛೆಯೇ ಹಾಗಿಲ್ಲವೆಂಬಂತೆ ತೋರುತ್ತಿದೆ!!

ಈಮೇರೆಗೆ ನುಡಿಯುತ್ತಿರಲು ತರುಣಿಯ ಕಣ್ಣೊಳಗಿಂದ ಒಂದೆರಡು ಅಶ್ರುಬಿಂದುಗಳುದುರಿದವು. ಅವನ್ನು ನಂದಕುಮಾರನು ನೋಡಿದನು. ಆಗ ಅವನ ಮನಸ್ಸಿಗೂ ಸ್ವಲ್ಪ ವಿಷಾದವಾಯಿತು. ತರುಣಿಯು ತಾಯಿಯು ಮೃತಪಟ್ಟದ್ದಕ್ಕೆ ಶೋಕಿಸುತ್ತಿರದೆ ಆಕೆಯಿಂದ ಆಗಬೇಕಾದ ಲೋಕಸೇವೆಯಾಗದ್ದಕ್ಕೆ ಚಡಪಡಿಸುತ್ತಿರುವಳೆಂದು ಕಂಡುಹಿಡಿದನು. ಅಹಾ! ಈ ತಾಯಿ-ಮಕ್ಕಳು ಎಷ್ಟು ದೇಶವತ್ಸಲರು!! ಮಾಳವಾದೇಶದ ಪುನರುದ್ಧಾರದ ವಿಷಯವಾಗಿ ಇವರಿಗೆಷ್ಟು ಯೋಚನೆಯು!!! ಆದರೆ ಮಾಳವಾದೇಶದ ರಾಜವಂಶೀಯನಾದ ನನ್ನ ಜನ್ಮಕ್ಕೆ ಧಿಃಕಾರವು! ಧಿಃಕಾರವು!! ಒಬ್ಬ ಸರದಾರನ ಪುತ್ರಿಯಲ್ಲಿ ಇಷ್ಟು ಸಂತಾಪಾಗ್ನಿಯು ಜಾಗೃತವಿರುತ್ತಿರಲು, ಪ್ರತ್ಯಕ್ಷ ರಾಜಮನೆತನಸ್ಥರಲ್ಲಿ ಸಂತಾಪಾಗ್ನಿಯ ಕಣವು ಕೂಡಾ ಇರಬಾರದೆಂದರೆ ತೀರ ನಾಚುಕೆಗೇಡಿತನವು. ಈ ತರುಣಿಯ ಮುಂದೆ ನಾನು ಮಾಳವಾದೇಶದ ರಾಜವಂಶೀಯನೆಂದು ಹ್ಯಾಗೆ ಹೇಳಲಿ? ಯಾವ ಮೋರೆಯಿಂದ ಹೇಳಲಿ? ದೇವಾ, ಇಷ್ಟು ನಿರ್ವೀರ್ಯ ಸ್ಥಿತಿಯನ್ನೂ-ರಣಹೇಡಿತನವನ್ನೂ-ಜೀವಗಳ್ಳತನವನ್ನೂ ನನಗೆ ಕೊಡುವದಕ್ಕಿಂತ ನಾನು ಹುಟ್ಟಿದಾಗಲೇ ನನಗೆ ಮರಣವನ್ನುಂಟುಮಾಡಿದ್ದರೆ ಏನು ತಪ್ಪಾಗುತ್ತಿತ್ತು? ನನ್ನ ತಂದೆಯಂತೂ ವೃದ್ಧನಾಗಿಹೋಗಿರುವನು. ಆತನು ತಾರುಣ್ಯದಲ್ಲಿ ಶಕ್ತಿಯಿದ್ದಮೇರೆಗೆ ರಣಕ್ಷೇತ್ರದಲ್ಲಿ ಥೈ ಥೈ ಕುಣಿದಾಡಿರುವನು. ಆದರೆ ಆತನ ಪ್ರತ್ಯಕ್ಷ ಮಗನಾದ ನಾನು ರಣಹೇಡಿಯಂತೆ ಅಲ್ಲಲ್ಲಿ ಸುತ್ತುತ್ತ ಕಾಲಕಳೆಯಬೇಕಾಯಿತಲ್ಲ! ಇದಕ್ಕಿಂತಲೂ ದುಸ್ಥಿತಿಯು ಇನ್ನಾವುದಿರುವದು? ಎಂಬದಾಗಿ ಚಿಂತಿಸಿ, ತನ್ನ ಮನೋವ್ಯಗ್ರತೆಯು ತರುಣಿಗೆ ತಿಳಿಯಬಾರದೆಂದು ಅವಳನ್ನು ಕುರಿತು—ಸಮಾಧಾನ ತಾಳಿರಿ; ಶೋಕಿಸಬೇಡಿರಿ. ಹುಟ್ಟಿದವರಿಗೆ ಮರಣವು ತಪ್ಪಿದ್ದಲ್ಲ, ಎಂದು ನುಡಿದನು.

ನಂದಕುಮಾರನ ಈ ಮಾತುಗಳನ್ನು ಕೇಳಿ ತರುಣಿಯು—ನಾನು ತಾಯಿಯ ಪಿಯೋಗವಾಯಿತೆಂದು ಶೋಕಿಸಲಿಲ್ಲ. ಯಾವದೋ ಒಂದು ಉಚ್ಚಮನೋಭಾವನೆಯು ತಾನೇ ಮುಂದರಿದು ಅಶ್ರುರೂಪದಿಂದ ಪ್ರಕಟ

ವಾಯಿತು. ಎಂದು ನುಡಿದಳು.

ಈ ಮೇರೆಗೆ ಅವರಿಬ್ಬರು ಸಂಭಾಷಣ ನಡಿಸಿರಲು ಇಳಿಹೊತ್ತಾಗಿ ಬಿಸಿಲಿನ ಪ್ರಖರತೆಯು ಕಡಿಮೆಯಾಯಿತು. ಆಗ ನಂದಕುಮಾರನು ಒಮ್ಮೆಲೆ ಎಚ್ಚತ್ತು ಓಹೋ! ಬಹಳ ಹೊತ್ತಾಯಿತು. ನಾನು ಇನ್ನು ದಿಲ್ಲಿಗೆ ಹೊರಡುವೆನು. ಈಗಲೇ ಹೊರಟರೆ ಹೊತ್ತು ಮುಳುಗುವದರಲ್ಲಿ ದಿಲ್ಲಿಯನ್ನು ಮುಟ್ಟುವೆನು. ಎಂದು ನುಡಿದನು. ತರುಣನ ಈ ಮಾತಿನಿಂದ ಆ ತರುಣಿಗೆ ಸಿಡಿಲು ಬಡಿದಂತಾಯಿತು. ಅವಳಿಗೆ ಆ ತರುಣನ ವಿಯೋಗವು ಸಹನವಾಗದಂತಾಯಿತು. ಆದರೂ ಅವಳು ತನ್ನ ಮನೋದೌರ್ಬಲ್ಯವು ತರುಣನಿಗೆ ತಿಳಿಯಬಾರದೆಂದು ಒಳ್ಳೇ ವಿವೇಕಶಕ್ತಿಯಿಂದ ಮನಸ್ಸನ್ನು ದೃಢಪಡಿಸಿಕೊಂಡು—ಯಾಕೆ? ಇಂದು ದಿಲ್ಲಿಗೆ ಹೋಗದಿದ್ದರೆ ನಡೆಯುವಂತಿಲ್ಲವೋ? ಬಹಳವಾಗಿ ದಣಿದು ಬಂದಿರುವಿರಿ. ನಿಮ್ಮ ಕುದುರೆಯೂ ವಿಶೇಷವಾಗಿ ದಣಿದಿರುವದು. ಇಂಥ ದಣುವಿನಲ್ಲಿ ಮತ್ತೆ ಪ್ರಯಾಣ ಬೆಳಿಸುವದೆಂದರೆ ಅಹಿತಕರವೇ ಸರಿ! ನೀವು ಇಂದಿನ ದಿನ ಇಲ್ಲಿಯೇ ನಿಂತರೆ ನನ್ನ ತಂದೆಯ ಭೆಟ್ಟಿಯು ನಿಮಗಾಗುವದು. ಎಂದು ನುಡಿದಳು. ನಂದಕುಮಾರನು ತರುಣಿಯ ಮಾತುಗಳನ್ನು ಕೇಳಿ—ನಾನು ಈ ದಿನ ದಿಲ್ಲಿಗೆ ಹೋಗಲೇಬೇಕು. ಇಲ್ಲದಿದ್ದರೆ ಪಿತ್ರಾಜ್ಞೆಗೆ ವಿಮುಖನಾಗುವೆನು. ನಿಮ್ಮ ತಂದೆಯವರ ಭೆಟ್ಟಿಗೋಸ್ಕರವಾಗಿ ನಾನು ಇನ್ನೊಂದು ದಿನ ಬರುವೆನು. ನನ್ನ ಕುದುರೆಯು ಈ ದಿನ ಹೀಗೆ ಅಗೆಡುತನ ಮಾಡಿ ಬಂದದ್ದು ಒಳ್ಳೇದಾಯಿತು. ಈ ಪವಿತ್ರಸ್ಥಳದ ದರ್ಶನದಿಂದ-ಈ ಪವಿತ್ರ ಸಮಾಧಿಯ ದರ್ಶನದಿಂದ ನನಗೆ ತುಂಬಾ ಸಮಾಧಾನವಾಯಿತು. ನಾನು ಮೇಲಿಂದ ಮೇಲೆ ಈ ಪವಿತ್ರ ಸಮಾಧಿಯ ದರ್ಶನಕ್ಕೆ ಬರುವೆನು. ಈಗ ಹೊರಡಲಪ್ಪಣೆಕೊಡಬೇಕು. ಎಂದು ನುಡಿದು ತರುಣಿಯನ್ನು ನೋಡುತ್ತ ಕುದುರೆಯನ್ನೇರಿದನು. ತರುಣಿಯು ಉಪಾಯವಿಲ್ಲದೆ ಆತನ ಪ್ರಯಾಣವನ್ನು ಅನುಮೋದಿಸಿದಳು. ಕುದುರೆಯು ಶೀಘ್ರಗಾಮಿಯಾಗಿ ಅಲ್ಪಾವಕಾಶದಲ್ಲಿ ತರುಣನನ್ನು ಮರೆಮಾಡಿತು.

೫—ಮಾನಸಿಂಗನ ತ್ರಿಶಂಕುವೃತ್ತಿ.

ಅಕಬರ ಬಾದಶಹನ ಖಾಸ ದಿವಾನಖಾನೆಯು; ಒಂದು ಸುಂದರವಾದ ಕಿನಕಾಪಿನ ಗದ್ದುಗೆಯ ಮೇಲೆ ಬಾದಶಹನು ಕುಳಿತುಕೊಂಡಿದ್ದಾನೆ. ಆತನ ಮುಂದೆ ಪಚ್ಚರತ್ನಗಳನ್ನು ಕೆಚ್ಚಿದ ಬಂಗಾರದ ಗುಡಗುಡಿಯು ಇಡಲ್ಪಟ್ಟದೆ. ಅದರಲ್ಲಿ ಕಸ್ತೂರಿಮಿಶ್ರಿತ ತಂಬಾಕವನ್ನು ತುಂಬಿದ್ದರಿಂದ ಅದರ ಸುಗಂಧವು ದಿವಾಣಖಾನೆಯನ್ನೆಲ್ಲ ವ್ಯಾಪಿಸಿದೆ. ಬಾದಶಹನು ಒಳ್ಳೇ ಆಸ್ಥೆಯಿಂದ ಗುಡಗುಡಿಯು ಝುರುಕೆಯನ್ನು ತಕ್ಕೊಳ್ಳುತ್ತಲಿದ್ದಾನೆ. ಆತನಿಂದ ಸ್ವಲ್ಪ ಅಂತರದ ಮೇಲೆ ಬೇರೊಂದು ಸುಂದರವಾದ ಗದ್ದುಗೆ ಇದ್ದಿತು. ಅದರ ಮೇಲೆ ರಾಜಾಮಾನಸಿಂಗನು ಒಳ್ಳೇ ವಿನಯದಿಂದ ಕುಳಿತುಕೊಂಡಿದ್ದಾನೆ. ಆ ಪ್ರಶಾಂತವಾದ ದಿವಾನಖಾನೆಯಲ್ಲಿ ಇವರಿಬ್ಬರ ಹೊರತು ಬೇರೆ ಯಾರೂ ಇದ್ದಿಲ್ಲ.

ಸ್ವಲ್ಪ ಹೊತ್ತಿನ ಮೇಲೆ ಬಾದಶಹನು ಗುಡಗುಡಿ ಸೇದುವದನ್ನು ನಿಲ್ಲಿಸಿ, ಮಾನಸಿಂಗ, ರಾಜಾತೋಡರಮಲ್ಲ ಹಾಗು ನೀವು ಇಬ್ಬರೂ ಈ ಅಕಬರನ ಎರಡು ಭುಜಗಳಂತೆ ಇರುತ್ತೀರಿ. ರಾಜಾತೋಡರಮಲ್ಲನು ಬಂಗಾಲಪ್ರಾಂತವನ್ನು ಕೈವಶಮಾಡಿಕೊಳ್ಳುವ ವಿಷಯದಲ್ಲಿ ಒಳ್ಳೇ ಪೌರುಷವನ್ನು ವ್ಯಕ್ತಗೊಳಿಸಿ ನಮ್ಮ ಸಾಮ್ರಾಜ್ಯದ ಗೌರವವನ್ನು ಹೆಚ್ಚಿಸಿದನು. ಅಂತೇ ಅವನಿಗೆ ಆ ಪ್ರಾಂತದ ಸುಭೇದಾರಿಯನ್ನು ಕೊಟ್ಟರುವೆವು ಮಾನಸಿಂಗ ಸರದಾರರೇ, ನೀವಾದರೂ ಬಾದಶಾಹಿಯ ಒಳ್ಳೇ ಅಭಿಮಾನಿಶಾಲಿಗಳಿರುತ್ತೀರಿ, ಇಷ್ಟೇಅಲ್ಲ ಬಾದಶಹನಾದ ನನಗೆ ಪ್ರತ್ಯಕ್ಷ ಸೋದರಮಾವನೆಂಬ ಗೌರವಕ್ಕೆ ಪಾತ್ರರಾದವರಿರುತ್ತೀರಿ. ಆದ್ದರಿಂದ ಈ ಅಕಬರನ ದಿಗಂತವಾದ ಕೀರ್ತಿಗೆ ಕಲಂಕ ತರುವಂಥ ಸಂಗತಿಯು ನಿಮಗಾದರೂ ತಿರಸ್ಕರಣೀಯವಾದದ್ದೆಂಬದರಲ್ಲಿ ಸಂದೇಹವಿಲ್ಲ. ಎಂದು ನುಡಿದು, ಮಾನಸಿಂಗನ ಮೋರೆಯನ್ನು ನೋಡಿದನು. ಮಾನಸಿಂಗನಿಗೆ ಆಶ್ಚರ್ಯವಾಯಿತು. ಬಾದಶಹನು ಇಂದು ಹೀಗೇಕೆ ಮಾತಾಡುವನೆಂಬದು ಅವನಿಗೆ ತಿಳಿಯದಾಯಿತು. ಆಗ ಅವನು:—ಬಾದಶಹನೇ, ಯಾವದಿವಸ ನನ್ನ ಪ್ರತ್ಯಕ್ಷ ಸಹೋದರಿಯು ಮೊಗಲರ ಅಂತಃಪುರವನ್ನು ಪ್ರವೇಶಿಸಿದಳೋ ಆ ದಿವಸವೇ ಮೊಗಲ ಸಾಮ್ರಾಜ್ಯದ ವಿಷಯವಾಗಿ

ನನ್ನಲ್ಲಿ ಏಕನಿಷ್ಠ ಪ್ರೇಮವುಂಟಾಗಿರುವದು. ಬಾದಶಹನ ವಿಷಯವಾಗಿ ಈ ಮಾನಸಿಂಗನ ರಕ್ತದಲ್ಲಿ ಎಷ್ಟು ಸ್ವಾಭಿಮಾನವು ತುಂಬಿರುತ್ತದೆಂಬದು ತಮಗೆ ಅರಿಯದ ಸಂಗತಿಯಲ್ಲ, ಹೀಗಿದ್ದು ಈದಿನ ಹುಜೂರಿನ ಮನಸ್ಸಿನಲ್ಲಿ ಈ ಬಗೆಯ ಕಲ್ಪನೆಯು ಯಾಕೆ ಉತ್ಪನ್ನವಾಯಿತೋ ತಿಳಿಯದು.

"ರಾಜಾಮಾನಸಿಂಗರೇ, ನನ್ನ ಈ ಮಾತಿನಿಂದ ನನ್ನಲ್ಲಿ ವಿಕಲ್ಪವುಂಟಾಗಿರುತ್ತದೆಂದು ಸರ್ವಥಾ ತಿಳಿಯಬೇಡಿರಿ, ನಾನು ನಿಮ್ಮ ವಿಷಯವಾಗಿ ಎಂದೂ ವಿಕಲ್ಪವನ್ನು ತಾಳಲಾರೆನು. ಯಾವನೊಬ್ಬ ವ್ಯಕ್ತಿಯ ಹೃದಯವನ್ನು ಪರೀಕ್ಷಿಸುವ ವಿದ್ಯೆಯು ನನ್ನ ತಂದೆಯವರಿಂದ ನನಗೆ ಚನ್ನಾಗಿ ಅವಗತವಾಗಿರುತ್ತದೆ. ಆದ್ದರಿಂದ ನಿಮ್ಮ ಹೃದಯ ಪರೀಕ್ಷೆಯು ನನಗೆ ಚನ್ನಾಗಿ ಆಗಿರುವದು. ಆದರೆ ಈಗ ನಾನು ಹೀಗೆ ಮಾತಾಡಲಿಕ್ಕೆ ಕಾರಣವೇನಂದರೆ:—ಹಿಂದುಸ್ಥಾನದಲ್ಲಿ ಮುಸಲ್ಮಾನೀ ಸಾಮ್ರಾಜ್ಯವು ಪ್ರಸ್ಥಾಪಿತವಾಗಿ ಬಹಳ ವರ್ಷಗಳಾದವು; ಇನ್ನೂ ಆದಕ್ಕೆ ಚಿರಸ್ಥಾಯಿತ್ವವು ಪ್ರಾಪ್ತವಾಗಿರುವದಿಲ್ಲ. ಹೀಗಾಗಲಿಕ್ಕೆ ಹಿಂದಿನ ಬಾದಶಹರಿಂದ ಯಾವ ತಪ್ಪುಗಳಾಗಿರುವವೆಂಬದು ನಮ್ಮ ಅನುಭವಕ್ಕೆ ಬಂದದ್ದರಿಂದ ಆ ತಪ್ಪುಗಳನ್ನು ತಪ್ಪಿಸಿ, ಈಗ ನಾನು ನಡೆಯುತ್ತಿದ್ದೇನೆ. ಹಿಂದುಗಳನ್ನು ಪ್ರೇಮದಿಂದ ಕಾಣುತ್ತೇನೆ. ಹಿಂದುಗಳ ಸಂಗಡ ಶರೀರಸಂಬಂಧ ಮಾಡಿ ಅವರಿಗೆ ದೊಡ್ಡ ದೊಡ್ಡ ಅಧಿಕಾರದ ಸ್ಥಳಗಳನ್ನು ಕೊಟ್ಟರುತ್ತೇನೆ. ಅಪಮಾನಕರವಾದ ಕರಗಳನ್ನು ತೆಗೆದು ಹಾಕಿದ್ದೇನೆ. ನಾನು ಇಷ್ಟು ಸರಳವಾಗಿ ವರ್ತಿಸಿದರೂ, ಹಿಂದುಗಳೆಲ್ಲರೂ ನನ್ನ ಮೇಲೆ ಸರಿಯಾಗಿ ಪ್ರೇಮ ಮಾಡುವದಿಲ್ಲ. ಎಲ್ಲರೂ ನನಗೆ ಅಂಕಿತರಾಗಿರುವದಿಲ್ಲ. ಘಾಲಿ ರಾಜ್ಯವು ಇನ್ನೂ ಸ್ವತಂತ್ರವಾಗಿಯೇ ಇರುತ್ತದೆ. ಮಾಳವಾ ದೇಶವನ್ನು ನಾನು ಜಯಿಸಿದರೂ ಜಯಿಸದಂತೆಯೇ ಆಗಿದೆ. ಅಲ್ಲಿಯ ಯಾವ ಸರದಾರರೂ ನನಗೆ ಶರಣು ಬಂದಿಲ್ಲ; ಪ್ರಜೆಗಳೂ ಬಂದಿಲ್ಲ. ಅವರ ಈ ಸ್ವಾಭಿಮಾನವನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಆ ಜನರು ಈ ಸ್ವಾಭಿಮಾನದಿಂದ ಪುನಃ ತಮ್ಮ ಸ್ವಾತಂತ್ರ್ಯವನ್ನು ಪ್ರಸ್ಥಾಪಿಸಿಕೊಳ್ಳಬೇಕೆಂದು ಒಳಸಂಚು ನಡಿಸಿದಂತೆ ಸುದ್ದಿ ಬಂದಿದೆ. ಇದೂ ಒತ್ತಟ್ಟಗಿರಲಿ; ಮೊನ್ನೆ ಮೊನ್ನೆ ಇದೇ ಊರಿನಲ್ಲಿ-ನನ್ನ ರಾಜಧಾನಿಯಲ್ಲಿ ಖುಷರೋಜ ಉರುಸಿನಲ್ಲಿ ಮುಸಲ್ಮಾನ ಸರದಾರನೊಬ್ಬನು ಯಾವಳೋ ಒಬ್ಬ ರಜಪೂತ ತರುಣಿಯ

ಮೇಲೆ ಕೈಮಾಡಿದನಂತೆ; ಆದನ್ನು ಒಬ್ಬ ರಜಪೂತ ತರುಣನು ನೋಡಿ ಆ ಮುಸಲ್ಮಾನ ಸರದಾರನ ಕೈಕಡಿದು ತರುಣಿಯನ್ನು ಬಿಡಿಸಿದನಂತೆ, ಎಂದು ನನಗೆ ಸುದ್ದಿಯು ಬಂದಿದೆ. ಈ ಸಂಗತಿಯು ನನ್ನ ಕೀರ್ತಿಗೆ ಕುಂದ ನ್ನುಂಟುಮಾಡುವದಿರುತ್ತದೆ. ನಮ್ಮ ಹಿರಿಯರಿಂದ ನಡೆದು ಬಂದ ಈ ಉರುಸನ್ನು ನಾನು ಪರಂಪರಾ ಪದ್ಧತಿಯಿಂದು ನಡಿಸುತ್ತ ಬಂದಿರುತ್ತೇನೆ. ಇಂಥ ಉರುಸಿನಲ್ಲಿ ನನ್ನ ಕೀರ್ತಿಗೆ ಕಲಂಕ ತರುವಂಥ ಸಂಗತಿಗಳು ಸರ್ವಥಾ ಒದಗಬಾರದು. ಮಾನಸಿಂಗ ಸರದಾರರೇ, ಆ ಶೂರ ರಜಪೂತನು ಯಾವ ನಿರಬಹುದೆಂದು ಒಂದೇಸವನೆ ಯೋಚಿಸುತ್ತಿದ್ದೇನೆ.''

''ಹುಜೂರ, ನಾನು ಇಂದೇ ಆರವಲಿಯಿಂದ ಬಂದದ್ದರಿಂದ ಉರುಸಿ ನೊಳಗಿನ ಯಾವ ಸಂಗತಿಗಳೂ ನನಗೆ ಗೊತ್ತಾಗಿರುವದಿಲ್ಲ.''

''ರಾಜಾ, ಉರುಸಿನಲ್ಲಾದ ಈ ಸಂಗತಿಯು ಒಂದುವೇಳೆ ಕ್ಷಮ್ಯ ವಾದರೂ ಆ ರಜಪೂತ ಬಾಹದ್ದೂರನ ಧೈರ್ಯವು ಅಭಿನಂದನೀಯ ವಾದದ್ದೇ ಸರಿ!''

''ಹುಜೂರ, ಸ್ವಾಭಿಮಾನವು ರಜಪೂತರಿಗೆ ಜನ್ಮಸಿದ್ಧವಾದ ಹಕ್ಕಿನ ದಾಗಿರುತ್ತದೆ. ಅದನ್ನವರು ಬೇರೆಯವರಿಂದ ಕಲಿತುಕೊಳ್ಳಬೇಕಾಗಿ ರುವದಿಲ್ಲ.''

''ರಾಜಾಮಾನಸಿಂಗ, ಈ ಅಕಬರನ ಆಳಿಕೆಯು ಪ್ರಜೆಗಳಿಗೆ ಶಾಂತಿ ದಾಯಕವೂ ಸುಖಪ್ರದವೂ ಆಗಬೇಕು. ಅಕಬರನಂಥ ಬಾದಶಹನು ಇನ್ನು ಹುಟ್ಟಕ್ಕಿಲ್ಲೆಂದು ಪ್ರಜೆಗಳು ಆಡಿಕೊಳ್ಳಬೇಕು. ಅಕಬರನ ಧವಲ ಕೀರ್ತಿಯು ಆಚಂದ್ರಾರ್ಕವಾಗಿ ಮೆರೆಯಬೇಕು.''

''ಹುಜೂರ, ಹೀಗೆ ಆದರೇ ಮಾನಸಿಂಹನ ಕರ್ತೃತ್ವಶಕ್ತಿಯು ಸಾಫಲ್ಯವನ್ನು ಹೊಂದಿದಂತಾಗುವದು.''

ಈ ಮೇರೆಗೆ ಕೆಲಹೊತ್ತಿನ ವರೆಗೆ ಅವರಲ್ಲಿ ಸಂಭಾಷಣವು ನಡೆದ ಬಳಿಕ ಅಕಬರನು ಆತನಿಗೆ ಪಾಲೀರಾಜ್ಯವನ್ನು ಮೊಗಲ ಸಾಮ್ರಾಜ್ಯಕ್ಕೆ ಸೇರಿಸುವದಕ್ಕೂ ಮಾಳವಾದೇಶದ ಒಳಸಂಚನ್ನು ಶೋಧಿಸಿ ಆ ರಾಜ್ಯದಲ್ಲಿ ಮೊಗಲರ ಪೂರ್ಣ ಅಧಿಕಾರವನ್ನು ನೆಲೆಗೊಳಿಸಲಿಕ್ಕೂ ಆಜ್ಞಾಪಿಸಿದನು. ತನ್ನಿಂದ ಈ ಕೆಲಸಗಳು ನೆರವೇರದಿದ್ದದ್ದಕ್ಕೆ ಮಾನಸಿಂಗನಿಗೆ ಅಸಮಾಧಾನ ವಾಗಿತ್ತು. ಯಾವಾಗ ಈ ರಾಜ್ಯಗಳನ್ನು ಮೊಗಲಸಾಮ್ರಾಜ್ಯಕ್ಕೆ ಸೇರಿಸಿ

ಅಕಬರನ ಪ್ರೀತಿಗೆ ಪಾತ್ರನಾದೇನೆಂಬ ಕುತೂಹಲವು ಆತನಲ್ಲುಂಟಾಯಿತು. ಆಗ ಅವನು "ಹುಜೂರ, ನಾನು ಆ ಪ್ರಯತ್ನದಲ್ಲಿಯೇ ಇದ್ದೇನೆ. ರಜಪೂತರ ಸ್ವಾಭಿಮಾನ ಪೌರುಷಗಳು ಎಷ್ಟು ಘನತರವಾಗಿರುವವೆಂಬದು ನಿಮಗೆ ಅರಿಯದ ಸಂಗತಿಯಲ್ಲ. ಆದರೂ ಕಾರ್ಯಸಾಧನೆಯಲ್ಲಿ ಹಲವು ತಂತ್ರಗಳನ್ನು ನಡಿಸಿದ್ದೇನೆ. ಹಮ್ಮೀರಸಿಂಗನೆಂಬ ಒಬ್ಬ ದೊಡ್ಡ ಸರದಾರನು ನನ್ನ ಭೇದೋಪಾಯಕ್ಕೆ ಒಳಗಾಗಿ ನನ್ನ ಕೈವಶನಾಗಿದ್ದಾನೆ. ಆತನಿಂದ ಪಾಲೀ ರಾಜ್ಯವು ಸಹಜವಾಗಿ ಸಾಮ್ರಾಜ್ಯಕ್ಕೆ ಲಭಿಸಬಹುದಾಗಿದೆ. ಇಂದೇ ಆತನು ನನ್ನ ಭೆಟ್ಟಿಗೆ ಬರತಕ್ಕವನಿದ್ದಾನೆ ಎಂದು ನುಡಿದನು.

"ಶಾಬಾಸ್ ಮಾನಸಿಂಗ, ಹಮ್ಮೀರಸಿಂಗನು ನಿಮ್ಮ ಭೇದೋಪಾಯಕ್ಕೆ ಒಳಗಾಗಿರುವನೇ? ಇದು ಸತ್ಯವಾದರೆ ನಮ್ಮ ಕೆಲಸವೇ ಆಗಿ ಹೋಯಿತು. ಅವನು ಇಂದು ನಿಮ್ಮ ಭೆಟ್ಟಿಗೆ ಬಂದರೆ ಅವನಿಗೆ ಚನ್ನಾಗಿ ಆಮಿಷ ತೋರಿಸಿರಿ. ಒಂದು ವೇಳೆ ನನ್ನ ಬಳಿಗೆ ಕರೆತಂದರೂ ಚಿಂತೆಯಿಲ್ಲ.

ಬಹಳ ಹೊತ್ತು ಸಂಭಾಷಣ ನಡೆದದ್ದರಿಂದ ಬಾದಶಹನಿಗೆ ಬೇಸರ ಬಂದಿತು. ಆತನು ಮಾನಸಿಂಗನಿಗೆ ಮನೆಗೆ ಹೋಗಲಪ್ಪಣೆಕೊಟ್ಟು ಅಂತಃಪುರವನ್ನು ಪ್ರವೇಶಿಸಿದನು. ಇತ್ತ ಮಾನಸಿಂಗನು ಬಗೆಬಗೆಯಿಂದ ಯೋಚಿಸುತ್ತ ಮನೆಮುಟ್ಟಿ ದಿವಾಣಖಾನೆಯಲ್ಲಿ ಕುಳಿತುಕೊಂಡನು. ಅಷ್ಟರಲ್ಲಿ ಜಾಸೂದನು ಬಂದು ಹೊರಗೆ ಯಾವನೋ ಒಬ್ಬ ಸರದಾರನು ಬಂದಿದ್ದು ಒಳಗೆ ಬರಲಿಕ್ಕೆ ಸಮಯವನ್ನು ಕೇಳುತ್ತಿದ್ದಾನೆ ಎಂದು ವಿಜ್ಞಾಪಿಸಿಕೊಂಡನು. ಬಂದ ಸರದಾರನು ಹಮ್ಮೀರಸಿಂಗನೇ ಆಗಿರಬಹುದೆಂದು ಯೋಚಿಸಿ ಒಳಗೆ ಬಿಡಲಿಕ್ಕೆ ತಿಳಿಸಿದನು. ಕೆಲಹೊತ್ತಿನ ಮೇಲೆ ಆ ಸರದಾರನು ಒಳಗೆ ಬಂದನು. ಮಾನಸಿಂಗನ ತರ್ಕದಂತೆ ಅವನು ಹಮ್ಮೀರಸಿಂಗನೇ ಆಗಿದ್ದನು. ಸರದಾರನು ಬಂದಕೂಡಲೆ ಮಾನಸಿಂಗನು ಒಳ್ಳೇ ಆದರದಿಂದ ಎದ್ದು ನಿಂತು ಆತನನ್ನು ಆದರಿಸಿ ಉಚಿತಾಸನದ ಮೇಲೆ ಕುಳ್ಳಿರಿಸಿ ತಾನೂ ಕುಳಿತುಕೊಂಡನು. ಬಳಿಕ ಅವರಿಬ್ಬರ ನಡುವೆ ಸಂಭಾಷಣಗಳು ನಡೆದವು. ಮಾನಸಿಂಗನು ಹೇಳತಕ್ಕದ್ದನ್ನು ಹೇಳಿದನು. ಜಹಾಗಿರಿಯ ಆಶೆಯನ್ನು ತೋರಿಸಿದನು. ಬಾದಶಹನ ಪ್ರೇಮಸಂಪಾದನದಿಂದ ಹ್ಯಾಗೆ ಸುಖವಾಗುತ್ತದೆಂಬದನ್ನು ಸವಿಮಾಡಿ ವರ್ಣಿಸಿದನು. ಹಮ್ಮೀರ

ಸರದಾರನು ಮಾನಸಿಂಗನ ಮಾತುಗಳನ್ನು ಸ್ವಸ್ಥಮನಸ್ಸಿನಿಂದ ಕೇಳುತ್ತಿದ್ದನು. ಮಾತುಗಳು ನಡೆದಾಗ ಆತನು ನಡುವೇ ಬಾಯಿ ಹಾಕಲಿಲ್ಲ. ಆಗ ಆತನ ಮನಸ್ಸಿನಲ್ಲಿ ಬೇರೆ ವಿಚಾರಗಳು ನಡೆದಂತೆ ತೋರುತ್ತಿತ್ತು.

ಹಮ್ಮೀರಸಿಂಗನು ಪಾಲೀ ರಾಜ್ಯದಲ್ಲಿ ದೊಡ್ಡ ಸರದಾರನು. ಇಷ್ಟೇಅಲ್ಲ ಆ ಕಾಲಕ್ಕೆ ರಾಜ್ಯವೇ ಅವನ ಕೈಯೊಳಗಿದ್ದಂತೆ ಇದ್ದಿತು. ಪಾಲೀವೃದ್ಧರಾಜನು ರಾಜ್ಯದ ಸಂಪೂರ್ಣ ಭಾರವನ್ನೆಲ್ಲ ಹಮ್ಮೀರ ಸರದಾರನ ಮೇಲೆಯೇ ಹೊರಿಸಿದ್ದನು. ಮಾನಸಿಂಗನ ಆಮಿಷಕ್ಕೆ ಆತನಲ್ಲಿ ಆಶೆಯುತ್ಪನ್ನವಾದ್ದರಿಂದಲೇ ಅವನು ಇಂದು ದಿಲ್ಲಿಗೆ ಮಾನಸಿಂಗನ ಪತ್ರದಂತೆ ಭೆಟ್ಟಿಗೆ ಬಂದಿದ್ದನು. ಆದರೆ ಮಾನಸಿಂಗನ ದಿವಾಣಖಾನೆಯಲ್ಲಿ ಕಾಲಿಟ್ಟ ಕೂಡಲೆ ಆತನ ಬುದ್ಧಿಯಲ್ಲಿ ವಿವೇಕವುತ್ಪನ್ನವಾಯಿತು. ತಾನು ಎಂಥ ಹೇಯವಿಚಾರಗಳನ್ನು ತಳೆದು, ಇಲ್ಲಿಗೆ ಬಂದೆನೆಂದು ಅವನಿಗೆ ಪಶ್ಚಾತ್ತಾಪವಾಯಿತು. ಅವನು ಹೀಗೆ ಪಶ್ಚಾತ್ತಾಪಯುಕ್ತ ವಿವೇಕ ವಿಚಾರದಲ್ಲಿ ಮಗ್ನನಾಗಿರಲು ಮಾನಸಿಂಗನು ತನ್ನ ಪುರಾಣವನ್ನು ಮುಗಿಸಿದನು. ಬಳಿಕ ಅವನು ಆ ಸರದಾರನನ್ನು ಕುರಿತು:—ಏನು ಹಮ್ಮೀರ ಸಿಂಗ ಇಷ್ಟೊತ್ತಿನ ವರೆಗೆ ನಾನು ಹೇಳಿದ್ದಕ್ಕೆ ನಿಮ್ಮ ಅಭಿಪ್ರಾಯವೇನು? ಸುಮ್ಮನೆ ಕುಳಿತುಬಿಟ್ಟರಲ್ಲ? ಎಂದು ನುಡಿದನು.

ಹಮ್ಮೀರಸಿಂಗನು ಎಚ್ಚತ್ತನು. ಇಷ್ಟೊತ್ತಿಗೆ ಅವನು ಮಾನಸಿಂಗನಿಗೆ ಏನು ಉತ್ತರಕೊಡಬೇಕೆಂಬದನ್ನು ನಿರ್ಧರಿಸಿಕೊಂಡಿದ್ದನು. ಕೂಡಲೆ ಅವನು ವಿಚಾರವನ್ನುಬಿಟ್ಟು ಪ್ರಸನ್ನ ಮುದ್ರೆಯಿಂದ ಮಾನಸಿಂಗನನ್ನು ಕುರಿತು ನುಡಿದನೇನಂದರೆ:—

“ರಾಜಾಮಾನಸಿಂಗ ಸರದಾರರೇ, ನಿಮ್ಮ ಮಾತುಗಳನ್ನೆಲ್ಲ ಸಾವಧಾನದಿಂದ ಕೇಳಿದೆನು; ಹಾಗು ಮನದಲ್ಲಿ ವಿಚಾರಿಸಿದೆನು. ಬಾದಶಹನ ಪ್ರೇಮಸಂಪಾದನೆಯಾದರೆ ಸ್ವರ್ಗಸೌಖ್ಯವು ಕೂಡಾ ಲಭಿಸಬಹುದು. ಆದರೆ ನಿಮ್ಮ ಮಾತಿನಂತೆ ನಡೆದರೆ ಆಪ್ತೇಷ್ಟರುಗಳಿಂದ ತುಂಬಿದ ಹುಲ್ಲು ಗುಡಿಸಲಕ್ಕೆ ಅಗ್ನಿಪ್ರವೇಶಮಾಡಿಸಿ ರಾಜಮಂದಿರದಲ್ಲಿರಲಿಕ್ಕೆ ಹೋಗುವ ಮೂರ್ಖನಂತಾಗುತ್ತದಲ್ಲವೇ? ಇದಕ್ಕೇನು ಸಮಾಧಾನವ ಹೇಳುವಿರಿ? ಸರದಾರರೇ, ನೀವೇ ವಿಚಾರಮಾಡಿರಿ. ಹುಟ್ಟಿದ ಭೂಪ್ರದೇಶವನ್ನು ತ್ಯಜಿಸಿ, ಸರ್ವ ಬಾಂಧವರನ್ನು ನಾಶಗೊಳಿಸಿ, ನಂಬಿದ ರಾಜನ ಕುತ್ತಿಗೆ

ಯನ್ನು ಕೊಯ್ದು ಇಲ್ಲಿ ಯಾವ ಸೌಖ್ಯವನ್ನು ಸೂರೆಗೊಳ್ಳಬೇಕು? ನಿಮ್ಮ ಸ್ಥಿತಿಯನ್ನೇ ನೀವು ನೋಡಿಕೊಂಡರೆ ನನ್ನ ಮಾತಿನ ಯಥಾರ್ಥವು ನಿಮಗೆ ಹೊಳೆಯದಿರಲಾರದು. ಸರದಾರರೇ, ಹೆಚ್ಚು ಮಾತಾಡಿದ್ದಕ್ಕೆ ನನ್ನನ್ನು ಕ್ಷಮಿಸಿರಿ; ಇಲ್ಲವೆ ನನ್ನನ್ನು ನಿಮ್ಮ ಬಾದಶಹನ ವಶಕ್ಕೊಪ್ಪಿಸಿ ಸೆರೆಯಲ್ಲಿ ಡಿಸಿರಿ. ನಾನು ಬೇಡವೆನ್ನುವದಿಲ್ಲ. ಮಾತ್ರ ನಿಮಗೆ ಒಂದು ಕಾಲದಲ್ಲಾದರೂ ಪಶ್ಚಾತ್ತಾಪವಾಗದೆ ಹೋಗಲಾರದು. ಸ್ವಜನದ್ರೋಹವು ಭಯಂಕರವು. ನಿಮ್ಮ ಈ ಸ್ವಜನದ್ರೋಹದಿಂದ ಎಷ್ಟು ಜನ ರಜಪೂತ ರಮಣಿಯರು ಗೋಳಿಡುತ್ತಿರುವರು! ಎಷ್ಟು ಜನ ವೀರರು ವೀರಸ್ವರ್ಗವನ್ನು ಪಡೆದರು! ಇದನ್ನೆಲ್ಲ ವಿಚಾರಿಸುವಿರಾ? ಸುಖವು ವೈಭವದಲ್ಲಿದೆಯೇ? ಹೀಗಿದ್ದರೆ ನಿಮ್ಮ ತಿಳುವಳಿಕೆಗೆ ಧಿಃಕಾರವಿರಲಿ!! ಸುಖವು ಸ್ವಾತಂತ್ರ್ಯದಲ್ಲಿರುವದು; ಸುಖವು ಬಂಧು-ಬಾಂಧವರ-ಸ್ವಜನರ ಉತ್ಕರ್ಷದಲ್ಲಿರುವದು; ಸುಖವು ಮಾತೃಭೂಮಿಯ ಸೇವೆಯಲ್ಲಿರುವದು; ಸುಖವು ಸ್ವಧರ್ಮ ರಕ್ಷಣೆಯಲ್ಲಿರುವದು. ಸರದಾರರೇ, ಇವುಗಳಲ್ಲಿ ನೀವು ಯಾವ ಸೌಖ್ಯವನ್ನು ಹೊಂದಿರುವಿರಿ? ಸುಖದ ಭ್ರಾಂತಿಯಿಂದ ನೀವೊಬ್ಬರು ಭ್ರಷ್ಟರಾದದ್ದಲ್ಲದೆ ನನ್ನಂಥ ಅಸ್ಸಲ ರಜಪೂತನನ್ನೂ ಭ್ರಷ್ಟಗೊಳಿಸಲು ಹೆಣಗುತ್ತೀರಿ. ಇದು ಕೇವಲ ದೇಶದ್ರೋಹವು! ಮೊದಲು ನೀವೇ ಕಾಲುಜಾರಿ ಬೀಳತಕ್ಕದ್ದಲ್ಲ; ಒಂದುವೇಳೆ ವಿವೇಕಾಭಾವದಿಂದ ಬಿದ್ದರೂ, ಮುಂದಿಯನ್ನು ಭ್ರಷ್ಟಗೊಳಿಸಲಿಕ್ಕೆ ಪ್ರಯತ್ನಿಸಬಾರದು. ಅನ್ಯರಲ್ಲಿ ಸ್ವದೇಶಪ್ರೇಮವನ್ನು ಹೆಚ್ಚಿಸಬೇಕಲ್ಲದೆ ಸ್ವದೇಶ-ಸ್ವಜನದ್ರೋಹವಾಗುವಂಥ ಸಂಗತಿಗೆ ಉತ್ತೇಜನ ಕೊಡಬಾರದು. ನಾನು ಮೂರ್ಖನು; ನಿಮ್ಮ ಸವಿಮಾತಿಗೆ ಮರುಳಾದೆನು. ಆದರೆ ಕಡೆಗೆ ಏಕಲಿಂಗಜಿಯು ನನಗೆ ಸದ್ಬುದ್ಧಿಯನ್ನು ಕೊಟ್ಟನು. ಹಾಯ್! ಹಾಯ್! ಮಾನಸಿಂಗ ಸರದಾರರೇ, ಸಿಂಹಾವಲೋಕನದಿಂದ ನಿಮ್ಮ ಗತಾಯುಷ್ಯವನ್ನು ಸ್ಮರಿಸಿಕೊಳ್ಳುವಿರೇನು? ಹೋಗಿ ಬರುತ್ತೇನೆ, ದಯವಿರಲಿ!!''

ಈ ಮೇರೆಗೆ ನುಡಿದು ಆ ತರುಣ ರಜಪೂತ ಸರದಾರನು ತಟ್ಟನೆ ಅಲ್ಲಿಂದ ಹೊರಹೊರಟು ನಗರಿಯಲ್ಲಿ ಎತ್ತೋ ಮಾಯವಾಗಿ ಹೋದನು. ಅವನು ಹೋಗುವವರೆಗೆ ಮಾನಸಿಂಗನು ಚಿತ್ರದಲ್ಲಿಯ ಗೊಂಬೆಯಂತೆ ತಟಸ್ಥವಾಗಿ ಕುಳಿತುಕೊಂಡಿದ್ದನು. ಹಮ್ಮೀರಸಿಂಗನ ಸೌಮ್ಯ ಆದರೆ

ಮರ್ಮಭೇದನವಾಗುವ ಭಾಷಣದಿಂದ ಅವನ ಹೃದಯವು ತಲ್ಲಣಿಸಿ ಹೋಗಿತ್ತು. ತಾನು ಮಾಡುವದು ಅಧಮ ಕೆಲಸವೆಂದು ಅವನಿಗೆ ದುಃಖ ವಾಯಿತು. ಮನಸ್ಸಿನ ಪ್ರವಾಹವು ಸ್ವದೇಶ-ಸ್ವಜನಾಭಿಮಾನ ಇವುಗಳ ಕಡೆಗೆ ಹೊರಳಿತು. ಅಂತೇ ಅವನು ಹಮ್ಮೀರಸಿಂಗನು ಹೊರಟುಹೋದರೂ ಅವನನ್ನು ಹಿಡಿಯಬೇಕೆಂಬ ಗೊಡವೆಗೆ ಹೋಗಲಿಲ್ಲ. ಗಾರುಡಿಗನ ಮಂತ್ರದಿಂದ ಪ್ರಚಂಡವಾದ ಸರ್ಪವು ಸ್ತಬ್ಧವಾಗುವಂತೆ ಮಾನಸಿಂಗನ ಸ್ಥಿತಿಯಾಗಿತ್ತು. ಅವನು ತನ್ನ ಸ್ಥಿತಿಯನ್ನು ಕುರಿತು ಯೋಚಿಸಲಾರಂಭಿಸಿದನು.

ನೈಸರ್ಗಿಕದ ವಿರುದ್ಧವಾಗಿ ನಡೆಯತಕ್ಕವನಿಗೆ ನೈಸರ್ಗಿಕವು ಮುಳ್ಳು ಅಳುಕಿದಂತೆ ಅಳುಕಿಸುತ್ತಿರುತ್ತದೆ. ಏನು ಮಾಡಿದರೂ ಅವರ ಮನಸ್ಸಿಗೆ ಸಮಾಧಾನವಿರುವದಿಲ್ಲ. ಅದರಲ್ಲಿ ಯಾರಾದರೂ ಅವರ ನೈಸರ್ಗಿಕಕ್ಕೆ ಹೊರತಾದ ಆಚರಣೆಯನ್ನು ಆಡಿಕೊಂಡರೆಂದರೆ ಅವರಿಗೆ ಪ್ರಾಣಾಂತಿಕವಾದ ವೇದನೆಯಾಗುವದು. ಅದು, ತಾತ್ಕಾಲಿಕವಾಗಿಯೇ ಆಗಲೊಲ್ಲದೇಕೆ? ಅವನಲ್ಲಿ ಪಶ್ಚಾತ್ತಾಪವನ್ನುಂಟುಮಾಡದೆ ಬಿಡುವದಿಲ್ಲ. ಅದರಂತೆ ಮಾನಸಿಂಗನೂ ಪಶ್ಚಾತ್ತಾಪಕ್ಕೆ ಗುರಿಯಾದನು. ಸ್ವಜನರ ವಿರುದ್ಧವಾಗಿ ತಾನು ಬಾದಶಹನ ಸೇವೆಗೆ ನಿಂತದ್ದು ಪರಮ ಅನ್ಯಾಯವೆಂದು ತೋರಹತ್ತಿತು. ಹಾಯ್! ಹಾಯ್! ನಾನು ಎಷ್ಟುಜನ ರಜಪೂತರ ಚಂಡುಗಳನ್ನು ಹರಿಗಡಿದೆನಲ್ಲ! ಇಷ್ಟೆಲ್ಲ ಮಾಡಿ ನಾನು ಗಳಿಸಿಕೊಂಡ ಸೌಭಾಗ್ಯವೇನು? ಇಂದ್ಯೇ ಬಾದಶಹನ ಅವಕೃಪೆಯಾದರೆ ನಾಳಿಗೇ ನನ್ನ ಐಶ್ವರ್ಯವೆಲ್ಲ ಮಣ್ಣುಗೂಡಿ ಹೋಗುವದು. ಅದೇಕೆ ಜೀವಿತದ ಆಶೆಯನ್ನು ಕೂಡಾ ಹಿಡಿಯಲಿಕ್ಕೆ ಬರುವಂತಿಲ್ಲ! ಇದೇಅಲ್ಲವೇ? ನಾನು ಸಂಪಾದಿಸಿದ್ದು, ಎಂಬ ಯೋಚನೆಯಿಂದ ಅವನಿಗೆ ನೂರಾರು ಚೇಳುಗಳು ಕಡಿದಷ್ಟು ವ್ಯಥೆಯಾಗತೊಡಗಿತು. ಈ ವ್ಯಥೆಯಲ್ಲಿ ಅವನು ಬಾದಶಹನನ್ನು ಮರೆತನು. ಆತನಿಗೆ ತಾನು ವಚನ ಕೊಟ್ಟದ್ದನ್ನೂ ಮರೆತನು. ಕೆಲಹೊತ್ತಿನ ವರೆಗೆ ಇದೇ ವಿಚಾರದಲ್ಲಿಯೇ ಗುಂಗಾಗಿ ಹೋದನು. ಆದರೆ ವಿಷಯಲಂಪಟಗಳ, ಚಂಚಲಚಿತ್ತರ, ಸುಖದ ಭ್ರಾಂತಿಯುಳ್ಳವರ ಪಶ್ಚಾತ್ತಾಪವಾಗಲಿ, ವಿವೇಕಬುದ್ಧಿಯಾಗಲಿ ಬಹಳ ಹೊತ್ತಿನ ವರೆಗೆ ನಿಲ್ಲುವದಿಲ್ಲ. ಉತ್ತರಕ್ಷಣದಲ್ಲಿಯೇ ಅದು ಕಳಚಿ ಹೋಗುವದು. ಮಾನಸಿಂಗನು

ವಿಚಾರ ಮಾಡುತ್ತಿರಲು ಅವನಿಗೆ ತಾನು ಬಾದಶಹನಿಗೆ ಕೊಟ್ಟ ವಚನವು ಪಕ್ಕನೆ ನೆನಪಾಯಿತು. ಆಗ ಅವನ ಮನಸ್ಸು ಇತ್ತಂಡವಾಯಿತು. ಹಮ್ಮೀರನ ಮಾತುಗಳಿಂದ ಸ್ವದೇಶಪ್ರೇಮವು ಉದಯಿಸಿತ್ತು. ಇತ್ತ ಬಾದಶಹನಿಗೆ ಕೊಟ್ಟ ವಚನಸ್ಮರಣದಿಂದ ಮನಸ್ಸಿನಲ್ಲಿ ಒಂದು ಬಗೆಯ ಭಯವೊ ಉತ್ಪನ್ನವಾಯಿತು. ಇದರಿಂದ ಅವನ ಮನಸ್ಸು ಶೂನ್ಯವಾಯಿತು. ಸ್ವಜನರನ್ನು ಕೂಡಿಕೊಳ್ಳುವದಕ್ಕೂ ಅವನ ಮನಸ್ಸು ಒಪ್ಪದಾಯಿತು. ಬಾದಶಹನನ್ನು ಕೂಡಿಕೊಳ್ಳಲಿಕ್ಕೂ ಮನಸ್ಸು ಒಪ್ಪದಾಯಿತು. ಹೀಗಾಗಿ ಅವನ ವೃತ್ತಿಯು ತ್ರಿಶಂಕುವಿನ ಹಾಗೆ ಮಧ್ಯದಲ್ಲಿಯೇ ಹೊಯ್ದಾಡಲಾರಂಭಿಸಿತು.

೬—ಶುಭಶಕುನ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮಾನಸಿಂಗನು ತ್ರಿಶಂಕು ವೃತ್ತಿಯಲ್ಲಿ ಘಾಸಿಯಾಗುತ್ತಿರಲು ಒಮ್ಮೆಲೆ ಅವನ ಮುಖವು ಆರಕ್ತವಾಯಿತು. ಕಣ್ಣುಗಳು ಕಿಡಿಗಳನ್ನು ಕಾರತೊಡಗಿದವು. ಹಲ್ಲುಗಳು ಕೆಳದುಟಿಯನ್ನು ಕಚ್ಚಿದವು; ಮುಖಲಕ್ಷಣವು ರೌದ್ರತೆಯನ್ನು ಪ್ರಕಟಿಸತೊಡಗಿತು; ಆಗ ಅವನು ಸ್ಫುಟವಾಗಿ:—"ಎಲಾ, ನೀಚಾ, ಹಮ್ಮೀರಸಿಂಗಾ, ನನಗೆ ಬುದ್ಧಿವಾದವ ಹೇಳಬರುವೆಯಾ? ಈ ಮಾನಸಿಂಗನು ಎಂಥ ವಸ್ತಾದಿಯೆಂಬದು ನಿನಗಿನ್ನೂ ಗೊತ್ತಿಲ್ಲವೇ? ನಾನು ಕುಲಗೇಡಿಯೇ? ನೀನು ಶುದ್ಧ ರಜಪೂತನೇ? ಶಾಬಾಸ್, ಸ್ವಲ್ಪ ತಾಳು! ನಿನ್ನ ಶುದ್ಧ ರಜಪೂತನೆಂಬ ಹೆಮ್ಮೆಯನ್ನು ಬಿಡಿಸುತ್ತೇನೆ. ಮೂರ್ಖಾ, ನನ್ನ ಮಾತುಗಳು ನಿನಗೆ ಸರಿಬರದಿದ್ದರೆ ನಿನ್ನ ಮನೆಯಲ್ಲಿಯೇ ಇರಬೇಕಾಗಿತ್ತು, ಇಲ್ಲಿಯ ವರೆಗೆ ಬಂದು ನನ್ನ ನಿರ್ಭತ್ಸನೆ ಮಾಡುವ ಕಾರಣವೇನು? ನಿನ್ನಂಥ ಅಧಮನು ನಾನಾಗಿದ್ದರೆ ಆಗಲೇ ನಿನ್ನನ್ನು ಸೆರೆಯಿರಿಸಿ ನಿನ್ನ ರಾಜ್ಯವನ್ನು ಸೆರೆಸೂರಿ ಮಾಡಿಬಿಡುತ್ತಿದ್ದೆನು. ಆದರೆ ಇಂಥ ಮೋಸಗಾರಿಕೆಯ ಪಾತಕವು ನನಗೆ ಬೇಡ; ಸಮರದಲ್ಲಿ ನಿನ್ನೆದುರಿಗೆ ನಿಂತು ಯುದ್ಧಮಾಡಿ ನಿನ್ನನ್ನು ಸೆರೆ ಹಿಡಿಯುವದಲ್ಲದೆ ನಿನ್ನ ಸ್ವಾಮಿಯ ರಾಜ್ಯವನ್ನೂ ಹರಣ ಮಾಡುತ್ತೇನೆ."

ಈ ಪ್ರಕಾರ ರಾಜಾಮಾನಸಿಂಗನು ನುಡಿಯುವಾಗ ಅವನಿಗೆ ವಿಲಕ್ಷಣ ಸಂತಾಪವಾಗುತ್ತಿತ್ತು. ಈಗಲೇ ದಂಡು ತಕ್ಕೊಂಡು ಹೋಗಿ ಪಾಲೀರಾಜ್ಯವನ್ನು ಮುಣುಗಿಸಿ ಬಿಡಲಿಯಾ ಎಂಬ ಸೊಚ್ಚು ಉತ್ಪನ್ನವಾಗಿತ್ತು. ಅಹಂಕಾರ ಗ್ರಸ್ತರಾದವರಿಗೆ ಸಿಟ್ಟು ಬಂತೆಂದರೆ ಅದು ಒಮ್ಮೆಲೆ ವಿಕೋಪಕ್ಕೆ ಮುಟ್ಟುತ್ತದೆ. ಮತ್ತು ತಡವಿಲ್ಲದೆ ಇಳಿದು ಹೋಗುತ್ತದೆ. ಅದರಂತೆ ಅಹಂಕಾರಿಯಾದ ಮಾನಸಿಂಗನ ಸಿಟ್ಟು ಕ್ಷಣದಲ್ಲಿ ಅತಿರೇಕವಾಗಿ ಬ್ರಹ್ಮಾಂಡವನ್ನೇ ಸುಟ್ಟು ಬಿಡುತ್ತದೋ ಎಂಬ ಹಾಗೆ ತೋರಿತು. ಆದರೆ ಮತ್ತೊಂದು ಗಳಿಗೆಯಲ್ಲಿ ಆತನಿಗೆ ಸಿಟ್ಟು ಬಂದಿತ್ತೋ ಇಲ್ಲವೋ ಎಂಬುವಷ್ಟು ಶಾಂತವಾದ ಮುಖಮುದ್ರೆಯು ತೋರತೊಡಗಿತು. ಹೀಗೆ ಸಿಟ್ಟು ಇಳಿದ ಬಳಿಕ ಮಾನಸಿಂಗನು ಶ್ರೀಗಂಧದ ಮಂಚದ ಮೇಲೆ ಬಿದ್ದುಕೊಂಡು ಇಂತು ಯೋಚಿಸ ತೊಡಗಿದನು:—“ರಜಪೂತರಿಗೆ ಎಷ್ಟು ಹೇಳಿದರೂ ಬುದ್ಧಿ ಬರುವದಿಲ್ಲ. ಅವರು ದಂಡಸಾಧ್ಯರೇ ಹೊರತು ಬುದ್ಧಿವಾದಕ್ಕೆ ಹಣಿಯುತಕ್ಕವರಲ್ಲ. ನನ್ನ ಮಾತು ಕೇಳಿದ್ದರೆ ಈ ಹಮ್ಮೀರಸಿಂಗನದೇನು ಕೆಡುತ್ತಿತು? ಬಾದಶಹನ ಪೂರ್ಣ ಕೃಪೆಯು ಅವನ ಮೇಲೆ ಆಗಿ ಅವನೂ ನಮ್ಮ ಹಾಗೆ ಘನತೆಗೇರುತ್ತಿದ್ದನು ಪಾಲೀರಾಜ್ಯದ ಸುಭೇದಾರಿಕೆಯೇ ಆತನಿಗೆ ಸಿಗುತ್ತಿತ್ತು. ಮೂರ್ಖರು ವೃಥಾ ಅಭಿಮಾನಕ್ಕೆ ಬಿದ್ದು ಕೆಡುವರು. ಇಂಥವರಿಗೆ ಇಹದಲ್ಲಿಯೂ ಸೌಖ್ಯವಿಲ್ಲ. ಪರದಲ್ಲಿಯೂ ಗತಿಯಿಲ್ಲ. ಸುಮ್ಮನೆ ನಮ್ಮ ಧರ್ಮ, ನಮ್ಮ ದೇಶ, ನಮ್ಮ ಸ್ವಜನರೆಂದು ಹಿದ್ದಾಡಿದರೆ ಆಗುವದೇನು? ತಾನು ಸುಖಿಯಾದರೆ ಜಗತ್ತೇ ಸುಖಿ, ಎಂಬ ನಾಣ್ಣುಡಿಯ ಅರ್ಥವೇ ಈ ಮೂರ್ಖರ ಲಕ್ಷದಲ್ಲಿ ಬರುವದಿಲ್ಲ. ಇಂಥ ಮೂರ್ಖ ವಿಚಾರಗಳನ್ನು ಮಾಡಿಯೇ ಇಂದಿನ ವರೆಗೆ ಎಷ್ಟೋ ಜನ ರಜಪೂತವೀರರು ವನವಾಸವನ್ನು ಭೋಗಿಸುತ್ತಲಿರುವರು. ಹಿಂದು ಪವಾಸ ಎರಡುಪವಾಸಗಳನ್ನು ಕಳೆಯುತ್ತಿರುವರು. ಆದರೆ ಅವರು ದುರಭಿಮಾನಬಿಟ್ಟು ಬಾದಶಹನಿಗೆ ಶರಣು ಬಂದಿದ್ದರೆ ದೊಡ್ಡ ಸರದಾರರಾಗಿ ಮೆರೆಯುತ್ತಿದ್ದರಲ್ಲ? ದೈವಗೇಡಿಗಳು! ಎಂದು ಉಸಿರ್ಗಳೆದನು. ಬಳಿಕ ಅವನು ಈ ರಜಪೂತರನ್ನು ಹ್ಯಾಗೆ ಹಾದಿಗೆ ತರಬೇಕೆಂದು ಎಣಿಕೆ ಹಾಕುತ್ತಿರಲು ಒಬ್ಬ ಜಾಸೂದನು ಬಂದು ಮುಜುರೆ ಮಾಡಿ ಬಾದಶಹರು ಕರೆಯುವರೆಂದು ಬಿನ್ನವಿಸಿದನು. ಬಾದಶಹರು ಕರೆಯುವರೆಂಬ

ಶಬ್ದಗಳು ಕಿವಿಗೆ ಬಿದ್ದಕೂಡಲೆ ಮಾನಸಿಂಗನು ಚಟ್ಟನೆದ್ದು ರಾಜಸನ್ನಿಧಿಗೆ ಹೋಗುವಾಗ ಧರಿಸತಕ್ಕ ಪೋಷಾಕನ್ನು ಧರಿಸಿ ಕೂಡಲೆ ಮನೆಯಿಂದ ಹೊರಟು ಬಾದಶಹನ ಬಳಿಗೆ ನಡೆದನು.

ಅಂತಃಪುರದ ಒಂದು ಕೋಣೆಯಲ್ಲಿ ಬಾದಶಹನು ಮಾನಸಿಂಗನ ದಾರಿಯನ್ನೇ ಕಾಯುತ್ತ ಕುಳಿತಿದ್ದನು. ಆತನಿಗೆ ಆ ದಿನ ನಿದ್ರೆಬಾರ ದಾಗಿತ್ತು. ಈ ದಿನ ಸಂಜೆಗೆ ಹಮ್ಮೀರಸಿಂಗನು ಬರುವನೆಂದು ಮಾನ ಸಿಂಗನು ಹೇಳಿದ್ದರಿಂದ ಅಕಬರನ ಲಕ್ಷವೆಲ್ಲ ಆ ಕಡೆಗೇ ಇದ್ದಿತು. ಮಾನ ಸಿಂಗನ ಮಾತಿನಂತೆ ಹಮ್ಮೀರಸಿಂಗನು ಬಂದಿದ್ದರೆ ಯಾವ ಯಾವ ಮಾತು ಕಥೆಗಳಾದವೆಂಬದನ್ನು ಕೇಳುವದಕ್ಕೆ ಅವನ ಮನಸ್ಸು ತವಕಿಸುತ್ತಿತ್ತು. ಬೆಳಗಾದ ಬಳಿಕ ಮಾನಸಿಂಗನು ಬಂದು ಹೇಳುವವರೆಗೆ ಅವನ ಜೀವ ನಿಲ್ಲದಾಯಿತು. ಆದ್ದರಿಂದ ಅವನು ಅಷ್ಟು ರಾತ್ರಿಯಲ್ಲಿ ಮಾನಸಿಂಗನನ್ನು ಕರೆಕಳುಹಿ ದಾರೀ ನೋಡಲುಪಕ್ರಮಿಸಿದ್ದನು. ಈ ಕಾಲಕ್ಕೆ ಅಕಬರನಿಗೆ ಒಂದು ನಿಮಿಷವೆಂದರೆ ಒಂದು ದಿನದಂತೆ ಭಾಸವಾಗತೊಡಗಿತು. ಸೇವ ಕನು ಬೇಗನೆ ಯಾಕೆ ಹೋಗಿರಲಿಕ್ಕಿಲ್ಲ? ಮಾನಸಿಂಗನು ಬರುವದಕ್ಕೆ ಇಷ್ಟೇಕೆ ತಡಮಾಡಿರಬಹುದು? ಎಂಬ ತರ್ಕವಿತರ್ಕಗಳಿಗೆ ಪ್ರಾರಂಭ ವಾಯಿತು. ಅಷ್ಟರಲ್ಲಿ ಮಾನಸಿಂಗನು ಬಂದು ಬಾದಶಹನಿಗೆ ಕುರ್ನಿಸ ಮಾಡಿ ನಿಂತುಕೊಂಡನು. ಆಗ ಬಾದಶಹನು ಮಾನಸಿಂಗನ ಮುಖವನ್ನು ಸೂಕ್ಷ್ಮವಾಗಿ ನೋಡಿದನು. ಆದರೆ ಆತನ ಮುಖವು ಪ್ರಸನ್ನವಾಗಿ ದ್ದಿಲ್ಲ; ಹಾಗು ಸಂತೋಷದ ಸುದ್ದಿಯನ್ನು ಹೇಳಲಿಕ್ಕೆ ಉತ್ಸುಕವಾಗಿದ್ದಿಲ್ಲ; ಅವನ ಮುಖಲಕ್ಷಣದಿಂದಲೇ ಅಕಬರ ಬಾದಶಹನಿಗೆ ವಸ್ತುಸ್ಥಿತಿಯು ಹೊಳೆದುಹೋಯಿತು. ಮಾನಸಿಂಗನು ಹಮ್ಮೀರಸಿಂಗನನ್ನು ಒಲಿಸಿಕೊಳ್ಳ ಹೋಗಿ ಭಗ್ನಮನೋರಥನಾಗಿ ತಾನೇಮೋಸಹೋಗಿರುವನೆಂದು ಕಂಡುಹಿಡಿ ದನು. ಪರೇಂಗಿತವನ್ನು ಮುಖಲಕ್ಷಣದಿಂದಲೇ ಕಂಡುಹಿಡಿಯುವ ಜಾಣ ಅಕಬರನ ಈ ಕೌಶಲ್ಯವನ್ನು ಮಾನಸಿಂಗನು ಬಲ್ಲವನಾಗಿದ್ದನು. ಅವನು ಮನದಲ್ಲಿಯೇ ನಾಚಿಕೊಂಡು:—ಹುಜೂರ, ಈ ರಾತ್ರಿಯಲ್ಲಿ ನನ್ನನ್ನೇಕೆ ಕರೆಸಿದಿರಿ! ಎಂದು ಕೇಳಿದನು. ಆದಕ್ಕೆ ಅಕಬರನು ಮನಸ್ಸಿಗೆ ಸಮಾ ಧಾನವಾಗದೆ ಕರೆಯಿಸಿದೆನು. ಆದರೆ...........

ಮಾನಸಿಂಗ:—ಆದರೆ ಎಂದು ಯಾಕೆ ನುಡಿಯುವಿರಿ?

ಅಕಬರ:—ನನ್ನನ್ನು ಸಮಾಧಾನಪಡಿಸುವಷ್ಟು ಸುಯೋಗವು ನಿಮಗೆ ಒದಗಿಲ್ಲವೆಂದು!

ಮಾನಸಿಂಗ:—ಅದೇತರ ಮೇಲಿಂದ?

ಅಕಬರ:—ನಿಮ್ಮ ಮುಖಲಕ್ಷಣದ ಮೇಲಿಂದ!

ಮಾನಸಿಂಗನು ತೀರ ಲಜ್ಜಿತನಾದನು. ಅವನು ತಲೆಬಾಗಿ:-ಬಾದಶಹನೇ, ನಿನ್ನ ತರ್ಕವು ಅಕ್ಷರಶಃ ನಿಜವಿರುತ್ತದೆ. ಸಂಜೆಯು ಮುಂದೆ ಹಮೀರಸಿಂಗನು ನನ್ನ ಬಳಿಗೆ ಬಂದಿದ್ದನು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಇಲ್ಲಿಗೆ ಬಂದ ಬಳಿಕ ಅವನ ಬುದ್ಧಿಯಲ್ಲಿ ಸ್ವಾಸ್ಥ್ಯವು ಉಳಿಯಲಿಲ್ಲ. ರಜಪೂತರ ಪದ್ಧತಿಯಂತೆ ಸ್ವದೇಶ-ಸ್ವಜನ-ಸ್ವಾಭಿಮಾನ ಎಂಬ ಮಂತ್ರಗಳನ್ನು ಜಪಿಸುತ್ತ ಹೊರಟು ಹೋದನು, ಎಂದು ನುಡಿದನು. ಅದನ್ನು ಕೇಳಿ:—

ಅಕಬರ ಬಾದಶಹ:—ನೀವು ಅವನನ್ನು ಸುಮ್ಮನೆ ಯಾಕೆ ಬಿಟ್ಟಿರಿ?

ಮಾನಸಿಂಗ:—ಅವನಿಗೆ ಏನು ಮಾಡಬೇಕಾಗಿತ್ತು?

ಅಕಬರ ಬಾದಶಹ:—ಸೆರೆಹಿಡಿಯಬೇಕಾಗಿತ್ತು.

ಬಾದಶಹನ ಈ ಮಾತಿಗೆ ಮಾನಸಿಂಗನು ನಿರುತ್ತರನಾದನು. ಬಳಿಕ ಅವನು ಸ್ವಲ್ಪ ಯೋಚಿಸಿ-ಹುಜೂರ, ಇಂಥ ಮೋಸಗಾರಿಕೆಯು ನನಗೇಕೆ? ನಾನು ಅಸಮರ್ಥನೇ? ಪಾಲೀ ರಾಜ್ಯಕ್ಕೆ ಹೋಗಿ ಪ್ರತ್ಯಕ್ಷವಾಗಿ ಹಮ್ಮೀರ ಸಿಂಗನೊಡನೆ ಯುದ್ಧಮಾಡಿ ಸಮಸ್ತರ ಸಮಕ್ಷಮವಾಗಿ ಅವನನ್ನು ಹಿಡಿದು ತರುತ್ತೇನೆ. ಮನೆಗೆ ಬಂದವನನ್ನು ಸೆರೆಯಿರಿಸಿದರೆ ನನ್ನ ಪೌರುಷವೇನು? ಎಂದನು.

"ಮಾನಸಿಂಗರೇ, ನಿಮ್ಮ ಪೌರುಷವು ಘನತರವಾದದ್ದಿದೆ. ಆದರೆ ಪ್ರಸಂಗದಲ್ಲಿ ಪೌರುಷದಿಂದ ಸಾಧ್ಯವಾಗದ ಕೆಲಸಗಳು ಸುಲಭ ಯುಕ್ತಿಗಳಿಂದ ನೆರವೇರುತ್ತಿರುತ್ತವೆ. ಕಾರ್ಯಸಾಧಕನಾದವನು ಬರಿಯ ಪೌರುಷದ ಮೇಲೆಯೇ ಕೈಯೂರುವದು ಸರ್ವಥಾ ತಪ್ಪಿನದಾಗುವದು. ಇದು ಒಂದು ರಾಜಕಾರಣದ ಪಾಠವನ್ನು ನೀವು ಹೊಸದಾಗಿ ಕಲಿಯಬೇಕಾಯಿತು. ನೀವು ನನ್ನ ಮಾವಂದಿರೂ, ಅನುಭವಿಕರೂ ಇದ್ದರೂ, ಇಲ್ಲಿ ನೀವು ಸ್ವಲ್ಪ ತಪ್ಪಿದಿರಿ. ಆಗಲಿ, ಇನ್ನುಮುಂದೆ ಇಂಥ ಪ್ರಸಂಗಗಳು ವ್ಯರ್ಥ ಹೋಗದಂತೆ ಲಕ್ಷ್ಯಗೊಡಿರಿ. ನಾನು ಯಾವ ಆಶೆಯಿಂದ ನಿಮ್ಮನ್ನು

ಇಲ್ಲಿಗೆ ಕರೆಯಿಸಿದೆನೋ, ಆ ಆಶೆಯೇ ತೃಪ್ತವಾಗಲಿಲ್ಲ. ಅಂದಬಳಿಕ ನಿಮ್ಮ ಬಾಯಿಂದ ಆ ಸಂಗತಿಯನ್ನು ಕೇಳಿದರೆ ನನಗೆ ಆಗುವ ಪ್ರಯೋಜನವಾದರೂ ಏನು? ರಾತ್ರಿಯಾಯಿತು; ಮಲಗಿಕೊಳ್ಳಲಿಕ್ಕೆ ಹೋಗಿರಿ, ಎಂದು ಅಪ್ಪಣೆ ಕೊಟ್ಟುಬಿಟ್ಟನು.

ಅಭಿಮಾನಿಯಾದ ಮಾನಸಿಂಗನ ತಲೆಹೊಡೆದಂತಾಯಿತು. ತಾನು ಆ ಹಮ್ಮೀರನ ಮಾತಿಗೆ ಯಾಕೆ ಮರುಳಾಗಿದ್ದೇನೆಂಬ ಪಶ್ಚಾತ್ತಾಪವು ಅವನಿಗೆ ಪೂರ್ಣವಾಗಿ ಆಯಿತು. ನಿಜವಾದ ಸಂಗತಿಯನ್ನು ಬಾದಶಹನ ಮುಂದೆ ಹೇಳಿಬಿಡಬೇಕೆಂದು ಅವನ ಮನಸ್ಸಿನಲ್ಲಿ ಬಂದಿತು. ಆದರೆ ಇದರಿಂದ ತನ್ನ ಮನೋದೌರ್ಬಲ್ಯವೇ ಹೊರಬಿದ್ದು ಬಾದಶಹನ ತಿರಸ್ಕಾರಕ್ಕೆ ಕಾರಣವಾದೀತೆಂದು ಅಂಜಿ ಅವನು ಹಾಗೆ ಮಾಡಲು ಧೈರ್ಯಪಡಲಿಲ್ಲ. ಬಾದಶಹನ ಮುಂದೆ ನಿಂತು ಮಾತಾಡಲಿಕ್ಕೂ ಆತನಿಗೆ ನಾಚಿಕೆ ಬರಹತ್ತಿತು. ಆಗ ಆತನು ಬಾದಶಹನು ಈ ದಿನ ಅಪ್ಪಣೆಮಾಡಿದ ಕೆಲಸಗಳಲ್ಲಿ ಒಂದನ್ನಾದರೂ ಸಾಧಿಸದೆ ಬಾದಶಹನ ಬಳಿಗೆ ಬರಲಾಗದೆಂದು ನಿರ್ಧರಿಸಿ ಅಪ್ಪಣೆ ಪಡೆದು ಹೊರಟು ಹೋದನು. ಇತ್ತ ಬಾದಶಹನು ರಜಪೂತರ ಪರಾಕ್ರಮವನ್ನೂ ಸ್ವಾಭಿಮಾನವನ್ನೂ ಯೋಚಿಸುತ್ತ ನಿದ್ದೆ ಬಾರದ್ದರಿಂದ ಹಾಸುಗೆಯ ಮೇಲೆ ಹೊರಳಾಡತೊಡಗಿದನು.

ರಾಜಾಮಾನಸಿಂಗನು ಮನೆಗೆ ಬಂದು ಪವಡಿಸಿದನು. ಆದರೆ ಬಾದಶಹನ ಮನಸ್ಸನ್ನು ಸಂತೋಷಪಡಿಸಲಿಕ್ಕೆ ತನಗೆ ಶಕ್ಯವಾಗದ್ದರಿಂದ ಮನಸ್ಸು ಅಸ್ವಸ್ಥವಾಯಿತು. ಎಷ್ಟು ಹೊತ್ತಿನ ವರೆಗೆ ಹೊರಳಾಡಿದರೂ ನಿದ್ದೆಬಾರದೆ ಹೋಯಿತು. ಮತ್ತೆ ಅವನ ಮನಸ್ಸಿನಲ್ಲಿ ಪಾಲೀರಾಜ್ಯವನ್ನು ಹ್ಯಾಗೆ ಕೈವಶಮಾಡಿಕೊಳ್ಳಬೇಕು ಮಾಳವಾದೇಶದಲ್ಲಿ ಬಾದಶಾಹೀ ಅಧಿಕಾರವನ್ನು ಹ್ಯಾಗೆ ನೆಲೆಗೊಳಿಸಬೇಕು ಎಂಬ ವಿಚಾರಗಳು ಉದಯಿಸಿದವು. ಮತ್ತು ಮುಸಲ್ಮಾನ ಸರದಾರನ ಕೈಕಡಿಯುವಂಥ ಧಿಟ್ಟ ರಜಪೂತ ತರುಣನು ದಿಲ್ಲಿಯಲ್ಲಿ ಯಾವನಿರಬಹುದು! ಎಂಬ ಯೋಚನೆಯೂ ಅವನಲ್ಲುಂಟಾಯಿತು. ದಿಲ್ಲಿಯೊಳಗಿನ ರಜಪೂತರೆಂದರೆ ಬಾದಶಹನ ಹಸ್ತಕರಾಗಿದ್ದು, ಅವರಿಂದ ಇಂಥ ಅಮಾನುಷ ಕೆಲಸವಾಗದೆಂಬ ಸ್ವಾನುಭವವು ಅವನಿಗೆ ಚನ್ನಾಗಿದ್ದದರಿಂದ ಈ ಧಿಟ್ಟ ತರುಣನು ದಿಲ್ಲಿಯ ಹೊರಗಿನವನೇ ಇರಬೇಕೆಂಬ ತರ್ಕವು ಅವನಿಗೆ ಸಮಂಜಸವಾಗಿ ತೋರತೊಡಗಿತು.

ಆ ತರುಣನು ದಿಲ್ಲಿಯವನೇ ಇರಲಿ, ದಿಲ್ಲಿಯ ಹೊರಗಿನವನೇ ಇರಲಿ, ಅವನ ಶೋಧ ಹಚ್ಚಿ ಬಾದಶಹನಿಗೆ ಸಮಾಧಾನವನ್ನುಂಟು ಮಾಡಬೇಕೆಂದು ನಿರ್ಧರಿಸಿದನು. ಈ ಕೆಲಸವನ್ನು ಮೊದಲು ನೆರವೇರಿಸಿ ಇನ್ನುಳಿದ ಕೆಲಸಗಳನ್ನು ಮಾಡಬೇಕೆಂದು ಅವನು ನಿಶ್ಚಯಿಸಿದನು. ಅವನ ಈ ನಿಶ್ಚಯದಿಂದ ಮನಸ್ಸಿಗೆ ಸ್ವಲ್ಪ ಸಮಾಧಾನವಾಗಲು ಕಣ್ಣುಗಳು ಮುಚ್ಚಿದವು. ಆಗ ಅವನಿಗೆ ಸ್ವಲ್ಪ ಜಂಪುಹತ್ತಿತು.

† † † † † †

ಪ್ರಿಯವಾಚಕರೇ, ಹೀಗೆ ಮಾನಸಿಂಗನು ಖುಷರೋಜ ಉರುಸಿನಲ್ಲಿ ಧೈರ್ಯವನ್ನು ತೋರಿಸಿದ ರಜಪೂತ ತರುಣನನ್ನು ಶೋಧಿಸಲು ನಿಶ್ಚಯಿಸುತ್ತಿರಲು ಇತ್ತ ಆ ತರುಣನು ಏನು ನಡಿಸಿರುವನೆಂಬದನ್ನು ನೋಡುವಾ.

ಸಮಾಧಿಯ ಬಳಿಯಿಂದ ಹೊರಟ ನಂದಕುಮಾರನ ಮನಸ್ಸಿನಲ್ಲಿ ಹಲವು ಬಗೆಯ ವಿಚಾರಗಳು ಬರತೊಡಗಿದವು. ಆ ರಜಪೂತ ತರುಣೆಯ ದೇಶವಾತ್ಸಲ್ಯದಿಂದ ಆತನಿಗೆ ನಾಚಿಕೆಯುಂಟಾಗಿತ್ತು. ತಾನು ಇನ್ನು ಮುಂದೆ ಸುಮ್ಮನೆ ಕಾಲಕ್ರಮಿಸದೆ ಸ್ವಾತಂತ್ರ್ಯ ಸಂಪಾದಿಸುವ ಮಾರ್ಗಕ್ಕೆ ಹತ್ತಬೇಕೆಂಬ ವಿಚಾರಗಳು ಬರತೊಡಗಿದವು. ಆದರೆ ಅನನುಭವಿಕನಾದ ಆ ತರುಣನಿಗೆ ಸ್ವಾತಂತ್ರ್ಯದ ಮಾರ್ಗವು ಹ್ಯಾಗೆ ಸಿಗಬೇಕು? ತನ್ನಂಥ ಪೋರನು ಮೊಗಲ ಸಾಮ್ರಾಟನಾದ ಅಕಬರನಂಥ ಬಲಾಢ್ಯನಿಗೆ ಈಡಾಗಬಹುದೆ? ಹ್ಯಾಗೆ ಆಚರಿಸಿದರೆ ಮುರಿದು ಹೋದ ನಮ್ಮ ಅರಸೊತ್ತಿಗೆಯು ಪ್ರಸ್ಥಾಪಿತವಾಗಬಹುದು? ಎಂಬದಾಗಿ ಅವನು ದೀರ್ಘಯೋಚನೆಯನ್ನು ನಡಿಸಿದ್ದನು. ಅವನು ಕುದುರೆಯ ಮೇಲೆ ಕುಳಿತುಕೊಂಡಿದ್ದನು ಮಾತ್ರ; ಅವನ ಲಕ್ಷವು ಕುದುರೆಯ ಕಡೆಗೂ ಮಾರ್ಗದ ಕಡೆಗೂ ಸ್ವಲ್ಪ ಮಾತ್ರಕ್ಕೂ ಇದ್ದಿಲ್ಲ. ಕುದುರೆಯು ತನ್ನಷ್ಟಕ್ಕೆ ತಾನೇ ಸ್ವಯಂಪ್ರೇರಿತವಾಗಿ ದಿಲ್ಲಿಯ ಕಡೆಗೆ ಭರದಿಂದ ಸಾಗಿತ್ತು.

ಹೀಗೆ ಕುದುರೆಯು ಭರದಿಂದ ಸಾಗಿರಲು ಅದು ಒಂದು ಗುಡ್ಡದ ಕಡಿವಾಡಿಗೆ ಹೋಯಿತು. ಅಲ್ಲಿ ಅದು ಸಾವಕಾಶವಾಗಿ ಇಳಿದು ಸಮನೆಲವನ್ನು ಹಿಡಿದು ಸಾಗತೊಡಗಿತು. ಆ ಚತುರ ಪ್ರಾಣಿಯು ಕೇವಲ ದಿಕ್ಕನ್ನು ಸಾಧಿಸಿ ದಿಲ್ಲಿಯ ಕಡೆಗೆ ಓಡುತ್ತಿತ್ತಲ್ಲದೆ ಅದಕ್ಕೆ ದಾರಿಯ ಸಹಾಯ

ವಿದ್ದಿಲ್ಲ. ಹೀಗೆ ಅಡ್ಡದಾರೀ ಹಿಡಿದು ಹೋಗುವಾಗ ಆ ಕುದುರೆಗೆ ಬಹಳ ತೊಂದರೆಯಾಯಿತು. ಅದು ಮುಂಜಾವಿನಿಂದ ದಾರೀ ನಡೆದು ದಣಿದು ಹೋಗಿದ್ದರೂ ತನ್ನ ಒಡೆಯನ ಸಂತೋಷಾರ್ಥವಾಗಿ ತನ್ನ ಶ್ರಮವನ್ನು ಸಹಿಸಿಕೊಂಡು, ದಾರಿಯನ್ನು ಕ್ರಮಿಸುತ್ತಿತ್ತು. ನಂದಕುಮಾರನು ಮೇಲೆ ಹೇಳಿದಂತೆ ವಿಚಾರ ಮಗ್ನನಾದ್ದರಿಂದ ಅವನಿಗೆ ಕುದುರೆಯ ದಣುವಿನ ಪರಿವೆ ಇದ್ದಿಲ್ಲ. ಇಷ್ಟೇ ಅಲ್ಲ; ಅವನು ತನ್ನ ದೇಹದ ಪರಿವೆಯನ್ನೂ ಕೂಡಾ ಬಿಟ್ಟು ಬಿಟ್ಟಿದ್ದನು. ಆ ಕಾಲಕ್ಕೆ ಅವನಿಗೆ ದೇಹಭಾನವೇ ಇದ್ದಿಲ್ಲವೆಂದರೂ ಸಲ್ಲುವದು. ಸ್ವಾತಂತ್ರ್ಯವನ್ನು ಸಂಪಾದಿಸುವ ಮಾರ್ಗ ಶೋಧನೆಯಲ್ಲಿ ಅವನ ಮನಸ್ಸು ಸಂಪೂರ್ಣವಾಗಿ ಮಗ್ನವಾಗಿ ಹೋಗಿತ್ತು. ಸ್ವಾತಂತ್ರ್ಯಮಾರ್ಗ ಶೋಧಿಸುವ ಭರದಲ್ಲಿ ಅವನು ದಿಲ್ಲಿಗೆ ಹೋಗುವ ಮಾರ್ಗವನ್ನೇ ಮರೆತು ಬಿಟ್ಟಿದ್ದನು.

ಈ ಪ್ರಕಾರ ನಂದಕುಮಾರನು ದೇಹಭಾನ ಮರೆತು ಕುದುರೆಯ ಮೇಲೆ ಕುಳಿತು ಸಾಗಿರಲು, ಅವನ ಕುದುರೆಯು ಒಂದು ಅರಣ್ಯವನ್ನು ಹೊಕ್ಕಿತು. ಅಲ್ಲಿ ಗಿಡಗಳ ಹರಿಗಳು ಅತನ ತಲೆಗೆ ತಾಕಲಾರಂಭಿಸಿದವು. ಆದರೂ ನಂದಕುಮಾರನು ದಾರಿಯ ಕಡೆಗೆ ದೃಷ್ಟಿಯನ್ನು ಚಲ್ಲಲಿಲ್ಲ. ಅವನ ದೃಷ್ಟಿಯು ಅಂತರ್ಮುಖವಾಗಿತ್ತು. ಅಷ್ಟರಲ್ಲಿ ಕುದುರೆಯು ಒಮ್ಮೆಲೆ ಗಕ್ಕನೆ ನಿಂತುಕೊಂಡಿತು. ಆಗ ಮಾತ್ರ ಆ ತರುಣನು ಅಂತರಂಗದಲ್ಲಿ ನಡೆದ ಕಲ್ಪನಾ ತರಂಗಗಳನ್ನು ನಿಲ್ಲಿಸಿ ಹೊರಗೆ ದೃಷ್ಟಿಯನ್ನು ಚಲ್ಲಿದನು. ಎದುರಿಗೆ ಭವ್ಯಾಕಾರದ ಒಬ್ಬ ಸಾಧುಪುರುಷನು ನಿಂತುಕೊಂಡಿದ್ದನು. ಅವನು ವೈರಾಗಿಯಂತೆ ತೋರುತ್ತಿದ್ದನು. ಅವನ ಗಡ್ಡ ಮೀಸೆಗಳು ಬಿಳ್ಳಗಾಗಿದ್ದವು, ಒಂದು ಕೌಪೀನದ ಹೊರತು ಅವನ ಮೈಮೇಲೆ ಬೇರೆ ವಸ್ತ್ರಗಳಿದ್ದಿಲ್ಲ. ಕಾಲಲ್ಲಿ ಆವುಗೆಗಳಿದ್ದವು. ಸರ್ವಾಂಗದಲ್ಲಿ ವಿಭೂತಿಯು ಒಪ್ಪುತ್ತಿತ್ತು. ಈ ಮೇರೆಗೆ ಒಪ್ಪುವ ಸಾಧುಪುರುಷನನ್ನು ನೋಡಿ ನಂದಕುಮಾರನಲ್ಲಿ ಭಕ್ತಿಯುತ್ಪನ್ನವಾಯಿತು. ಕೂಡಲೆ ಅವನು ಕುದುರೆಯಿಂದಿಳಿದು ಆ ಸಾಧುವಿಗೆ ಪ್ರೇಮದಿಂದ ನಮಸ್ಕಾರ ಮಾಡಿದನು. ಆ ಸಾಧುವಾದರೂ ಆತನಿಗೆ ಸಂಭ್ರಮದಿಂದ ಆಶೀರ್ವದಿಸಿದನು. ಬಳಿಕ ನಂದಕುಮಾರನು—ಸ್ವಾಮಿನ್, ನನ್ನ ಕುದುರೆಯನ್ನು ಯಾಕೆ ನಿಲ್ಲಿಸೋಣವಾಯಿತು? ಎಂದು ಪ್ರಶ್ನೆಮಾಡಿದನು. ಅದಕ್ಕೆ ಆ ಸಾಧುವು—ತಮ್ಮಾ,

ನಿನ್ನ ಕುದುರೆಯು ಇನ್ನು ಸ್ವಲ್ಪ ಮುಂದಕ್ಕೆ ಹೋಗಿದ್ದರೆ ನೀನು ವ್ಯರ್ಥ ವಾಗಿ ಪ್ರಾಣಕ್ಕೆ ಎರವಾಗುತ್ತಿದ್ದೆ. ಈ ಮರದ ಕೊಂಬೆಯೇ ನಿನಗೆ ಕಾಲಸ್ವರೂಪವಾಗುತ್ತಿತ್ತು. ಅಂತೇ ನಾನು ನಿನ್ನ ಕುದುರೆಯನ್ನು ತಡೆದು ನಿನ್ನ ಪ್ರಾಣರಕ್ಷಣೆ ಮಾಡಿದೆನು. ನೀನು ಮಾರ್ಗದ ಕಡೆಗೆ ಲಕ್ಷ್ಯ ಗೊಡದೆ ಯಾವದೋ ಒಂದು ಗಹನ ವಿಚಾರದಲ್ಲಿ ಮಗ್ನನಾದಂತೆ ತೋರುತ್ತಿರುವೆ. ಅಂಥ ಯಾವ ಗಹನ ವಿಚಾರದಲ್ಲಿ ಮಗ್ನನಾಗಿರುವೆ? ಪ್ರಾಣಕ್ಕಿಂತಲೂ ಪ್ರಿಯವಾದ ಅದಾವ ವಿಚಾರವಿರುವದು? ಎಂದು ಕೇಳಿದನು.

ಸಾಧುವಿನ ಈ ಮಾತನ್ನು ಕೇಳಿ ನಂದಕುಮಾರನು ವಿನಯದಿಂದ— ಬೈರಾಗಿಗಳೇ, ಪ್ರಾಣಕ್ಕಿಂತ ಪ್ರಿಯವಾದ ವಸ್ತುವು ಇಲ್ಲವೇ ಇಲ್ಲೇನು? ಎಂದು ನುಡಿದು, ತಾನು ಯಾವ ಯೋಚನೆಯಲ್ಲಿ ಮಗ್ನನಾಗಿದ್ದೆನೆಂಬ ದನ್ನು ಸವಿಸ್ತಾರವಾಗಿ ಹೇಳಿದನು. ಆತನ ವಿಚಾರಗಳನ್ನು ಕೇಳಿ ಆ ಸಾಧುವಿಗೆ ತುಂಬಾ ಸಂತೋಷವಾಯಿತು. ಆತನು ಆನಂದಮುದ್ರೆ ಯಿಂದ—ಬೇಟಾ, ಶಾಬಾಸ್! ನಿನ್ನ ವಿಚಾರಗಳು ಉತ್ತಮವಾಗಿವೆ. ನೀನು ಆವನೋ ಒಬ್ಬ ಖಂಬೀರ ಪುರುಷನಿದ್ದಂತೆ ತೋರುವಿ. ಅಂತೇ ನಿನ್ನಲ್ಲಿ ಇಂಥ ಮಂಗಲ ವಿಚಾರಗಳು ಉದ್ಭವಿಸತೊಡಗಿರುವವು. ಪುಣ್ಯ ಶಾಲೀ ತರುಣನೇ, ನಿನ್ನ ಮೇಲೆ ಏಕಲಿಂಗಜಿಯ ಕೃಪೆಯಿರುವದು. ನಿನ್ನ ಮನೋಭೀಷ್ಟವು ಪೂರ್ತಿಯಾಗುವದು. ಚಿಂತೆ ಮಾಡಬೇಡ; ನಡೆ, ಕತ್ತ ಲಾಗುವದು. ಇಲ್ಲಿಯೇ ಸಮೀಪದಲ್ಲಿ ನನ್ನ ಆಶ್ರಮವಿದೆ. ಇಂದು ನೀನು ನಮ್ಮ ಆಶ್ರಮದಲ್ಲಿಯೇ ವಾಸಿಸಿ, ಮುಂಜಾವಿನಲ್ಲೆದ್ದು ಮಾರ್ಗ ಕ್ರಮಣ ಮಾಡುವಿಯಂತೆ. ಎಂದು ನುಡಿದನು. ತರುಣನು ಆಕಾಶದ ಕಡೆಗೆ ನೋಡಿದನು. ಸೂರ್ಯನು ಹೊಂಬಣ್ಣವನ್ನು ತಾಳಿ ಪಶ್ಚಿಮಾಬ್ಧಿ ಯಲ್ಲಿ ಧುಮುಕಲು ಸಮಯವನ್ನು ಕಾಯುತ್ತಿದ್ದನು. ದಿಲ್ಲಿಯು ಇಲ್ಲಿಂದ ಎಷ್ಟು ದೂರವಿದೆಯೆಂಬದು ಕೂಡಾ ಗೊತ್ತಿರದ್ದರಿಂದ ಆತನು ಸಾಧು ವಿನ ಆಮಂತ್ರಣಕ್ಕೆ ಒಪ್ಪಿಕೊಂಡು ಅವನೊಡನೆ ಆಶ್ರಮಕ್ಕೆ ಹೋದನು. ಆಶ್ರಮದ ಸ್ಥಳವನ್ನೂ, ಅಲ್ಲಿರುವ ಪವಿತ್ರತೆಯನ್ನೂ ತಿಳಿದು, ನಂದಕುಮಾ ರನ ಮನಸ್ಸಿಗೆ ತುಂಬಾ ಸಮಾಧಾನವಾಯಿತು. ಸಾಧುವು ಒಳ್ಳೇ ವಿರಕ್ತ ನಾಗಿದ್ದನು. ಅವನ ತಪಸ್ಸಾಮರ್ಥ್ಯವು ವಿಶೇಷವಾಗಿತ್ತು. ನಂದಕುಮಾರನು

ಶಾಂತಮನಸಿನಿಂದ ಆಶ್ರಮದಲ್ಲಿ ಕುಳಿತು ಸಾಧುವಿನ ದಿನಚರ್ಯವನ್ನು ನೋಡತೊಡಗಿದನು.

ಭಗವಂತನನ್ನೇ ಒಲಸಿಕೊಂಡ ಮಹಾತ್ಮರಿಗೆ ಲೌಕಿಕದ ಯಾವ ಆಡಂಬರಗಳೂ ಬೇಕಾಗಿರುವದಿಲ್ಲ. ಅವರು ಸರ್ವಭೂತಗಳಲ್ಲಿಯೂ ಭಗವಂತನೇ ವ್ಯಾಪಿಸಿರುವನೆಂದು ಸಮಪ್ರೇಮವನ್ನಿಡುವರು; ಆದ್ದರಿಂದ ಅವರಿಗೆ ಸರ್ವತ್ರದಲ್ಲೂ ನಿರ್ಭಯಸ್ಥಿತಿಯೇ ಕಂಡುಬರುತ್ತಿರುವದು. ಇರಲಿ; ನಂದಕುಮಾರನನ್ನು ಆಶ್ರಮದಲ್ಲಿ ಕುಳ್ಳಿರಿಸಿ ಆ ಸಾಧುವು ಸ್ನಾನಕ್ಕಾಗಿ ಒಂದು ಝುರಿಗೆ ಹೋದನು. ತಾಸೆರಡು ತಾಸುಗಳಾದರೂ ಆ ಸಾಧುವು ತಿರುಗಿ ಬಾರದ್ದರಿಂದ ನಂದಕುಮಾರನು ಸ್ವಲ್ಪ ಯೋಚನೆಗೊಳಗಾದನು. ಸಾಧುವು ತನಗೆ ಮೋಸಮಾಡಲಿಕ್ಕಿಲ್ಲವಷ್ಟೇ; ಎಂಬ ವಿಚಾರಗಳು ಅವನಲ್ಲುಂಟಾದವು. ಅವನು ಆ ವಿಚಾರಗಳನ್ನು ವಿವೇಕದಿಂದ ದೂರೀಕರಿಸಿ ಸುವಿಚಾರಗಳನ್ನು ತಳೆಯುತ್ತಿರಲು ಸಾಧುವು ಸ್ನಾನಮಾಡಿ ಅಲ್ಲಿಗೆ ಬಂದನು. ಬಳಿಕ ಆ ಸಾಧುವು ಸರ್ವಾಂಗಕ್ಕೂ ಭಸ್ಮವನ್ನು ಚರ್ಚಿಸಿ, ಕೆಲಹೊತ್ತು ಜಪಮಾಡುತ್ತ ಕುಳಿತು, ಬಳಿಕ ಭಜನೆ ಮಾಡಲಾರಂಭಿಸಿದನು. ಆತನ ಪ್ರೇಮಪೂರಿತ ಭಗವನ್ನಾಮಗಾನ ಕೇಳಿ, ನಂದಕುಮಾರನ ಹೃದಯವೂ ಭಕ್ತಿರಸಪೂರ್ಣವಾಯಿತು. ಬರಬರುತ್ತ ಆ ಭಕ್ತಿರಸದಲ್ಲಿಯೇ ಅವನ ಮನಸ್ಸು ಐಕ್ಯವಾಗತೊಡಗಿತು. ಆಗ ಅವನು ಮನಸ್ಸಿನಲ್ಲಿ—"ಅಹಾ! ಇಂದು ನನ್ನ ಜನ್ಮವು ಧನ್ಯವಾಯಿತು. ಈ ಸಾಧುಗಳ ದರ್ಶನವಾದದ್ದು ನನ್ನ ಸುದೈವವೇ ಸರಿ! ಭಗವಂತನ ಭಜನೆಯ ಮುಂದೆ ರಾಜ್ಯಾದಿ ಐಶ್ವರ್ಯಗಳು ತುಚ್ಛವೇ ಸರಿ! ಇನ್ನು ನಾನು ಈ ಮಹಾತ್ಮರ ಸನ್ನಿಧಿಯನ್ನು ಬಿಟ್ಟು ತೆರಳಲಾರೆನು" ಎಂದು ಯೋಚಿಸಿ ಭಜನೆ ಮುಗಿಯುವವರೆಗೆ ಸುಮ್ಮನೆ ಕುಳಿತನು. ಸುಮಾರು ಆರು ತಾಸು ರಾತ್ರಿಗೆ ಸಾಧುಗಳ ಭಜನೆ ಮುಗಿಯಿತು. ಬಳಿಕ ಅವರು ನಂದಕುಮಾರನನ್ನು ಮುಂದಕ್ಕೆ ಕರೆದು ತಮ್ಮಾ, ನೀನು ಬಹಳ ದಣಿದಿರುತ್ತೀ ಈ ಕಂದಮೂಲಗಳನ್ನು ಭಕ್ಷಿಸಿ ಸ್ವಸ್ಥ ಮಲಗಿಕೋ ಎಂದು ಆಜ್ಞಾಪಿಸಿದರು. ಆ ಅಮೃತತುಲ್ಯ ಕಂದಮೂಲಗಳನ್ನು ಸವಿದು ನಂದಕುಮಾರನು ಮೃಗಚರ್ಮದ ಮೇಲೆ ಪವಡಿಸಿದನು. ಸಾಧುಗಳು ಕೆಲಹೊತ್ತಿನ ವರೆಗೆ ಧ್ಯಾನಸ್ಥರಾಗಿ ಕುಳಿತು, ಬಳಿಕ ಧ್ಯಾನವಿಸರ್ಜಿಸಿ ಕಂದಮೂಲ ಭಕ್ಷಿಸಿ

ಕೃಷ್ಣಾಜಿನದ ಮೇಲೆ ವಿಶ್ರಮಿಸಿದರು.

ನಂದಕುಮಾರನು ಬೆಳಿಗ್ಗೆ ಏಳುವಷ್ಟರಲ್ಲಿ ಸಾಧುಗಳು ಸ್ನಾನಮಾಡಿ, ಜಪಾನುಷ್ಠಾನದಲ್ಲಿ ಮಗ್ನರಾಗಿದ್ದರು. ಆತನು ಎದ್ದು ಝರಿಗೆಹೋಗಿ ಸ್ನಾನಮಾಡಿ ಬಂದು ಕುದುರೆಯ ಯೋಗಕ್ಷೇಮವನ್ನು ತಕ್ಕೊಂಡು ಸಾಧುಗಳ ದಿನಚರ್ಯವನ್ನು ಶ್ಲಾಘಿಸುತ್ತ ಕುಳಿತುಕೊಂಡನು. ಮುಂದೆ ಕೆಲಹೊತ್ತಿನ ಮೇಲೆ ಸಾಧುಗಳು ಜಪವನ್ನು ಮುಗಿಸಿದರು. 'ಅವರು ನಂದ ಕುಮಾರನನ್ನು ಕರೆದು ತಮ್ಮಾ-ನಿನಗೆ ಇನ್ನು ಮುಂದೆ ಬಿಸಿಲಾಗುವದು, ಇಲ್ಲಿಂದ ದಿಲ್ಲಿಯು ಮೂವತ್ತು ಹರದಾರಿಯ ಮೇಲೆಯೇ ಆಗುವದು. ಈ ಕಂದ-ಮೂಲಗಳನ್ನು ಭಕ್ಷಿಸಿ ಬೇಗನೆ ಮಾರ್ಗ ಕ್ರಮಣ ಮಾಡು, ಎಂದು ಹೇಳಿದರು. ಆಗ ನಂದಕುಮಾರನು:—ಮಹಾತ್ಮರೇ, ನಾನು ಇನ್ನು ದಿಲ್ಲಿಗೆ ಹೋಗಲಾರೆನು. ನಿಮ್ಮ ಚರಣ ಸನ್ನಿಧಿಯಲ್ಲಿಯೇ ಇದ್ದು, ಭಗವತ್ಸೇವೆ ಯಿಂದ ಜನ್ಮಸಾರ್ಥಕ್ಯ ಮಾಡಿಕೊಳ್ಳುವೆನು'' ಎಂದು ನುಡಿದನು. ಆಗ ಸಾಧುಗಳು ನಕ್ಕು:—ತಮ್ಮಾ, ಅನನುಭವಿಕ ಸ್ಥಿತಿಯಲ್ಲಿ ಮನುಷ್ಯನ ಮನಸ್ಸು ಹೇಗೆಯೇ ಕಂಡದ್ದನ್ನು ಮಾಡಲಿಕ್ಕೆ ಹಾತೊರೆಯುವದು. ಅದ ರಂತೆ ನಿನ್ನ ಮನಸ್ಸೂ ಭಗವದ್ಭಕ್ತಿಯ ಕಡೆಗೆ ಹರಿಯಬಹುದು. ಇದು ಅಸ್ವಾಭಾವಿಕವಲ್ಲ. ನಿನಗೆ ಭಗವದ್ಭಕ್ತಿಯನ್ನು ಮಾಡಬೇಡವೆಂದು ನಾನು ಹೇಳುವದಿಲ್ಲ. ಅದನ್ನು ನೀನು ಅವಶ್ಯವಾಗಿ ಮಾಡಲೇಬೇಕು ಈಗ ನಿನ್ನಲ್ಲಿ ಭಗವದ್ಭಕ್ತಿಯಂಕುರಿಸಿದ್ದೇ ಶುಭಶಕುನವೆಂದು ತಿಳಿ, ನಿನ್ನಿಂದ ಇನ್ನು ಮುಂದೆ ಮಹತ್ಕಾರ್ಯಗಳು ಸಂಭವಿಸತಕ್ಕವಿರುವವು. ನಿನ್ನ ಮನಸಿನಲ್ಲಿ ಯಾವಬಗೆಯ ಸಂಕೋಚ ಭಾವವನ್ನೂ ತಾಳದೆ, ದಿಲ್ಲಿಗೆ ಹೋಗು ಹಾಗು ಸಂಧಿಯು ದೊರೆತಾಗ ಈ ಸ್ಥಳಕ್ಕೆ ಬಂದು ಹೋಗುತ್ತಿರು ಸದ್ಯಕ್ಕೆ ನಿನಗೆ ಇಷ್ಟೇ ಅಪ್ಪಣೆ ಮಾಡುವೆನು. ಹೂ! ಬೇಗನೆ ಏಳು ಈ ಕಂದ-ಮೂಲ ಗಳನ್ನು ತಕ್ಕೋ, ಅಶ್ವಾರೂಢನಾಗು, ಎಂದು ಅವಸರ ಪಡಿಸತೊಡಗಿದರು. ನಂದಕುಮಾರನು ಅವರ ಅಪ್ಪಣೆಯನ್ನು ಶಿರಸಾವಹಿಸಿ ಹೊರಡಲು ಸಿದ್ಧ ನಾಗಿ ಸಾಧುಗಳಿಗೆ ಪೊಡಮಟ್ಟು, ಅಶ್ವಾರೂಢನಾದನು ಸಾಧುವು ಪ್ರೇಮ ದಿಂದ ಆತನನ್ನು ನೋಡುತ್ತ ಹೋಗಲಪ್ಪಣೆ ಕೊಟ್ಟನು. ನಂದಕುಮಾ ರನು ಸಾಧುಗಳನ್ನು ಪುನಃ ಪುನಃ ಹೊರಳಿ ನೋಡುತ್ತ, ಸಾಧುಗಳು ನನ್ನಲ್ಲಿ ಉದ್ಭವಿಸಿದ ಭಗವದ್ಭಕ್ತಿಗೆ ಶುಭಶಕುನವೆಂದು ಅಂದರಲ್ಲ! ಅವರಿಗೆ ನನ್ನ

ಮನಸಿನಲ್ಲಿದ್ದ ಕಾರ್ಯಭಾಗವು ಗೊತ್ತಾಗಿರಬಹುದೇ? ಹಾಗಿದ್ದರೆ ಆ ಕಾರ್ಯಕ್ಕೆ ಈ ಭಗವದ್ಭಕ್ತಿಯೇ ಶುಭಶಕುನವೇ? ಎಂದು ಯೋಚಿಸುತ್ತ ಕುದುರೆಯನ್ನು ನೂಕಿದನು. ಅದು ಶೀಘ್ರಗತಿಯಿಂದ ದಿಲ್ಲಿಯ ಕಡೆಗೆ ಪ್ರಯಾಣ ಬೆಳಿಸಿತು.

೭—ಮಾನಸಿಂಗನ ಕಾರಸ್ಥಾನ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮಾನಸಿಂಗನು ಅಕಬರಬಾದಶಹನನ್ನು ಸಂತೋಷಿತನನ್ನಾಗಮಾಡಲಿಕ್ಕೆ ಯಾವ ವಿಚಾರಗಳನ್ನು ಮನಸ್ಸಿನಲ್ಲಿ ಗೊತ್ತು ಮಾಡಿಕೊಂಡನೋ, ಆ ವಿಚಾರಗಳಲ್ಲಿ ಖುಷರೋಜಉರುಸಿನಲ್ಲಿ ಮುಸಲ್ಮಾನ ಸರದಾರನ ಮೇಲೆ ಕೈಮಾಡಿದ ರಜಪೂತ ತರುಣನನ್ನು ಹುಡುಕುವ ವಿಚಾರವನ್ನೇ ಮೊದಲನೆಯ ಕೆಲಸವನ್ನಾಗಿ ಮಾಡಿದನು. ವಿಷಯಲಂಪಟರಾದವರಿಗೆ-ಭೋಗದ ಆಶೆಯುಳ್ಳವರಿಗೆ ತಮ್ಮ ಸುಖವು ಹ್ಯಾಗಾದರೆ ಹೆಚ್ಚುವದೆಂಬದರ ಕಡೆಗೇ ಲಕ್ಷವಿರುತ್ತದಲ್ಲದೆ, ಉಳಿದ ಸಂಗತಿಗಳ ಕಡೆಗೆ ಲಕ್ಷವಿರುವದಿಲ್ಲ; ಪ್ರಸ್ತುತದಲ್ಲಿ ಮಾನಸಿಂಗನ ಸ್ಥಿತಿಯಾದರೂ ಹೀಗಯೇ ಆಯಿತು. ಅಕಬರ ಬಾದಶಹನ ಮನಸ್ಸಿನ ದುಗುಡನ್ನು ಬಿಡಿಸಿದರೆ ತನ್ನ ಮಾನ-ಮರ್ಯಾದೆಗಳೂ-ವೈಭವವೂ ಇದಕ್ಕೂ ಹೆಚ್ಚಿಗೆ ಬೆಳೆಯುವವೆಂದು ಅವನು ಮನಸ್ಸಿನಲ್ಲಿಯೇ ಮಂಡಿಗೆಯನ್ನು ತಿನ್ನಲಾರಂಭಿಸಿದನು. ಈ ಮನಃಕಲ್ಪಿತ ಮಂಡಿಗೆಯ ಸವಿಯಲ್ಲಿ ರಜಪೂತರ ಸ್ವಾಭಿಮಾನದ ಸ್ಮರಣವು ಅವನಿಗೆ ಹ್ಯಾಗೆ ಆಗಬೇಕು? ರಜಪೂತ ತರುಣಿಯ ಸತೀತ್ವವನ್ನು ರಕ್ಷಿಸಿದ ರಜಪೂತ ತರುಣನೇ ಆತನಿಗೆ ಅಪರಾಧಿಯಾಗಿ ತೋರಿದನಲ್ಲದೆ, ಆ ರಜಪೂತ ತರುಣಿಯ ಮೇಲೆ ಅತ್ಯಾಚಾರನಡಿಸಿದ ಮುಸಲ್ಮಾನ ಸರದಾರನು ಅವನಿಗೆ ಅಪರಾಧಿಯಾಗಿ ತೋರಲಿಲ್ಲ. ವಿಪರೀತ ಕಾಲವೆಂದು ಇದಕ್ಕೇ ಅನ್ನಬೇಕಾಗುವದು. ಇರಲಿ.

ಮಾನಸಿಂಗನು. ಖುಷರೋಜಿನಲ್ಲಿ ಕೈಕಡಿಸಿಕೊಂಡ ಮುಸಲ್ಮಾನ ಸರದಾರನನ್ನು ಕರೆಯಿಸಿ ಅವನಿಂದ ಎಲ್ಲ ಸಂಗತಿಗಳನ್ನು ಕೇಳಿಕೊಂಡನು; ಮತ್ತು ಆ ರಜಪೂತ ತರುಣನು ಎಲ್ಲಿಯವನು? ಅವನ ಪರಿಚಯುವುಂಟೇ? ಅವನು ಹ್ಯಾಗಿರುವನು? ಇತ್ಯಾದಿ ಸಂಗತಿಗಳನ್ನು ಕೇಳಿದನು. ಆ ಮುಸ

ಲ್ಮಾನ ಸರದಾರನಿಗೆ ಆ ರಜಪೂತ ತರುಣನ ಪರಿಚಯುವಿದ್ದಿಲ್ಲ. ಇಷ್ಟೇ ಅಲ್ಲ; ಅವನನ್ನು ಎಂದೂ ನೋಡಿದ್ದಿಲ್ಲ ಸಹ. ಆದ್ದರಿಂದ ಆ ಸರದಾರನು ಆವನ ಪರಿಚಯುವನ್ನು ಹೇಳಲಿಕ್ಕೆ ಶಕ್ತನಾಗದೆ, ಅವನು ಹ್ಯಾಗಿದ್ದನೆಂಬ ದನ್ನು ಮಾತ್ರ ಹೇಳಿದನು. ಆತನು ಹೇಳಿದ ಲಕ್ಷಣಗಳ ಮೇಲಿಂದ ಈ ಬಗೆಯು ಮನುಷ್ಯನನ್ನು ಎಲ್ಲಿಯೋ ನೋಡಿದಂತೆ ಮಾನಸಿಂಗನಿಗೆ ಸ್ವಲ್ಪ ಸಲ್ಪ ಸ್ಮರಣಕ್ಕೆ ಬರಹತ್ತಿತು. ಮಾನಸಿಂಗನು ಬಹು ಕುಶಲನು. ಅವನ ಸ್ಮರಣ ಶಕ್ತಿಯಾದರೂ ವಿಶೇಷವಾಗಿತ್ತು. ಆದ್ದರಿಂದ ಅವನು ಒಮ್ಮೆ ದಿಲ್ಲಿಯಲ್ಲಿಯೇ ನಂದಕುಮಾರನನ್ನು ನೋಡಿದ್ದನು. ಇದು ಈ ಕಾಲಕ್ಕೆ ಅವನ ಸ್ಮರಣದಲ್ಲಿ ಬಂದಿತು; ಆದರೆ ನೋಡಿ ಬಹಳ ದಿವಸಗಳಾದ್ದರಿಂದ ಅವನು ದಿಲ್ಲಿಯ ನಿವಾಸಿಯೋ ಅಥವಾ ಬೇರೆ ಕಡೆಯುವನೋ ಎಂಬದು ಸ್ಪಷ್ಟವಾಗಿ ನೆನಪಿಗೆ ಬಾರದಾಯಿತು. ಅಗೆ ಅವನು ಆ ಮುಸಲ್ಮಾನ ಸರದಾರನನ್ನು ಮನೆಗೆ ಕಳುಹಿಸಿ ಮುಂದಿನ ಪ್ರಯತ್ನದಲ್ಲಿ ತೊಡಗಿದನು.

ಮಾನಸಿಂಗನ ಬಳಿಯಲ್ಲಿ ನಾಲ್ಕೆಂಟು ಜನ ಗುಪ್ತಹೇರರು ಯಾವ ದೊಂದು ಸಂಗತಿಯುನ್ನು ಗೊತ್ತುಹಚ್ಚುವದರಲ್ಲಿ ಒಳ್ಳೇ ನಿಷ್ಣಾತರಿದ್ದರು. ಅವರಿಗೆ ಕೆಲಸ ಕೊಡುವದೊಂದೇ ತಡ; ಅವರು ಅದರಲ್ಲಿ ಮನಸ್ಸುಹಾಕಿ ಅಲ್ಪಾವಕಾಶದಲ್ಲಿ ಅದನ್ನು ಸಾಧಿಸಿಬಿಡುತ್ತಿದ್ದರು. ಆದ್ದರಿಂದ ಮಾನ ಸಿಂಗನು ಆವರ ಮೇಲೆ ತುಂಬಾ ಮಮತೆ ಮಾಡುತ್ತಿದ್ದನು ಅವರಿಗೆ ಆಗಾಗ್ಗೆ ಪಾರಿತೋಷಕಗಳನ್ನು ಕೊಡುತ್ತ, ಅವರನ್ನು ಸಂತೋಷದಲ್ಲಿಡು ತ್ತಿದ್ದನು. ಈ ದಿನ ಮಾನಸಿಂಗನು ಗುಪ್ತಹೇರರಲ್ಲಿ ಮುಖ್ಯನಾದ ಗುಲಾಬಸಿಂಗನೆಂಬವನನ್ನು ಕರೆಯಿಸಿದನು. ಒಡೆಯನ ಅಪ್ಪಣೆಯಂತೆ ಗುಲಾಬಸಿಂಗನು ಬಂದು ಒಳ್ಳೇ ವಿನಯದಿಂದ ಕುರ್ನೀಸಮಾಡಿ ಕುಳಿತು ಕೊಂಡನು. ಆಗ,

ಮಾನಸಿಂಗ—ಗುಲಾಬಸಿಂಗ, ಇಂದು ನಿನಗೆ ಒಳ್ಳೇ ಕಠಿಣ ಕಾರ್ಯ ವನ್ನು ಒಪ್ಪಿಸುತ್ತೇನೆ. ಸಾಧಿಸಿಕೊಂಡು ಬರುವೆಯಾ?

ಗುಲಾಬಸಿಂಗ—ಸರಕಾರದ ಅನುಗ್ರಹವಿದ್ದರೆ ಸಾಧಿಸಿಕೊಂಡು ಬರುವೆನು.

ಮಾನಸಿಂಗ—ಕಾರ್ಯವು ಬಹು ಕಠಿಣವಾಗಿರುವದು.

ಗುಲಾಬಸಿಂಗ—ಸರಕಾರದ ಅನುಗ್ರಹದಿಂದ ಈ ಸೇವಕನಿಗೆ ಕಠಿಣ

ಕಾರ್ಯವು ಎಂತಹದೋ ಗೊತ್ತಿರುವದಿಲ್ಲ. ಎಲ್ಲ ಕಾರ್ಯಗಳೂ ಸುಲಭ ವಾಗಿಯೇ ಕಾಣುತ್ತವೆ.

ಮಾನಸಿಂಗ—ಇದರಲ್ಲಿ ನಿನ್ನ ನಿಜವಾದ ಜಾಣತನವು ತಿಳಿದು ಹೋಗುವದು.

ಗುಲಾಬಸಿಂಗ—ಸರಕಾರವು ಕಾರ್ಯವನ್ನು ಹೇಳದೆ ಬರಿಯ ಮಾತಿನಲ್ಲಿಯೇ ಕಾಲಕಳೆದರೆ ನಾನು ಏನೆಂದು ಉತ್ತರಕೊಡಲಿ?

ಮಾನಸಿಂಗೆ—ಕಾರ್ಯವನ್ನು ಹೇಳದಿದ್ದರೆ ಹ್ಯಾಗೆ? ಅದನ್ನು ಹೇಳ ಬೇಕೆಂತಲೇ ನಿನ್ನನ್ನು ಕರೆಯಿಸಿದ್ದು; ಆದರೆ ಆ ಕಾರ್ಯವನ್ನು ಹೇಳುವ ಮೊದಲು ನಿನ್ನಲ್ಲಿ ಆ ಕಠಿಣ ಕಾರ್ಯವನ್ನು ಸಾಧಿಸುವ ಶಕ್ತಿಯು ಎಷ್ಟರ ಮಟ್ಟಿಗೆ ಇದೆ ಎಂಬದನ್ನು ಪರೀಕ್ಷಿಸಿದೆನು.

ಗುಲಾಬಸಿಂಗೆ—ಖಾವಂದರವರಿಗೆ ಈಗೆ ನನ್ನ ಶಕ್ತಿಯು ಗೊತ್ತಾ ಯಿತೇನು?

ಮಾನಸಿಂಗೆ—ಈಗ ಹ್ಯಾಗೆ ಗೊತ್ತಾಗುವದು? ಪ್ರತ್ಯಕ್ಷ ಕೆಲಸ ಮಾಡಿ ತೋರಿಸಿದ ಬಳಿಕ ಗೊತ್ತಾಗುವದು?

ಗುಲಾಬಸಿಂಗೆ—ಹಾಗಾದರೆ ಮೊದಲು ಕೆಲಸವನ್ನೇ ಹೇಳ ಬೇಕಲ್ಲವೇ?

ಮಾನಸಿಂಗೆ—ಹೇಳುವೆನು ಕೇಳು. ಇಂಥ ಇಂಥ ಲಕ್ಷಣದ ಒಬ್ಬ ಮನುಷ್ಯನನ್ನು ಶೋಧಿಸುವದು ನಮಗೆ ಅವಶ್ಯವಾಗಿರುವದು. ಅವನು ದಿಲ್ಲಿಯ ನಿವಾಸಿಯೋ ಅಥವಾ ಬೇರೆ ಕಡೆಯವನೋ ಎಂಬದು ನಮಗೆ ಗೊತ್ತಿಲ್ಲ. ನಾನು ಅವನನ್ನು ಒಮ್ಮೆ ದಿಲ್ಲಿಯ ಒಂದು ಓಣಿಯಲ್ಲಿ ಮಾತ್ರ ನೋಡಿರುವವೆನು. ಅದೂ ಬಹಳ ದಿವಸಗಳ ಕೆಳಗೆ; ಈಗೆ ನೀನು ಆತನನ್ನು ಹುಡುಕಿ, ಅವನು ಯಾರು? ಅವನ ಹೆಸರೇನು? ಅವನು ಎಲ್ಲಿ ರುವನು? ಏನು ಮಾಡುವನು? ಎಂಬದನ್ನು ತಿಳಿದುಕೊಂಡು ಬರಬೇಕು ಅವನು ಜಾತಿಯಿಂದ ರಜಪೂತನಿರುತ್ತಾನೆ. ಇಷ್ಟರ ಹೊರತು ಹೆಚ್ಚಿನ ಸಂಗತಿಗಳನ್ನು ನೀನೇ ಶೋಧಿಸಿ ತಿಳಿಯತಕ್ಕದ್ದು. ಯಾಕ? ಈ ಕೆಲಸವು ನಿನ್ನಿಂದ ಆಗುವದ್ದೋ ಇಲ್ಲವೋ?

ಗುಲಾಬಸಿಂಗೆ—ಖಾವಂದರವರು ಇಂಥ ಪೇಚಿನ ಕೆಲಸವನ್ನೇ ಈ ಗುಲಾಮನ ಕೊರಳಿಗೆ ಕಟ್ಟುವರು. ಆಗಲಿ; ಖಾವಂದರವರು ಅಜ್ಞಾಪಿ

ಸಿದ ಕಾರ್ಯವನ್ನು ಮಾಡಲೇ ಬೇಕು. ನಾನು ಇದನ್ನು ಅವಶ್ಯವಾಗಿ ಮಾಡುವೆನು.

ಮಾನಸಿಂಗ:—ಗುಲಾಬಸಿಂಹ, ಈ ಕಾರ್ಯವನ್ನು ನೀನು ಎಷ್ಟು ದಿವಸಗಳಲ್ಲಿ ಪೂರೈಸುವಿ ಎಂಬದನ್ನು ಹೇಳಬಲ್ಲೆಯಾ?

ಗುಲಾಬಸಿಂಗ:—ಖಾವಂದರವರು ಈ ಗುಲಾಮನಿಗೆ ಅವಧಿಯ ನಿರ್ಬಂಧವನ್ನು ಮಾತ್ರ ಹಾಕಬಾರದು. ಯಾಕಂದರೆ ಯಾವ ಯಾವ ರಾಷ್ಟ್ರಗಳನ್ನು ಸುತ್ತಿ ಬರಬೇಕಾಗುತ್ತದೋ ಎಂಬದರ ನಿಯಮವಿಲ್ಲ. ಕಾರ್ಯವನ್ನೇನೋ ನಿಶ್ಚಯವಾಗಿ ಸಾಧಿಸಿಕೊಂಡು ಬರುವೆನು.

ಈ ಮೇರೆಗೆ ಅವರಿಬ್ಬರ ಸಂಭಾಷಣವಾದ ಬಳಿಕೆ, ಮಾನಸಿಂಗನು ಆತನಿಗೆ ವೀಳ್ಯವನ್ನೂ ಕಾರ್ಯಕ್ಕೆ ಉತ್ತೇಜನ ಬರುವಂತೆ ಪಾರಿತೋಷಕ ವನ್ನೂ ಕೊಟ್ಟು ಕಳುಹಿಸಿದನು. ಬಳಿಕ ಮನಸ್ಸಿನಲ್ಲಿ ಮತ್ತೆ ಯೋಚಿಸಿ, ಗುಲಾಬಸಿಂಹನೇನೋ ಬಹು ಚತುರನು. ಆತನು ವಚನ ಕೊಟ್ಟಂತೆ ಈ ಕೆಲಸವನ್ನು ನಿಶ್ಚಯವಾಗಿ ಸಾಧಿಸಿಕೊಂಡು ಬರಬಹುದು, ಆದರೆ ಇದಕ್ಕೆ ಇಂತಿಷ್ಟೇ ದಿವಸಗಳು ಹಿಡಿಯಬಹುದೆಂಬ ಭರವಸೆಯನ್ನು ಹ್ಯಾಗೆ ಹಿಡಿಯ ಬೇಕು? ನಾಲ್ಕಾರು ತಿಂಗಳು ಕ್ರಮಿಸಿದರೆ ಬಾದಶಹನಿಗೆ ನಾನು ಮೋರೆ ತೋರಿಸುವದೇ ಅಶಕ್ಯವಾಗುತ್ತದೆ. ಆದ್ದರಿಂದ ಗುಲಾಬಸಿಂಹನೊಬ್ಬ ನಿಗೇ ಈ ಕಾರ್ಯವನ್ನು ಒಪ್ಪಿಸಿ, ಸುಮ್ಮನೆ ಕುಳಿತುಕೊಳ್ಳುವದಕ್ಕಿಂತ ಇನ್ನಿಬ್ಬರು ಗುಪ್ತಹೇರರನ್ನು ಈ ಕೆಲಸಕ್ಕೆ ಯೋಜಿಸುವದು ಯುಕ್ತವಾಗಿ ಕಾಣುವದು, ಎಂದು ನಿರ್ಧರಿಸಿದನು. ಕಾರ್ಯದ ಆತುರವಿದ್ದವನಿಗೆ ಹೀಗೆ ಬುದ್ಧಿಯು ಅಸ್ಥಿರವಾಗುವದು, ಸ್ವಾಭಾವಿಕವಾಗಿರುವದು. ಆ ಕೂಡಲೇ ಮಾನಸಿಂಗನು ರೂಪಮಲ್ಲ, ಕಿರಾತಸಿಂಗರೆಂಬ ಇಬ್ಬರು ಗುಪ್ತಹೇರರನ್ನು ಕರೆಯಿಸಿದನು. ಅವರು ಬರಲು ಈ ಸಂಗತಿಯನ್ನು ಹೇಳಿದನು.

ರೂಪಮಲ್ಲ-ಕಿರಾತಸಿಂಗರಿಗೆ ಪ್ರಸಿದ್ಧಿಗೆ ಬರಬೇಕೆಂಬ ಹಂಬಲವು ವಿಶೇಷವಾಗಿದ್ದಿತು. ಗುಲಾಬಸಿಂಗನು ತಮಗಿಂತಲೂ ಚತುರನಿದ್ದದರಿಂದ ಆತನನ್ನು ಹಿಂದಕ್ಕೆ ಹಾಕಬೇಕೆಂದು ಅವರು ಹಗಲಿರುಳೂ ಶ್ರಮಬಡು ತ್ತಿದ್ದರು. ಈದಿನ ರಾಜಾ ಮಾನಸಿಂಗರವರು ಗುಲಾಬಸಿಂಗನಿಗೆ ಈ ಕಾರ್ಯವನ್ನು ಹೇಳದೆ ತಮಗೇ ಹೇಳಿದ್ದರಿಂದ ಈ ಕಾರ್ಯವನ್ನು ಮಾಡಿ ರಾಜಾ ಮಾನಸಿಂಗರವರ ಪ್ರೀತಿಗೆ ಪಾತ್ರರಾಗಬೇಕೆಂಬ ಲವಲವಿಕೆಯು ಅವ

ರಲ್ಲಿ ಹೆಚ್ಚಿತು; ಹಾಗು ಪ್ರತಿಸ್ಪರ್ಧಿಯನ್ನು ಹಿಂದೂಡಲಿಕ್ಕೆ ಇದೇ ಸಮಯವೆಂದು ಭಾವಿಸಿದರು. ಅಷ್ಟರಲ್ಲಿ ಮಾನಸಿಂಗನು ಗುಪ್ತಹೇರರೇ, ಈಗಲೇ ಈ ಕೆಲಸವನ್ನು ಗುಲಾಬಸಿಂಗನಿಗೆ ಹೇಳಿರುವೆನು. ಅವನು ಕಾರ್ಯ ಸಾಧಿಸಿಕೊಂಡು ಬರಲು ಒಪ್ಪಿಕೊಂಡಿದ್ದು, ಇಂತಿಷ್ಟೇ ದಿವಸಗಳಲ್ಲಿ ಸಾಧಿಸಿಕೊಂಡು ಬರುತ್ತೇನೆಂದು ಹೇಳಲಿಲ್ಲ. ಕೆಲಸವು ಅತಿತ್ವರೆಯಿಂದ ಆಗಬೇಕಾಗಿರುವದರಿಂದ ನಿಮ್ಮಿಬ್ಬರನ್ನು ಕರೆಯಿಸಿರುವೆನು. ಯಾಕೆ ಈ ಕೆಲಸವನ್ನು ಅಲ್ಪಾವಕಾಶದಲ್ಲಿ ಸಾಧಿಸುವ ಜಾಣ್ಮೆಯು ನಿಮ್ಮಲ್ಲುಂಟೋ, ಎಂದು ನುಡಿದನು

ಗುಲಾಬಸಿಂಗನಿಗೆ ಈ ಕೆಲಸವನ್ನು ಕೊಟ್ಟದ್ದು, ಅವನಿಂದ ಅಲ್ಪಾವಕಾಶದಲ್ಲಿ ಕಾರ್ಯವಾಗುವದು ಅಸಾಧ್ಯವೆಂದು ನಮಗೆ ಈ ಕೆಲಸವು ಹೇಳಲ್ಪಟ್ಟತೆಂಬ ಸಂಗತಿಯು ತಿಳಿದಕೂಡಲೆ ರೂಪಮಲ್ಲನೂ ಕಿರಾತಸಿಂಗನೂ ಮತ್ತಷ್ಟು ಅಹಂಭಾವಕ್ಕೆ ಒಳಗಾದರು. ಗುಲಾಬಸಿಂಗನ ಮೇಲಿನ ಮತ್ಸರಬುದ್ಧಿಯಿಂದ ಹಿಂದುಮುಂದಿನ ವಿಚಾರವಿಲ್ಲದೆ ಕಾರ್ಯವು ಎಷ್ಟು ಕಠಿಣವಿರುವದೆಂಬದನ್ನು ಸಹ ಲಕ್ಷಿಸದೆ ಎಂಟೇ ದಿನಗಳಲ್ಲಿ ಈ ಕಾರ್ಯವನ್ನು ಸಾಧಿಸಿಕೊಂಡು ಬರುತ್ತೇವೆಂದು ನುಡಿದುಬಿಟ್ಟರು ಇವರ ಈ ಸಾಹಸದ ಮಾತನ್ನು ಕೇಳಿ, ಮಾನಸಿಂಗನು ಮನಸ್ಸಿನಲ್ಲಿ ನಕ್ಕನು; ಆದರೆ ಕರ್ಮಧರ್ಮ ಸಂಯೋಗದಿಂದ ಎಂಟೇ ದಿನಗಳಲ್ಲಿ ಇವರಿಂದ ಕಾರ್ಯವು ಸಾಧಿಸಿದರೆ ಸಾಧಿಸಬಾರದೇಕೆಂದು ಭಾವಿಸಿ ಅವರಿಗೆ ಉತ್ತೇಜನಾರ್ಥವಾಗಿ ವೀಳ್ಯವನ್ನೂ ಪಾರಿತೋಷಕಗಳನ್ನೂ ಕೊಟ್ಟು ಅಪ್ಪಣೆಕೊಟ್ಟನು. ಅವರಿಬ್ಬರು ಗುಪ್ತಹೇರರು ಒಳ್ಳೇ ಆನಂದದಿಂದ ಹೊರಹೊರಟರು

ಹೀಗೆ ಮೂವರು ಗುಪ್ತಹೇರರನ್ನು ಒಂದೇ ಕೆಲಸಕ್ಕೆ ನಿಯಮಿಸಿ ಕೃತಕೃತ್ಯನಾದ ಬಳಿಕ ಮಾನಸಿಂಗನು ಮುಂದೆ ಏನು ಮಾಡಬೇಕೆಂದು ಯೋಚಿಸತೊಡಗಿದನು. ಮೂವರು ಗುಪ್ತಹೇರರನ್ನು ಕಳಿಸಿದರೂ ಅವನಿಗೆ ಮನಸ್ಸಿಗೆ ಸೊಗಸಿಲ್ಲದಾಯಿತು. ಆಗ ಅವನು ತಾನೇ ತುರುಗಾರೂಢನಾಗಿ ದಿಲ್ಲಿಯ ಬೀದಿ ಬೀದಿಗಳನ್ನು ಶೋಧಿಸಿ ನೋಡಬೇಕೆಂದು ಹೊರಟನು; ಆದರೆ ತಾನು ಇಂಥ ಕೆಲಸಕ್ಕಾಗಿಯೇ ಹೊರಟಿರುವೆನೆಂಬದು ಜನರಿಗೆ ತಿಳಿಯದಂತೆ ಸಂಗಡ ವಿಶ್ವಾಸಿಕ ಸ್ವಾರರನ್ನು ಕರೆದುಕೊಂಡನು;

ಆದರೆ ಸುಮ್ಮನೆ ಬೀದಿಯಲ್ಲಿ ನಡೆದು ಹೋದ ಮಾತ್ರದಿಂದ ಕಾರ್ಯವು ಸಾಧಿಸಬಹುದೆ? ನಂದಕುಮಾರನು ದಿಲ್ಲಿಯ ನಿವಾಸಿಯಾಗಿದ್ದರೂ ಅವನು ಯಾವಾಗಲೂ ಹೊರಹೊರಡುತ್ತಿದ್ದಿಲ್ಲ. ದಿಲ್ಲಿಯ ಬೀದಿಗಳಲ್ಲಂತೂ ಅವನು ಬಹುಶಃ ತಿರುಗಾಡುತ್ತಿರಲಿಲ್ಲ. ಯಾಕಂದರೆ ಎಲ್ಲಿಯಾದರೂ ಹಿಂದುಗಳ ಮೇಲೆ ಅಥವಾ ಗೋಮಾತೆಯ ಮೇಲೆ ಮುಸಲ್ಮಾನರ ಬಲುಮೆ ನಡೆದಿದ್ದರೆ ಅದು ಅವನಿಗೆ ಸಹನವಾಗುತ್ತಿರಲಿಲ್ಲ. ಇದಕ್ಕಾಗಿ ಅವನು ಚಿಕ್ಕವನಿದ್ದಾಗ ನಾಲ್ಕಾರು ಜನ ಮುಸಲ್ಮಾನರಿಗೆ ಕೈತೋರಿಸಿದ್ದನು. ಮಗನ ಈ ಉಪಟಳದಿಂದ ನಂದಕುಮಾರನ ತಂದೆಯು ಅಂಜಿಕೊಂಡು, ಮಗನಿಗೆ ದಿಲ್ಲಿಯ ಬೀದಿಯಲ್ಲಿ ತಿರುಗಾಡದಂತೆ ಕಟ್ಟಪ್ಪಣೆ ಮಾಡಿದ್ದನು. ನಂದಕುಮಾರನಾದರೂ ತಂದೆಯ ಆಜ್ಞೆ ಮೀರಿಹೋಗುತ್ತಿರಲಿಲ್ಲ. ಆತನಿಗೆ ತಿರುಗಾಡುವ ಇಚ್ಛೆಯಾದರೆ ಅರವಲೀ ಪರ್ವತದ ದಾರಿಯನ್ನು ಹಿಡಿದು ಅಶ್ವಾರೂಢನಾಗಿ ಹೋಗುತ್ತಿದ್ದನು. ಹೀಗೆ ನಂದಕುಮಾರನು ವರ್ತಿಸುತ್ತಿದ್ದದರಿಂದ ಮಾನಸಿಂಗನ ಪ್ರಯತ್ನಕ್ಕೆ ಯಶಸ್ಸು ಸಿಗುವದು ಅಶಕ್ಯವಾಯಿತು.

ಮಾನಸಿಂಗನು ಪರಿವಾರದೊಂದಿಗೆ ದಿಲ್ಲಿಯೊಳಗಿನ ಎಲ್ಲ ಬೀದಿಗಳನ್ನು ಅಲೆದು ಬಂದನು. ಯಾವ ಪ್ರಯೋಜನವೂ ಆಗಲಿಲ್ಲ. ಮನಸ್ಸಿನ ಉತ್ಕಂಠೆಯು ಹೆಚ್ಚಿದ್ದರಿಂದ ಮನಸ್ಸು ವ್ಯಗ್ರ ಮಾತ್ರ ಆಯಿತು. ಆಗ ಅವನು ನಿರುಪಾಯನಾಗಿ ತನ್ನ ಮನೆಗೆ ಬಂದು ದಿವಾಣಖಾನೆಯಲ್ಲಿ ಮೌನದಿಂದ ಕುಳಿತುಕೊಂಡನು. ಅವನ ಮನಸ್ಸೆಲ್ಲ ಆ ರಜಪೂತ ತರುಣನನ್ನು ಶೋಧಿಸುವ ವಿಷಯದಲ್ಲಿಯೇ ತಲ್ಲೀನವಾಗಿತ್ತು. ಆ ವಿಷಯವೊಂದರ ಹೊರತು ಅನ್ಯ ವಿಷಯವೇ ಅವನ ಮನಸ್ಸಿನಲ್ಲಿ ಬಾರದಾಗಿತ್ತು. ಹೀಗೆ ಅವನು ವಿಚಾರದಲ್ಲಿ ಮಗ್ನನಾಗಿರಲು, ಜಾಸೂದನು ಬಂದು ಕುರ್ನೀಸ ಮಾಡಿ—ಖಾವಿಂದ, ಹೊರಗೆ ಒಬ್ಬ ಹೇಜೀಬನು ಬಂದಿರುವನು. ಒಳಗೆ ಬರಲು ಸಮಯವನ್ನು ಕಾಯುತ್ತಿರುವನು, ಎಂದು ನುಡಿದನು. ಆಗ ಮಾನಸಿಂಗನು ಎಚ್ಚತ್ತು, ಹೇಜೀಬನನ್ನು ಒಳಗೆ ಬಿಡಲು ಅಪ್ಪಣೆಯನ್ನು ಕೊಟ್ಟನು ಮುಂದೆ ಸ್ವಲ್ಪ ಹೊತ್ತಿನಲ್ಲಿ ಒಬ್ಬ ಮನುಷ್ಯನು ಒಳಗೆ ಬಂದನು. ಅವನು ಒಳ್ಳೇ ಹುರಿಕಟ್ಟನವನಾಗಿದ್ದನು. ಅವನ ಮುಖಲಕ್ಷಣವು ಒಳ್ಳೇ ಉಗ್ರವಾಗಿತ್ತು. ಅವನು ಒಳಗೆ ಬಂದ

ಕೂಡಲೆ ಮಾನಸಿಂಗನಿಗೆ ಕುರ್ನಿಸ ಮಾಡಿ, ಸಂಗಡ ತಂದಿದ್ದ ಒಂಥು ಥೈಲಿಯನ್ನು ಅವನ ಮುಂದೆ ಇಟ್ಟು ದೂರದಲ್ಲಿ ಕುಳಿತುಕೊಂಡನು. ಆಗ ಮಾನಸಿಂಗನು ಆ ಥೈಲಿಯನ್ನು ಕೈಯಲ್ಲಿ ತಕ್ಕೊಂಡು ಮೇಲಿನ ಮುದ್ರೆಯನ್ನು ಒಡೆದು ಥೈಲಿಯನ್ನು ಸುರುವಿದನು. ಅದರೊಳಗೆ ಮುದ್ರೆಯಿಂದ ಭದ್ರವಾದ ಒಂದು ಲಕ್ಕೋಟೆಯಿತ್ತು. ಅದನ್ನು ಅವರು ತಕ್ಕೊಂಡು ಒಡೆದು ಒಳಗಿನ ಪತ್ರದ ಸುರಳಿಯನ್ನು ಬಿಚ್ಚಿ ಓದತೊಡಗಿದನು. ಮಾನಸಿಂಗನು ಪತ್ರವನ್ನು ಮನಸಿನಲ್ಲಿಯೇ ಓದಲಾರಂಭಿಸಿದನು. ಪತ್ರವನ್ನು ಓದಿದಂತೆ ಅವನಿಗೆ ಆನಂದವಾಗತೊಡಗಿತು. ಆ ಆನಂದದ ಮಿನುಗು ಮುಖದಲ್ಲಿ ತೋರತೊಡಗಿತು. ಇಷ್ಟೊತ್ತಿನ ವರೆಗೆ ಯಾವ ಚಿಂತೆಯು ಆವರಿಸಿತ್ತೋ ಆ ಚಿಂತೆಯು ಆ ಪತ್ರ ವಾಚನದಿಂದ ದೂರವಾದಂತೆ ಭಾಸವಾಯಿತು. ಆಗ ಅವನು ಪತ್ರವನ್ನು ಪೂರ್ಣವಾಗಿ ಓದಿ ಅಷ್ಟಕ್ಕೇ ತೃಪ್ತನಾಗದೆ ಮತ್ತೊಮ್ಮೆ ಪೂರ್ಣವಾಗಿ ಓದಿದನು. ಅದರಿಂದಲೂ ಅವನಿಗೆ ತೃಪ್ತಿಯುಂಟಾಗದಂತಾಯಿತು. ಆಗ ಅವನು ಹೇಜೀಬನಿಗೆ ವಿಶ್ರಾಂತಿಗೋಸ್ಕರ ಅಪ್ಪಣೆಕೊಟ್ಟು ಪತ್ರವನ್ನು ಮೂರನೇಸಾರೆ ಓದಿಕೊಂಡನು. ಓದಿ-ಓದಿದಂತೆ ಅವನಿಗೆ ಆನಂದವು ಹೆಚ್ಚು ಹೆಚ್ಚಾಗತೊಡಗಿತು. ಅವನು ಆ ಆನಂದದ ಭರದಲ್ಲಿ ಮೈಮರೆತನು. ಬಳಿಯಲ್ಲಿ ಯಾರಾದರೂ ಇರುವರೋ ಇಲ್ಲವೋ ಎಂಬದು ಕೂಡಾ ಅವನ ಸ್ಮರಣೆಯಲ್ಲಿಲ್ಲದಾಯಿತು. ಆಗ ಅವನು ಮೈಮರೆತು, 'ಭಲಾ, ಮಾನಸಿಂಗ ನಿನ್ನ ಕಾರಸ್ಥಾನವು ವಿಚಿತ್ರವಾಗಿರುವದು. ಬಾದಶಾಹೀ ನೌಕರರಲ್ಲಿ ನಿನ್ನನ್ನು ಸರಿಗಟ್ಟುವ ಸರದಾರರು ಇನ್ನಾರಿರುವರು! ನಿನ್ನ ಕಾರಸ್ಥಾನದಿಂದಲೇ ಬಾದಶಾಹಿಯು ಚಿರಸ್ಥಾಯಿಯಾದರೆ ಆಗಬೇಕು!!' ಎಂಬ ಉದ್ಗಾರಗಳನ್ನು ತೆಗೆದನು. ಪ್ರಿಯವಾಚಕರೇ, ಮಾನಸಿಂಗನು ಮೈಮರೆತು ಆತ್ಮ ಶ್ಲಾಘನೆಯ ಈ ಉದ್ಗಾರ ತೆಗೆಯುವಂಥ ಕಾರಸ್ಥಾನವು ಅದಾವದಿರಬೇಕು?

೮—ಬಂಧನ.

ಪ್ರಿಯ ವಾಚಕರೇ, ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮಾನಸಿಂಗನಿಗೆ ಹರುಷವಾಗುವಂಥ ಸಂಗತಿಯು ಆ ಪತ್ರದಲ್ಲೇನು ಇರ

ಬಹುದು? ಮಾನಸಿಂಗನು ಯಾವ ಕಾರಸ್ಥಾನವನ್ನು ನಡಿಸಿದ್ದನು? ಎಂಬ ಸಂಗತಿಗಳಾವವೂ ತಿಳಿಯದೆ ನೀವು ಯೋಚಿಸುತ್ತಿರಬಹುದಲ್ಲವೆ? ಆದ್ದರಿಂದ ಆ ಸಂಗತಿಗಳನ್ನೇ ಇಲ್ಲಿ ವಿವರಿಸುವೆವು.

ಮಾನಸಿಂಗನು ಅಕಬರ ಬಾದಶಹನ ಸೋದರಮಾವನಾಗಿದ್ದನಷ್ಟೇ; ಈ ಆಪ್ತವ್ಯದಿಂದಲೂ, ಸ್ವಪ್ರತಿಷ್ಠೆಯ ಆಶೆಯಿಂದಲೂ ಅವನು ಬಾದಶಾಹಿಯ ಪೂರ್ಣ ಹಿತಚಿಂತಕನಾಗಿದ್ದನು. ಹೀಗೆ ಬಾದಶಹನಿಗೆ ಹಿತವಾಗುವಂಥ ಹಾಗು ಸಂತೋಷವಾಗ್ಗುವಂಥ ಕಾರ್ಯವನ್ನು ಮಾಡಬೇಕಾದ್ದರಿಂದ ಆತನು ಸ್ವಜನರ ವಿರೋಧಕ್ಕೆ ಪಾತ್ರನಾಗಿದ್ದನು. ಒಬ್ಬರ ಹಿತ ಮಾಡಬೇಕೆಂದು ಟೊಂಕಕಟ್ಟಿದವನು ಮತ್ತೊಬ್ಬರನ್ನು ಕಾಲು ಬುಡಕ್ಕೆ ತುಳಿದುಬಿಡುವಂತೆ ಮಾನಸಿಂಗನು ಅಕಬರನ ಹಿತಕ್ಕಾಗಿ ರಜಪೂತರನ್ನು ರಸಾತಳಕ್ಕೆ ಮೆಟ್ಟಬೇಕೆಂದು ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಇದರಲ್ಲಿ ಸ್ವಜನದ್ರೋಹ-ಸ್ವದೇಶದ್ರೋಹಗಳು ಸಂಭವಿಸುತ್ತವೆಂಬದರ ಕಡೆಗೆ ಅವನು ಲಕ್ಷವನ್ನೇ ಕೊಟ್ಟದ್ದಿಲ್ಲ. ಅಥವಾ ಸ್ವಾರ್ಥ ಪಿಶಾಚಿಯ ಮಹಿಮೆಯಿಂದ ಆ ಸ್ವದೇಶ-ಸ್ವಜನದ್ರೋಹಗಳು ಅವನಿಗೆ ತುಚ್ಛವಾಗಿ ತೋರಿರಬಹುದು. ಇರಲಿ;

ಈ ಮೇರೆಗೆ ಬಾದಶಹನ ಹಿತಕ್ಕಾಗಿ ಯತ್ನಿಸುತ್ತಿರುವ ಮಾನಸಿಂಗನು ಮಾಳವಾದೇಶದ ರಾಜವಂಶವನ್ನು ಸಮೂಲವಾಗಿ ನಾಶಗೊಳಿಸಬೇಕೆಂದು ನಿಶ್ಚಯಿಸಿದ್ದನು. ಮಾಳವಾದೇಶವು ಈಗ ಅಕಬರನ ಸಾಮ್ರಾಜ್ಯಕ್ಕೆ ಒಳಗಾಗಿದ್ದರೂ ರಜಪೂತರು ಯಾವ ಹೊತ್ತಿಗೆ ತಿರುಗಿಬಿದ್ದು ಸ್ವತಂತ್ರರಾಗುವರೋ ಎಂಬದರ ನೇಮವಿದ್ದಿಲ್ಲ; ಆದ್ದರಿಂದ ಮಾನಸಿಂಗನಿಗೆ ಮಾಳವಾ ರಜಪೂತರ ವಿಷಯವಾಗಿ ತುಂಬಾ ಅಂಜಿಕೆಯಿದ್ದಿತು. ಮಾಳವಾದೇಶದ ರಾಜವಂಶವು ಸಮೂಲವಾಗಿ ನಷ್ಟವಾದಾಗಲೇ ಬಾದಶಾಹಿಯು ಸುರಕ್ಷಿತವಾಗುವದೆಂದು ಆತನು ತಿಳಿದಿದ್ದನು. ಅದಕ್ಕಾಗಿಯೇ ಅವನು ಮಾಳವಾರಾಜವಂಶಸ್ಥರು ಎಲ್ಲೆಲ್ಲಿ ಇರುವರೋ ಎಂಬದನ್ನು ಶೋಧಿಸಿ ಅವರೆಲ್ಲರನ್ನೂ ಸೆರೆಹಿಡಿದು ತರುವದಕ್ಕಾಗಿ ಒಬ್ಬ ಸರದಾರನನ್ನು ನಿಯಮಿಸಿದ್ದನು. ಆ ಸರದಾರನು ಮಾನಸಿಂಗನ ಕೇವಲ ಹಸ್ತಕನಾಗಿದ್ದನು. ಆತನು ಮಾಳವಾದೇಶದಲ್ಲಿ ಅನೇಕ ವೇಷಗಳಿಂದ ತಿರುಗಿ ಆ ದೇಶದ ರಾಜವಂಶವು ಎಲ್ಲೆಲ್ಲಿ ಪ್ರಚ್ಛನ್ನವಾಗಿದೆ ಎಂಬದನ್ನು

ಶೋಧಿಸುತ್ತಿದ್ದನು. ಹೀಗೆ ಅವನು ಶೋಧಿಸುತ್ತಿರುವಾಗ ಅರವಲೀ ಪರ್ವತದಲ್ಲಿ ಒಂದು ಗುಹೆಗೆ ಹೋದನು. ಆಗ ಅವನು ಓರ್ವ ಬೈರಾಗಿಯ ವೇಷವನ್ನು ಧರಿಸಿದ್ದನು. ಆ ಗುಹೆಯಲ್ಲಿ ನಾಲ್ಕಾರು ಜನ ರಜಪೂತ ಸರದಾರರು ಕುಟುಂಬ ಸಮೇತರಾಗಿ ವಾಸಮಾಡಿದ್ದರು. ಆ ರಜಪೂತರಿಗೆ ಗುಹೆಗೆ ಬಂದ ಅತಿಥಿಯನ್ನು ಕಂಡು ಸಂತೋಷವಾಯಿತು. ಇವನು ಶತ್ರುಪಕ್ಷದ ಗುಪ್ತಹೇರನಿರಬಹುದೆಂಬ ಕಲ್ಪನೆಯು ಅವರಿಗೆ ಬರಲಿಲ್ಲ. ಅವರು ಅವನ ಆತಿಥ್ಯವನ್ನು ಚನ್ನಾಗಿ ಮಾಡಿದರು ಅತಿಥಿಯು ಆ ದಿನ ಅಲ್ಲಿಯೇ ಉಳಿದನು.

ಅರವಲೀ ಪರ್ವತದ ಗುಹೆಗೆ ಅಂದೇ ಅಕಸ್ಮಾತ್ತಾಗಿ ವಾಚಕರ ಪೂರ್ವಪರಿಚಿತನಾದ ರಣಮಲ್ಲನು ಅಲ್ಲಿಗೆ ಬಂದನು. ಈ ರಣಮಲ್ಲನು ಖುಷರೋಜ ಉರುಸಿನಲ್ಲಿ ಮುಸಲ್ಮಾನ ಸರದಾರನ ಅತ್ಯಾಚಾರಕ್ಕೆ ಒಳಗಾದ ರೂಪಮತಿ ಎಂಬ ತರುಣಿಯ ತಂದೆಯೆಂಬದನ್ನು ನಮ್ಮ ವಾಚಕರು ಮರೆತಿರಲಿಕ್ಕಿಲ್ಲ. ರಣಮಲ್ಲನು ಬಂದದ್ದನ್ನು ನೋಡಿ ಗುಹೆಯಲ್ಲಿರುವ ರಜಪೂತರಿಗೆ ತುಂಬಾ ಆನಂದವಾಯಿತು ಊಟ-ಉಪಚಾರಾದಿಗಳು ನಡೆದ ಬಳಿಕ ರಾತ್ರಿಯಲ್ಲಿ ಸರ್ವರಿಗೂ ಗಾಢನಿದ್ರೆ ಹತ್ತಲು ರಣಮಲ್ಲನು ತನ್ನ ಗೆಳೆಯರಾದ ಆ ಗುಹೆಯಲ್ಲಿರುವ ರಜಪೂತರೊಡನೆ ಸುಖ-ದುಃಖಗಳ ವಿಷಯವಾಗಿ ಮಾತನಾಡತೊಡಗಿದನು. ಹೊಸದಾಗಿ ಅಥಿತಿಯಾಗಿ ಬಂದ ಬೈರಾಗಿಯು ದೂರದಲ್ಲಿ ಮಲಗಿದ್ದು, ಅವನಿಗೆ ಗಾಢನಿದ್ರೆ ಹತ್ತಿರಬಹುದೆಂದು ಎಲ್ಲರೂ ಭಾವಿಸಿದ್ದರು; ಆದರೆ ಅವರ ಭಾವನೆಯಂತೆ ಆ ಬೈರಾಗಿಗೆ ನಿದ್ದೆ ಹತ್ತಿರಲಿಲ್ಲ. ಅವನು ಸ್ವಾಭಾವಿಕ ಬೈರಾಗಿಯಾಗಿದ್ದರೆ ಯಾವದೂ ಚಿಂತೆಯಿಲ್ಲದೆ ನಿದ್ದೆಮಾಡಬಹುದಾಗಿತ್ತು. ಆದರೆ ಅವನು ವೇಷಧಾರೀ ಬೈರಾಗಿಯಾದ್ದರಿಂದ ನಿದ್ದೆಯನ್ನು ಯಾಕೆ ಮಾಡುವನು? ರಜಪೂತರ ಗುಪ್ತಸಂಗತಿಗಳನ್ನು ತಿಳಿಯುವದಕ್ಕಾಗಿಯೇ ಹೊರಟ ಅವನು ನಿದ್ದೆ ಮಾಡಿ ಪ್ರಸಂಗವನ್ನು ಕಳೆದುಕೊಳ್ಳುವನೇ? ಅವನು ಎಚ್ಚತ್ತಿದ್ದು, ಗುಹೆಯೊಳಗಿನ ರಜಪೂತರು ತಮ್ಮ ತಮ್ಮೊಳಗೆ ಏನಾದರೂ ಮಾತನಾಡುವರೋ ಎಂದು ನಿರೀಕ್ಷಿಸುತ್ತಿದ್ದನು. ಬಂದ ಅತಿಥಿಯು ನಿಜವಾದ ಬೈರಾಗಿಯೆಂದೇ ಆ ರಜಪೂತರು ನಂಬಿದ್ದರಿಂದ ಆ ಗುಪ್ತಹೇರನ ಬಯಕೆಯು ಈಡೇರಲು ಸಹಾಯವಾಯಿತು.

ಸ್ನೇಹಿತರ ಮುಂದೆ ಸುಖ-ದುಃಖಗಳನ್ನು ಹೇಳತೊಡಗಿದ್ದ ರಣಮಲ್ಲನು ತಾನು ದಿಲ್ಲಿಯಲ್ಲಿ ನೋಡಿದ ಖುಷರೋಜ ಉರುಸಿನ ವಿಷಯುವನ್ನ ತೆಗೆದನು. ಆ ವಿಷಯುವು ಹೊರಟ ಕೂಡಲೆ ರಣಮಲ್ಲನ ಮುಖವು ಆರಕ್ತವಾಯಿತು. ಕಣ್ಣುಗಳು ಕೆಂಗಿಡಿಗಳನ್ನು ಕಾರತೊಡಗಿದವು. ಅವನು ಅವಡುಗಚ್ಚುತ್ತ ಖುಷರೋಜ ಉರುಸಿನ ನಿಂದ್ಯಪ್ರಕಾರವನ್ನು ಹಳಿಯುತ್ತ ತನ್ನ ಮಗಳ ಮೇಲೆ ಬಂದ ಕಠಿಣಪ್ರಸಂಗವನ್ನು ಸಹ ಹೇಳಿದನು. ಆ ಸಂಗತಿಯುನ್ನು ಕೇಳಿ ಗುಹೆಯಲ್ಲಿದ್ದ ರಜಪೂತರಿಗೂ ಸಂತಾಪವಾಯಿತು. ಅವರು ಸಂತಾಪದ ಭರದಲ್ಲಿ ಬಾದಶಹನನ್ನು ಹಳಿಯ ತೊಡಗಿದರು. ಎಷ್ಟೋ ಹೊತ್ತಿನ ವರೆಗೆ ಹೀಗೆ ಅವರು ಮಾತಾಡುತ್ತ ಕುಳಿತ ಬಳಿಕ ರಣಮಲ್ಲನು ಮೆಲ್ಲಗೆ ಅವರ ಕಿವಿಯಲ್ಲಿ ಚಂದ್ರಪಾಲ ಹಾಗು ನಂದಕುಮಾರರ ವಿಷಯುವನ್ನು ಹೇಳಿದನು. ಮತ್ತು ಇವರು ನಮ್ಮ ರಾಜವಂಶೀಯರೆಂದು ನನಗೆ ಸಂಶಯ ಬರುತ್ತದೆ. ಚಂದ್ರಪಾಲನು ನಮ್ಮ ಮಹಾರಾಜರ ಅನುಜನಿದ್ದಂತೆ ನನಗೆ ಗುರ್ತು ಸಿಕ್ಕಿತು; ಆದರೆ ಆತನು ಪ್ರಚ್ಛನ್ನನಾಗಿದ್ದದರಿಂದ ವೇಷ ನಾಮಗಳನ್ನು ಬದಲಿಸಿಕೊಂಡಿರುವನು. ಅವನ ಮಗನಾದ ನಂದುಕುಮಾರನು ಒಳ್ಳೇ ತೇಜಸ್ವಿಯಾಗಿರುವನು. ಅವನೇ ನನ್ನ ಮಗಳ ಮರ್ಯಾದೆ ರಕ್ಷಣ ಮಾಡಿದನು. ಆತನನ್ನು ಕಂಡಕೂಡಲೆ ನನ್ನಲ್ಲಿ ಪ್ರೇಮವು ಹೆಚ್ಚಿತು; ಆದರೆ ಪ್ರತ್ಯಕ್ಷವಾಗಿ ಬಾಯಿಬಿಚ್ಚಿ ಕೇಳಲು ನನಗೆ ಧೈರ್ಯವಾಗದ್ದರಿಂದ ಹಾಗೇ ಬಂದಿರುತ್ತೇನೆ. ಸುದೈವದಿಂದ ನಂದಕುಮಾರನು ನಮ್ಮ ರಾಜವಂಶೀಯುನೇ ಆಗಿದ್ದರೆ ಬಹಳ ಒಳಿತಾಗುವದು. ಅವನನ್ನು ಮುಂದೆ ಮಾಡಿ, ಕಳೆದು ಹೋದ ನಮ್ಮ ಸಾಮ್ರಾಜ್ಯವನ್ನು ತಿರುಗಿ ಸ್ಥಾಪಿಸಿ ರಜಪೂತ ರಾಜದಂಡವನ್ನು ಮೆರೆಯಿಸಲಿಕ್ಕೆ ಸಾಧ್ಯವಾಗಬಹುದು ಎಂದು ಹೇಳಿದನು.

ರಣಮಲ್ಲನು ಹೇಳಿದ ಈ ಅಮೃತ ಸದೃಶವಾದ ಸುದ್ದಿಯಿಂದ ಆ ರಜಪೂತರಿಗೆ ತುಂಬಾ ಆನಂದವಾಯಿತು ದೇವರು ನಮ್ಮ ರಾಜವಂಶವನ್ನು ಇನ್ನೂ ಸಂರಕ್ಷಿಸಿರುವನು. ನಮ್ಮ ರಾಜನು ನಮಗೆ ಲಭಿಸಬಹುದೆ? ಎಂದು ಆನಂದೋದ್ಗಾರಗಳನ್ನು ತೆಗೆದರು ಈ ಸುದ್ದಿಯ ಶ್ರವಣದಿಂದ ರಜಪೂತರಿಗೆ ಹ್ಯಾಗೆ ಆನಂದವಾಯಿತೋ ಹಾಗೆಯೇ ಗುಹೆಯಲ್ಲಿ ಮಲಗಿದ ಬೈರಾಗಿಗೂ ಆನಂದವಾಯಿತು. ಆದರೆ ಅವರಿಬ್ಬರ ಆನಂದದ

ಪ್ರಕಾರಗಳು ಮಾತ್ರ ಬೇರೆ ಬೇರೆಯಾಗಿದ್ದವು ಅವರು ಚಂದ್ರಪಾಲನನ್ನೂ ನಂದಕುಮಾರನನ್ನೂ ಕಂಡು. ನಿಜ ಸಂಗತಿಯನ್ನು ತಿಳಿದು, ಕಳೆದುಹೋದ ಸಾಮ್ರಾಜ್ಯವನ್ನು ಪುನಃ ಸಂಪಾದಿಸಲಿಕ್ಕೆ ಯತ್ನ ಮಾಡೋಣ, ಎಂದು ನಿರ್ಧರಿಸಿದರು.

ಈ ಮೇರೆಗೆ ರಜಪೂತರು ಮಾತನಾಡಿ ಮಲಗಿಕೊಳ್ಳಲು, ಇತ್ತ ನಿದ್ದೆ ಹತ್ತಿದವನಂತೆ ನಟಿಸುತ್ತ ಬೈರಾಗಿಯು ಮನಸ್ಸಿನಲ್ಲಿಯೇ, ಇಂದು ನನ್ನ ಕೆಲಸವಾದಂತಾಯಿತು. ಈಗ ಮೂರು ತಿಂಗಳುಗಳಿಂದ ಪಟ್ಟ ಕಷ್ಟವು ಈ ಪೂರ್ತಿಗೆ ಸಫಲವಾದಂತಾಯಿತು. ಮಾಳವಾ ದೇಶದ ರಾಜವಂಶವು ಎಲ್ಲಿ ಅಡಗಿಕೊಂಡಿದೆ ಎಂಬದು ತಿಳಿದದ್ದರಿಂದ ನಮ್ಮ ಒಡೆಯನ ಬಯಕೆಯು ತಡವಿಲ್ಲದೆ ಕೈಗೂಡಲು ಮಾರ್ಗವಾದಂತಾಯಿತು, ಎಂದು ಹಿಗ್ಗುತ್ತ ಆ ದಿನ ಬೆಳಗಾಗುವ ವರೆಗೆ ಅಲ್ಲಿಯೇ ಕಾಲಕಳೆದು, ನಸುಕು ಹರಿದ ಕೂಡಲೆ ಒಳ್ಳೇ ವಿನಯದಿಂದ ರಪೂತರ ಅಪ್ಪಣೆ ಪಡೆದು ಅಲ್ಲಿಂದ ಹೊರಟು, ತನ್ನ ಠಾಣೇಕ್ಕೆ ನಡೆದನು. ಈ ಸುದ್ದಿಯನ್ನು ಯಾವಾಗ ಮಾನಸಿಂಗ ರಾಜರಿಗೆ ತಿಳಿಸೇನೋ ಎಂಬ ಆತುರತೆಯು ಅವನಲ್ಲುಂಟಾಗಿತ್ತು. ಅವನು ಠಾಣೇಕ್ಕೆ ತಲ್ಪಿದ ಕೂಡಲೇ ಈ ಸಂಗತಿಯನ್ನು ಬರೆದು, ಒಬ್ಬ ಹೇಜೀಬನ ಗೂಡ ಮಾನಸಿಂಗ ರಾಜನ ಬಳಿಗೆ ಕಳಿಸಿದನು. ಆ ಸರದಾರನು ಕಳಿಸಿದ ಪತ್ರವನ್ನೇ ಓದಿ ಈದಿನ ಮಾನಸಿಂಗನು ಇಷ್ಟೊಂದು ಹರುಷ ನಿರ್ಭರನಾಗಿದ್ದನು.

ಪ್ರಿಯವಾಚಕರೇ ಮಾನಸಿಂಗನ ಸಂತೋಷದ ಕಾರಣವು ಗೊತ್ತಾಯಿತಷ್ಟೇ; ಪ್ರಸ್ತುತ ಪತ್ರದಿಂದ ಅವನು ಅಪೇಕ್ಷಿಸಿದ ಎರಡು ಕಾರ್ಯಗಳು ಕೈಗೂಡಿದಂತಾದವು. ಖುಷರೋಜ ಉರುಸಿನಲ್ಲಿ ಮುಸಲ್ಮಾನ ಸರದಾರನ ಕೈಕಡಿದ ರಜಪೂತ ತರುಣನನ್ನು ಗೊತ್ತುಹಚ್ಚುವದು ಒಂದನೆಯದಾಗಿದ್ದು, ಮಾಳವ ರಾಜವಂಶವನ್ನು ನಾಶಗೊಳಿಸುವದು ಎರಡನೆಯದಾಗಿತ್ತು. ಇವೆರಡೂ ಕಾರ್ಯಗಳು ಒಂದೆಡೆಯಲ್ಲಿಯೇ ಸಾಧಿಸುವಂತೆ ಅವನಿಗೆ ತೋರಿಬಂದಿತು. ತನ್ನ ಸರದಾರನು ದಿಲ್ಲಿಯಲ್ಲಿಯೇ ಮಾಳವಾ ರಾಜವಂಶವು ಪ್ರಚ್ಛನ್ನವಾಗಿರುವದೆಂದು ಬರೆದದ್ದರಿಂದಲೂ, ಅವರು ತಂದೆ ಮಕ್ಕಳಿಬ್ಬರು ಇರುವರೆಂದು ಸೂಚಿಸಿದ್ದರಿಂದಲೂ ತನಗೆ ಬೇಕಾದ ರಜಪೂತ ತರುಣನು ಮಾಳವಾ ರಾಜವಂಶೀಯನೇ ಇರಬಹುದೆಂದು ಮಾನ

ಸಿಂಗನು ತರ್ಕಿಸಿದನು. ಯಾಕಂದರೆ ಸ್ವಾಭಿಮಾನವು ಮಾಳವಾ ರಾಜವಂಶೀಯರಲ್ಲಿರುವದು ಸ್ವಾಭಾವಿಕವಾಗಿತ್ತು. ತನ್ನ ಶತ್ರುವು ದಿಲ್ಲಿಯಲ್ಲಿಯೇ ಇರುವನೆಂದು ತಿಳಿದದ್ದರಿಂದ ಆತನಿಗೆ ಆನಂದವೂ, ಆಶ್ಚರ್ಯವೂ ಕೂಡಿಯೇ ಏಕಕಾಲಕ್ಕೆ ಸಂಭವಿಸಿದವು. ಮಾನಸಿಂಗನು ಪುನಃ ಪುನಃ ಪತ್ರವನ್ನು ಓದಿ ದಿಲ್ಲಿಯಲ್ಲಿ ಮಾಳವಾ ರಾಜವಂಶೀಯರು ಎಲ್ಲಿ ಇರಬಹುದೆಂದು ಎಣಿಕೆ ಹಾಕಲಾರಂಭಿಸಿದನು. ಆತನ ಗುಪ್ತಹೇರನಿಗೆ ರಣಮಲ್ಲನು ಹೇಳಿದ ಹೆಸರುಗಳು ಮಾತ್ರ ಕೇಳಿಸಿದ್ದಿಲ್ಲ. ರಾಜವಂಶೀಯರು ಕಲ್ಲುಕಟಿಯುವಂಥ ಹೀನ ವ್ಯವಸಾಯ ಮಾಡಿ, ಜೀವಿಸುತ್ತಿರುವರೆಂಬ ಸಂಗತಿಯನ್ನು ಮಾತ್ರ ಅಸ್ಪಷ್ಟವಾಗಿ ಕೇಳಿದ್ದನು. ಆತನು ಎಷ್ಟು ಸಂಗತಿಗಳನ್ನು ಕೇಳಿದ್ದನೋ ಅಷ್ಟೇ ಪತ್ರದಲ್ಲಿ ಬರೆದಿದ್ದನಲ್ಲದೆ ಹೆಚ್ಚಿಗೆ ಬರೆಯಲಿಕ್ಕೆ ಅವನಿಗೆ ಶಕ್ಯವಿದ್ದಿಲ್ಲ. ಕಲ್ಲು ಕಟಿಯುವ ಕೆಲಸವೆಂದರೆ ಯಾವದು ಎಂಬದು ಮಾನಸಿಂಗನಿಗೆ ತಿಳಿಯದಾಯಿತು. ಆಗ ಅವನು ದಿಲ್ಲಿಯೊಳಗಿನ ಎಲ್ಲ ಉಪ್ಪಾರರನ್ನು ಕರೆಯಿಸಿ, ಅವರನ್ನು ಕೇಳಿ ನೋಡಿದನು. ಅವರು ಜನ್ಮತಃ ಉಪ್ಪಾರರೇ ಆದದ್ದರಿಂದ ಅವರಿಗೆ ರಾಜ ತೇಜವು ಎಲ್ಲಿಂದ ಬರಬೇಕು? ಅವರನ್ನು ಕರೆಸುವದರಿಂದ ಮಾನಸಿಂಗನ ಅಪೇಕ್ಷೆಯು ಕೈಗೂಡದಾಯಿತು. ನಿಮ್ಮ ಹೊರತು ಇಲ್ಲಿ ಕಲ್ಲು ಕಟಿಯುವ ಕೆಲಸವನ್ನು ಯಾರು ಯಾರು ಮಾಡುವರೆಂದು ಅವರನ್ನು ಕೇಳಿದನು. ನಮ್ಮ ಜನರೆಂದರೆ ನಾವಿಷ್ಟೇ ಹೊರತು ಇದಕ್ಕೂ ಹೆಚ್ಚಿಗೆ ಈವೂರಿನಲ್ಲಿ ಯಾವ ಉಪ್ಪಾರರೂ ಇಲ್ಲವೆಂದು ಅವರು ಖಂಡಿತವಾಗಿ ಹೇಳಿದರು. ಇದರಿಂದ ಮಾನಸಿಂಗನಿಗೆ ಬಹಳ ಯೋಚನೆಯಾಯಿತು. ಆಗ ಅವನು ಉಪ್ಪಾರರನ್ನು ಮನೆಗೆ ಕಳುಹಿ ಗುಲಾಬಸಿಂಗನನ್ನು ಕರೆಯ ಕಳುಹಿದನು. ಆದರೆ ಅವನು ಕಾರ್ಯಾರ್ಥವಾಗಿ ಹೊರಟು ಹೋಗಿರುವನೆಂಬ ಸುದ್ದಿಯು ಬಂದಿತು. ಮಾನಸಿಂಗನು ಯೋಚಿಸಿ ನೋಡಿದನು. ಇದು ಗುಪ್ತಹೇರರ ಕೆಲಸವು; ನಮ್ಮ ಕೆಲಸವಲ್ಲ ನಾವು ಖಡ್ಗದ ವಸ್ತಾದಿಗಳು; ಗೊತ್ತಿಲ್ಲದ ಕೆಲಸದಲ್ಲಿ ಕೈಹಾಕುವದು ಅಪಹಾಸ್ಯಕರವು, ಎಂದು ಭಾವಿಸಿ ಒಬ್ಬ ಗುಪ್ತಹೇರನನ್ನು ಕರೆಯಿಸಿ ಅವನಿಗೆ ಹೇಳತಕ್ಕ ರಹಸ್ಯವನ್ನು ಹೇಳಿ, ಅವನನ್ನು ಕಳಿಸಿ ಕೊಟ್ಟನು. ಈ ಕೆಲಸಕ್ಕಾಗಿ ನಾಲ್ಕುಜನ ಗುಪ್ತಹೇರರನ್ನು ನಿಯಮಿಸಿದ್ದರಿಂದ ಕೆಲಸವು ನಿಶ್ಚಯವಾಗಿ ಸಾಧಿಸಬಹುದೆಂದು ಅವನು ಸ್ವಲ್ಪ ನಿಶ್ಚಿಂತನಾದನು.

ಈ ಸಂಗತಿಗೆ ನಾಲ್ಕೆಂಟು ದಿನಗಳು ಕ್ರಮಿಸಿದವು. ಯಾವ ಗುಪ್ತ ಹೇರರೂ ತಿರುಗಿ ಬರಲಿಲ್ಲ. ಮಾನಸಿಂಗನಿಗೆ ಮತ್ತೆ ಯೋಚನೆಯಾಯಿತು. ಎಂಟು ದಿನಗಳ ಅವಧಿಯನ್ನು ಹೊಂದಿದ ರೂಪಮಲ್ಲ-ಕಿರಾತಸಿಂಗರು ಎತ್ತ ಹೋದರೋ ತಿಳಿಯದಾಯಿತು. ಅವರ ಮೇಲೆ ಅವನಿಗೆ ಕಿಂಚಿತ್ ಕ್ರೋಧವೂ ಉಂಟಾಯಿತು; ಆದರೆ ಅವನು ವಿಚಾರದಿಂದ ಆ ಕ್ರೋಧವನ್ನು ಶಾಂತಪಡಿಸಿಕೊಂಡು ಮಾಳವಾದೇಶದಿಂದ ಬಂದ ಹೇಜೀಬನನ್ನು ಕರೆಯಿಸಿ ಅವನಿಗೆ ಹೇಳತಕ್ಕ ಸಂಗತಿಗಳನ್ನು ಹೇಳಿ ಅಲ್ಲಿದ್ದ ತನ್ನ ಸರದಾರನಿಗೆ ಪತ್ರವನ್ನು ಬರೆದು ಮುದ್ರೆ ಮಾಡಿ ಅವನ ವಶಕ್ಕೆ ಕೊಟ್ಟನು. ಬಳಿಕ ಹೇಜೀಬನು ಮಾನಸಿಂಗನ ಅಪ್ಪಣೆ ಪಡೆದು ಹೊರಟು ಹೋದನು.

ಇತ್ತ ಮಾನಸಿಂಗನಿಗೆ ಗುಪ್ತಹೇರರು ಯಾಕೆ ಬರಲಿಲ್ಲವೆಂಬ ಚಿಂತೆಯುತ್ಪನ್ನವಾಯಿತು. ಮತ್ತೆ ಒಂದೆರಡು ದಿನಗಳು ಕಳೆದವು, ಮಾನಸಿಂಗನು ಸುಳ್ಳು ಬಿದ್ದ ರೂಪಮಲ್ಲ-ಕಿರಾತಸಿಂಗರ ಮೇಲೆ ಅತ್ಯಂತ ಸಂತಪ್ತನಾದನು. ಇನ್ನು ಅವರು ತನ್ನ ಬಳಿಗೆ ಬಂದರೆ ಅವರನ್ನು ಆನೆಯ ಕಾಲಿಗೆ ಕಟ್ಟಿಸಿ ಕೊಲ್ಲಿಸಬೇಕೆಂದು ನಿರ್ಧರಿಸಿದನು. ಹೀಗೆ ಅವನು ತಪ್ತನಾಗಿ ಕುಳಿತಿರಲು, ಜಾಸೂದನು ಬಂದು ಹೊರಗೆ ಗುಲಾಬಸಿಂಗನು ಬಂದಿರುವನೆಂದು ವರದಿಯನ್ನು ಕೊಟ್ಟನು. ಗುಲಾಬಸಿಂಗನ ಹೆಸರನ್ನು ಕೇಳಿದ ಕೂಡಲೆ ಮಾನಸಿಂಗನ ಮುಖವು ಅರಳಿ ಇಷ್ಟಗಲವಾಯಿತು. ಅವನಲ್ಲುಂಟಾದ ಸಂತಾಪವು ಎತ್ತೋ ಮಾಯವಾಯಿತು. ಅದೇ ಕಾಲಕ್ಕೆ ಅವನ ಬಲಭುಜವು ಸ್ಫುರಣವಾಗತೊಡಗಿತು. ಈ ಶುಭಲಕ್ಷಣದಿಂದ ಗುಲಾಬಸಿಂಗನು ಕೃತಕಾರ್ಯನಾಗಿಯೇ ಬಂದಿರುವನೆಂದು ತರ್ಕಿಸಿದನು. ಬಳಿಕ ಅವನು ಗುಲಾಬಸಿಂಗನನ್ನು ಒಳಗೆ ಬಿಡಲು ಅಪ್ಪಣೆ ಕೊಟ್ಟು ಜಾಸೂದನನ್ನು ಕಳಿಸಿದನು. ಉತ್ತರಕ್ಷಣದಲ್ಲಿಯೇ ಗುಲಾಬಸಿಂಗನು ಒಳಗೆ ಬಂದು ಮಾನಸಿಂಗನಿಗೆ ಕುರ್ನಿಸ ಮಾಡಿ ನಿಂತುಕೊಂಡನು. ಆಗ ಅವನ ಮುಖಲಕ್ಷಣವು ಸ್ವೀಕೃತಕಾರ್ಯದಲ್ಲಿ ಯಶಸ್ಸನ್ನು ಸಂಪಾದಿಸಿ ಬಂದಿರುವೆನೆಂಬ ಭಾವವನ್ನು ಬೀರುತ್ತಿತ್ತು. ಮಾನಸಿಂಗನು ಮೊದಲು ಗುಲಾಬಸಿಂಗನ ಮುಖಲಕ್ಷಣವನ್ನು ನೋಡಿ ಮುಗುಳುನಗೆಯಿಂದ—

ಮಾನಸಿಂಗ—ಗುಲಾಬಸಿಂಗ, ಹೋದಕೆಲಸವೇನಾಯಿತು? ಬೇಗನೆ ಹೇಳು.

ಗುಲಾಬಸಿಂಗೆ—ಹೇಳುವದಕ್ಕಾಗಿಯೇ ಸನ್ನಿಧಿಗೆ ಬಂದಿರುವೆನು. ಸ್ವಲ್ಪ ಸಮಾಧಾನವನ್ನು ತಾಳಿದರೆ ಎಲ್ಲವನ್ನೂ ಹೇಳುವೆನು.

ಮಾನಸಿಂಗೆ—ಎಲ್ಲವನ್ನು ಹಿಂದುಗಡೆ ಹೇಳುವಿಯಂತೆ, ಈಗ ಮೊದಲು ಜಯವೋ ಅಪಜಯವೋ ಎಂಬದನ್ನು ಹೇಳು?

ಗುಲಾಬಸಿಂಗೆ—ಇದೊಳ್ಳೆಯ ಪ್ರಶ್ನೆಯು! ಎರಡನೆಯ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗಿದ್ದರೆ ಈ ಗುಲಾಮನು ಇಲ್ಲಿಗೇಕೆ ಬರುತ್ತಿದ್ದನು? ರೂಪಮಲ್ಲ-ಕಿರಾತಸಿಂಗರಂತೆ ಖಾವಂದರವರಿಗೆ ಮೋರೆ ತೋರಿಸದೆ ಎತ್ತೋ ಅಡಗಿಕೊಂಡು ಕೂಡ್ರುತ್ತಿದ್ದೆನು.

ಮಾನಸಿಂಗೆ:—ಗುಲಾಬ, ನೀನಾಡಿದ ಮಾತಿನ ಮರ್ಮವು ನನಗೆ ತಿಳಿಯಿತು. ಈಗ ನನ್ನ ಪರೀಕ್ಷೆಯನ್ನು ಹೆಚ್ಚು ಮಾಡಬೇಡ, ನಡೆದದ್ದನ್ನು ಬೇಗನೆ ಹೇಳು.

ಗುಲಾಬಸಿಂಗೆ:—ಖಾವಂದರವರೇ, ಹೋದ ಕೆಲಸವು ಜಯಶೀಲವಾಗಿರುವದು. ನಿಮಗೆ ಬೇಕಾದ ಆ ರಜಪೂತ ತರುಣನು ಈ ಊರಿನಲ್ಲಿಯೇ ದಕ್ಷಿಣದ ಕಡೇ ಓಣಿಯಲ್ಲಿ ಒಂದು ಮನೆಯಲ್ಲಿರುತ್ತಾನೆ. ಆತನಿಗೆ ಒಬ್ಬ ತಂದೆಯಿರುವನು. ಒಬ್ಬ ವೃದ್ಧ ಸೇವಕನಿರುವನು. ತಂದೆಯು ಶಿಲ್ಪಿಯ ಕೆಲಸವನ್ನು ಮಾಡಿ ಹೊಟ್ಟೆ ಸಾಗಿಸುವನು. ಆ ಮೂವರೂ ಜಾತಿಯಿಂದ ರಜಪೂತರು. ತಂದೆಯ ಹೆಸರು ಚಂದ್ರಪಾಲ, ಮಗನ ಹೆಸರು ನಂದಕುಮಾರ, ಸೇವಕನಿಗೆ ಬಲದೇವನೆಂದು ಕರೆಯುವರು. ಖಾವಂದರವರಿಗೆ ಇನ್ನೇನು ಬೇಕು?

ಮಾನಸಿಂಹ:—(ಸಂತೋಷದಿಂದ)ಗುಲಾಬಸಿಂಗೆ, ನೀನು ವಸ್ತಾದಿ ಇರುವಿ. ನಿನ್ನ ಚಾತುರ್ಯಕ್ಕೆ ಬೆಲೆಯಿಲ್ಲ. ನಮ್ಮ ಸೈನಿಕರನ್ನು ಕರೆದುಕೊಂಡು ಹೋಗಿ ಇಂದೇ ಆ ಮೂವರನ್ನೂ ಸೆರೆಹಿಡಿದುಕೊಂಡು ಬಾ, ನಿನಗೆ ಅಮೂಲ್ಯ ಪಾರಿತೋಷಕವನ್ನು ಕೊಡುತ್ತೇನೆ.

ಈ ಮೇರೆಗೆ ಮಾನಸಿಂಗನು ಆಜ್ಞೆ ಮಾಡಲು ಗುಲಾಬಸಿಂಗನು ತನಗೆ ಬೇಕಾದಷ್ಟು ಸೈನಿಕರನ್ನು ತಕ್ಕೊಂಡು ಹೋಗಿ ಒಮ್ಮೆಲೆ ಅವರ ಮನೆಯನ್ನು ಮುತ್ತಿ ಆ ಮೂವರನ್ನು ಸೆರೆಹಿಡಿದನು. ನಿರಪರಾಧಿಗಳಾದ ನಮ್ಮನ್ನೇಕೆ ಸೆರೆಹಿಡಿಯುವಿರೆಂದು ಬಲದೇವನೂ, ಚಂದ್ರಪಾಲನೂ ಬಹಳವಾಗಿ ಹೇಳಿಕೊಂಡರು; ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ ಆ ಮೂವರೂ ನಿರುಪಾಯರಾಗಿ ಮಾನಸಿಂಗನ ಬಂಧನದಲ್ಲಿ ಸಿಕ್ಕಿಕೊಂಡರು.

೯—ದೃಢನಿಶ್ಚಯ.

ಪ್ರಿಯವಾಚಕರೇ, ತಂದೆಯೊಡನೆ ಮಾನಸಿಂಗನ ಸೆರೆಸಿಕ್ಕ ನಂದಕುಮಾರನನ್ನು ಅಲ್ಲಿಯೇ ಬಿಟ್ಟು ನಾವು ಅರವಲೀ ಪರ್ವತಕ್ಕೆ ಹೋಗೋಣ ನಡೆಯಿರಿ!

ಯಾವ ಗುಹೆಯಲ್ಲಿ ಮಾನಸಿಂಗನ ಸರದಾರನಿಗೆ ಮಾಳವಾದೇಶದ ರಾಜವಂಶವು ಇಂಥಲ್ಲಿ ಪ್ರಚ್ಛನ್ನವಾಗಿರುವದೆಂದು ಸುದ್ದಿಯು ಹತ್ತಿತೋ ಆ ಗುಹೆಯಲ್ಲಿದ್ದ ರಜಪೂತರಿಗೆ ಮಾನಸಿಂಗನ ಈ ಕಾರಸ್ಥಾನವು ಸ್ವಲ್ಪ ಸಹ ಗೊತ್ತಾಗಲಿಲ್ಲ. ಅವರು ತಮ್ಮ ರಾಜವಂಶವು ದಿಲ್ಲಿಯಲ್ಲಿರುವದೆಂದು ಆನಂದಪಟ್ಟು ಈ ಸಂಗತಿಯನ್ನು ಹೇಳಿದ ರಣಮಲ್ಲನನ್ನು ಬಹಳವಾಗಿ ಕೊಂಡಾಡಿದರು. ಬಳಿಕ ಅವರು ರಣಮಲ್ಲನೊಡನೆ ಆಲೋಚಿಸಿ ಮುಂದೆ ಏನು ಮಾಡಬೇಕೆಂಬದನ್ನು ನಿಶ್ಚಯಿಸಿದರು. ರಜಪೂತರಲ್ಲಿ ಸ್ವಾಭಿಮಾನವು ಬಹಳ; ತಮ್ಮ ರಾಜವಂಶವನ್ನು ರಕ್ಷಿಸಬೇಕೆಂಬ ವಿಷಯದಲ್ಲಿ ಅವರು ತುಂಬಾ ಕುತೂಹಲವುಳ್ಳವರಾದರು. ಬಳಿಕ ಅವರು ಆ ಗುಹೆಯನ್ನು ತ್ಯಜಿಸಿ ರಣಮಲ್ಲನೊಡನೆ ಅರವಲೀ ಪರ್ವತದಲ್ಲೆಲ್ಲ ಅಡ್ಡಾಡಿ ಎಲ್ಲೆಲ್ಲಿ ತಮ್ಮ ಜನರು ಇರುವರೋ ಅವರಿಗೆಲ್ಲ ಈ ಸುದ್ದಿಯನ್ನು ಮುಟ್ಟಿಸಿ ರಾಜವಂಶದ ರಕ್ಷಣೆಗೆ ಟೊಂಕಕಟ್ಟಿರೆಂದು ಅವರೆಲ್ಲರನ್ನೂ ಹುರಿದುಂಬಿಸ ತೊಡಗಿದರು. ಈ ವಿಷಯದಲ್ಲಿ ರಜಪೂತರಿಗೆ ಒತ್ತಾಯ ಮಾಡುವ ಕಾರಣವಿದ್ದಿಲ್ಲ. ಯಾಕಂದರೆ ಸ್ವಾಭಾವಿಕವಾಗಿಯೇ ಅವರ ರಕ್ತದಲ್ಲಿ ವೀರಶ್ರೀಯು ತುಂಬಿಕೊಂಡಿತ್ತು. ನಾಗರಹಾವು ಹೆಡೆಯನ್ನು ತುಳಿದರೆ ಹ್ಯಾಗೆ ಖತಿಗೊಳ್ಳುವದೋ ಹಾಗೆ ಅವರು ಅಕಬರನು ಮಾಡಿದ ಅವಮಾನದಿಂದ ಖತಿಗೊಂಡಿದ್ದರು. ತಮ್ಮ ರಾಜವಂಶವು ಸಮೂಲವಾಗಿ ನಾಶವಾದದ್ದರಿಂದ ಇನ್ನಾರ ಸಲುವಾಗಿ ನಾವು ಕಾದಾಡಬೇಕೆಂದು ಉದಾಸೀನರಾಗಿ ಗಿರಿಗವ್ಹರಗಳಲ್ಲಿ ಸೇರಿ ಕಾಲಕಳೆಯುತ್ತಿದ್ದರು. ಆದರೂ ಅವರಿಗೆ ಎಳ್ಳಷ್ಟಾದರೂ ಸಮಾಧಾನವಿದ್ದಿಲ್ಲ. ಇಂಥ ಸ್ಥಿತಿಯಲ್ಲಿ ಅವರಿಗೆ ಮಾಳವಾ ರಾಜವಂಶವು ಇನ್ನೂ ಜೀವಿಸಿರುವದೆಂಬದು ತಿಳಿದ ಬಳಿಕ ಅವರ ಸ್ಥಿತಿಯು ಹ್ಯಾಗೆ ಆಗಿರಬಹುದೆಂಬದನ್ನು ಬರೆದು ತಿಳಿಸುವದು ಅಶಕ್ಯವು. ಅವರ

ಲ್ಲುಂಟಾದ ವೀರಾವೇಶವನ್ನು ಶಬ್ದಗಳಿಂದ ಚಿತ್ರಿಸುವದು ದುಸ್ತರವು. ಈಗಿನಂಥ ನಿರ್ವೀರ್ಯ ಕಾಲದಲ್ಲಿ ಆಗಿನ ಕಾಲದ ಅವರ ವೀರಶ್ರೀಯ ಕಲ್ಪನೆಯು ಕೂಡಾ ಯಥಾರ್ಥವಾಗಿ ಆಗುವದು ಅಶಕ್ಯವೇ ಸರಿ! ಇರಲಿ.

ಅರವಲೀ ಪರ್ವತದಲ್ಲಿರುವ ರಜಪೂತರೆಲ್ಲರೂ ಒಂದುಗೂಡಿದರು. ಅವರಲ್ಲಿ ಬಾಹು ಸ್ಫುರಣವಾಯಿತು. ಒಮ್ಮೆಲೆ ದಿಲ್ಲಿಯನ್ನು ಮುತ್ತಿ ತಮ್ಮ ರಾಜವಂಶವನ್ನು ತಮ್ಮ ವಶಕ್ಕೆ ತಕ್ಕೊಂಡು ಬರಬೇಕೆಂದು ನುಡಿಯ ತೊಡಗಿದರು; ಆದರೆ ಈ ಹುಂಬತನವು ರಣಮಲ್ಲ ಮೊದಲಾದ ಸರದಾರರ ಮನಸ್ಸಿಗೆ ಬರಲಿಲ್ಲ. ಅವರು ಎಲ್ಲ ರಜಪೂತರನ್ನು ಕುರಿತು:-ವೀರರೇ, ಯಾವ ಕೆಲಸ ಮಾಡಿದರೂ ವಿಚಾರ ಪೂರ್ವಕವಾಗಿ ಹಾಗು ಪದ್ಧತಿಯಂತೆ ಮತ್ತು ಜಯವು ಸಿಕ್ಕುವಂತೆ ಮಾಡಬೇಕಾಗುತ್ತದೆ. ದಿಲ್ಲಿಯೆಂದರೆ ಹಾಳುನಗರವಲ್ಲ. ಅಕಬರ ಬಾದಶಹನ ರಾಜಧಾನಿಯು, ನಾಮಾಂಕಿತ ಶೂರರು ಅಲ್ಲಿ ವಾಸಿಸಿರುವರು. ಅಪಾರವಾದ ಮೊಗಲ ಸೈನ್ಯವು ಪಟ್ಟಣವನ್ನು ರಕ್ಷಿಸುತ್ತಿರುವದು. ನಾವು ಹೀಗೆ ಹುಂಬತನದಿಂದ ಹೋದರೆ ದೀಪವನ್ನು ಬಡಿದ ಪತಂಗದಂತೆ ಮೃತಿಹೊಂದುವದೇ ಸರಿ! ಇದು ರಾಜಕಾರಣೀ ಪುರುಷರ ಕಾರ್ಯವಲ್ಲ. ನಮ್ಮ ಬಲವನ್ನು ತಿಳಿದು, ಶತ್ರುವು ಬಲಿಷ್ಠನಿದ್ದರೂ ಯುಕ್ತಿಯಿಂದ ನಮ್ಮ ಕಾರ್ಯವನ್ನು ನಾವು ನೆರವೇರಿಸಿಕೊಂಡರೆ ಮಾತ್ರ ನಾವು ಜೀವಿಸಿದ್ದು, ಸಫಲವಾಗುವದು. ಕಾರ್ಯಹಾನಿ ಮಾಡಿಕೊಂಡು ವ್ಯರ್ಥವಾಗಿ ಜೀವ ಕೊಟ್ಟರೆ ನಮ್ಮ ರಾಷ್ಟ್ರವನ್ನೇ ಮುಳುಗಿಸಿದ ದ್ರೋಹಕ್ಕೆ ಪಾತ್ರರಾಗುವೆವು; ಆದ್ದರಿಂದ ನೀವು ಯುದ್ಧದ ಸಿದ್ಧತೆಯಲ್ಲಿ ಇರಬೇಕು. ನಾವು ಎಲ್ಲ ಪರಿಸ್ಥಿತಿಯನ್ನು ವಿಚಾರಿಸಿ ನಿಮಗೆ ಸೂಚನೆ ಕೊಟ್ಟಕೂಡಲೇ ಯುದ್ಧಕ್ಕೆ ಹೊರಡಬೇಕು, ಎಂದು ಹೇಳಿದರು. ಈ ಯುಕ್ತಿಯು ಸಮರ್ಪಕವಾಗಿ ಕಂಡು ಬಂದದ್ದರಿಂದ ರಜಪೂತರೆಲ್ಲರೂ ಅದರಂತೆಯೇ ನಡೆದುಕೊಳ್ಳುವಂತೆ ವಚನಕೊಟ್ಟರು. ಬಳಿಕ ರಣಮಲ್ಲ, ರಣಜಿತಸಿಂಗ, ಅಂಬಾದಾಸರೆಂಬ ಮೂವರು ತಮ್ಮ ಗುಂಪಿಗೆ ಹಿರಿಯನೂ, ಅನುಭವಿಕನೂ, ಮಾಳವಾ ಸಿಂಹಾಸನದ ಏಕನಿಷ್ಠ ಭಕ್ತನೂ ಆದ ಕೀರ್ತಿಸಿಂಹನೆಂಬ ಸರದಾರನ ಕಡೆಗೆ ನಡೆದರು.

ಕೀರ್ತಿಸಿಂಹನು ಯಾರೆಂಬದು ನಮ್ಮ ವಾಚಕರ ಸ್ಮರಣೆಯಲ್ಲಿರಬಹುದು. ನಂದಕುಮಾರನು ಕುದುರೆಯ ಅಗಡುತನದಿಂದ ದಾರಿತಪ್ಪಿ,

ಯಾವ ಸಮಾಧಿಯು ಬಳಿಗೆ ಬಂದನೋ ಆ ಸಮಾಧಿಯನ್ನು ನಿರ್ಮಿಸಿದ ಕೀರ್ತಿಸಿಂಹನು ಈತನೇಎಂಬದು ನಿಮಗೆ ಹೊಳೆದಿರಬಹುದಲ್ಲವೆ? ಈ ಕೀರ್ತಿ ಸಿಂಹನು ಮನೆಗೆ ಬಂದಬಳಿಕ ಮಗಳಿಂದ ಎಲ್ಲ ಸಂಗತಿಗಳನ್ನು ತಿಳಿದು, ನಂದಕುಮಾರನ ಭೆಟ್ಟಿಯು ಯಾವಾಗ ಆಗುವದೋ ಎಂಬ ಯೋಚನೆ ಯಲ್ಲಿದ್ದನು. ಕೀರ್ತಿಸಿಂಹನ ಮಗಳಾದ ಪದ್ಮಿನಿಯು ಬಹು ಚತುರೆಯಾ-ಗಿದ್ದಳು. ಆಕೆಯು ನಂದಕುಮಾರನ ರಾಜತೇಜವನ್ನು ಕಂಡು ಹಿಡಿದು, ಈತನು ಬಹುತರವಾಗಿ ಹೀನಾವಸ್ಥೆಯಲ್ಲಿದ್ದ ಯಾವನೋ ಒಬ್ಬ ರಾಜ ವಂಶೀಯನಾಗಿರಬೇಕೆಂದು ತರ್ಕಿಸಿದ್ದಳು. ಆಕೆಯು ತನ್ನ ತರ್ಕವನ್ನು ತಂದೆಗೆ ಸಮರ್ಪಕವಾಗಿ ಹೇಳಿದಳು. ಇದರಿಂದ ಆ ಕೀರ್ತಿಸಿಂಹನಲ್ಲಿ ನಂದಕುಮಾರನ ಭೆಟ್ಟಿಯ ವಿಷಯವಾಗಿ ತುಂಬಾ ಲಾಲಸೆಯುಂಟಾ ಯಿತು. ಸದ್ಯಕ್ಕೆ ದೆಸೆಗೇಡಿಯಾದ ರಾಜವಂಶವೆಂದರೆ ಮಾಳವಾ ರಾಜ ವಂಶವೇ ಆಗಿದ್ದು, ನಮ್ಮ ಗುಡಿಸಲಕ್ಕೆ ಅತಿಥಿಯಾಗಿ ಬಂದ ನಂದಕುಮಾ ರನು ನಮ್ಮ ಮಾಳವಾ ರಾಜವಂಶೀಯನು ಯಾಕೆ ಆಗಿರಬಾರದು! ಎಂದು ಅವನು ಯೋಚಿಸುತ್ತಿದ್ದನು.

ಪದ್ಮಿನಿಗೆ ನಂದಕುಮಾರನು ಹೇಳಿದ ಅವಧಿಯು ಮುಗಿದರೂ ಆತನು ಬಾರದ್ದರಿಂದ ಆಕೆಯೂ ಯೋಚನೆಗೊಳಗಾದಳು. ಕೀರ್ತಿಸಿಂಹನಂತೂ ಆ ತರುಣನು ಯಾಕೆ ಬಂದಿರಲಿಕ್ಕಿಲ್ಲೆಂದು ಒಂದೇ ಸವನೆ ಚಡಪಡಿಸುತ್ತಿ ದ್ದನು. ನಂದಕುಮಾರನು ಅವರಿಗೆ ಇದುವರೆಗೆ ಯಾವ ಉಪಕಾರವನ್ನು ಮಾಡಿರದಿದ್ದರೂ ಭಾವೀ ಆಶೆಯು ಅವರನ್ನು ನಂದಕುಮಾರನ ವಿಷಯ ವಾಗಿ ಯೋಚನೆ ಮಾಡಲಿಕ್ಕೆ ಹಚ್ಚಿತು. ಪದ್ಮಿನಿಯ ಹಾಗು ಕೀರ್ತಿಸಿಂಹನ ಈ ಯೋಚನೆಯಲ್ಲಿ ಸ್ವಾರ್ಥದ ಅಂಶವಾದರೂ ಇದ್ದಿಲ್ಲ. ಮಾಳವಾ ದೇಶದ ಪ್ರಜೆಗಳಿಗೆ ಮಾಳವಾ ಸಿಂಹಾಸನದ ಸೂರ್ಯನು ಉದಯನಾಗಬೇಕು. ಮಾಳವಾ ಪ್ರಜೆಗಳ ಸುಖ-ಸಂಪತ್ತುಗಳು ಸಂರಕ್ಷಣವಾಗಬೇಕು. ಮಾ-ಳವಾ ಸಿಂಹಾಸನದ ರಾಜದಂಡವು ಮೆರೆಯಬೇಕು, ಎಂಬ ಉದಾತ್ತ ವಿಚಾರಗಳೇ ಅವರಲ್ಲಿ ಉಂಟಾಗಿದ್ದವು; ಆದ್ದರಿಂದಲೇ ನಂದಕುಮಾರನ ಭೆಟ್ಟಿಯ ಇಚ್ಛೆಯನ್ನು ಅವರು ಮಾಡುತ್ತಿದ್ದರು.

ಹೀಗೆ ಕೀರ್ತಿಸಿಂಹ ಹಾಗು ಪದ್ಮಿನಿ ಇವರಿಬ್ಬರು-ನಂದಕುಮಾರನು ಯಾವದೊಂದು ಸಂಕಟಕ್ಕೆ ಗುರಿಯಾಗಿರಬೇಕು. ಹಾಗಿಲ್ಲದಿದ್ದರೆ ಆ

ತರುಣನು ಎಂದೂ ನಿಲ್ಲಲಾರನು ಎಂದು ಯೋಚಿಸುತ್ತಿರಲು, ಅಲ್ಲಿಗೆ ರಣಮಲ್ಲ, ರಣಜಿತಸಿಂಗ, ಅಂಬಾದಾಸ ಈ ಮೂವರು ಬಂದರು. ಅಕಸ್ಮಾತ್ತಾಗಿ ಬಂದ ಈ ಮೂವರು ಸ್ನೇಹಿತರನ್ನು ನೋಡಿ ಕೀರ್ತಿಸಿಂಹನಿಗೆ ಅತ್ಯಾನಂದವಾಯಿತು. ಪದ್ಮಿನಿಯು ಬಹು ಸಂಭ್ರಮದಿಂದ ಆ ಮೂವರನ್ನು ನಮಸ್ಕರಿಸಿ ಅವರ ಕ್ಷೇಮಲಾಭಗಳನ್ನು ಕೇಳಿದಳು. ಬಳಿಕ ಆ ಮೂವರು ಕೀರ್ತಿಸಿಂಹನಿಂದ ಆತಿಥ್ಯವನ್ನು ಹೊಂದಿ ಸಂತುಷ್ಟರಾಗಿ ಮಾತನಾಡುತ್ತ ಕುಳಿತುಕೊಂಡರು. ಅವರು ಕೀರ್ತಿಸಿಂಹನಿಗೆ ಯಾವ ಸಂಗತಿಯನ್ನು ಹೇಳುವದಕ್ಕೆಂದು ಬಂದಿದ್ದರೋ ಆ ಸಂಗತಿಯನ್ನು ಕೂಡಲೆ ತಿಳಿಸಿದರು. ನಂದಕುಮಾರನು ರಾಜವಂಶೀಯನೇ ಇರಬಹುದೆಂಬ ಅನುಮಾನದಲ್ಲಿದ್ದ ಕೀರ್ತಿಸಿಂಹನಿಗೆ ರಣಮಲ್ಲನ ಮಾತಿನಿಂದ ನಂದಕುಮಾರನು ನಿಜವಾಗಿ ನಮ್ಮ ರಾಜವಂಶೀಯನೆಂದು ನಿಶ್ಚಯವಾಯಿತು. ಪದ್ಮಿನಿಯಂತೂ ತನ್ನ ತರ್ಕವು ನಿಜವಾದದ್ದಕ್ಕೆ ತುಂಬಾ ಹರ್ಷಗೊಂಡಳು. ಆ ಸ್ವಾಮಿನಿಷ್ಠ ಸೇವಕರೆಲ್ಲರಿಗೂ ಒಂದು ಬಗೆಯಿಂದ ಆನಂದವಾಗಿ ಅವರು ಒಂದು ಕ್ಷಣ ಸ್ತಬ್ಧರಾಗಿ ಕುಳಿತರು. ಅವರ ಮುಖದಿಂದ ಮಾತುಗಳು ಹೊರಡದಾದವು. ಕಣ್ಣಲ್ಲಿ ಪ್ರೇಮಾಶ್ರುಗಳು ತುಂಬಿದವು. ಕೆಲಹೊತ್ತಿನ ಮೇಲೆ ಕೀರ್ತಿಸಿಂಹನು—ಮಿತ್ರರೇ, ಎಂಥ ಆನಂದದ ಸುದ್ದಿಯಿದು? ಈಗ ಹದಿನೈದು ದಿನಗಳ ಹಿಂದೆ ಓರ್ವ ತರುಣನು ಇಲ್ಲಿಗೆ ಬಂದಿದ್ದು, ಸಮಾಧಿಯನ್ನು ನೋಡಿ ಬಹು ಸಂತೋಷಬಟ್ಟನಂತೆ. ಆಗ ನಾನು ಮನೆಯಲ್ಲಿದ್ದಿಲ್ಲ. ಪದ್ಮಿನಿಯು ಅವನ ಆತಿಥ್ಯವನ್ನು ಮಾಡಿದಳಂತೆ! ಆ ತರುಣನು ರಾಜತೇಜಸ್ಸಿನಿಂದ ಯುಕ್ತನಾದದ್ದನ್ನು ಪದ್ಮಿನಿಯು ಕಂಡು ಹಿಡಿದಿರುವಳು. ಮಿತ್ರರೇ, ನಿಜವಾದ ರಾಜತೇಜವು ಎಂದೂ ಮುಚ್ಚಲಾರದು. ಬೆಲೆಯುಳ್ಳ ರತ್ನವು ಕಸದಲ್ಲಿ ಬಿದ್ದರೂ ಅದರ ತೇಜಸ್ಸು ಕಡಿಮೆಯಾಗೆಬಹುದೇ? ಅದರಂತೆ ನಂದಕುಮಾರನು ಈಗ ಹೀನಾವಸ್ಥೆಯಲ್ಲಿದ್ದರೂ ಅವನ ರಾಜತೇಜಸ್ಸು ಕಡಿಮೆಯಾಗಿಲ್ಲವೆಂಬ ಸಂಗತಿಯು ಪದ್ಮಿನಿಯ ಲಕ್ಷದಲ್ಲಿ ಬಾರದೆ ಹೋಗಲಿಲ್ಲ.; ಎಂದು ನುಡಿಯುತ್ತಿರಲು, ನಂದಕುಮಾರನೆಂಬ ಹೆಸರನ್ನು ಕೇಳಿ ರಣಮಲ್ಲನು ನೆಟ್ಟಗೆ ಕುಳಿತು—ಹಾ! ನಂದಕುಮಾರನು ಇಲ್ಲಿಗೆ ಬಂದಿದ್ದನೇ? ಎಂದು ಬಂದಿದ್ದನು? ನಾನು ಹೇಳುವ ಆ ನಂದಕುಮಾರನು ಈತನೇ ಇರಬಹುದೇನು! ಎಂದು

ಉತ್ಸುಕತೆಯಿಂದ ಕೇಳಿದನು. ಆಗ ನಂದಕುಮಾರನು ಸಮಾಧಿಯು ಬಳಿಗೆ ಬಂದ ದಿನದ ಎಣಿಕೆ ಹಾಕಿ ಯಾವ ದಿನ ರಣಮಲ್ಲನನ್ನೂ ಆತನ ಮಗಳನ್ನೂ ಕಳಿಸಲಿಕ್ಕೆಂದು ನಂದಕುಮಾರನು ದಿಲ್ಲಿಯಿಂದ ಅರವಲೀ ಪರ್ವತದ ಗಡಿಗೆ ಬಂದಿದ್ದನೋ ಆ ದಿನವೇ ಅದು ಇರುವದೆಂದು ಗೊತ್ತು ಪಡಿಸಿದರು; ಆದರೆ ನಂದಕುಮಾರನು ಕಳಿಸಬಂದ ಸ್ಥಳಕ್ಕೂ ಸಮಾಧಿಯು ಸ್ಥಳಕ್ಕೂ ಬಹಳ ಅಂತರವಿರುವದರಿಂದ ಆತನು ಇಲ್ಲಿಗೇಕೆ ಬಂದನು? ಎಂಬ ಕಾರಣವು ರಣಮಲ್ಲನಿಗೆ ತಿಳಿಯದಾಯಿತು. ಆಗ ಪದ್ಮಿನಿಯು ನಂದಕುಮಾರನು ಬಂದಾಗಿನ ಸ್ಥಿತಿಯನ್ನು ಹೇಳಿ ರಣಮಲ್ಲನ ಸಂಶಯು ವನ್ನು ನಿವಾರಿಸಿದಳು.

ಬಳಿಕ ಸರ್ವರಿಗೂ ಸಂತೋಷವಾಗಿ ನಂದಕುಮಾರನು ಮಾಳವಾ ರಾಜವಂಶೀಯನೆಂದು ಅವರೆಲ್ಲರೂ ತಿಳಿದರು. ರಣಮಲ್ಲನು ನಾನು ದಿಲ್ಲಿ ಯಲ್ಲಿ ನಂದಕುಮಾರನ ಹಾಗು ಬಲದೇವನ ಮತ್ತು ಚಂದ್ರಪಾಲನ ಪರಿ ಚಯುವನ್ನು ಚನ್ನಾಗಿ ಮಾಡಿಕೊಂಡಿದ್ದು, ಚಂದ್ರಪಾಲನು ನಮ್ಮ ಮಹಾ ರಾಣಾ ಜಯಸಿಂಹನ ತಮ್ಮನಾದ ಸೂರಸಿಂಗನೆಂಬದನ್ನು ಕಂಡು ಹಿಡಿದಿರು ವೆನು. ಸೂರಸಿಂಗನು ಮಹಾಪರಾಕ್ರಮಶಾಲಿಯಾಗಿದ್ದರೂ ಈಗ ವೇಷ ವನ್ನು ಬದಲಿಸಿ ಚಂದ್ರಪಾಲನೆಂಬ ಕಲ್ಲುಕುಟ್ಟಿಗನಾಗಿರುವದನ್ನು ತಿಳಿದು ನನಗೆ ಬಹಳ ದುಃಖವಾಯಿತು. ನಮ್ಮ ರಾಜವಂಶವು ಹೀಗೆ ತಿಪ್ಪೆಯಲ್ಲಿ ಬಿದ್ದು, ಪ್ರತಿಭಾಶೂನ್ಯವಾಗಿ ಬಾಳುವದನ್ನು ನೋಡಿ ನನಗೆ ದುಃಖವೂ ಸಂತಾಪವೂ ಆದರೂ ಪರಿಸ್ಥಿತಿಯ ಕಡೆಗೆ ಲಕ್ಷ್ಯಗೊಟ್ಟು ಅದನ್ನೆಲ್ಲ ಸಹನ ಮಾಡಿಕೊಂಡು ಸುಮ್ಮನಿದ್ದೇನೆ. ನಮ್ಮ ರಾಜವಂಶವು ಇನ್ನೂ ಬದುಕಿ ರುವದೆಂಬದೊಂದು ಸಂಗತಿಯು ನಮಗೆ ಆನಂದದ ಸಂಗತಿಯಾಗಿದೆ. ಈಗ ಹದಿನೈದು ದಿನಗಳಿಂದ ನಾನು ನಮ್ಮವರಿಗೆ ಸುದ್ದಿಯನ್ನು ಹೇಳುವ ಕೆಲಸವನ್ನೇ ಮಾಡುತ್ತ ಬಂದಿದ್ದೇನೆ. ನಮ್ಮ ರಜಪೂತರೆಲ್ಲರೂ ಹುರಿ ಯಾಳಾಗಿ ಈಗಲೇ ದಿಲ್ಲಿಯನ್ನು ಮುತ್ತಿ ನಂದಕುಮಾರ, ಸೂರಸಿಂಹ ಇವ ರನ್ನು ಕರೆತಂದು ರಜಪೂತ ರಾಜದಂಡವನ್ನು ಮೆರೆಯಿಸಬೇಕೆಂದರು; ಆದರೆ ಹೀಗೆ ಹುಂಬತನಕ್ಕೆ ಹೋಗುವದು ಘಾತುಕವೆಂದು ನಾನವರಿಗೆ ಬುದ್ಧಿ ವಾದವ ಹೇಳಿ ನಿನ್ನ ಬಳಿಗೆ ಬಂದಿರುತ್ತೇವೆ. ಕೀರ್ತಿಸಿಂಹಾ, ನೀನು ನಮಗೆ ಹಿರಿಯನು. ಅನುಭವಿಕನು. ಮಾರ್ಗದರ್ಶಕನು. ಈ ಪ್ರಸಂಗ

ದಲ್ಲಿ ನಾವು ಹ್ಯಾಗೆ ಆಚರಿಸಿದರೆ ನಮ್ಮ ರಾಜನು ಮತ್ತು ನಮ್ಮ ರಾಜ್ಯ ಗಳು ದೊರಕುವವವೆಂಬದನ್ನು ಹೇಳು. ಎಂದು ನುಡಿದನು.

ಅದನ್ನು ಕೇಳಿ ಕೀರ್ತಿಸಿಂಹನು:-ಮಿತ್ರರೇ, ಭಗವಂತನು ನಮ್ಮ ಪಂಚಪ್ರಾಣಗಳನ್ನು ಇನ್ನೂ ಪೂರ್ಣವಾಗಿ ಕಳೆದಿಲ್ಲ. ನಮ್ಮ ರಾಜವಂಶವು ಬದುಕಿದ್ದರಿಂದ ನಮ್ಮ ದೇಹದಲ್ಲಿ ಇನ್ನೂ ಪ್ರಾಣವಿದೆಯೆಂದು ನಾವು ಭಾ- ವಿಸಬೇಕಾಗುವದು. ನಮ್ಮ ರಾಜವಂಶವನ್ನು ರಕ್ಷಿಸುವದಕ್ಕೆ ನಾವು ದೇಹ ಪಾತವಾಗುವವರೆಗೆ ಹೆಣಗುವದು ನಮ್ಮ ಕರ್ತವ್ಯವು. ನಂದಕುಮಾರನು ಇಲ್ಲಿಗೆ ಬಂದು ಹೋದಂದಿನಿಂದ ನಾನು ಅದೇ ವಿಚಾರದಲ್ಲಿಯೇ ಕಾಲಕಳೆ ಯುತ್ತಿದ್ದೇನೆ; ಆದರೆ ಎಂಟು ದಿನಗಳಲ್ಲಿ ತಿರುಗಿಬರುತ್ತೇನೆಂದು ಹೇಳಿದ ನಂದಕುಮಾರನು ಹದಿನೈದು ದಿನಗಳಾದರೂ ಬಾರದ್ದನ್ನು ತಿಳಿದು ನನಗೆ ಸಂಶಯು ಬರಹತ್ತಿದೆ. ಈಗಿನ ದಿನಗಳು ಬಹಳ ಕಠಿಣವಾಗಿವೆ. ನಂದ ಕುಮಾರನಂಥ ತೇಜಸ್ವೀ ತರುಣನು ಮುಸಲ್ಮಾನ ಅಧಿಕಾರಿಗಳ ಕಣ್ಣಲ್ಲಿ ಹತ್ತದೆ ಇರಲಾರನು. ಸೂರಸಿಂಹನು ಅನುಭವಿಕನಾದ್ದರಿಂದ ಗೌಪ್ಯವಾ ಗಿರುವನು; ಆದರೆ ನಂದಕುಮಾರನು ಇನ್ನೂ ಚಿಕ್ಕವನು. ಜಗತ್ತಿನ ಅನು ಭವವು ಅವನಿಗಿರಲಾರದು. ಆದ್ದರಿಂದ ಅವನು ಈ ಸಮಯದಲ್ಲಿ ಹ್ಯಾಗೆ ಪ್ರಚ್ಛನ್ನವಾಗಿರಬೇಕೆಂಬದನ್ನು ತಿಳಿಯದೆ ಬೆಳ್ಳಗಿದ್ದದ್ದನ್ನೆಲ್ಲ ಹಾಲೆಂದು ನಂಬಿ ಸೆರೆಮನೆಯ ಸೋಬತಿಯಾಗಿರಬೇಕೆಂದು ನನಗೆ ಅನಿಸಹತ್ತಿದೆ. ರಣಮಲ್ಲಾ, ಈ ಸಮಯದಲ್ಲಿ ನೀನು ಸುಮ್ಮನೆ ಕುಳಿತರೆ ಪ್ರಯೋಜನ ವಿಲ್ಲ. ನೀನು ಹ್ಯಾಗೂ ದಿಲ್ಲಿಯಲ್ಲಿ ಅವನ ವಾಸಸ್ಥಳವನ್ನು ನೋಡಿರುತ್ತೀ; ಸಂಗಡ ಈ ರಣಜಿತಸಿಂಗನನ್ನು ಕರೆದುಕೊಂಡು ಹೋಗಿ ನಂದಕುಮಾರನು ಸುರಕ್ಷಿತವಾಗಿರುವನೋ, ಅಥವಾ ವಿಪತ್ತಿಗೆ ಗುರಿಯಾಗಿರುವನೋ ಎಂಬ ದನ್ನು ಶೋಧಿಸು. ಒಂದುವೇಳೆ ಅವರು ವಿಪತ್ತಿಗೆ ಗುರಿಯಾಗಿರದಿದ್ದರೆ ಸೂರಸಿಂಹನಿಗೆ ನಮ್ಮೆಲ್ಲ ಸೇವಕರ ವಿಜ್ಞಾಪನೆಯನ್ನು ತಿಳಿಸಿ ಗೌಪ್ಯವಾಗಿ ಇತ್ತ ಹೊರಟು ಬರುವಂತೆ ಮಾಡು. ಒಂದು ವೇಳೆ ನಿನ್ನ ಮಾತಿನಲ್ಲಿ ಆತನಿಗೆ ವಿಶ್ವಾಸವುಂಟಾಗದಿದ್ದರೆ ಸುಮ್ಮನೆ ಹೊರಟು ಬಾ, ನಾನು ಸೂರ ಸಿಂಹನಿಗೆ ಭೆಟ್ಟಿಯಾಗಿ ಮುಂದಿನ ಎಲ್ಲ ಕೆಲಸಗಳನ್ನು ಸರಿಪಡಿಸುತ್ತೇನೆ ಎಂದು ಹೇಳಿದನು.

ಕೀರ್ತಿಸಿಂಹನು ಹೇಳಿದ ಈ ಸಂಗತಿಯು ರಣಮಲ್ಲನಿಗೆ ಹಿಪ್ಪಿಗೆ

ಯಾಯಿತು. ನಾಳಿನಬೆಳಿಗ್ಗೆ ರಣಮಲ್ಲನೂ, ರಣಜಿತಸಿಂಗನೂ ದಿಲ್ಲಿಗೆ ಹೋಗಬೇಕೆಂದು ನಿಶ್ಚಿತವಾಯಿತು. ಹೀಗೆ ಅವರು ನಿಶ್ಚಯಿಸಿ ಕುಳಿತುಕೊಂಡಿರಲು ಅಲ್ಲಿಗೆ ಒಬ್ಬ ರಜಪೂತ ವೃದ್ಧನು ಬಂದನು. ಅವನು ಬಂದವನೇ ನೆಲಕ್ಕೆ ದೊಪ್ಪನೆ ಬಿದ್ದುಬಿಟ್ಟನು. ಅವನಿಗೆ ಮಾತಾಡಲಿಕ್ಕೆ ಬಾಯಿ ಬಾರದಾಯಿತು; ಮೋರೆಯು ಕಪ್ಪಿಟ್ಟು ಹೋಗಿತ್ತು; ಚಿವುಟಿದರೂ ಕೂಡಾ ಅದರಲ್ಲಿ ರಕ್ತವಿಲ್ಲದಾಗಿತ್ತು. ಆತನ ಸ್ಥಿತಿಯನ್ನು ಕಂಡು ಕೀರ್ತಿಸಿಂಹಾದಿ ರಜಪೂತರು ಕಳವಳಗೊಂಡು ಅವನಿಗೆ ಶೈತ್ಯೋಪಚಾರ ಮಾಡಿ ಅವನನ್ನು ಎಬ್ಬಿಸಿ ಕುಳ್ಳಿರಿಸಿದರು. ಬಹಳ ಹೊತ್ತಿನ ಮೇಲೆ ಆ ಮುದುಕನು ಉಶ್ಶೆಂದು ನುಡಿದನು. ಆಗ ಎಲ್ಲರೂ ದೂರ ಸರಿದು ಅವನಿಗೆ ಬೀಸಣಿಕೆಗಳಿಂದ ಗಾಳಿಯನ್ನು ಹಾಕಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಮುದುಕನು ಸ್ಮೃತಿಗೊಂಡು ನೀರು-ನೀರು, ಎಂದು ನುಡಿದನು ಪದ್ಮಿನಿಯು ಆತನಿಗೆ ತಂಪಾದ ನೀರನ್ನು ಕೊಟ್ಟಳು. ಒಂದು ತಂಬಿಗೆ ನೀರು ಕುಡಿದ ಬಳಿಕ ಅವನಿಗೆ ಸ್ವಲ್ಪ ಸ್ವಾಸ್ಥತೆಯುಂಟಾದಂತಾಯಿತು. ಆಗ ಅವನು ಅಲ್ಲಿ ನೆರೆದ ಎಲ್ಲರನ್ನೂ ಕಣ್ಣುತುಂಬಾ ನೋಡಿ ನಾ-ನಾನು ಬಲದೇವನು; ಇಷ್ಟುದಿನ ನನ್ನ ಸ್ವಾಮಿಯ ಸೇವೆಯಲ್ಲಿದ್ದೆನು. ಸೂರಸಿಂಹನು ನನ್ನ ಸ್ವಾಮಿಯು, ನಂದಕುಮಾರನು ನನ್ನ ಸ್ವಾಮಿಯ ಮಗನು. ಯಾವ ಪಾಪಿಯೋ ನಮ್ಮ ಇರವನ್ನು ತಿಳಿದು, ಮಾನಸಿಂಹನಿಗೆ ಸುದ್ದಿಯನ್ನು ಹೇಳಿದ್ದರಿಂದ ಈಗ ಎಂಟು ದಿವಸಗಳ ಕೆಳಗೆ ಆ ದುಷ್ಟ ಮಾನಸಿಂಹನು ದಂಡನ್ನು ಕಳುಹಿಸಿ, ನಾವು ಮೂವರನ್ನು ಸೆರೆ ಹಿಡಿದೊಯ್ದನು. ಅಂದೇ ನನ್ನನ್ನೂ, ನನ್ನ ಸ್ವಾಮಿ ಹಾಗು ಸ್ವಾಮಿ ಪುತ್ರರನ್ನೂ ಅಗಲಿಸಿ ಬೇರೆ ಬೇರೆ ಕಡೆಗಳಲ್ಲಿ ಸೆರೆಯಿಟ್ಟರು. ನನ್ನ ಸ್ವಾಮಿಯನ್ನೂ ಸ್ವಾಮಿ ಪುತ್ರನನ್ನೂ ಬ್ಬಲವಾದ ಕೈದಿನಲ್ಲಿಟ್ಟಿರುವರು. ನನ್ನನ್ನು ಸಾದಾ ಕೈದಿನಲ್ಲಿಟ್ಟಿದ್ದರು. ನನ್ನ ಮೇಲೆ ಅಷ್ಟೊಂದು ಕಾವಲಿರಲಿಲ್ಲ; ಆದ್ದರಿಂದ ಸಂಧಿಸಾಧಿಸಿ ಸೆರೆಮನೆಯಿಂದ ಪಾರಾಗಬೇಕೆಂದು ಮಾಡಿದ್ದೆನು. ಆ ಸುಯೋಗವು ಮೂರು ದಿನಗಳ ಕೆಳಗೆ ಒದಗಿಬಂದಿತು. ನನ್ನ ಸ್ವಾಮಿಯ ಹಿತಕ್ಕಾಗಿಯೇ ತಪ್ಪಿಸಿಗೊಂಡು ಪಾರಾಗಿ ಇಲ್ಲಿಯುವರೆಗೆ ಬಂದಿದ್ದೇನೆ. ನಂದಕುಮಾರನು ಇಲ್ಲಿಗೆ ಬಂದಿದ್ದನಂತೆ; ಪದ್ಮಿನಿಯ ಆತಿಥ್ಯವನ್ನು ಹೊಂದಿರುವನಂತೆ! ನಿಮ್ಮ ಬಳಿಗೆ ಬಂದು ಈ ಹೃದಯದ್ರಾವಕ ಸ್ಥಿತಿಯನ್ನು ನಿವೇದಿಸಿದರೆ ಮಾಳವಾಸಿಂಹಾಸನದ ಏಕನಿಷ್ಠರಾದ ನೀವು ಮುಂದೆ ಮಾಡತಕ್ಕದ್ದನ್ನು ಮಾಡುವಿರೆಂದು ತಿಳಿದು

ಇಲ್ಲಿಗೆ ನಿಮಗೆ ಸುದ್ದೀ ಮುಟ್ಟಿಸುವದಕ್ಕಾಗಿ ಬಂದಿದ್ದೇನೆ. ಅನಾಯಾಸವಾಗಿ ಇಲ್ಲಿ ಕೀರ್ತಿಸಿಂಹನೊಬ್ಬನೇ ಇರದೆ ರಣಮಲ್ಲ-ರಣಜಿತಸಿಂಗ, ಅಂಬಾದಾಸ ಮೊದಲಾದ ವೀರರಿರುತ್ತೀರಿ. ರಣಮಲ್ಲ ಸರದಾರರೇ, ನೀವು ದಿಲ್ಲಿಯಲ್ಲಿ ನಮ್ಮ ಮಹಾರಾಜರ ಅತಿಥಿಗಳಾಗಿದ್ದಿರಲ್ಲವೇ? ನಿಮ್ಮ ಮಗಳನ್ನು ನಂದಕುಮಾರನೇ ಬಿಡಿಸಿರುವನಲ್ಲವೇ? ಆಗ ನಾವು ಯಾವ ಅಂಜಿಕೆಯಿಂದ ನಿಮಗೆ ನಿಜಸ್ಥಿತಿಯನ್ನು ಹೇಳಲಿಲ್ಲವೋ ಆ ಅಂಜಿಕೆಯು ಕೊನೆಗೆ ನಮ್ಮನ್ನು ಸಮುದ್ರದಲ್ಲಿ ಮುಣುಗಿಸಿ ಬಿಟ್ಟಿತು. ಹಾಯ್! ಹಾಯ್! ನಮ್ಮ ರಾಜವಂಶವು ರಾಹುಗ್ರಸ್ತವಾಗಿರುವದು. ಇದಕ್ಕೂ ಹೆಚ್ಚು ಮಾತನಾಡಲಾರೆನು. ನನ್ನ ಹೃದಯವು ದುಃಖದಿಂದ ಇಬ್ಭಾಗವಾಗಿರುವದು. ರಜಪೂತವೀರರೇ, ಸಿಂಹಾಸನದ ಅಭಿಮಾನವಿರಲಿ.'' ಎಂದು ನುಡಿಯುತ್ತಿರಲು, ಬಲದೇವನ ವಾಣಿಯು ತೊದಲಿಸತೊಡಗಿತು. ಅವನ ಮೈಯು ಜೋರಿನಿಂದ ಬೆವತಿತು. ನೋಡನೋಡುವಷ್ಟರಲ್ಲಿ ಅವನ ದೇಹದೊಳಗಿಂದ ಪ್ರಾಣವೂ ಹೊರಟು ಹೋಯಿತು.

ಈ ವಿಚಿತ್ರ ಪ್ರಕಾರವನ್ನು ಕಂಡು ಕೀರ್ತಿಸಿಂಹಾದಿ ರಜಪೂತರೆಲ್ಲರು ದಂಗುಬಡಿದು ಹೋದರು. ಬಲದೇವನು ನಿಜವಾದ ಸ್ವಾಮಿನಿಷ್ಠನು. ಅಂತೇ ಅವನು ಸ್ವಾಮಿಯ ಸಂಕಟವನ್ನು ನೋಡಲಾರದೆ ಹೀಗೆ ದೇಹಬಿಟ್ಟನೆಂದು ನುಡಿದು ಕುಲಧರ್ಮಾನುಸಾರವಾಗಿ ಅವರ ಶವಸಂಸ್ಕಾರವನ್ನು ಮಾಡಿದರು. ಬಳಿಕ ಅವರು ಯಾವ ಸಂಗತಿಯ ಸಲುವಾಗಿ ಯೋಚಿಸುತ್ತಿದ್ದರೋ ಆ ಸಂಗತಿಯು ಜರುಗಿ ಹೋದ್ದರಿಂದ ಮುಂದಿನ ಹಂಚಿಕೆಯನ್ನು ಕುರಿತು ಯೋಚಿಸಲಾರಂಭಿಸಿದರು. ತಮ್ಮ ರಾಜವಂಶದ ಮೇಲೆ ಮತ್ತೆ ಶತ್ರುಗಳ ವಕ್ರದೃಷ್ಟಿಯು ಬಿದ್ದದ್ದರಿಂದ ಮುಂದೆ ಏನಾಗುವದೋ ಎಂಬ ಕಲ್ಪನೆಯಿಂದ ಅವರ ಅಂತಃಕರಣವು ಎಳೆಬಾಳೆಯ ಎಲೆಯಂತೆ ಕಮರಿಹೋಯಿತು. ಇಂಥ ದುರ್ಧರ ಪ್ರಸಂಗದಲ್ಲಿಯೂ ಕೀರ್ತಿಸಿಂಹನು ಧೈರ್ಯವ ತಂದುಕೊಂಡು—''ಹಾ! ವೀರರೇ, ಅಂಜಬೇಡಿರಿ! ಏಳಿರಿ! ರಣಕ್ಷೇತ್ರಕ್ಕೆ ಸನ್ನದ್ಧರಾಗಿರಿ! ರಜಪೂತರ ಶೌರ್ಯವು ಮಾಯವಾಯಿತೇ? ಎಂದು ಗರ್ಜಿಸಿದನು. ಆತನ ಈ ಗರ್ಜನೆಯು ಉಳಿದ ರಜಪೂತರ ಹೃದಯದಲ್ಲಿ ಕೋಲುಮಿಂಚಿನಂತೆ ಹೊಳೆದು ಅಲ್ಲಿ ಪ್ರಕಾಶವನ್ನುಂಟು ಮಾಡಿತು. ಆಗ ಅವರೆಲ್ಲರೂ ರಜಪೂತ ರಾಜದಂಡವನ್ನು ಮೆರೆಯಿಸಿಯೇ ತೀರುವೆವೆಂಬ ದೃಢನಿಶ್ಚಯವನ್ನು ಮಾಡಿದರು.

೧೦—ಆ ಸಾಧುವು ಯಾರಾಗಿರಬಹುದು?

ಹಿಂದಿನ ಪ್ರಕರಣದಲ್ಲಿ ಕೀರ್ತಿಸಿಂಹನು ಸ್ನೇಹಿತರಾದ ರಜಪೂತರಿಗೆ ದಿಲ್ಲಿಗೆ ಹೋಗಬೇಕೆಂದು ಹೇಳಿದನಷ್ಟೇ; ತಮ್ಮ ರಾಜವಂಶವು ವಿಪದ್ಗ್ರಸ್ತವಾದ್ದರಿಂದ ಅದನ್ನು ಬಿಡಿಸಿಕೊಂಡ್ಹ ಹೊರತು ಅವರಿಗೆ ಗತ್ಯಂತರವೇ ಇಲ್ಲದಾಯಿತು. ರಣಮಲ್ಲನಿಂದ ಅಮೃತತುಲ್ಯವಾದ ಸುದ್ದಿಯನ್ನು ಕೇಳಿದಾಗಿನಿಂದ ಆ ರಜಪೂತರು ಯಾವ ಆಶೆಯನ್ನು ಮನದಲ್ಲಿ ತಾಳಿ ನವ ಚೈತನ್ಯವನ್ನು ಹೊಂದಿದ್ದರೋ ಆ ಆಶೆಯು ಇಂದು ನಿರಾಶವಾಗುವ ಪ್ರಸಂಗ ಬಂದಿತು. ಆದರೂ ಕೀರ್ತಿಸಿಂಹನು ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದ್ದರಿಂದ ಆ ರಜಪೂತರು ಟೊಂಕಕಟ್ಟಿ ಮಾನಸಿಂಗನಿಗೆ ಕೈ-ತೋರಿಸಬೇಕೆಂದು ಹಾತೊರೆಯಲಾರಂಭಿಸಿದರು.

ಮಾನಸಿಂಗನ ದವಡೆಯಲ್ಲಿ ಸಿಕ್ಕ ರಾಜವಂಶವನ್ನು ಬಿಡಿಸಿ ತರುವದೆಂದರೆ ಸಾಮಾನ್ಯಕೆಲಸವಾಗಿದ್ದಿಲ್ಲ. ಪ್ರತ್ಯಕ್ಷ ಸಿಂಹನೆದುರಿಗೆ ಹೋಗಿ ಅದರ ಬಾಯಲ್ಲಿ ಕೈಯನ್ನಿಟ್ಟು ಪಾರಾಗಿ ಬರಬಹುದು; ಆದರೆ ಮಾನಸಿಂಗನ ಎದುರಿಗೆ ಹೋಗಿ ಪಾರಾಗಿ ಬರುವದು ಅಶಕ್ಯವಾಗಿತ್ತು. ರಜಪೂತ ಸೈನ್ಯವನ್ನೆಲ್ಲ ಒಟ್ಟುಗೂಡಿಸಿ ಯುದ್ಧ ಮಾಡಬೇಕೆಂದರೆ ಬಾದಶಹನ ಅಪಾರ ದಂಡಿಗೆ ಈ ಜನರು ಈಡಾಗುವಂತೆ ಇರಲಿಲ್ಲ. ಇನ್ನು ಗುಪ್ತ ಹೇರರಾಗಿ ಹೋಗಿ ಉಪಾಯದಿಂದ ಕೆಲಸ ನೆರವೇರಿಸಿಕೊಳ್ಳಬೇಕೆಂದರೆ ಮಾನಸಿಂಗನ ತೀಕ್ಷ್ಣ ದೃಷ್ಟಿಗೆ ಒಳಗಾದರೆ ಎಲ್ಲಿ ಅನರ್ಥವಾಗುವದೋ ಎಂಬ ಅಂಜಿಕೆ; ಹೀಗೆ ಕಾರ್ಯಸಾಧನೆಗೆ ವಿಘ್ನವು ಒದಗಬಹುದೆಂದು ಆ ರಜಪೂತರು ಬಹುವಿಧವಾಗಿ ಯೋಚಿಸಲು, ಧೈರ್ಯಶಾಲಿಯಾದ ಕೀರ್ತಿಸಿಂಹನು, ವೀರಶ್ರೇಷ್ಠರೇ, ಹೀಗೆ ಯೋಚಿಸುತ್ತ ಕುಳಿತರೆ ಎಷ್ಟು ದಿವಸಗಳು-ರಾತ್ರಿಗಳು ಕಳೆದರೂ ಈ ಆಲೋಚನೆಯು ಮುಗಿಯುವದಿಲ್ಲ. ಶೂರರಾದವರಿಗೆ ಈ ದೀರ್ಘಾಲೋಚನೆಯು ಕೆಲಸದ್ದಲ್ಲ. ಕೈಲಾಗದ ಹೇಡಿಗಳು ಮಾತ್ರ ಆಲೋಚಿಸುತ್ತ ಕುಳಿತುಕೊಳ್ಳುವರು. ನೀವು ಶೂರರಿರುತ್ತೀರಿ. ಬೇಕಾದ ಯುಕ್ತಿಗಳನ್ನು ಹುಡುಕಿ ಕಾರ್ಯ ಸಾಧಿಸುವಷ್ಟು ಸಮರ್ಥರಿರುತ್ತೀರಿ. ಹೀಗಿದ್ದರೂ ನೀವು ಇಷ್ಟೊಂದು ದೀರ್ಘಾ

ಲೋಚನೆ ಮಾಡುವದನ್ನು ನೋಡಿ ನನಗೆ ಅಸಮಾಧಾನವೆನಿಸುತ್ತದೆ. ಮಿತ್ರರೇ, ಈಗೆ ನಾನು ಹೇಳುವದನ್ನು ಲಕ್ಷವಿಟ್ಟು ಕೇಳಿರಿ. ಈ ಮೊದಲೇ ನಾನು ನಿಮಗೆ ಸೂಚಿಸಿದ ಮೇರೆಗೆ ನಾಲ್ವರು ದಿಲ್ಲಿಗೆ ಹೋಗ ಬೇಕು. ನಮ್ಮ ರಾಜವಂಶವನ್ನು ಮಾನಸಿಂಗನು ಎಲ್ಲಿ ಸೆರೆಯಿರಿಸಿರುವ ನೆಂಬದನ್ನು ಶೋಧಿಸಿ ಉಪಾಯಾಂತರಗಳಿಂದ ನಮ್ಮ ರಾಜವಂಶದ ದರ್ಶನವನ್ನು ತಕ್ಕೊಳ್ಳಬೇಕು. ಹಾಗು ಅವರನ್ನು ಸೆರೆಮನೆಯಿಂದ ಹೊರ ಹೊರಡಿಸಿ ಇಲ್ಲಿಗೆ ಕರೆತರಬೇಕು. ನಮ್ಮ ರಾಜವಂಶವು ಒಮ್ಮೆ ನಮ್ಮ ಕೈವಶವಾಯಿತೆಂದರೆ ಮುಂದೆ ನಮ್ಮ ಕ್ಷಾತ್ರ ತೇಜಸ್ಸನ್ನು ಪ್ರಕಟಿಸಿ, ರಜಪೂತರ ರಾಜದಂಡವನ್ನು ಮೆರೆಯಿಸೋಣ; ಇದು ಮುಂದಿನ ಕೆಲಸ; ಸದ್ಯಕ್ಕೆ ನಾನು ಹೇಳಿದಂತೆ ದಿಲ್ಲಿಯಲ್ಲಿ ಉಪಾಯಾಂತರವನ್ನು ಕಲ್ಪಿಸಿ, ಕೆಲಸ ಮಾಡಿಕೊಂಡು ಬರಲು ನಿಮಗೆ ಸಾಧ್ಯವಿದೆಯೋ ಅಥವಾ ನಾನೂ ಈ ಕೆಲಸದಲ್ಲಿ ಪ್ರವೇಶ ಮಾಡಬೇಕೋಎಂಬದನ್ನು ಸ್ಪಷ್ಟವಾಗಿ ಹೇಳಿರಿ, ಎಂದು ನುಡಿದನು.

ಕೀರ್ತಿಸಿಂಹನ ಈ ಮಾತುಗಳನ್ನು ರಣಮಲ್ಲಾದಿ ರಜಪೂತರು ಒಮ್ಮನಸಿನಿಂದ ಕೇಳುತ್ತಿದ್ದರು. ಆ ವೀರರಿಗೆ ಆತನ ಮಾತುಗಳು ಸಮ ರ್ಪಕವಾಗಿ ಕಂಡುಬಂದವು. ಈಗೆ ನಾಲ್ಕುಜನರು ದಿಲ್ಲಿಗೆ ಹೋಗಿ ಈ ರೀತಿ ಕಾರ್ಯಸಾಧಿಸಿಕೊಳ್ಳುವದೇ ಯುಕ್ತವೆಂದು ಯೋಚಿಸಿ:—ಕೀರ್ತಿ ಸಿಂಹಾ, ನೀನೆಂದಂತೆ ಕಾರ್ಯವ ಮಾಡಿಕೊಂಡು ಬರುವೆವು. ಸ್ವಾಮಿ ಏಕಲಿಂಗಜಿಯು ಕೃಪೆಯಿಂದ ನಮ್ಮ ರಾಜವಂಶವು ನಮಗೆ ದೊರೆತರೆ ಮುಂದಿನ ಕೆಲಸವನ್ನು ಮಾಡಲಿಕ್ಕೆ ನಮ್ಮ ರಜಪೂತ ಸೈನ್ಯವೆಲ್ಲವೂ ಸಿದ್ಧ ವಿರುತ್ತದೆ. ಈಗೆ ನಾವು ಯಾರು ಯಾರು ಹೊರಡೋಣ, ಎಂದು ಕೇಳಿ ದರು. ಆಗ ಆ ಕೀರ್ತಿಸಿಂಹನು ಅಲ್ಲಿದ್ದ ರಜಪೂತ ವೀರರನ್ನೆಲ್ಲ ಸಮಾಧಿಯ ಬಳಿಗೆ ಕರೆದೊಯ್ದು, ಆ ಪವಿತ್ರ ಸ್ಥಳದಲ್ಲಿ ಅವರನ್ನು ಕುಳ್ಳಿರಿಸಿಕೊಂಡು, ಅವರಿಗೆ ಹೇಳತಕ್ಕ ರಹಸ್ಯಗಳನ್ನು ಹೇಳಿದನು. ದಿಲ್ಲಿಯಲ್ಲಿ ಕಾರ್ಯವನ್ನು ಹ್ಯಾಗೆ ಸಾಧಿಸಬೇಕು, ಯಾವ ಯಾವ ಉಪಾಯಗಳನ್ನು ಮಾಡಬೇಕು, ಎಂಬ ಸಂಗತಿಗಳನ್ನೆಲ್ಲ ಶ್ರವಣಮಾಡಿ ರಣಮಲ್ಲಾದಿಗಳಿಗೆ ಅತ್ಯಂತ ಉತ್ಸಾ ಹವು ಪ್ರಾಪ್ತವಾಯಿತು. ಅವರು ಕೀರ್ತಿಸಿಂಹನ ಸೂಚನೆಯ ಮೇರೆಗೆ

ಸಮಾಧಿಯನ್ನು ಮುಟ್ಟಿ ಮಾಳವಾ ರಾಜವಂಶದ ವಿಷಯವಾಗಿ ನಾವು ಸರ್ವದಾ ಏಕನಿಷ್ಠೆಯನ್ನು ಧರಿಸುವೆವು, ಎಂದು ಪ್ರತಿಜ್ಞೆ ಮಾಡಿದರು. ಬಳಿಕ ಅವರು ಅಂದೇ ದಿಲ್ಲಿಯ ಕಡೆಗೆ ಸಾಗಿದರು.

ದಿಲ್ಲಿಯು ಅಕಬರನ ರಾಜಧಾನಿಯಾಗಿತ್ತಷ್ಟೇ; ಮೊಗಲ ಸಾಮ್ರಾಜ್ಯದ ಕೇಂದ್ರಸ್ಥಾನವಾದ ಅಲ್ಲಿ ಮೊಗಲ ಸಾಮ್ರಾಜ್ಯಾಭಿಮಾನಿಗಳು ಹಲವು ಜನರಿದ್ದರು. ಎಷ್ಟೋ ರಜಪೂತ ಸರದಾರರೂ, ಮುಸಲ್ಮಾನಸರದಾರರೂ ಆ ಸಾಮ್ರಾಜ್ಯದ ಅಭಿವೃದ್ಧಿಗಾಗಿಯೂ, ರಕ್ಷಣೆಗಾಗಿಯೂ, ಸರ್ವದಾ ದಕ್ಷತೆಯನ್ನು ವಹಿಸಿದ್ದರು. ಮೊಗಲರ ವಿರುದ್ಧವಾಗಿ ಒಂದು ಚಕಾರ ಶಬ್ದವನ್ನಾದರೂ ಯಾವನೂ ಉಚ್ಚರಿಸುವಂತಿದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ರಣಮಲ್ಲಾದಿ ವೀರರ ಚೌಕಳಿಯು ದಿಲ್ಲಿಯನ್ನು ಮುಟ್ಟಿ ಆ ಪ್ರಚಂಡ ಪಟ್ಟಣದಲ್ಲಿ ಎಲ್ಲಿ ವಾಸಿಸಬೇಕು ಕಾರ್ಯವನ್ನು ಹ್ಯಾಗೆ ಸಾಧಿಸಬೇಕು ಎಂಬ ಯೋಚನೆಗೊಳಗಾಯಿತು.

ರಣಮಲ್ಲಾದಿ ವೀರರು ದಿಲ್ಲಿಯನ್ನು ಇದಕ್ಕೂ ಮೊದಲು ಹಲವು ಸಾರೆ ನೋಡಿದ್ದರು: ಆದರೆ ಹಿಂದೆ ನೋಡಿದ್ದಕ್ಕೂ ಈಗ ನೋಡುವದಕ್ಕೂ ಮಹದಂತರವಿತ್ತು. ಈಗ ಅವರು ಆ ದಿಲ್ಲಿಯಲ್ಲಿ ಒಂದು ಮಹತ್ವದ ಕೆಲಸವನ್ನು ಸಾಧಿಸಿಕೊಳ್ಳಬೇಕಾಗಿತ್ತು. ಆದ್ದರಿಂದ ಅವರು ದಿಲ್ಲಿಯು ತಮಗೆ ಎಷ್ಟರಮಟ್ಟಿಗೆ ಅನುಕೂಲವಿದೆಯೆಂಬದನ್ನು ನೋಡಬೇಕಾಗಿತ್ತು; ಆದರೆ ಮೊಗಲಸಾಮ್ರಾಜ್ಯಾಭಿಮಾನದಿಂದ ತುಂಬಿತುಳುಕುವ ಆ ನಗರಿಯಲ್ಲಿ ಈ ವೀರರ ಕಾರ್ಯಕ್ಕೆ ಯಾರು ಅನುಕೂಲರಾಗಬೇಕು? ಇಂಥ ಅನುಕೂಲ ಪರಿಸ್ಥಿತಿಯ ಜನರನ್ನು ಅವರು ಶೋಧಿಸುವದಾದರೂ ಹ್ಯಾಗೆ? ಯಾವದೊಂದು ಕಾರ್ಯಭಾರವನ್ನು ವಹಿಸಿಕೊಂಡವರಿಗೆ ಆ ಕಾರ್ಯವು ನೆರವೇರುವ ವರೆಗೆ ಮನಸ್ಸು ಅದೇ ವಿಚಾರದಲ್ಲಿಯೇ ಗುಂಗಾಗಿರುವದು ಸ್ವಾಭಾವಿಕವು. ಅದರಂತೆ ನಮ್ಮ ಆ ವೀರ ಚೌಕಳಿಯ ಮನಸ್ಸಾದರೂ ಆ ಕಾರ್ಯದಲ್ಲಿ ಗುಂಗಾಗಿತ್ತು. ಅವರು ದಿಲ್ಲಿಯ ಹೊರಭಾಗದಲ್ಲಿ ಕುಳಿತು ಇಂತು ಯೋಚಿಸತೊಡಗಿದರು. ರಣಮಲ್ಲನು ಉಳಿದ ಮೂವರನ್ನು ಕುರಿತು—ಮಿತ್ರರೇ, ಕೀರ್ತಿಸಿಂಹನ ಅಪ್ಪಣೆಯ ಮೇರೆಗೆ ನಾವು ಇಲ್ಲಿಗಂತೂ ಬಂದೆವಷ್ಟೇ; ಕೀರ್ತಿಸಿಂಹನು ಹೇಳಿದಂತೆ ಇಲ್ಲಿ ಕಾರ್ಯವನ್ನು ಹ್ಯಾಗೆ ಸಾಧಿಸಬೇಕು? ನಾವು ಎಲ್ಲಿ ವಸತಿಯನ್ನು ಮಾಡಬೇಕು? ಕೇವಲ

ಶತ್ರುಗಳಲ್ಲಿಯೇ ಸೇರಿ ಇನ್ನು ಮುಂದೆ ನಾವು ಕಾರ್ಯನಿರ್ವಾಹವನ್ನು ಮಾಡಬೇಕಾದ್ದರಿಂದ ನಾವು ನಾಲ್ವರೂ ಹ್ಯಾಗೆ ನಡೆದರೆ ಮೊಗಲರ ಗುಪ್ತ ಹೇರರಿಗೆ ಸಂಶಯು ಬರಲಿಕ್ಕಿಲ್ಲ?

ರಣಮಲ್ಲನ ಈ ಮಾತುಗಳನ್ನು ಕೇಳಿ ರಣಜಿತಸಿಂಗನು—ಮಿತ್ರನೇ, ಈ ಪ್ರಚಂಡವಾದ ದಿಲ್ಲಿಯನ್ನು ನೋಡಿ ದಂಗುಬಡಿದು ಹೋದೆಯೇನು? ನಮಗೆ ಇಲ್ಲಿ ವಸತಿಗೃಹವೆಂದರೆ ಎಂತಹದು! ಶತ್ರುಗಳ ಮನೆಯೇ ನಮಗೆ ವಾಸಸ್ಥಳವು. ಸಾಂಕೇತಿಕ ಶಬ್ದಗಳೇ ನಾವು ಮಾತಾಡತಕ್ಕ ಭಾಷೆಯು. ನಾಲ್ವರೂ ಒಂದೆಡೆಯಲ್ಲಿ ಇರುವಂತಿಲ್ಲ. ಬೇರೆ ಬೇರೆ ವೇಷವನ್ನಳವಡಿಸಿ ಕೊಂಡು ಶತ್ರುಗಳ ಮನೆಯಲ್ಲಿ ಸೇರಿ ಕಾರ್ಯ ಸಾಧಿಸುವದೇ ನಮ್ಮ ಮುಖ್ಯ ಕರ್ತವ್ಯವು. ಮಿತ್ರನೇ, ನೀನು ಮಾನಸಿಂಹನ ದಂಡಿನಲ್ಲಿ ಪ್ರವೇಶಿಸಿ ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೋ, ನಾನು ನಮ್ಮ ರಾಜವಂಶವನ್ನು ಸೆರೆಯಿರಿಸಿದ ಸ್ಥಳವನ್ನು ಶೋಧಿಸಿ, ಅಲ್ಲಿಯ ಅನುಕೂಲ ಪ್ರತಿಕೂಲ ಪರಿಸ್ಥಿತಿಗಳನ್ನು ತಿಳಿಯುತ್ತೇನೆ. ಈ ಅಂಬಾದಾಸನು ಮುಸಲ್ಮಾನ ಅಧಿಕಾರಿಗಳ ಒಗರನ್ನು ತಿಳಿದುಕೊಳ್ಳಲಿ; ಈ ರಾಮಸಿಂಗನು ಈ ದಿಲ್ಲಿಯಲ್ಲಿ ಯಾರಾದರೂ ಮಾಳವಾ ರಜಪೂತರು ಗುಪ್ತವಾಗಿ ವಾಸಿಸುವರೋ ಎಂಬದನ್ನು ಗೊತ್ತು ಹಚ್ಚಿಕೊಂಡು ಬರಲಿ. ಈ ಪ್ರಕಾರ ನಾವು ನಾಲ್ವರೂ ನಾಲ್ಕು ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಬಂದೆವೆಂದರೆ ಮುಂದೆ ನಮ್ಮ ರಾಜವಂಶವನ್ನು ಇಲ್ಲಿಂದ ದಾಟಸಲಿಕ್ಕೆ ವಿಲಂಬ ಹಿಡಿಯುವದಿಲ್ಲ. ಯಾಕೆ ನನ್ನ ಮಾತಿಗೆ ನಿಮ್ಮೆಲ್ಲರ ಅಭಿಪ್ರಾಯವೇನು? ಎಂದನು.

ವಸ್ತುತಃ ವಿಚಾರ ಮಾಡಿದರೆ ರಣಮಲ್ಲನು ಸ್ವಲ್ಪ ಗಾಬರಿಯಾಗಿದ್ದನು. ಆತನು ರಣಕುಶಲನು. ಯುದ್ಧಭೂಮಿಯಲ್ಲಿ ಎದುರಾದ ಶತ್ರುವನ್ನು ಸಂಹರಿಸುವಲ್ಲಿ ಆತನು ಗಟ್ಟಿಗನು; ಆದರೆ ಗುಪ್ತಹೇರರ ಕೆಲಸವನ್ನು ಮಾಡಿ, ಅವನಿಗೆ ಎಂದೂ ಅನುಭವವಿದ್ದಿಲ್ಲ. ಕೇವಲ ಕೀರ್ತಿಸಿಂಹನ ಪ್ರೋತ್ಸಾಹದಿಂದ ಹುರುಪುಗೊಂಡು ಈ ಮಹತ್ತರವಾದ ಕೆಲಸಕ್ಕೆ ಕೈಹಾಕಿದ್ದನು; ಆದರೆ ಪ್ರತ್ಯಕ್ಷ ಕಾರ್ಯವು ಎದುರಿಗೆ ಬಂದು ನಿಲ್ಲಲು ಹ್ಯಾಗೆ ಕಾರ್ಯ ಸಾಧನೆಯಾಗುವದೆಂಬ ಯೋಚನೆಯು ಅವನಲ್ಲಿ ಉತ್ಪನ್ನವಾಯಿತು. ಈ ಕೆಲಸದಲ್ಲಿ ಅನನುಭವಿಕನಾದ ರಣಮಲ್ಲನಿಗೆ ಹೀಗೆ ವಿಚಾರವುಂಟಾದದ್ದು ಸ್ವಾಭಾವಿಕವೇ ಸರಿ! ಆದರೆ ರಣಜಿತಸಿಂಗನು

ಇಂಥ ಗುಪ್ತಹೇರರ ಕೆಲಸಗಳ ಅನುಭವವುಳ್ಳವನಾಗಿದ್ದನು. ಅಂಬಾದಾಸ ನಿಗೂ ಸ್ವಲ್ಪ ಮಟ್ಟಿಗೆ ಅನುಭವವಿದ್ದಿತು; ಆದರೆ ರಾಮಸಿಂಗನು ಮಾತ್ರ ರಣಮಲ್ಲನಂತೆ ಅನನುಭವಿಕನಾಗಿದ್ದನು. ಇವರಿಗೆ ಒಂದು ಹೊಡತ ಎರಡು ತುಂಡು ಮಾಡುವದೊಂದೇ ಕೆಲಸವು ಗೊತ್ತಿತ್ತಲ್ಲದೆ, ಚತುರೋ ಪಾಯಗಳು ಗೊತ್ತಿರಲಿಲ್ಲ; ಆದ್ದರಿಂದ ಈ ಕೆಲಸದಲ್ಲಿ ರಣಜಿತಸಿಂಗನೇ ಮುಖ್ಯತ್ವವನ್ನು ವಹಿಸಬೇಕಾಯಿತು. ಆಗ ರಣಮಲ್ಲನು:—ರಣಜಿತಸಿಂಗ, ನಾನು ಖಡ್ಗವಿದ್ಯೆಯಲ್ಲಿ ನಿನಗಿಂತ ಬಲ್ಲಿದನಾದರೂ ಈ ಗುಪ್ತಹೇರ ಕೆಲಸ ದಲ್ಲಿ ನಾನು ನಿನ್ನನ್ನು ಸರಿಗಟ್ಟಲಾರೆನು. ಈ ವಿಷಯದಲ್ಲಿ ನನಗೆ ಏನೂ ಗೊತ್ತಿಲ್ಲವೆಂದರೂ ನಡೆಯುವದು. ಗುಪ್ತಹೇರರು ಹೇಗೆ ಹೇಗೆ ಕೆಲಸ ಮಾಡುವರೆಂಬದನ್ನು ಮಾತ್ರ ಬಲ್ಲೆನು; ಆದರೆ ಪ್ರತ್ಯಕ್ಷ ಕೆಲಸಮಾಡಿ ನನಗೆ ಅನುಭವವಿಲ್ಲ. ತಾರ್ಕಿಕ ಅನುಭವಕ್ಕೂ, ಪ್ರತ್ಯಕ್ಷ ಕೆಲಸಮಾಡಿದ ಅನುಭವಕ್ಕೂ ಮಹದಂತರವಿರುತ್ತದೆ. ಪ್ರತ್ಯಕ್ಷ ಕೆಲಸಮಾಡಿದ ಅನುಭ ವವೇ ನಿಜವಾದ ಅನುಭವವು. ವಸ್ತುಸ್ಥಿತಿ ಹೀಗಿದ್ದದರಿಂದ ನೀನು ಮತ್ತು ಅಂಬಾದಾಸರಿಬ್ಬರೂ ಇದರಲ್ಲಿ ಮುಖ್ಯರಾಗಿರಿ. ನಾನೂ, ರಾಮಸಿಂಗನೂ ನೀವು ಹೇಳಿದ ಹಾಗೆ ಕೇಳುವೆವು. ನೀವು ಏನು ಮಾಡೆಂದು ಹೇಳುವಿರೋ ಅದನ್ನು ಮಾಡುವೆವು. ನಮ್ಮಿಬ್ಬರಿಂದ ಹೆಚ್ಚು ಕೆಲಸವಾಗದಿದ್ದರೂ ನಾವು ಶತ್ರುಗಳ ಕೈಯಲ್ಲಿ ಸಿಕ್ಕು, ನಮ್ಮ ಗುಪ್ತಕಾರಸ್ಥಾನವು ಮಾತ್ರ ಅವರಿಗೆ ತಿಳಿಯದಂತೆ ಜಾಗರೂಕರಾಗಿರುತ್ತೇವೆ ಮುಖ್ಯ ಕೆಲಸವನ್ನು ಹ್ಯಾಗೆ ಸಾಧಿಸಬೇಕೆಂಬ ವಿಷಯದಲ್ಲಿ ನೀನೇ ಹಂಚಿಕೆಮಾಡು, ಎಂದು ನುಡಿದನು. ರಣಜಿತಸಿಂಗನು:—ಮಿತ್ರನೇ, ಕೆಲಸ ಮಾಡುತ್ತ ಹೋದರೆ ತಾನೇ ಬರುವದು. ನಿನ್ನಂಥ ಅನುಭವಿಕನಿಗೆ ಈ ಮಾತು ದೊಡ್ಡದಲ್ಲ. ನಿನ್ನಿಂದ ಕೆಲಸವು ಆಗುವದೆಂಬ ಭರವಸೆಯಿಂದಲೇ ಕೀರ್ತಿಸಿಂಹನು ನಿನ್ನ ಯೋಜನೆಯನ್ನು ಮಾಡಿದ್ದಾನೆ ಇರಲಿ, ನೀನು ಹಿರಿಯನಾಗಿಯೇ ಇರು. ನಾನು ಹೊಸ ಹೊಸ ಯುಕ್ತಿಗಳನ್ನು ಹುಡುಕಿ ನಿನ್ನ ಮುಂದೆ ಹೇಳು ತ್ತೇನೆ. ಅವು ನಿನಗೆ ಒಪ್ಪಿಗೆಯಾದವೆಂದರೆ ಅವನ್ನು ಬಳಿಕೆಯಲ್ಲಿ ತರೋಣ. ಎಂದು ನುಡಿದನು. ರಣಜಿತಸಿಂಗನ ಮಾತಿಗೆ ರಣಮಲ್ಲನು ಹಾಗೇ ಆಗ ಲೆಂದು ಒಪ್ಪಿದನು. ಆಗ ಮಧ್ಯಾಹ್ನವಾದ್ದರಿಂದ ಅವರೆಲ್ಲರೂ ಮುಸ ಲ್ಮಾನ ಸಾಧುವಿನ ವೇಷವ ಧರಿಸಿ, ಉದರಂಭರಣಕ್ಕಾಗಿ ಹಿಟ್ಟು-ಬೇಳೆ

ಮೊದಲಾದ ಪದಾರ್ಥಗಳನ್ನು ಸಂಗ್ರಹಿಸುವದಕ್ಕೆ ದಿಲ್ಲಿಯೊಳಗೆ ಹೋದರು.

ಗುಪ್ತಹೇರನ ಕೆಲಸದಲ್ಲಿ ನುರಿತವನಾದ ರಣಜಿತಸಿಂಗನು ಒಳ್ಳೇ ಚಿತ್ತವೇಧಕವಾಗುವಂತೆ ವೇಷವ ಧರಿಸಿದ್ದನು. ಆ ನಾಲ್ವರೂ ಆ ದಿನ ವಿಶೇಷ ಕೆಲಸವನ್ನೇನೂ ಮಾಡದೆ ಬರಿಯ ಭಿಕ್ಷೆ ಬೇಡಿಕೊಂಡು ಇಂತಿಷ್ಟು ಹೊತ್ತಿಗೆ ಇಂಥ ಸ್ಥಳಕ್ಕೆ ಬರಬೇಕೆಂದು ಗೊತ್ತಾಗಿತ್ತು. ಆ ಪ್ರಕಾರ ಎಲ್ಲರೂ ಬೇರೆ ಬೇರೆ ಗಲ್ಲಿಗಳಲ್ಲಿ ಸಂಚರಿಸುತ್ತ ಮುಸಲ್ಮಾನೀ ಪದ್ಧತಿಯಂತೆ ಭಿಕ್ಷೆಬೇಡತೊಡಗಿದರು. ರಣಜಿತಸಿಂಗನು ಭಿಕ್ಷೆಬೇಡುತ್ತ ಒಂದು ಮಸೀದೆಯ ಮುಂದೆ ಹೋಗಲು ಒಬ್ಬ ಮುಸಲ್ಮಾನ ಸಾಧುವು ಅವನನ್ನು ದಿಟ್ಟಿಸಿ ನೋಡಿದನು. ರಣಜಿತಸಿಂಗನ ವೇಷವು ಒಳ್ಳೇ ಚಿತ್ತವೇಧಕವಾದ್ದರಿಂದಲೋ ಅಥವಾ ಬೇರೆ ಮತ್ತಾವ ಕಾರಣದಿಂದಲೋ ಅವನನ್ನು ಕರೆದು ಮಾತಾಡಿಸಬೇಕೆಂಬ ಬುದ್ಧಿಯು ಆ ಸಾಧುವಿಗೆ ಹುಟ್ಟಿತು. ಅವನು ಕುಳಿತ ಸ್ಥಳದಿಂದ ಎದ್ದು ಬಂದು ವೇಷಧಾರಿಯಾದ ರಣಜಿತಸಿಂಗನನ್ನು ಒದರಿದನು. ಮತ್ತು ಅವನೊಡನೆ ಅಚ್ಚ ಮುಸಲ್ಮಾನೀ ಭಾಷೆಯಿಂದ ಸಂಭಾಷಣ ನಡಿಸಿದನು. ಅವನು ಕರೆದ ಕೂಡಲೆ ರಣಜಿತಸಿಂಗನು ಸ್ವಾಭಾವಿಕವಾಗಿ ಹೋದನು, ಯಾಕಂದರೆ ತನ್ನ ವೇಷವು ಕೃತ್ರಿಮವೆಂದು ತಿಳಿಯಬಾರದೆಂದು ಅವನು ಜಪ್ಪಿಸಿಕೊಂಡಿರಬೇಕಾಗಿತ್ತು. ಆದ್ದರಿಂದ ಅವನು ಆ ಸಾಧುವಿನ ಬಳಿಗೆ ಹೋಗಿ ಒಳ್ಳೇ ವಿನಯದಿಂದ ಕುಳಿತುಕೊಂಡು ಅವನ ಪ್ರಶ್ನೆಗಳಿಗೆ ಉತ್ತರ ಕೊಡತೊಡಗಿದನು.

ಆ ಮುಸಲ್ಮಾನ ಸಾಧುವು ಒಳ್ಳೇ ಚಾಣಾಕ್ಷನಿದ್ದನು. ಅವನಿಗೆ ರಣಜಿತಸಿಂಗನ ಈ ವೇಷವು ಕೃತ್ರಿಮವೆಂದು ತಿಳಿದು ಹೋಯಿತು. ಅವನು ಮನಸ್ಸಿನಲ್ಲಿ:—ಈತನು ಯಾವನೋ ಒಬ್ಬ ನಿಷ್ಣಾತ ಗುಪ್ತಹೇರನಿರುವನು. ಸಾಮಾನ್ಯರಿಗೆ ಇವನ ಈ ಛದ್ಮವೇಷವು ಸ್ವಲ್ಪವೂ ತಿಳಿಯುವಂತಿಲ್ಲ; ಎಂದು ಮನಸ್ಸಿನಲ್ಲಿ ಅಂದುಕೊಂಡು ಅವನೆದುರಿಗೆ ರಾಜಕಾರಣದ ಸುದ್ದಿಯನ್ನು ತೆಗೆದನು. ಹೀಗೆ ಮುಸಲ್ಮಾನ ಸಾಧುವು ರಾಜಕಾರಣದ ಸುದ್ದಿಯನ್ನು ತೆಗೆದದ್ದನ್ನು ಕಂಡು ಫಕ್ಕೀರವೇಷಧಾರಿಯಾದ ರಣಜಿತಸಿಂಗನಿಗೆ ಸ್ವಲ್ಪ ಯೋಚನೆಯಾಯಿತು. ಈ ಸಾಧುವು ಬಹಳ ಚತುರನಿದ್ದು ಇವನ ಮುಂದೆ ನಮ್ಮ ವೇಷವನ್ನು ನಿಸ್ತರಿಸಿಕೊಳ್ಳು

ವದು ಕಠಿಣವಿದೆಯೆಂದು ತಿಳಿದು ಅವನ ಮಾತುಗಳಿಗೆ ಉತ್ತರ ಕೊಡುವದನ್ನೇ ನಿಲ್ಲಿಸಿದನು. ಕೆಲಹೊತ್ತಿನವರೆಗೆ ಒಬ್ಬನೇ ಮಾತಾಡಿದ ಬಳಿಕ ಆ ಸಾಧುವು:—ಏನಿರಿ! ಫಕೀರರೇ, ನನ್ನ ಮಾತಿಗೆ ಉತ್ತರವನ್ನೇ ಕೊಡಲಿಲ್ಲವಲ್ಲ? ಎಂದನು. ಆಗ ಫಕೀರನು:—ನಾನು ಹೇಳಿಕೇಳಿ ಫಕೀರನು. ನನಗೆ ನೀವು ಮಾತಾಡಿದ ಸಂಗತಿಯು ಹ್ಯಾಗೆ ತಿಳಿಯಬೇಕು? ನಿಮ್ಮ ಮಾತಿನಲ್ಲಿ ನನಗೆ ತಿಳಿಯುವಂಥ ಒಂದೂ ಸಂಗತಿಯಿರದ್ದರಿಂದ ನಾನು ನಿಮಗೆ ಏನೆಂದು ಉತ್ತರ ಕೊಡಲಿ? ಅದಕ್ಕಾಗಿ ಸುಮ್ಮನಿರುವೆನು, ಎಂದು ಉತ್ತರ ಕೊಟ್ಟನು. ಆಗ ಆ ಸಾಧುವು ಈತನು ನಿಜವಾಗಿ ಗುಪ್ತಹೇರನಿರುವನು. ಇವನ ಛದ್ಮವೇಷವನ್ನು ಹ್ಯಾಗಾದರೂ ಮಾಡಿ ಬೈಲಿಗೆಳೆಯಬೇಕು, ಎಂದು ಭಾವಿಸಿ ಫಕ್ಕೀರನ ವಾಸಸ್ಥಳ, ಇಲ್ಲಿಗೆ ಬಂದು ಎಷ್ಟು ದಿನಗಳಾದವು, ಎಂಬ ಮುಂತಾದ ಸಂಗತಿಗಳನ್ನು ಕೇಳಿದನು; ಆದರೆ ರಣಜಿತಸಿಂಗನು ಈ ಪ್ರಶ್ನಗಾದರೂ ಏನೆಂದು ಉತ್ತರ ಕೊಡುವನು? ನಾನು ಸಂನ್ಯಾಸಿಯು; ನನಗೆ ವಾಸಸ್ಥಳದ ನೇಮವಿಲ್ಲ. ಈ ಊರಿಗೆ ಇಂದೇ ಬಂದಿರುವೆನು. ಯಾವದೊಂದು ಗಿಡದಡಿಯಲ್ಲಿ ವಾಸಿಸುವೆನು, ಎಂದು ಇಷ್ಟೇ ನುಡಿದನು. ಆಗ ಆ ಮುಸಲ್ಮಾನ ಸಾಧುವು ಹೆಚ್ಚು ಪ್ರಶ್ನಮಾಡುವ ಗೊಡವೆಗೆ ಹೋಗದೆ ಇಷ್ಟೊತ್ತಿನವರೆಗೆ ನಿಮ್ಮ ಭಿಕ್ಷೆಯ ಕೆಲಸಕ್ಕೆ ತಡೆಯನ್ನುಂಟುಮಾಡಿದ್ದಕ್ಕೆ ಕ್ಷಮೆಯಿರಲಿ, ಎಂದು ನುಡಿದು ಅವನ ಮುಖವನ್ನು ನೋಡತೊಡಗಿದನು. ಆವನ ಆ ಭೇದಕ ದೃಷ್ಟಿಯನ್ನು ಕಂಡು ರಣಜಿತಸಿಂಗನು ಮನಸ್ಸಿನಲ್ಲಿಯೇ ಅಂಜಿ ಇವನು ನನ್ನ ಛದ್ಮವೇಷವನ್ನು ನಿಶ್ಚಯವಾಗಿ ಕಂಡುಹಿಡಿದಿರುವನು. ಇವನೂ ನನ್ನಂತೆ ಒಬ್ಬ ಗುಪ್ತಹೇರನಿರುವಂತೆ ತೋರುತ್ತಿದೆ. ಹಾಗಲ್ಲದಿದ್ದರೆ ಈತನಿಗೆ ಇದೆಲ್ಲ ಉಸಾಬರಿಯು ಯಾಕೆ ಬೇಕಾಗಿತ್ತು? ಈತನು ಸಾಧುವು; ಕುರಾಣವನ್ನೋದಿ ಧರ್ಮದ ರಹಸ್ಯವನ್ನು ತಿಳಿದು ಕಾಲಕ್ಷೇಪ ಮಾಡುವದು ಇವನ ಕೆಲಸವು. ಹೀಗಿದ್ದು ಇವನು ಹಾದೀ ಹಿಡಿದು ಹೋಗುವ ನಮ್ಮಂಥ ವೇಷಧಾರೀ ಫಕ್ಕೀರರನ್ನು ಕರೆದು ಮಾತಾಡಿಸುವದಕ್ಕೆ ಏನು ಕಾರಣವು? ಇವನು ನಿಶ್ಚಯವಾಗಿ ಗುಪ್ತಹೇರನೇ ಇರುವನು; ಆದರೆ ಇವನು ಯಾರ ಕಡೆಯವನೆಂಬದು ಮಾತ್ರ ಗೊತ್ತಾಗುವಂತಿಲ್ಲ. ಈಗ ಇವನೊಡನೆ ಹೆಚ್ಚು ಮಾತನಾಡದೆ ಹೊರಟು

ಹೋಗುವದೇ ಲೇಸು, ಎಂಬದಾಗಿ ಯೋಚಿಸಿ ಆ ಸಾಧುವನ್ನು ಕುರಿತು:-ತಮ್ಮಂಥವರು ಹೀಗೆ ಕ್ಷಮೆಯನ್ನು ಯಾಚಿಸುವ ಕಾರಣವಿಲ್ಲ. ನನ್ನಂಥ ತಿರುಕನಿಗೆ ಅನಾಯಾಸವಾಗಿ ನಿಮ್ಮ ದರುಶನವಾದದ್ದು ಸುದಿನವೆಂದು ಭಾವಿಸುತ್ತೇನೆ. ಇನ್ನು ಒಂದೆರಡುದಿನ ನಾನು ಈ ಊರಲ್ಲಿದ್ದರೆ ತಮ್ಮ ದರ್ಶನಕ್ಕೆ ಮತ್ತೆ ಬರುವೆನು. ನನಗೆ ಹೊರಡಲು ಅಪ್ಪಣೆ ಕೊಡ ಬೇಕು, ಎಂದು ನುಡಿದು, ಉತ್ತರದ ದಾರಿಯನ್ನು ಸಹ ನೋಡದೆ ಮಸೀದೆಯ ಮೆಟ್ಟಲುಗಳನ್ನಿಳಿದು ಬೀದಿಯನ್ನು ಸೇರಿದನು.

ಫಕೀರವೇಷಧಾರಿಯಾದ ರಣಜಿತಸಿಂಗನು ಹೋದಬಳಿಕ ಆ ಸಾಧುವು ಮನಸ್ಸಿನಲ್ಲಿ—ಈ ದಿನ ಕೂತಲ್ಲಿಯೇ ಕೂತು ಒಂದು ಕೆಲಸಮಾಡಿದಂತಾಯಿತು. ಇದರ ಪರಿಣಾಮವೇನಾಗುವದೋ ನೋಡೋಣ; ಎಂದು ಅಂದುಕೊಂಡು ಕುರಾಣ ಓದುವದರಲ್ಲಿ ಮಗ್ನನಾದನು.

ಇತ್ತ ರಣಜಿತಸಿಂಗನು ಬೇರೆ ಯಾವ ಮನೆಗಳಿಗೂ ಭಿಕ್ಷೆಗೆ ಹೋಗದೆ ಜೋಳಿಗೆಯಲ್ಲಿ ಬಿದ್ದಷ್ಟಕ್ಕೇ ತೃಪ್ತನಾಗಿ ಸಾಂಕೇತಿಕ ಸ್ಥಳಕ್ಕೆ ತಿರುಗಿದನು. ಅವನು ಹೋಗುವಷ್ಟರಲ್ಲಿ ಉಳಿದ ಮೂವರೂ ಭಿಕ್ಷೆಬೇಡಿಕೊಂಡು ಬಂದಿದ್ದರು. ಅವರನ್ನು ಆ ದಿಲ್ಲಿಯಲ್ಲಿ ಯಾರೂ ಮಾತಾಡಿಸಿದ್ದಿಲ್ಲ; ಆದರೆ ರಣಜಿತಸಿಂಗನು ಬಂದಬಳಿಕ ಭಿಕ್ಷೆಗೆ ಹೋದಾಗ ನಡೆದ ಸಂಗತಿಯನ್ನು ಹೇಳಲು ಉಳಿದ ಮೂವರೂ ಗಾಬರಿಯಾದರು. ರಣಜಿತಸಿಂಗನಿಗೆ ಆ ಸಾಧುವು ಕೂಡದೆ ನಮಗೇ ಕೂಡಿದ್ದರೆ ನಮ್ಮ ಹೂರಣವು ಹೊರಬಿದ್ದು ಹೋಗುತ್ತಿತ್ತು! ದೇವರು ಇದ್ದದ್ದರಲ್ಲಿಯೇ ನಮ್ಮ ಮಾನಕಾಯ್ದನು, ಎಂದು ನುಡಿದರು. ರಣಜಿತಸಿಂಗನಿಗೂ ಆ ಮುಸಲ್ಮಾನ ಸಾಧುವು ಯಾರಾಗಿರಬಹುದೆಂಬ ಯೋಚನೆಯೇ ಬಾಧಿಸತೊಡಗಿತ್ತು. ಆ ನಾಲ್ವರೂ ಆ ದಿನ ಅದೇ ಯೋಚನೆಯನ್ನೇ ಮಾಡಿದರು; ಆದರೆ ಬರಿಯ ಯೋಚನೆಯಿಂದ ಆ ಮುಸಲ್ಮಾನ ಸಾಧುವು ಯಾರೆಂಬದು ಅವರಿಗೆ ಹ್ಯಾಗೆ ತಿಳಿಯಬೇಕು? ಆಗ ರಣಜಿತಸಿಂಗನು:—ಮಿತ್ರರೇ, ಈ ಬಗ್ಗೆ ಈಗ ಯೋಚನೆ ಸಾಕು! ನಾಳೆಗೆ ಮತ್ತೆ ಇದೇ ವೇಷದಿಂದಲೇ ಆ ಮುಸಲ್ಮಾನ ಸಾಧುವಿನ ಬಳಿಗೆ ಹೋಗಿ ಅವನು ಯಾರೆಂಬದನ್ನು ತಿಳಿದು ಬರುತ್ತೇನೆ. ಎಂದು ನುಡಿದನು. ಆತನ ಈ ಮಾತು ಆ ಮೂವರಿಗೆ ಸರಿಯಾಗಿ ಕಾಣಲಿಲ್ಲ. ಅವರು—ಆ ಸಾಧುವು ಯಾರಾಗಿರಬಹುದೆಂಬ ಯೋಚನೆಯಲ್ಲಿಯೇ ಪುನಃ ಮಗ್ನರಾದರು.

೧೧—ಸಾಧುವಿನ ವೃತ್ತಾಂತ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ರಣಜಿತಸಿಂಗನನ್ನು ಕರೆದ ಆ ಮುಸಲ್ಮಾನೀ ಸಾಧುವು ಯಾರೆಂಬದನ್ನು ತಿಳಿಯುವದಕ್ಕಾಗಿ ನಮ್ಮ ವಾಚಕರು ಆತುರಪಡುತ್ತಿರಬಹುದು; ಅದ್ದರಿಂದ ಈ ಪ್ರಕರಣದಲ್ಲಿ ಆ ಸಾಧುವಿನ ವೃತ್ತಾಂತವನ್ನೇ ಹೇಳಿಬಿಡುವೆವು.

ಆ ಸಾಧುವು ರಣಜಿತಸಿಂಗನ ತರ್ಕದಂತೆ ನಿಜವಾದ ಸಾಧುವಾಗಿರದೆ, ಕಪಟವೇಷದ ಸಾಧುವಾಗಿದ್ದನು. ಅವನು ಕಾರ್ಯಸಾಧುವಾಗಿದ್ದನು, ಅವನು ಬುಂದೇಲ ಖಂಡದಲ್ಲಿ ಒಬ್ಬ ಸಣ್ಣ ಜಾಹಗೀರದಾರನು. ಆತನ ಹೆಸರು ಭವಾನಸಿಂಗ; ಈತನು ತನ್ನ ದುರಾಚರಣೆಯಿಂದ ಸಂಸ್ಥಾನ ಚ್ಯುತನಾಗಿದ್ದನು; ಇವನು ಸ್ತ್ರೀ ಕಾಮುಕನು; ಅಕಬರನ ದರ್ಬಾರದಲ್ಲಿ ಇಮಾಮುಖಾನನೆಂಬ ಒಬ್ಬ ದೊಡ್ಡ ಸರದಾರನಿದ್ದನು. ಆತನಿಗೆ ಆಯೇಷೆ ಎಂಬ ಸುಂದರಿಯೂ, ತರುಣಿಯೂ ಆದ ಮಗಳಿದ್ದಳು. ಆಕೆಯ ಸೌಂದರ್ಯವು ಲೋಕೋತ್ತರವಾಗಿತ್ತು. ಭವಾನಸಿಂಗನು ಸಂಸ್ಥಾನಿಕನಿರುವಾಗಲೇ ಆಯೇಷೆಯನ್ನು ಒಮ್ಮೆ ನೋಡಿ ಆಕೆಯ ಸೌಂದರ್ಯಕ್ಕೆ ಮೋಹಿಸಿದ್ದನು. ದುಷ್ಕರ್ಮದಿಂದ ರಾಜ್ಯಚ್ಯುತನಾದರೂ ಆ ಸುಂದರಿಯ ಹುಚ್ಚು ಅವನನ್ನು ಬಿಡಲಿಲ್ಲ. ಆಗ ಅವನು ಪದಭ್ರಷ್ಟನಾಗಿ ದಿಲ್ಲಿಗೇ ಬಂದನು. ಆ ಸುಂದರಿಯ ಪ್ರಾಪ್ತಿಗಾಗಿ ಪ್ರಯತ್ನಿಸಹತ್ತಿದನು. ಅಕಬರನ ದರ್ಬಾರದ ದೊಡ್ಡ ಸರದಾರನ ಮಗಳು ಈತನಿಗೆ ಪ್ರಾಪ್ತವಾಗುವ ಬಗೆ ಹೇಗೆ? ಅವನು ಪ್ರಯತ್ನಪಟ್ಟಾದರೂ ಏನು ಮಾಡುವನು? ಭವಾನಸಿಂಗನು ಚಾಣಾಕ್ಷನಿದ್ದನು; ಕುಶಲನಿದ್ದನು; ಆದರೆ ಸ್ತ್ರೈಣನಿದ್ದದರಿಂದ ಅವನ ಸದ್ಗುಣಗಳೆಲ್ಲ ಕೆಲಸಕ್ಕೆ ಬಾರದಾಗಿದ್ದವು. ಆತನು ತನ್ನ ಶಕ್ತಿಸರ್ವಸ್ವವನ್ನೆಲ್ಲ ವೆಚ್ಚಮಾಡಿ, ಆಯೇಷೆಯನ್ನು ಅಪಹರಿಸಬೇಕೆಂದು ಯತ್ನ ನಡಿಸಿದನು.

ತಾನು ರಜಪೂತನಿದ್ದು, ಆಯೇಷಿಯು ಮುಸಲ್ಮಾನಳಿದ್ದದರಿಂದ ತನಗೆ ಆಕೆಯು ಲಭಿಸಲಾರಳೆಂಬದು ಕೆಲದಿನಗಳ ಮೇಲೆ ಆತನಿಗೆ ಕಂಡು ಬರಲು ಆ ಕಾರ್ಯಸಾಧಕನು ಕೂಡಲೆ ಮುಸಲ್ಮಾನನಾಗಿ ಆ ಧರ್ಮದ

ಸಾಧುವೇಷವನ್ನು ಧರಿಸಿದನು. ಹೀಗೆ ಸಾಧುವಿನವೇಷ ಧರಿಸುವದರಲ್ಲಿ ಅವನ ಉದ್ದೇಶವು ಯಾವದಿತ್ತೆಂಬದನ್ನು ಬರೆದು ತೋರಿಸುವ ಕಾರಣ ವಿಲ್ಲ. ಅವನು ಆಯೇಷಿಯ ಅಪಹರಣಕ್ಕಾಗಿಯೇ ಮುಸಲ್ಮಾನನಾಗಿದ್ದನು ಮತ್ತು ಅದಕ್ಕಾಗಿಯೇ ಕೃತ್ರಿಮಸಾಧುತ್ವವನ್ನು ಧರಿಸಿದ್ದನು. ಹೀಗೆ ದುಷ್ಕಾರ್ಯ ಸಾಧನೆಗಾಗಿ ಸಾಧುವಾದ ಭವಾನಸಿಂಗನು ಹಲವು ಹಂಚಿಕೆಗಳಿಂದ ಶಿಷ್ಯ ಸಂಪತ್ತನ್ನು ಬೆಳಿಸಿಕೊಂಡಿದ್ದನು. ಇದರಿಂದ ತಾನೊಬ್ಬನು ಮುಸಲ್ಮಾನರಲ್ಲಿ ಪ್ರಸಿದ್ಧ ಸಾಧುವೆಂದೆನಿಸಿಕೊಂಡು ದರ್ಬಾರದಲ್ಲಿ ಕೂಡಾ ತನ್ನ ಪ್ರಸ್ಥವನ್ನು ಬೆಳಿಸಬೇಕೆಂದು ಮಾಡಿದ್ದನು. ಒಮ್ಮೆ ದರ್ಬಾರದಲ್ಲಿ ತನ್ನ ಪ್ರಸ್ಥವು ಬೆಳಿಯಿತೆಂದರೆ ತನ್ನ ಸಾಧುತ್ವದ ಯೋಗದಿಂದ ಅಂತಃಪುರದಲ್ಲಿ ಸಹ ಪ್ರವೇಶವಾಗುವದು. ಈ ಪ್ರವೇಶ ದಿಂದ ಆಯೇಷಿಯನ್ನು ಸಹಜವಾಗಿ ಅಪಹರಿಸಬಹುದೆಂದು ಅವನು ಭಾವಿಸಿದ್ದನು. ದುರ್ಜನರು ಸ್ವಕಾರ್ಯಸಾಧನೆಗಾಗಿ ಯಾವ ವೇಷ ವನ್ನು ಹಾಕುವರೆಂಬದು ತಿಳಿಯುವದಿಲ್ಲ.

ಭವಾನಸಿಂಗನು ಮುಸಲ್ಮಾನನಾದದ್ದೂ, ಸಾಧುವಾದದ್ದೂ ಸದ್ಯಕ್ಕಂತೂ ನಿರರ್ಥಕವಾದಂತಾಗಿತ್ತು. ಅವನು ಕಲ್ಪಿಸಿದಂತೆ ಅವನ ಯಾವ ಮನೋರಥಗಳೂ ಪೂರ್ಣವಾಗಿದ್ದಿಲ್ಲ. ಸಾಮಾನ್ಯ ಜನರಲ್ಲಿ ಮಾತ್ರ ಅವನ ಪ್ರಸ್ಥವು ಬೆಳಿದಿತ್ತು. ಆ ಸ್ತ್ರೀ ಪ್ರಲೋಭಿಯು ಆಯೇಷಿಯು ತನಗೆ ಎಂದು ಕೈವಶವಾಗುವಳೋ ಎಂದು ಮನದಲ್ಲಿಯೇ ಚಡಪಡಿಸುತ್ತಿದ್ದನು. ಸಾಧುತ್ವದ ನೆವದಿಂದಾಗಲಿ, ರಾಜಕಾರಣದ ನೆವದಿಂದಾಗಲಿ ದರ್ಬಾರದಲ್ಲಿ ತನ್ನ ಪ್ರತಿಷ್ಠೆ ಬೆಳಿದು ಮುಸಲ್ಮಾನರ ರಾಣೀವಾಸದಲ್ಲಿ ತನ್ನ ಪ್ರವೇಶವಾಗುವದಕ್ಕೆ ಮಾರ್ಗವಾಗಬೇಕೆಂದು ಅವನು ಇಚ್ಛಿಸುತ್ತಿದ್ದನು. ಹೀಗೆ ಅವನು ಬಯಸುತ್ತಿರಲು, ಫಕೀರವೇಷಧರಿಸಿದ ರಣಜಿತಸಿಂಗನನ್ನು ಅವನು ನೋಡಿದನು.

ಭವಾನಸಿಂಗನು ಬಹು ಧೂರ್ತನೂ, ಚಾಣಾಕ್ಷನೂ ಆಗಿದ್ದನೆಂದು ಈಮೊದಲೇ ಹೇಳಿದೆಯಷ್ಟೇ; ವೇಷಧಾರಿಯಾದ ರಣಜಿತಸಿಂಗನನ್ನು ನೋಡಿದ ಕೂಡಲೆ ಅವನಿಗೆ ಇವನು ಗುಪ್ತಹೇರನಿರಬೇಕೆಂಬದು ತಿಳಿದು ಹೋಯಿತು. ಅದಕ್ಕಾಗಿಯೇ ಅವನು ರಣಜಿತಸಿಂಗನನ್ನು ತನ್ನೆದುರಿಗೆ ಕರೆದು ಅವನೊಡನೆ ಸಂಭಾಷಣ ನಡಿಸಿ, ಅವನು ನಿಜವಾದ ಮುಸಲ್ಮಾನ

ನಲ್ಲವೆಂಬದನ್ನು ಕಂಡುಹಿಡಿದು ಮನಸ್ಸಿನ ಸಮಾಧಾನವನ್ನು ಮಾಡಿ ಕೊಂಡನು.

ದುರ್ಜನರು ಸ್ವಕಾರ್ಯಸಾಧನೆಗಾಗಿ ಎಂಥ ದುಷ್ಕೃತ್ಯವನ್ನಾದರೂ ಮಾಡಲು ಹಿಂದುಮುಂದು ನೋಡುವದಿಲ್ಲ. ಅದರಲ್ಲಿ ಭವಾನಸಿಂಗನಂಥ ದುರ್ಜನರು ದೌರ್ಜನ್ಯದ ಪರಮಾವಧಿಯನ್ನು ಹೊಂದಿದವರು. ದೌರ್ಜನ್ಯದಿಂದ ರಾಜ್ಯಭ್ರಷ್ಟರಾದವರು. ಇಂಥವರು ಯಾವ ಪಾಪವನ್ನು ಆಚರಿಸಲು ಹಿಂದು ಮುಂದು ನೋಡುವರು? ಭವಾನಸಿಂಗನಿಗೆ ರಣಜಿತಸಿಂಗನು ಭೆಟ್ಟಿಯಾದದ್ದೊಂದು ಅಪೂರ್ವ ಪ್ರಸಂಗವೊದಗಿದಂತಾಯಿತು. ಈ ಪ್ರಸಂಗದಿಂದ ತಾನು ದರ್ಬಾರದಲ್ಲಿ ಪ್ರವೇಶಮಾಡಬಹುದೇನೆಂದು ಮನದಲ್ಲಿ ಎಣಿಕೆ ಹಾಕಲಾರಂಭಿಸಿದನು. ಮುಸಲ್ಮಾನ ಭಿಕ್ಷುಕನ ವೇಷಧಾರಿಯಾದ ಈ ತರುಣನು ನಿಜವಾದ ಗುಪ್ತಹೇರನಾಗಿದ್ದ ಪಕ್ಷದಲ್ಲಿ ಇವನನ್ನು ಹಿಡಿದು ಬಾದಶಹನ ವಶಮಾಡಿದರೆ ನನ್ನ ಮೇಲೆ ಆತನು ಪ್ರಸನ್ನನಾಗಬಹುದು. ಬಾದಶಹನ ಪ್ರಸನ್ನತೆಯಿಂದ ಅವನ ಸರದಾರರ ಪರಿಚಯವು ಸಹಜವಾಗಿ ಆಗಲು ಮಾರ್ಗವಾಗುವದು. ಅದರಲ್ಲಿ ನಾನು ಮುಸಲ್ಮಾನ ಸಾಧುವಿದ್ದದರಿಂದ ನನ್ನನ್ನು ಮುಸಲ್ಮಾನ ಸರದಾರರು ವಿಶೇಷವಾಗಿ ಪ್ರೀತಿಸುವರು. ಮುಸಲ್ಮಾನ ಸರದಾರರು ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ನನ್ನನ್ನು ಗೌರವಿಸುವರು. ಇಮಾಮುಖಾನನೂ ನನ್ನನ್ನು ಕರೆದೊಯ್ಯುವನು. ಆಗ ಅವನ ಮನೆಯಲ್ಲಿರುವ ಆಯೇಷೆಯ ದರ್ಶನವು ನನಗೆ ಸ್ವಾಭಾವಿಕವಾಗಿ ಆಗುವದು. ನಾನು ನನ್ನ ಚಾತುರ್ಯದಿಂದ ಇಮಾಮುಖಾನನನ್ನು ಚನ್ನಾಗಿ ವಶಮಾಡಿಕೊಂಡರೆ ಅವನ ಮನೆಯಲ್ಲಿಯೇ ನನ್ನ ನಿರಂತರ ವಾಸ್ತವ್ಯವಾಗಬಹುದು. ಇದರಿಂದ ಆಯೇಷೆಯ ನಿಕಟ ಸಾನ್ನಿಧ್ಯವು ನನಗೆ ಉಂಟಾಗುವದು. ಇಷ್ಟು ಸಂಧಿಯು ದೊರೆತ ಬಳಿಕ ಈ ಬಹಾದ್ದೂರ ಭವಾನಸಿಂಗನಿಗೆ ಮುಂದಿನ ಕಾರ್ಯವನ್ನು ಸಾಧಿಸಲು ವಿಶೇಷ ಶ್ರಮ ಹತ್ತಲಾರದು. ಸಂಧಿಯು ದೊರೆತ ಕೂಡಲೆ ಆಯೇಷೆಯೊಡನೆ ಪಲಾಯನವನ್ನು ಹೇಳಿಸಲೂ ಬರುವದು. ಇದರಿಂದ ಆಯೇಷೆಯು ಆಮರಣ ನನ್ನ ಪದರಿನಲ್ಲಿ ಉಳಿಯುವಳು. ನಾನು ಧನ್ಯನಾಗುವೆನು. ಆ ಲೋಕೋತ್ತರ ಸುಂದರಿಯೊಡನೆ ನಾನು ಸ್ವರ್ಗೀಯ ಸೌಖ್ಯವನ್ನೇ ಅನುಭವಿಸುವೆನು.'' ಎಂಬದಾಗಿ ಮನಸ್ಸಿನಲ್ಲಿ ಮನೋ

ರಾಜ್ಯವನ್ನು ಕಲ್ಪಿಸತೊಡಗಿದನು. ಅವನ ಈ ಎಲ್ಲ ಮನೋರಾಜ್ಯದ ಅಸ್ತಿಭಾರಕ್ಕೆ ರಣಜಿತಸಿಂಗನೇ ಕಾರಣನಾದ್ದರಿಂದ ಅವನ ಸ್ನೇಹ ಸಂಪಾದಿಸಿ ಅವನ ಗುಟ್ಟು ತಿಳಿದು, ಪ್ರಸಂಗ ನೋಡಿ ಅವನನ್ನು ಹಿಡಿದು ಬಾದಶಹನ ಕಡೆಗೆ ಕಳುಹಿಸಬೇಕೆಂದೇ ಅವನು ನಿರ್ಧರಿಸಿದನು.

ಪ್ರಿಯ ವಾಚಕರೇ, ನೋಡಿದಿರಾ! ದುರ್ಜನರ ದೌರ್ಜನ್ಯವನ್ನು! ಆ ಮುಸಲ್ಮಾನ ಭಿಕ್ಷುಕನ ವೇಷಧಾರಿಯು ಯಾರು? ಅವನು ಗುಪ್ತಹೇರನಾಗಿ ಇಲ್ಲಿಗೆ ಯಾವ ಕಾರ್ಯಕ್ಕೋಸ್ಕರ ಬಂದಿರಬಹುದು? ಎಂಬದನ್ನಾವುದನ್ನೂ ತಿಳಿಯುದೆ ಆ ದುರ್ಜನ ಭವಾನಸಿಂಗನು ಅವನನ್ನು ಹಿಡಿದು ಬಾದಶಹನಿಗೊಪ್ಪಿಸಿ ತನ್ನ ಕಾರ್ಯಸಾಧನೆಗೆ ಮಾರ್ಗವ ಮಾಡಿಕೊಳ್ಳಬೇಕೆಂದು ಮನಸ್ಸಿನಲ್ಲಿ ಮನೋರಾಜ್ಯವನ್ನು ಮಾಡತೊಡಗಿದನು. ಹಾಯ್! ಹಾಯ್! ಇಂಥ ದುರ್ಜನರ ದೌರ್ಜನ್ಯಕ್ಕೆ ಧಿಃಕಾರವು!!

ಈ ಮೇರೆಗೆ ಭವಾನಸಿಂಗನು ಮನಸ್ಸಿನಲ್ಲಿ ಸಮೀಚೀನವಾದ ಮನೋರಾಜ್ಯವನ್ನು ತಾಳುತ್ತಿರಲು, ಇತ್ತ ರಣಜಿತಸಿಂಗನು ತನ್ನ ಮಿತ್ರರೊಡನೆ ಈದಿನ ಒಂದು ಜಲಾಶಯದ ಬಳಿಯಲ್ಲಿ ಅಡಿಗೆಯನ್ನು ಮಾಡಿ, ಊಟವಾದನಂತರ ನಿರ್ಜನವಾದ ಪ್ರದೇಶದಲ್ಲಿ ತಮ್ಮ ಕಾರ್ಯಸಾಧನೆಯ ವಿಚಾರವನ್ನು ಮಾಡತ್ತೊಡಗಿದನು. ಅವನು ಬಂದಕೂಡಲೆ ಹೇಳಿದ ಸಂಗತಿಯಿಂದ ರಣಮಲ್ಲನಿಗೆ ಸೊಗಸು ಇಲ್ಲದಂತಾಗಿತ್ತು. ಮೊದಲನೆಯ ದಿನವೇ ಒಬ್ಬ ಮುಸಲ್ಮಾನ ಸಾಧುವು ನಮ್ಮ ಛದ್ಮವೇಷವನ್ನು ಕಂಡು ಹಿಡಿದದ್ದರಿಂದ ಇನ್ನು ಮುಂದೆ ನಾವು ಈ ಊರಿನಲ್ಲಿ ವೇಷಾಂತರಗಳಿಂದ ಅಡ್ಡಾಡಿ ಕಾರ್ಯಸಾಧನೆ ಮಾಡುವದು ಕಠಿಣವೇ ಸರಿ, ಎಂದು ಅವನು ಭಾವಿಸಿದ್ದನು; ಅದರಂತೆ ಅಂಬಾದಾಸ-ರಾಮಸಿಂಗ ಇವರಿಗೂ ಅಸಮಾಧಾನವಾಗಿತ್ತು; ಆದರೆ ರಣಜಿತಸಿಂಗನು ಮಾತ್ರ ನಿರುತ್ಸಾಹಿಯಿರದೆ ಮೊದಲಿನ ಉತ್ಸಾಹವನ್ನೇ ಸ್ಥಿರವಾಗಿಟ್ಟುಕೊಂಡಿದ್ದನು. ಅವನು ನಿರುತ್ಸಾಹಿಗಳಾದ ಮೂವರು ಸ್ನೇಹಿತರನ್ನು ಕುರಿತು:—ಯಾಕೆ ರಣಮಲ್ಲಜೀ, ನೀವು ಒಂದೇದಿನ ಊರಲ್ಲಿ ತಿರುಗುವದರಿಂದ ದಣಿದು ಕಂಗಾಲಾದಿರೇನು? ಎಂದು ಪ್ರಶ್ನಮಾಡಿದನು. ಅದಕ್ಕೆ ರಣಮಲ್ಲನು:-ಮಿತ್ರನೇ, ನೀನು ಹೇಳಿದ ಸುದ್ದಿಯಿಂದ ನನಗೆ ಸ್ವಲ್ಪವೂ ಸಮಾಧಾನವಿಲ್ಲದಾಗಿದೆ. ನಮ್ಮ ಗುಪ್ತ ಕಾರಸ್ಥಾನದ ಸ್ಫೋಟವಾಗಿ ನಮ್ಮ ರಾಜವಂಶವು ಮತ್ತಿಷ್ಟು ದುಃಖಕ್ಕೆ

ಎಲ್ಲಿ ಕಾರಣವಾಗುವದೋ ಎಂಬ ಭೀತಿಯು ನನಗುಂಟಾಗಿದೆ. ಏನು ಮಾಡಲಿ! ಈ ಕಾಲಕ್ಕೆ ನನಗೆ ಏನೂ ತಿಳಿಯದಂತಾಗಿದೆ. ಸ್ವಾಮಿ, ಏಕಲಿಂಗಜಿಯೇ ಈ ಕಾಲಕ್ಕೆ ನಮ್ಮ ರಾಜವಂಶವನ್ನು ಸಂರಕ್ಷಿಸಬೇಕಲ್ಲದೆ, ಅನ್ಯರಿಂದ ಸಾಧ್ಯವಿರುವದಿಲ್ಲ, ಎಂದು ನುಡಿದನು. ರಣಜಿತಸಿಂಗನು ಮಂದಹಾಸ್ಯದಿಂದ:—ರಣಮಲ್ಲಜೀ, ನೀವು ಹೇಳುವದು ನಿಜವೇ ಸರಿ! ಆದರೆ ಹೀಗೆ ಹತಾಶರಾದರೆ ಯಾವ ಪೌರುಷವನ್ನು ಪ್ರಕಟಿಸಿದಂತಾಯಿತು? ನಾನು ಆ ಸಂಗತಿಯನ್ನು ನಿಮ್ಮ ಮುಂದೆ ಹೇಳದಿದ್ದರೇ ಒಳಿತಾಗುತ್ತಿತ್ತೆಂದು ನನಗನಿಸಿದೆ. ಇದಕ್ಕಾಗಿ ನೀವು ಇಷ್ಟೊಂದು ಭಯಗೊಳ್ಳಲು ಕಾರಣವಿಲ್ಲ. ಒಂದುವೇಳೆ ನಮ್ಮ ಛದ್ಮವೇಷವನ್ನು ಯಾರಾದರೂ ಕಂಡು ಹಿಡಿದರೆ, ಅದರಿಂದ ನಮ್ಮ ರಾಜವಂಶವು ವಿಪತ್ತಿನಲ್ಲಿ ಬೀಳುವದಕ್ಕೆ ಕಾರಣವೇನು? ನಾವು ಇಂಥವರೆಂದು ಹೇಳಿದರೆ ಅವರಿಗೆ ವಿಪತ್ತು ಬರುವದಲ್ಲವೇ? ನಾವು ಅದನ್ನೇ ಹೇಳದಿದ್ದರೆ ವಿಪತ್ತು ನಮ್ಮಷ್ಟಕ್ಕೇ ಉಳಿಯುವದಲ್ಲದೆ, ನಮ್ಮ ರಾಜವಂಶದವರಿಗೆ ಹೋಗಲಾರದು. ನಾವು ಯಾರೆಂಬದನ್ನು ಮಾತ್ರ ಜನರಲ್ಲಿ ಸ್ಫೋಟ ಮಾಡಲಾಗದು. ಇನ್ನು ನೀವು ಆ ಮುಸಲ್ಮಾನ ಸಾಧುವಿನ ವಿಷಯವಾಗಿ ಅಂಜುತ್ತಿರುವಿರಿ, ಅವನ ಬಗ್ಗೆ ನಿಮಗಿನ್ನೂ ಪೂರ್ಣ ಸಂಗತಿಯನ್ನು ಹೇಳಿರುವದಿಲ್ಲ; ಹೇಳುತ್ತೇನೆ ಕೇಳಿರಿ. ಅವನು ನಿಜವಾದ ಮುಸಲ್ಮಾನನಂತೆ ತೋರುವದಿಲ್ಲ. ಅವನೂ ನಮ್ಮ ಹಾಗೆ ಸ್ವಕಾರ್ಯ ಸಾಧನೆಗಾಗಿ ಮುಸಲ್ಮಾನ ವೇಷವ ಧರಿಸಿದಂತೆ ತೋರುತ್ತದೆ, ಒಂದುವೇಳೆ ಆತನು ಮೊದಲು ರಜಪೂತನಿದ್ದು, ಈಗ ಯಾವದೊಂದು ಆಮಿಷದಿಂದ ಮುಸಲ್ಮಾನನಾಗಿರಬಹುದು. ಅವನು ಹುಟ್ಟಾ ಮುಸಲ್ಮಾನನಲ್ಲವೆಂಬದು ಮಾತ್ರ ನಿಜ; ಈ ಸಂಗತಿಯನ್ನು ನಾನು ಅವನೊಡನೆ ಮಾತಾಡುವಾಗಲೇ ಕಂಡು ಹಿಡಿದಿರುತ್ತೇನೆ. ನಾನು ಅವನಿಗೆ ಛದ್ಮವೇಷಧಾರಿಯಂತೆ ತೋರಿದಂತೆ ನನಗೂ ಅವನು ಛದ್ಮವೇಷಧಾರಿಯಾಗಿ ತೋರುತ್ತಿರುವನು. ನನ್ನ ಛದ್ಮವೇಷವನ್ನು ಬೈಲಿಗೆಳೆಯುವದಕ್ಕೆ ಅವನು ಪ್ರಯತ್ನಿಸಿದರೆ ಅವನ ಛದ್ಮವೇಷವನ್ನು ಬೈಲಿಗೆಳೆಯುವದಕ್ಕೆ ನಾನೂ ಪ್ರಯತ್ನಿಸಬೇಕಾಗುವದು. ಆದ್ದರಿಂದ ಆ ಮುಸಲ್ಮಾನ ಸಾಧುವೇಷಧಾರಿಯು ಈ ಗೊಂದಲಕ್ಕೆ ಸರ್ವಥಾ ಬೀಳಲಾರನು. ಒಂದುವೇಳೆ ಅವನು ತನ್ನ ಕಾರ್ಯಸಾಧನೆ ಮಾಡಿಕೊಂಡು ನಮ್ಮನ್ನು ವಿಪತ್ತಿಗೆ

ಗುರಿಮಾಡಿದರೆ ಮಾಡಬಹುದು. ಅಷ್ಟೊತ್ತಿನವರೆಗೆ ನಾವಾದರೂ ಯಾಕೆ ಸುಮ್ಮನಿರುವೆವು? ನಮ್ಮ ಕೈಯನ್ನು ಅವನಿಗೆ ತೋರಿಸಿಯೇ ತೋರಿಸುವೆವು. ಈಗ ನಾನು ಮೊದಲು ಆ ಸಾಧುವಿನ ಸಂಗತಿಯನ್ನೇ ತಿಳಿಯಲು ಪ್ರಯತ್ನ ಮಾಡುತ್ತೇನೆ. ಅವನು ದಿಲ್ಲಿಗೆ ಬಂದು ಎಷ್ಟು ವರುಷಗಳಾದವು? ಇಲ್ಲಿ ಅವನ ಕೆಲಸವೇನು? ಅವನಲ್ಲಿ ಗುಪ್ತಕಾರಸ್ಥಾನ ವೇನಾದರೂ ಇದೆಯೋ ಹ್ಯಾಗೆ ಎಂಬದನ್ನು ಸೂಕ್ಷ್ಮವಾಗಿ ಶೋಧಮಾಡು ತ್ತೇನೆ. ಇನ್ನು ಒಂದೆರಡು ದಿನಗಳಲ್ಲಿ ನಾನು ಈ ಕಾರ್ಯವ ಮಾಡಿ ನಿಮಗೆ ತಿಳಿಸುತ್ತೇನೆ. ಅಲ್ಲಿಯ ವರೆಗೆ ನೀವು ಊರಲ್ಲಿ ಯಾರೂ ಭಿಕ್ಷೆಗೆ ಹೋಗಬಾರದು. ಈದಿನ ಭಿಕ್ಷೆಯಲ್ಲಿ ದೊರೆತ ಪದಾರ್ಥವೇ ಇನ್ನೂ ೨|೩ದಿನ ಗಳ ವರೆಗೆ ಸಾಲುವದು. ನೀವು ಫಕೀರ ವೇಷದಿಂದಲೇ ಈ ಜಲಾಶಯದ ಬಳಿಯಲ್ಲಿ ಕಾಲಕ್ರಮಣ ಮಾಡಿರಿ. ನಾನೊಬ್ಬನೇ ಊರಲ್ಲಿ ಪ್ರವೇಶಿಸಿ ಸಾಧುವಿನ ಸಂಗತಿಯನ್ನು ತಿಳಿಯುವದಲ್ಲದೆ ನಮ್ಮ ಕಾರ್ಯಕ್ಕೆ ಅನು ಕೂಲ-ಪ್ರತಿಕೂಲ ಸಂಗತಿಗಳನ್ನು ತಿಳಿದು ಬರುವೆನು, ಎಂದು ನುಡಿದನು. ರಣಜಿತಸಿಂಗನ ಈ ಮಾತುಗಳಿಂದ ರಣಮಲ್ಲಾದಿ ರಜಪೂತ ವೀರರಿಗೆ ಸ್ವಲ್ಪ ಸಮಾಧಾನವಾಯಿತು. ಮೊದಲಿನ ಅವರ ಭೀತಿಯು ಕೆಲವಂಶ ದಿಂದ ನಷ್ಟವಾಯಿತು.

ಯಾವನೊಬ್ಬನು ಅರಿಯದ ಕೆಲಸದಲ್ಲಿ ಕೈಹಾಕಿದರೆ ತನ್ನ ನೆರಳಿಗೆ ತಾನೇ ಅಂಜಬೇಕಾಗುತ್ತದೆ. ಅದರಲ್ಲಿ ಸ್ವಲ್ಪ ತೊಂದರೆಯುಂಟಾದರೂ ಅದು ಅವರಿಗೆ ಮಹಾವಿಘ್ನವಾಗಿ ಪರಿಣಮಿಸುತ್ತದೆ. ಅದರಂತೆ ರಣ ಮಲ್ಲಾದಿ ರಜಪೂತ ವೀರರ ಸ್ಥಿತಿಯೂ ಆಗಿತ್ತು. ಅವರಿಗೆ ಈ ಗುಪ್ತ ಹೇರರ ಕೆಲಸವು ಹೊಸದು ಆದದ್ದರಿಂದ ಅವರನ್ನು ಅಡವಿಯಲ್ಲಿ ಕಣ್ಣು ಕಟ್ಟಿ ಬಿಟ್ಟಂತಾಗಿತ್ತು. ಆಗ ಅವರು ಹೆಚ್ಚಿನ ವಿಚಾರವನ್ನು ಮಾಡ ಲಸಮರ್ಥರಾಗಿ ರಣಜಿತಸಿಂಗನ ಮಾತಿಗೆ ಒಪ್ಪಿಕೊಂಡರು. ಬಳಿಕ ರಣ ಜಿತಸಿಂಗನು ಅವರ ಅಪ್ಪಣೆ ಪಡೆದು ದಿಲ್ಲಿಯ ಊರೊಳಗೆ ಪ್ರವೇಶ ಮಾಡಿದನು.

ಮಹಾಧೂರ್ತನಾದ ರಣಜಿತಸಿಂಗನು ಆ ದಿನ ಆ ಮುಸಲ್ಮಾನ ಸಾಧುವಿನ ಕಡೆಗೆ ಹೋಗದೆ ಊರಲ್ಲಿ ಅವನ ವಿಷಯವಾಗಿ ಏನು ವಾರ್ತೆ ಯಿರುವದೆಂಬದನ್ನು ಶೋಧಿಸಲುಪಕ್ರಮಿಸಿದನು. ಆ ಸಾಧುವು ಬೇರೆ

ಬೇರೆ ಜನರಿಗೆ ಬೇರೆ ಬೇರೆ ಸಂಗತಿಗಳನ್ನು ಹೇಳಿದ್ದನು. ಒಬ್ಬರಿಗೆ ತಾನು ಮುಕ್ಕಾದವನೆಂದೂ, ಇನ್ನೊಬ್ಬರಿಗೆ ಇನ್ನೊಂದೆಡೆಯವನೆಂದೂ ಹೇಳಿದ್ದನು. ರಣಜಿತಸಿಂಗನು ವಿಚಾರಿಸುತ್ತ ಹೋದಂತೆ ಒಬ್ಬರು ಹೇಳಿದ ಸಂಗತಿಗೆ ಮತ್ತೊಬ್ಬರು ಹೇಳಿದ ಸಂಗತಿಯು ಮೇಳು ಬೀಳ ದಂತಾಯಿತು. ಆದರೂ ಅವನು ಶೋಧಿಸುವದನ್ನು ಬಿಡಲಿಲ್ಲ. ಈ ಮುಸಲ್ಮಾನ ಸಾಧುವು 'ಈ ಊರಿಗೆ ಆಗಂತುಕನಿದ್ದು, ಇವನ ನಿಜವಾದ ಸಂಗತಿಯು ತಿಳಿಯದೆ ಹೋಗದೆಂದು ಅವನಿಗೆ ನಂಬಿಗೆಯಾಯಿತು. ಅವನು ಮುಸಲ್ಮಾನ ಸಮಾಜದಲ್ಲಿ ಶೋಧಿಸಿದನು; ಆದರೆ ಅದರಿಂದ ತಿಳಿಯಬೇಕಾದ ಸಂಗತಿಯು ತಿಳಿಯಲಿಲ್ಲ. ಹೀಗೆ ಅವನು ಒಂದೇ ಸವನೆ ಪ್ರಯತ್ನ ಮಾಡುತ್ತಿರಲು, ಮರುದಿನ ಅವನು ಹಿಂದೂ ಸಾಧುವಿನ ವೇಷವ ತಾಳಿ ರಜಪೂತ ಸಮಾಜದಲ್ಲಿ ಹೊಕ್ಕನು. ಅಲ್ಲಿ ಅವನು ಪ್ರಾಸಂಗಿಕವಾಗಿ ಮಾತನಾಡುತ್ತ ಜನರಿಗೆ ರಾಮನಾಮವನ್ನು ಬೋಧಿಸುತ್ತಿರಲು, ಬುಂದೇಲಖಂಡದ ನಿವಾಸಿಯೊಬ್ಬನು ಕೂಡಿದನು. ಅವನು ರಣಜಿತಸಿಂಗನ ಶಿಷ್ಯನಾದನು. ಆಗ ರಣಜಿತಸಿಂಗನು ಉಪಾಯಾಂತರ ಗಳಿಂದ ಪ್ರಶ್ನೆಮಾಡುತ್ತ ದಿಲ್ಲಿಯಲ್ಲಿ ಮುಸಲ್ಮಾನ ಸಾಧುಗಳು ಎಷ್ಟು ಜನ ರಿರುವರು? ಅವರವರ ಸಂಗತಿಗಳನ್ನು ನೀನು ಹೇಳಬಲ್ಲೆಯಾ? ಎಂದು ಪ್ರಶ್ನಮಾಡಿದನು. ಈ ಪ್ರಶ್ನೆಯನ್ನು ಇಂಥ ಕೆಲಸಕ್ಕಾಗಿಯೇ ಮಾಡುವ ರೆಂಬದು ಆ ರಜಪೂತ ಶಿಷ್ಯನಿಗೆ ಹ್ಯಾಗೆ ತಿಳಿಯಬೇಕು? ಅವನು ದಿಲ್ಲಿ ಯಲ್ಲಿ ಬಹು ದಿವಸ ವಾಸಿಸಿದ್ದರಿಂದಲೂ, ಅವನು ಸ್ವಲ್ಪ ಸಾಧುಸ್ವಭಾವ ದವನಿದ್ದದರಿಂದಲೂ ಸಾಧುಗಳ ವಿಷಯವಾಗಿ ಕೆಲ ಸಂಗತಿಗಳನ್ನು ಅರಿ ತಿದ್ದನು. ಆದ್ದರಿಂದ ಅವನು ದಿಲ್ಲಿಯಲ್ಲಿ ಯಾವ ಯಾವ ಮುಸಲ್ಮಾನ ಸಾಧುಗಳು ಇರುವರೆಂಬದನ್ನು ಹೇಳಿ ಅವರೆಲ್ಲರ ಸಂಕ್ಷಿಪ್ತ ಸಂಗತಿಗಳನ್ನು ಹೇಳಿ, ರಣಜಿತಸಿಂಗನಿಗೆ ಯಾವ ಸಾಧುವಿನ ಸಂಗತಿಯು ಬೇಕಾಗಿತ್ತೋ ಆ ಸಾಧುವಿನ ವಿಷಯವಾಗಿ ಪ್ರಸ್ತಾಪವನ್ನು ಎತ್ತಿದನು.

ಆ ರಜಪೂತನು ಬುಂದೇಲಖಂಡದ ನಿವಾಸಿಯಾದ್ದರಿಂದ ಅವನು ಮುಸಲ್ಮಾನ ಸಾಧುವಾದ ಭವಾನಿಸಿಂಗನ ವಿಷಯವಾಗಿ ಸಂಪೂರ್ಣ ಸಂಗತಿಯನ್ನು ಬಲ್ಲವನಾಗಿದ್ದನು. ಅವನು ಎಷ್ಟು ಸ್ವಾರ್ಥಪರಾಯಣನೂ, ದುರ್ಜನನೂ ಇರುವನೆಂಬದನ್ನೂ ಬಲ್ಲವನಾಗಿದ್ದನು ಅವನು ಈಗ ಯಾಕೆ

ಸಾಧುವಾಗಿರುವನೆಂಬದನ್ನೂ ತಿಳಿದಿದ್ದನು. ಭವಾನಸಿಂಗನ ವಿಷಯ ವಾಗಿ ಆ ರಜಪೂತ ಸರದಾರನು ಅತ್ಯಂತ ತಿರಸ್ಕಾರವುಳ್ಳವನಾಗಿದ್ದನು. ಅವನು ಹೀಗೆ ಭವಾನಸಿಂಗನ ಕಪಟಸಾಧುತ್ವವನ್ನು ಬಲ್ಲವನಾಗಿದ್ದರೂ, ಇದುವರೆಗೆ ಯಾರ ಮುಂದೂ ಅವನು ಈ ಸಂಗತಿಯನ್ನು ಹೇಳಿರಲಿಲ್ಲ. ಈ ದಿನ ಪ್ರಸಂಗ ಬಂದದ್ದರಿಂದ ಅವನು ಮುಕ್ತಕಂಠದಿಂದ ಎಲ್ಲ ಸಂಗತಿಗಳನ್ನು ಹೇಳಿದನು. ಈ ಪ್ರಕರಣದ ಪ್ರಾರಂಭದಲ್ಲಿ ವಾಚಕರು ಓದಿ ತಿಳಿದ ಸಂಗತಿಯನ್ನೇ ಆ ರಜಪೂತನು ಹೇಳಿದ್ದರಿಂದ ರಣಜಿತಸಿಂಗನಿಗೆ ಬಹಳ ಆಶ್ಚರ್ಯವಾಯಿತು. ಆ ಮುಸಲ್ಮಾನ ಸಾಧುವಿನ ಪೂರ್ವ ವೃತ್ತವು ಹೀಗಿರುವದೆಂದು ತಿಳಿದ ಬಳಿಕ ಅವನು ಒಮ್ಮೆಲೆ—ಏನು ರಜ ಪೂತ ತರುಣನೇ, ಈ ಸಂಗತಿಯನ್ನು ಕಲ್ಪಿಸಿ ಹೇಳುವೆಯೋ ಏನು? ಇದು ನಮಗೆ ನಂಬಿಕೆಯಾಗಲೊಲ್ಲದು, ಎಂದು ಬುದ್ಧಿಪೂರ್ವಕವಾಗಿ ಕೇಳಿದನು. ಆಗ ಆ ರಜಪೂತನು—ಮಹಾರಾಜ, ಇದರಲ್ಲಿ ಸ್ವಲ್ಪವೂ ಸುಳ್ಳಿಲ್ಲ ಸುಳ್ಳು ಸಂಗತಿಯನ್ನು ನಾನು ನಿಮ್ಮ ಮುಂದೆ ಯಾಕೆ ಹೇಳಲಿ? ಇದರಿಂದ ನಮಗೆ ಬರುವ ಲಾಭವಾದರೂ ಏನು? ಈದಿನ ನೀವು ನನ್ನನ್ನು ಕೇಳಿದಿ ರೆಂದು ಹೇಳಬೇಕಾಯಿತು. ಇದುವರೆಗೆ ನಾನು ಯಾರ ಮುಂದೂ ಹೇಳಿರುವದಿಲ್ಲ, ಎಂದು ನುಡಿದನು. ರಣಜಿತಸಿಂಗನು ಆ ಸಾಧುವಿನ ವೃತ್ತಾಂತವು ಈ ಮೇರೆಗೆ ಅಕಲ್ಪಿತವಾಗಿ ತಿಳಿದದ್ದಕ್ಕೆ ತುಂಬಾ ಸಂತೋಷ ಬಟ್ಟು ಆ ಶಿಷ್ಯನಿಗೆ ಮನೆಗೆ ಹೋಗಲು ಅಪ್ಪಣೆ ಕೊಟ್ಟು ತಾನು ತಮ್ಮ ಜನರು ಇಳಿದುಕೊಂಡ ಸ್ಥಳಕ್ಕೆ ಹೊರಟುಹೋದನು.



೧೨—ಕಳ್ಳನ ಹೆಜ್ಜೆ ಕಳ್ಳನೇ ಬಲ್ಲನು!

ಈ ಮೇರೆಗೆ ರಣಜಿತಸಿಂಗನು ಭವಾನಸಿಂಗನ ನಿಜಸಂಗತಿಯನ್ನು ತಿಳಿಯುತ್ತಿರಲು, ಇತ್ತ ಮುಸಲ್ಮಾನ ಸಾಧುವೇಷಧಾರಿಯಾದ ಭವಾನಸಿಂಗನು ಫಕೀರ ವೇಷಧಾರಿಯಾದ ರಣಜಿತಸಿಂಗನನ್ನು ಹಿಡಿದು ಕೊಟ್ಟು ಬಾದಶಹನ ಪ್ರೇಮಕ್ಕೆ ಪಾತ್ರನಾಗಬೇಕೆಂದು ಹವಣಿಸತೊಡಗಿದನು. ಆದರೆ ಈ ಸಂಗತಿಯನ್ನು ಬಾದಶಹನ ಕಿವಿಯ ಮೇಲೆ ಹ್ಯಾಗೆ ಹಾಕಬೇಕೆಂಬ ಯೋಚನೆಯು ಅವನಿಗುಂಟಾಯಿತು. ಈ ಯೋಚನೆಯು ಅವನಿಗೆ ಸ್ವಲ್ಪ ದುಸ್ತರವಾಯಿತು. ಆಗ ಅವನು ಒಂದು ಹಂಚಿಕೆಯನ್ನು ತೆಗೆದು ಇಂತು ನಿರ್ಧರಿಸಿದನು:—"ಇಮಾಮಖಾನನ ಪ್ರೇಮ ಸಂಪಾದಿಸುವದು ನನಗೆ ಮುಖ್ಯವಾದ್ದರಿಂದ ಮೊದಲು ಆತನ ಪರಿಚಯವನ್ನು ಮಾಡಿಕೊಳ್ಳಬೇಕು; ಮತ್ತು ಅವನಿಗೆ ಈ ಸಂಗತಿಯನ್ನು ಗುಪ್ತವಾಗಿ ತಿಳಿಸಬೇಕು. ಇದರಿಂದ ಅವನು ಸಹಜವಾಗಿ ನನ್ನನ್ನು ಪ್ರೀತಿಸುವನು. ಮುಂದೆ ಈ ಸಂಗತಿಯನ್ನು ಅವನೇ ಬಾದಶಹನ ಕಿವಿಯ ಮೇಲೆ ಹಾಕಲೊಲ್ಲನೇಕೆ! ಇದರಿಂದ ಮುಖ್ಯವಾಗಿ ನನ್ನ ಕೆಲಸವು ಕೈಗೂಡಿದರೆ ನಾನು ಧನ್ಯನಾಗುವೆನು!"

ಈ ಮೇರೆಗೆ ವಿಚಾರಿಸಿದ ಭವಾನಸಿಂಗನು ತನ್ನ ಒಬ್ಬ ಶಿಷ್ಯನನ್ನು ಕರೆದು ಅವನಿಗೆ ರಹಸ್ಯವಾಗಿ ತಿಳಿಸತಕ್ಕ ಸಂಗತಿಗಳನ್ನು ತಿಳಿಸಿ ಹಾಗು ಅವನ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟು ಅವನನ್ನು ಇಮಾಮಖಾನ ಸರದಾರನ ಕಡೆಗೆ ಕಳುಹಿದನು. ಆ ಶಿಷ್ಯನು ಇಮಾಮಖಾನ ಸರದಾರನನ್ನು ಕಂಡು ಅವನಿಗೆ ಸಾಧುವಿನ ಪತ್ರವನ್ನು ಕೊಟ್ಟನು. ಪತ್ರವಾಚನದಿಂದ ಆ ಖಾನನು ವಿಸ್ಮಿತನಾಗಿ:—"ನಿಮ್ಮ ಗುರುಗಳು ಎಲ್ಲಿರುವರು?" ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಆ ಶಿಷ್ಯನು:—ಸರದಾರರೇ, ಜುಮ್ಮಾ ಮಸೀದೆಯ ಪೂರ್ವಭಾಗದಲ್ಲಿರುವ ಸಣ್ಣ ಮಸೀದೆಯಲ್ಲಿರುವರು, ಎಂದು ಉತ್ತರ ಕೊಟ್ಟನು. ಆಗ ಸರದಾರನು:—ನಿಮ್ಮ ಗುರುಗಳು ನನ್ನ ಭೆಟ್ಟಿಯನ್ನು ಇಚ್ಛಿಸುತ್ತಿರುವರು. ರಾಜಕೀಯ ಗುಪ್ತ ರಹಸ್ಯವೊಂದನ್ನು ನನ್ನ ಕಿವಿಯ ಮೇಲೆ ಹಾಕಬೇಕಾಗಿದೆಯಂತೆ! ನಿಮ್ಮ ಅನುಕೂಲ ವೇಳೆ ತಿಳಿ

ಸಿದರೆ ಆ ಹೊತ್ತಿಗೆ ಬರುವೆನೆಂದು ಬರೆದಿರುವರು; ಆದರೆ ನಮ್ಮ ಧರ್ಮದ ಸಾಧುಗಳನ್ನು ಕಾಣಬೇಕಾದರೆ ಅವರಿದ್ದಲ್ಲಿಗೇ ಹೋಗುವದು ಯೋಗ್ಯವಾಗಿರುವದು ಆದರೆ ಹಾಗೆ ಮಾಡಕೂಡದೆಂದು ನಿಮ್ಮ ಗುರುಗಳು ಬರೆದಿರುವರು. ಅವರ ಬರವಣಿಗೆಯಿಂದ ನೋಡಿದರೆ ಪ್ರಸಂಗವು ಮಹತ್ವದ್ದಿರಬೇಕೆಂದು ತಿಳಿಯುತ್ತದೆ. ಆಗಲಿ. ಈ ದಿನ ರಾತ್ರಿಯಲ್ಲಿ ಅವರು ನಮ್ಮಲ್ಲಿಯೇ ಇರಲಿ. ಅಂದರೆ ರಹಸ್ಯವಿಚಾರವನ್ನು ಮಾಡಲಿಕ್ಕೆ ಬೇಕಾದಷ್ಟು ವೇಳೆ ಸಿಗುವದು, ಎಂದು ಹೇಳಿದನು. ಖಾನನ ಈ ಅಪ್ಪಣೆಯನ್ನು ಕೇಳಿಕೊಂಡು ಶಿಷ್ಯನು ಮಸೀದೆಗೆ ಹೊರಟು ಬಂದನು.

ಭವಾನಸಿಂಗನು ಶಿಷ್ಯನ ದಾರಿಯನ್ನೇ ನೋಡುತ್ತ ಕುಳಿತುಕೊಂಡಿದ್ದನು. ಅಷ್ಟರಲ್ಲಿ ಆತನು ಬಂದು ಖಾನನ ಅಪ್ಪಣೆಯನ್ನು ಹೇಳಲು, ಭವಾನಸಿಂಗನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಆಗ ಅವನು ಮನಸ್ಸಿನಲ್ಲಿ:— ಖಾನನ ಬಳಿಗೆ ಹೋದ ಬಳಿಕ ಹ್ಯಾಗೆ ಮಾತಾಡಬೇಕು! ಅವನಲ್ಲಿ ನನ್ನ ಮಾತಿನ ಬಗ್ಗೆ ಹ್ಯಾಗೆ ವಿಶ್ವಾಸವನ್ನು ಹುಟ್ಟಿಸಬೇಕು? ಇತ್ಯಾದಿ ಸಂಗತಿಗಳನ್ನು ಯೋಚಿಸತೊಡಗಿದನು ಈ ಸಂಗತಿಗಳ ಜೊತೆಯಲ್ಲಿ ಇಂದು ಆಯೇಷಿಯ ದರ್ಶನವಾಗಬಹುದೇ? ನನ್ನ ನೇತ್ರಗಳು ಸಫಲವಾಗಬಹುದೇ? ಎಂಬ ಸಂಗತಿಗಳ ಯೋಚನೆಯಂತೂ ಇದ್ದದ್ದೇ ಎಂದು ಬಿಚ್ಚಿ ಬರೆಯುವ ಕಾರಣವಿಲ್ಲ.

ಭವಾನಸಿಂಗನು ಕೈಯಿಂದ ದಬ್ಬಿ ಹೊತ್ತುಗಳೆದಂತೆ ಆದಿನ ಹೊತ್ತುಗಳೆದನು. ಮುಚ್ಚಂಜೆಯಾಯಿತು, ಶಿಷ್ಯನನ್ನು ಕರೆದುಕೊಂಡು ಮೇಣೆಯಲ್ಲಿ ಕುಳಿತು ಖಾನನ ಮನೆಗೆ ಹೋದನು. ಈ ವೇಳೆಯಲ್ಲಿ ಖಾನನು ಮನೆಯಲ್ಲಿದ್ದು, ಸಾಧುವಿನ ಮಾರ್ಗ ನಿರೀಕ್ಷಣೆಯನ್ನು ಮಾಡುತ್ತಿದ್ದನು. ಸಾಧುವು ಬಂದ ಬಳಿಕ ಅವನಿಂದ ಒಳ್ಳೇ ಆದರಿಸಲ್ಪಟ್ಟನು. ಬಳಿಕ ಅವರಿಬ್ಬರು ಒಂದು ಪ್ರಶಸ್ತವಾದ ದಿವಾನಖಾನೆಯಲ್ಲಿ ಕುಳಿತು ಮಾತನಾಡತೊಡಗಿದರು.

ಸಾಧುವು ರಾಜಕಾರಣೀ ಪುರುಷನಾದ್ದರಿಂದ ಆತನು ಆ ವಿಷಯದಲ್ಲಿ ಒಳ್ಳೇ ಧೂರ್ತನೂ, ಚಾಣಾಕ್ಷನೂ ಇದ್ದನೆಂಬದನ್ನು ಬರೆಯುವ ಕಾರಣವಿಲ್ಲ. ಅಲ್ಪಾವಕಾಶದಲ್ಲಿ ಅವನು ಖಾನನ ಮನವೊಲಿಸಿ ತಾನು ಹೇಳುವ ಗುಪ್ತಸಂಗತಿಯು ಒಳ್ಳೇ ಮಹತ್ವದ್ದೆಂದು ಆತನಲ್ಲಿ ನಂಬಿಗೆ

ಯನ್ನುಂಟುಮಾಡಿದನು. ಯಾವ ಪುರುಷನು ಮುಸಲ್ಮಾನ ಫಕೀರನ ವೇಷವ ಹಾಕಿಕೊಂಡು ಯಾವ ರಾಜಕಾರಣ ಸಾಧಿಸುವದಕ್ಕಾಗಿ ಇಲ್ಲಿಗೆ ಬಂದಿರಬಹುದೆಂಬ ಆಕಾಂಕ್ಷೆಯು ಖಾನನಲ್ಲುಂಟಾಯಿತು. ಅವನು ಆ ಸಾಧುವಿನಲ್ಲಿ ನಂಬಿಗೆ ತಾಳಿ, ಆ ಫಕೀರನನ್ನು ಹಿಡಿದು ತನಗೆ ಒಪ್ಪಿಸ ಬೇಕೆಂದು ಬಿನ್ನಹ ಮಾಡಿಕೊಂಡನು. ಆಗೆ ಬುದ್ಧಿಪೂರ್ವಕವಾಗಿ ಆ ಸಾಧುವು:—ಖಾನಸಾಹೇಬರೇ, ನಾನು ಬಾದಶಾಹೀ ಹಿತಚಿಂತನೆ ಮಾಡ ತಕ್ಕವನಿಷ್ಟೇ; ಪ್ರತ್ಯಕ್ಷ ರಾಜಕಾರಣದಲ್ಲಿ ತೊಡಗಲು, ನನಗೆ ಇಷ್ಟವಿಲ್ಲ. ಒಂದುದಿನ ಆ ಗೃಹಸ್ಥನು ನನ್ನ ಮಸೀದೆಯ ಮುಂದೆ ಹಾಯ್ದು ಹೋಗು ವಾಗ ಅವನ ಕಪಟವೇಷವು ನನ್ನ ಲಕ್ಷದಲ್ಲಿ ಬಂದದ್ದರಿಂದ ಅವನನ್ನು ಕರೆದು ಅವನೊಡನೆ ಮಾತನಾಡಿ ನನ್ನ ಸಂಶಯವನ್ನು ನಿವಾರಣೆ ಮಾಡಿ ಕೊಂಡು ಈ ಸಂಗತಿಯನ್ನು ನಿಮ್ಮಂಥವರ ಮುಂದೆ ಹೇಳಿದರೆ ನೀವು ಮುಂದಿನ ಕೆಲಸ ಮಾಡುವಿರೆಂದು ನಿಮಗೆ ತಿಳಿಸಿದೆನು; ಆದರೆ ನೀವು ಮುಂದಿನ ಕೆಲಸವನ್ನು ನನ್ನ ಕೊರಳಿಗೇ ಕಟ್ಟುವಿರಲ್ಲ? ನಾನು ಖುದಾನ ಆರಾಧನೆಯನ್ನು ಬಿಟ್ಟು, ಈ ಕೆಲಸ ಮಾಡುತ್ತ ಕುಳಿತುಕೊಳ್ಳಲಿಯಾ? ಇದರಿಂದ ನಮಗೆ ಆಗಬೇಕಾದ್ದು ಏನು? ಯಾವನೋ ಒಬ್ಬ ಗುಪ್ತ ಹೇರನು ಬಂದದ್ದರಿಂದ ಬಾದಶಹನಿಗೆ ಅಶುಭವಾಗಬಾರದೆಂದು ನಿಮಗೆ ಎಚ್ಚರಿಗೆ ಮಾತ್ರ ಕೊಟ್ಟಿರುವೆನು. ಖುದಾನ ಚಿಂತನೆ ಮಾಡುವದನ್ನು ಬಿಟ್ಟು, ಇಷ್ಟು ಕೆಲಸ ಮಾಡಿದ್ದೇ ಹೆಚ್ಚಿನದಾಯಿತು, ಎಂದು ನುಡಿದು ಖಾನನ ಮೋರೆಯನ್ನು ನೋಡತೊಡಗಿದನು.

ಖಾನನಿಗೆ ಸಾಧುವಿನ ಈ ಮೋಸದ ಮಾತುಗಳ ನೆಲೆಯು ಹತ್ತ ಲಿಲ್ಲ. ಅವನು ಅವನ್ನು ನಿಜವೆಂದೇ ಭಾವಿಸಿ:—ಸಾಧುಗಳೇ, ನಾನು ತಮಗೆ ಹಾಗೆ ಹೇಳಿದ್ದಕ್ಕೆ ನನ್ನನ್ನು ಕ್ಷಮಿಸಿರಿ. ತಾವು ನಿಸ್ಪೃಹರೂ ಖುದಾನ ಚಿಂತನೆಯಲ್ಲಿ ಕಾಲಕಳೆಯುವ ಮಹಾತ್ಮರೂ ಇರುವಿರಿ; ಆದರೆ ತಾವು ಹೇಳುವ ಗುಪ್ತಹೇರನು ಯಾವ ಮಹತ್ವದ ರಾಜಕಾರಣಕ್ಕಾಗಿ ಬಂದಿರುವನೋ ಎಂಬದು ನಮಗೆ ತಿಳಿಯದ್ದರಿಂದ ಅವನನ್ನು ಬೇಗನೆ ಹಿಡಿಯುವದು ಆವಶ್ಯವು. ಈ ಕೆಲಸಕ್ಕೆ ತಾವು ಸಾಧ್ಯವಾದ ಮಟ್ಟಿಗೆ ನೆರವಾಗಬೇಕು. ಇಷ್ಟೇ ನನ್ನ ಬೇಡಿಕೆಯು. ತಮ್ಮ ನೆರವನ್ನು ಬಯಸ ಲಿಕ್ಕೆ ಕಾರಣವಿಷ್ಟೇ; ತಾವು ಒಮ್ಮೆ ಆ ಗುಪ್ತಹೇರನನ್ನು ನೋಡಿರುವಿರಿ!

ಅವನ ದನಿಯು ಗುರುತು ಮೊದಲಾದ ಲಕ್ಷಣಗಳು ನಿಮಗೆ ಬೇಗ ತಿಳಿದಷ್ಟು ಮಿಕ್ಕವರಿಗೆ ತಿಳಿಯಲಾರವು. ನಿಮಗೆ ಖುದಾನ ಚಿಂತನೆಗೆ ಸ್ವಲ್ಪ ತೊಂದರೆ ಯಾದರೂ ಬಾದಶಾಹೀ ಹಿತದ ದೃಷ್ಟಿಯಿಂದ ಈ ಕೆಲಸವು ತಮ್ಮಿಂದ ಆದೀತೆಂದು ಆಶಿಸುತ್ತೇನೆ ಎಂದು ನುಡಿದನು. ಸಾಧುವೇಷಧಾರಿಯಾದ ಭವಾನಸಿಂಗನಿಗೆ ಇಷ್ಟೇ ಬೇಕಾಗಿತ್ತು. ಅವನು ಇನ್ನು ಮುಂದೆ ಹೆಚ್ಚಿಗೆ ಜಗ್ಗುವದು ತರವಲ್ಲವೆಂದು ಖಾನನ ಮಾತಿಗೆ ಒಪ್ಪಿಕೊಂಡಂತೆ ನಟಿಸಿದನು. ಸಾಧುವು ಒಪ್ಪಿಕೊಂಡದ್ದನ್ನು ನೋಡಿ ಖಾನನಿಗೆ ತುಂಬಾ ಸಂತೋಷವಾಯಿತು. ಅವನು ಆ ಸಾಧುವಿನ ಉಪಕಾರವನ್ನು ಹೊಗಳಿ ನಾಳಿನ ದಿನ ನಮ್ಮಲ್ಲಿಯೇ ಆತಿಥ್ಯವನ್ನು ಕೈಕೊಂಡು ಬಳಿಕ ತಾವು ಮುಷೀದೆಗೆ ದಯ ಮಾಡಿಸಬೇಕೆಂದು ವಿನಂತಿ ಮಾಡಿಕೊಂಡನು. ಇದರಿಂದಂತೂ ಸಾಧುವು ತುಂಬಾ ಸುಂತುಷ್ಟನಾಗಿ:—ಸರದಾರರೇ, ತಾವು ನಮ್ಮಂಥ ಬಡ ಫಕೀರರ ಮೇಲೆ ಈ ಬಗೆಯ ಪ್ರೇಮ ಮಾಡುವದನ್ನು ನೋಡಿ ನಮಗೆ ತುಂಬಾ ಸಮಾಧಾನವಾಗುತ್ತದೆ. ತಮಗೆ ಖುದಾನು ಕಲ್ಯಾಣವನ್ನುಂಟುಮಾಡಲಿ! ತಮ್ಮ ಇಚ್ಛೆಯ ಮೇರೆಗೆ ವರ್ತಿಸುವೆನು, ಎಂದು ನುಡಿದನು. ಬಳಿಕ ಖಾನನು ಸಾಧುವಿನ ಆತಿಥ್ಯವನ್ನು ಮಾಡಿ ಅವನನ್ನು ಯೋಗ್ಯ ಸ್ಥಳದಲ್ಲಿ ಮಲಗಿಸಿ ತಾನು ಮಲಗುವದಕ್ಕಾಗಿ ಹೊರಟು ಹೋದನು.

ಸಾಧುವಿಗೆ ಆ ದಿನ ಆಯೇಷಿಯ ದರ್ಶನವಾಗದ್ದರಿಂದ ಮನಸ್ಸಿಗೆ ಸ್ವಲ್ಪವೂ ಸಮಾಧಾನವೆನಿಸಲಿಲ್ಲ. ನಾಳೆಗೆ ಒಂದು ದಿನ ಇಲ್ಲಿಯೇ ಇರಲು ಖಾನನು ಆಮಂತ್ರಣ ಕೊಟ್ಟದ್ದರಿಂದ ನಾಳೆಯಾದರೂ ಆ ಸುಂದರಿಯ ದರ್ಶನವಾದೀತೆಂದು ಆವನ ಮನಸ್ಸಿಗೆ ಸಮಾಧಾನವ ಹಚ್ಚಿಕೊಂಡು ಮಲಗಿದನು; ಆದರೆ ಅದರಿಂದ ಮನಸ್ಸಿನ ಸಮಾಧಾನವು ಆಗತಕ್ಕಷ್ಟು ಆಗದ್ದರಿಂದ ಅವನಿಗೆ ಬೇಗನೆ ನಿದ್ರೆಬಾರದಾಯಿತು. ಎಷ್ಟೋ ಹೊತ್ತಿನ ವರೆಗೆ ಹೊರಳಾಡಿದ ಬಳಿಕ ಅವನಿಗೆ ಸ್ವಲ್ಪ ಜಂಪು ಹತ್ತಿತು. ಬೆಳಗಾಗು ವಷ್ಟರಲ್ಲಿಯೇ ಅವನಿಗೆ ಎಚ್ಚರವಾಯಿತು. ಖಾನನು ಏಳುವಷ್ಟರಲ್ಲಿ ಆತನು ನಮಾಜು ಮಾಡಿ ಒಳ್ಳೇ ಧಾರ್ಮಿಕ ಪುರುಷನಂತೆ ಕುಳಿತುಕೊಂಡಿದ್ದನು. ಅವನಿಗೆ ಅಂತರಂಗದಲ್ಲಿ ಆಯೇಷಿಯ ಚಿಂತನೆಯಿದ್ದರೂ ಬಹಿರಂಗದಲ್ಲಿ ಖುದಾನ ಚಿಂತನೆ ಮಾಡುತ್ತಿರುವವನಂತೆ ನಟಿಸುತ್ತಿದ್ದನು; ಆದರೆ ಮಾನವೀಪ್ರಾಣಿಗಳಿಗೆ ಅಂತರಂಗ ಪರೀಕ್ಷೆಯು ಹ್ಯಾಗೆ ಆಗಬೇಕು?

ಬಹಿರಂಗ ವೇಷದಿಂದಲೇ ಅವರು ತೃಪ್ತರಾಗಿ ಯಾವದೊಂದು ವ್ಯಕ್ತಿಯ ವಿಷಯಕ್ಕೆ ಪೂಜ್ಯಬುದ್ಧಿಯನ್ನಾಗಲಿ, ಅಪ್ರಿಯ ಬುದ್ಧಿಯನ್ನಾಗಲಿ ತಳೆಯು ವರು. ಅದರಂತೆ ಖಾನನೂ ಆ ಸಾಧುವಿನಲ್ಲಿ ಪೂಜ್ಯಬುದ್ಧಿಯನ್ನು ತಾಳಿದ್ದು ಸ್ವಾಭಾವಿಕವೇ ಸರಿ!

ಖಾನನು ಸಾಧುವಿನ ದರ್ಶನ ಹೊಂದಿ ಅವನನ್ನು ತನ್ನ ವೈಭವ ತೋರಿಸುವದಕ್ಕಾಗಿ ಮಂದಿರದಲ್ಲಿ ಕರೆದುಕೊಂಡು ಹೋದನು. ಖಾನನ ಗಜಾಂತ ಐಶ್ವರ್ಯವನ್ನು ನೋಡಿ ಖಾನನಿಗೆ ಇನ್ನೂ ಅಧಿಕವಾಗಲಿ, ಎಂದು ಹರಿಕೆ ಕೊಡುತ್ತ ಸಾಧುವು ಅವನೊಡನೆ ಸಾಗಿದನು. ತಾನು ತೋರಿಸತಕ್ಕದ್ದನ್ನೆಲ್ಲ ತೋರಿಸಿದ ಬಳಿಕ ಖಾನನು ಸಾಧುವಿನೊಡನೆ ಅಂತಃ ಪುರದಲ್ಲಿ ಪ್ರವೇಶ ಮಾಡಿದನು. ಅಲ್ಲಿಯ ಹೆಂಗಳೆಯರಿಗೆ ಖಾನನ ಸಂಗಡ ಬೇರೊಬ್ಬ ಪುರುಷನು ಒಳಗೆ ಬಂದದ್ದಕ್ಕೆ ಬಹಳ ಸಂಕೋಚವಾಗತೊಡ ಗಿತು. ಆಗ ಅವರು ಮರೆಗೆ ಸರಿಯುತ್ತಿರಲು ಖಾನನು ಅವರಿಗೆ—ಹೀಗೆ ಸಂಕೋಚಪಡುವ ಕಾರಣವಿಲ್ಲ. ಇವರು ನಮ್ಮ ಧರ್ಮದ ದೊಡ್ಡ ಸಾಧು ಗಳು. ಇವರಿಗೆ ಖುದಾನ ಚಿಂತನೆಯ ಹೊರತು ಎಲ್ಲವೂ ತುಚ್ಛವಾಗಿ ತೋರುವವು. ಇಂಥ ಮಹಾತ್ಮರ ದರ್ಶನವು ಮಾನವರಿಗೆ ದುರ್ಲಭವೇ ಸರಿ ಎಂದು ಸಾಧುವಿನ ಮಹತಿಯನ್ನು ವರ್ಣಿಸತೊಡಗಿದನು. ಖಾನನೇ ಹೀಗೆ ಸ್ವಕಂಠದಿಂದ ಹೇಳಿದ ಬಳಿಕ ಆ ಸ್ತ್ರೀಯರ ಸಂಕೋಚವು ದೂರಾ ಯಿತು; ಖಾನನು ಒಬ್ಬನೇ ಇದ್ದಾಗ ಅವರು ಹ್ಯಾಗೆ ಸಂಕೋಚವಿಲ್ಲದೆ ಅಡ್ಡಾಡುತ್ತಿದ್ದರೋ ಹಾಗೆಯೇ ಅಡ್ಡಾಡತೊಡಗಿದರು.

ಖಾನನ ಅಂತಃಪುರದಲ್ಲಿ ಅನೇಕ ಜನ ಸುಂದರ ಸ್ತ್ರೀಯರಿದ್ದರು. ಅವರೆಲ್ಲರೂ ಬೆಲೆಯುಳ್ಳ ವಸ್ತ್ರಾಭರಣಗಳಿಂದ ವಿಭೂಷಿತರಾಗಿದ್ದರು. ಮೊಗಲರ ಸಂಪತ್ತು ಆ ಹೆಂಗಳೆಯರ ವಸ್ತ್ರ ಭೂಷಣಗಳಿಂದ ಚನ್ನಾಗಿ ಪ್ರಕಟವಾಗುತ್ತಿತ್ತು. ಕಾಮುಕನಾದ ಭವಾನಸಿಂಗನು ಆ ಹೆಂಗಳೆಯರ ಸುರೂಪವನ್ನು ನೋಡಿ ಮನದಲ್ಲಿ ತನ್ನ ಧನ್ಯತೆಯನ್ನು ಹೊಗಳಿಕೊಳ್ಳ ಲಾರಂಭಿಸಿದನು. ಅಷ್ಟರಲ್ಲಿ ಅವನಿಗೆ ಅವನ ಧ್ಯಾನಮೂರ್ತಿಯ ದರ್ಶನ ವಾಯಿತು. ಅವನು ಯಾವ ಮೂರ್ತಿಯ ವಿಷಯವಾಗಿ ಇಷ್ಟೊಂದು ಕಪಟಜಾಲವನ್ನು ಒಡ್ಡಿ ಖಾನನ ಅಂತಃಪುರಕ್ಕೆ ಬಂದಿದ್ದನೋ ಆ ಮೂ- ರ್ತಿಯೇ ಸಾಕ್ಷಾತ್ತಾಗಿ ದರ್ಶನ ಕೊಟ್ಟ ಬಳಿಕ ಅವನಿಗಾದ ಆನಂದವನ್ನು

ಬಣ್ಣಿಸುವದೆಂತು? ಅವನು ಆ ಕೂಡಲೇ ಮೈಮರೆತನು. ತಾನು ಎಲ್ಲಿರುವೆನೆಂಬದು ಕೂಡಾ ಅವನಿಗೆ ಸ್ಮರಣೆಯಲ್ಲಿಲ್ಲದಾಯಿತು; ಆದರೆ ಸಾಧುವಿನಲ್ಲುಂಟಾದ ಈ ದುರವಸ್ಥೆಯು ಖಾನನ ಲಕ್ಷದಲ್ಲಿ ಬರಲಿಲ್ಲ. ಇದೇ ಸಾಧುವಿನ ಸುದೈವವೆಂದು ಹೇಳಬಹುದು. ಆಗ ಖಾನನು ಅಂತಃಪುರದ ಖೋಜಾನಿಗೆ ಏನೋ ಅಪ್ಪಣೆ ಮಾಡುವದರಲ್ಲಿ ತೊಡಗಿದ್ದನು. ಕೆಲ ಹೊತ್ತಿನಲ್ಲಿಯೇ ಸಾಧುವು ಸಾವರಿಸಿಕೊಂಡು ತನ್ನ ಅವಿವೇಕತನವು ಎಲ್ಲಿ ಬೈಲಿಗೆ ಬಂದಿತೋ ಎಂದು ಸುತ್ತಲೂ ನೋಡಿದನು. ತನ್ನ ಕಡೆಗೆ ಯಾರ ಲಕ್ಷವೂ ಇರದ್ದರಿಂದ ಸ್ವಲ್ಪ ಸಮಾಧಾನವ ತಾಳಿ ಚೋರದೃಷ್ಟಿಯಿಂದ ಆಯೇಷಿಯ ಸೌಂದರ್ಯವನ್ನು ಮನದಣೀ ನೋಡಲಾರಂಭಿಸಿದನು. ಸಾಧುವು ಈ ಮೊದಲು ಆಯೇಷೆಯನ್ನು ನೋಡಿದ್ದನು; ಆದರೆ ಆಗಿನಕ್ಕಿಂತಲೂ ಆಕೆಯು ಈಗ ಸೌಂದರ್ಯವಿಶೇಷದಿಂದ ಒಪ್ಪುತ್ತಿದ್ದುದರಿಂದ ಸಾಧುವಿನ ಮನಸ್ಸು ಭ್ರಾಂತವಾಯಿತು. ಇನ್ನೂ ಕೆಲವು ಹೊತ್ತಿನವರೆಗೆ ಅವನು ಅಲ್ಲಿಯೇ ನಿಂತುಕೊಂಡಿದ್ದರೆ ಅವನು ನಿಶ್ಚಯವಾಗಿ ತನ್ನ ಕಾಮುಕತನವನ್ನು ಅಲ್ಲಿಯ ಜನರಿಗೆ ಪ್ರದರ್ಶಿಸಿ ಅನರ್ಥಕ್ಕೆ ಗುರಿಯಾಗುತ್ತಿದ್ದನು; ಆದರೆ ಅಷ್ಟರಲ್ಲಿ ಖಾನನು ಅವನ ಬಳಿಗೆ ಬಂದು ಅವನನ್ನು ಬೇರೊಂದು ಕಡೆಗೆ ಕರೆದುಕೊಂಡು ಹೋದದ್ದರಿಂದ ಮುಂದಿನ ಅನರ್ಥವು ತಪ್ಪಿತು.

ಸಾಧುವೇಷಧಾರಿಯಾದ ಭವಾನಸಿಂಗನು ಖಾನನೊಡನೆ ಅವನ ಮಂದಿರದಲ್ಲೆಲ್ಲ ಸುಳಿದಾಡಿ ಪುನಃ ದಿವಾನಖಾನೆಗೆ ಬಂದನು. ಅಷ್ಟರಲ್ಲಿ ಬಾದಶಹನು ಖಾನನನ್ನು ಕರೆಯಕಳುಹಿದ್ದರಿಂದ ಅವನು ಅತ್ತ ಹೋಗಬೇಕಾಯಿತು. ಹೋಗುವಾಗ ಅವನು ಸಾಧುವನ್ನು ಕುರಿತು:—ನಾನು ಸ್ವಲ್ಪ ಹೊತ್ತಿನಲ್ಲಿಯೇ ತಿರುಗಿ ಬರುವೆನು. ಒಂದುವೇಳೆ ನಾನು ಬರುವದಕ್ಕೆ ವಿಲಂಬವಾದರೂ ಸೇವಕರು ತಮ್ಮ ಆತಿಥ್ಯವನ್ನು ಚನ್ನಾಗಿ ಮಾಡುವರು. ಸಂಕೋಚ ತಾಳದೆ ಅವರ ಆತಿಥ್ಯವನ್ನು ಕೈಕೊಂಡು ಸ್ವಸ್ಥ ಮನಸ್ಸಿನಿಂದ ವಿಶ್ರಮಿಸಬೇಕು, ಎಂದು ಹೇಳಿ ಅಪ್ಪಣೆ ಪಡೆದು ಹೊರಟು ಹೋದನು, ಖಾನನು ಹೊರಟು ಹೋದ ಬಳಿಕ ಇತ್ತ ಸಾಧುವು ಮನದಲ್ಲಿ:—'ಖಾನನು ಬಹು ಸಜ್ಜನನಿರುವನು. ಇವನು ನನ್ನ ಕೈಯಲ್ಲಿ ಪೂರಾ ಸಿಕ್ಕಂತಾಗಿರುವದು. ಅಂತೂ ನನ್ನ ಪ್ರಯತ್ನವು ಫಲಿಸುವ ಸಮ

ಯವು ಒದಗಿದಂತೆ ತೋರುತ್ತಿದೆ ಆಯೇಷಿಯ ಸೌಂದರ್ಯವು ಎಷ್ಟು ಲೋಕೋತ್ತರವಾದದ್ದು! ಇಂದು ನನ್ನ ನೇತ್ರಗಳು ಸಫಲವಾದವು. ಇಂಥ ಸುಂದರಿಯನ್ನು ಯಾವ ಪುರುಷನು ಬಯಸಲಿಕ್ಕಿಲ್ಲ? ಈ ಸುಂದರಿಯ ಪ್ರೇಮ ಕಟಾಕ್ಷವು ಯಾವನ ಮೇಲೆ ಬೀಳುವದೋ ಅವನೇ ಧನ್ಯನು! ಅವನೇ ಪೂರ್ಣ ಸುಖಿಯು!! ಎಲೈ ವಿಧಾತನೇ, ಈ ಸುಂದರಿಯನ್ನು ನಿರ್ಮಿಸುವಲ್ಲಿ ನೀನು ನಿನ್ನ ಚಾತುರ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿರಬಹುದಲ್ಲವೆ? ಈಕೆಗಿಂತಲೂ ಸುಂದರಿಯಾದವಳನ್ನು ನೀನು ಹಿಂದೆಯೂ ನಿರ್ಮಿಸಿರಲಿಕ್ಕಿಲ್ಲ; ಮುಂದೆಯೂ ನಿರ್ಮಿಸುವ ಸಂಭವವಿಲ್ಲ. ಈಕೆಯನ್ನು ನಿರ್ಮಿಸುವಲ್ಲಿ ನಿನ್ನ ಸಂಪೂರ್ಣ ಚಾತುರ್ಯವೆಲ್ಲ ವೆಚ್ಚವಾಗಿ ಹೋದದ್ದರಿಂದ ಇನ್ನು ನೀನು ಇಂಥ ಸುಂದರಿಯನ್ನು ನಿರ್ಮಿಸಲಿಕ್ಕೆ ಚಾತುರ್ಯವನ್ನು ಮತ್ತೆಲ್ಲಿ ಸಂಪಾದಿಸುವಿ?''

ಈ ಮೇರೆಗೆ ಭವಾನಸಿಂಗನು ದಿವಾನಖಾನೆಯಲ್ಲಿ ಕುಳಿತು ಪುನಃ ಕಲ್ಪಿತ ಸುಖದಲ್ಲಿ ಮಗ್ನನಾದನು, ಆಯೇಷಿಯ ಸೌಂದರ್ಯದಲ್ಲಿ ಅವನ ಮನಸ್ಸು ತಲ್ಲೀನವಾದ್ದರಿಂದ ಅವನಿಗೆ ಊಟ-ಉಡಿಗೆಗಳು ಸಹ ಬೇಡಾಗಿದ್ದವು. ಅವನು ಎತ್ತ ನೋಡಿದರೂ ಆಯೇಷಿಯ ಮೂರ್ತಿಯೇ ಅವನ ಕಣ್ಣಿಗೆ ಬೀಳುತ್ತಿತ್ತು. ಮಧ್ಯಾಹ್ನವಾದರೂ ಅವನು ಕುಳಿತ ಸ್ಥಳ ಬಿಟ್ಟು, ಮೇಲಕ್ಕೇಳಲಿಲ್ಲ. ಖಾನನ ಸೇವಕರು ಮೂರು-ನಾಲ್ಕು ಸಾರೆ ದಿವಾನಖಾನೆಗೆ ಬಂದು ಹೋದರೂ ಸಾಧುಗಳು ಕಣ್ಣು ಮುಚ್ಚಿಕೊಂಡೇ ಕುಳಿತುಕೊಂಡಿದ್ದರು. ಅಪರಿಚಿತರಾದ ಸಾಧುಗಳನ್ನು ಮಾತಾಡಿಸುವ ಧೈರ್ಯವು ಆ ಸೇವಕರಿಗೆ ಆಗದ್ದರಿಂದ ಅವರು ಹಾಗೆಯೇ ನೋಡಿ-ನೋಡಿ ತಿರುಗಿ ಹೋಗಲಾರಂಭಿಸಿದರು.

ಸಾಧುವು ಖುದಾನ ಚಿಂತನೆಯಲ್ಲಿ ತೊಡಗಿರುವನೆಂಬ ತಿಳುವಳಿಕೆಯು ಆ ಸೇವಕರಲ್ಲುಂಟಾದದ್ದು ಸ್ವಾಭಾವಿಕವು. ಆದರೆ ಸಾಧುವಿನ ಖುದಾನ ರೂಪವು ಎಂತಹದೆಂಬದು ಪಾಪ! ಆ ಸೇವಕರಿಗೆ ಹ್ಯಾಗೆ ತಿಳಿಯಬೇಕು? ಸಾಧುವನ್ನು ಎಬ್ಬಿಸಲು ಅವರ ಶಿಷ್ಯರು ಸಹ ಅಲ್ಲಿರಲಿಲ್ಲ. ಸಾಧುವಿನ ಅಪ್ಪಣೆಯಂತೆ ಅವರು ತಿರುಗಿ ಮಶೀದೆಗೆ ಹೊರಟುಹೋಗಿದ್ದರು. ಮುಂದೆ ಕೆಲ ಹೊತ್ತಿನ ಮೇಲೆ ಖಾನನು ಮನೆಗೆ ಬಂದು ಸಾಧುವನ್ನು ಎಬ್ಬಿಸಿ, ಅವನ ಆತಿಥ್ಯವನ್ನು ಮಾಡಿದನು. ಬಳಿಕ ಅವನು ಆ ಸಾಧುವಿಗೆ ಮಶೀ

ದೆಗೆ ಹೋಗಲು ಅಪ್ಪಣೆ ಕೊಟ್ಟು, ಮೋಣೆಯನ್ನು ತಕ್ಕೊಂಡು ಹೋಗಿ ಕಳುಹಿಸಿ ಬರಲು ಸೇವಕರಿಗೆ ಆಜ್ಞೆಮಾಡಿದನು. ಆ ಅಪ್ಪಣೆಯನ್ನು ಕೇಳಿ ಸಾಧುವಿಗೆ ಸಿಡಿಲು ಬಡೆದಂತಾಯಿತು. ಇಮಾಮುಖಾನನ ಮನೆಯನ್ನು ತ್ಯಜಿಸಬೇಕಾದರೆ ಅವನಿಗೆ ಮರಣಾಂತ ವೇದನೆಯಾಗತೊಡಗಿತು. ಆದರೆ ಮಾಡುತ್ತಾನೇನು? ತನ್ನ ವಿಷಯಲಂಪಟತ್ವವು ಖಾನನಿಗೆ ಗೊತ್ತಾದರೆ ಕೆಲಸವು ಕೆಟ್ಟೀತೆಂದು ಅಂಜಿ ಹೊರಡಲು ಸಿದ್ಧನಾದನು. ಮೋಣೆಯೂ ಸಿದ್ಧವಾಯಿತು. ಖಾನನು ಸಾಧುವಿಗೆ ಆ ಗುಪ್ತಹೇರನನ್ನು ಹಿಡಿಯುವದಕ್ಕೆ ಪುನಃ ವಿನಂತಿ ಮಾಡಿಕೊಂಡನು. ಸಾಧುವು—ಗುಪ್ತಹೇರನನ್ನು ಹಿಡಿಯುವದಕ್ಕೆ ಅಭಿವಚನ ಕೊಟ್ಟು ಪ್ರಸಂಗ ಬಂದಾಗ ನಿಮ್ಮ ಮನೆಗೆ ಬರಲು ಪರವಾನಿಗೆ ಇರಬೇಕೆಂದು ಕೇಳಿಕೊಂಡನು. ಖಾನನು— ನಿಮ್ಮಂಥ ಸಾಧುಗಳಿಗೆ ಪರವಾನಿಗೆಯೇ? ನನ್ನ ಮನೆಯು ತಮ್ಮದೇ ಇದೆ. ಬೇಕಾದಾಗ ಬರಬಹುದು, ಎಂದು ನುಡಿದನು. ಖಾನನಿಂದ ಇಷ್ಟು ಪರವಾನಿಗೆ ಸಿಕ್ಕ ಕೂಡಲೆ ಸಾಧುವಿನ ಮುಖವು ಪ್ರಫುಲ್ಲಿತವಾಯಿತು. ಅವನು ಅಪ್ಪಣೆ ಪಡೆದು ಮಸೀದೆಗೆ ಹೊರಟು ಹೋದನು. ನಡೆದ ಪ್ರಸಂಗದಿಂದ ಸಾಧುವಿನಲ್ಲಿ ತುಂಬಾ ಸಂತೋಷವುಂಟಾಗಿತ್ತು. ಆ ಗುಪ್ತಹೇರನನ್ನು ಹಿಡಿದು ಖಾನನಿಗೆ ಒಪ್ಪಿಸಿ ಆತನ ಪ್ರೇಮವನ್ನು ಹೆಚ್ಚಾಗಿ ಸಂಪಾದಿಸಬೇಕೆಂದು ಮನಸ್ಸಿನಲ್ಲಿ ಮಂಡಿಗೆ ರಚಿಸತೊಡಗಿದನು. ಆ ಫಕೀರನು ಯಾವಾಗ ತನ್ನ ಬಳಿಗೆ ಬರುವನೋ, ಯಾವಾಗ ಅವನನ್ನು ಹಿಡಿದು ಸೆರೆಮನೆ ಸೋಬತಿ ಮಾಡುವೆನೋ ಎಂಬ ಯೋಚನೆಯೊಂದರಲ್ಲಿಯೇ ಮಗ್ನನಾದನು. ಇತ್ತ ಫಕೀರ ವೇಷಧಾರಿಯಾದ ರಣಜಿತಸಿಂಗನಾದರೂ ಸಾಧುವು ತನಗೆ ಹಾಗೆ ಮೋಸಮಾಡಬಹುದೆಂದು ತನ್ನ ಹಿಡತದಲ್ಲಿಯೇ ನಡೆಯತೊಡಗಿದನು. ಕಳ್ಳನ ಹೆಜ್ಜೆಯನ್ನು ಕಳ್ಳನೇ ಬಲ್ಲನು!!

೧೩—ಭಾಪುರಿ ಗೂಢಚಾರ!

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮುಸಲ್ಮಾನ ಸಾಧುವೇಷಧಾರಿಯಾದ ಭವಾನಸಿಂಗನು ರಣಜಿತಸಿಂಗನನ್ನು ಹಿಡಿಯುವದಕ್ಕಾಗಿ ಕುತೂಹಲನಾಗಿರಲು ಇತ್ತ ರಣಜಿತಸಿಂಗನೂ ಭವಾನಸಿಂಗನನ್ನು ತನ್ನ ಹಿಡತದಲ್ಲಿ ತಕ್ಕೊಳ್ಳಬೇಕೆಂದು ಹಂಚಿಕೆಹಾಕಲಾರಂಭಿಸಿದ್ದನು. ಯಾವದೊಂದು ಪ್ರಕಾರದಿಂದ ಭವಾನಸಿಂಗನು ತನ್ನ ವಿರುದ್ಧ ಹೋಗದಂತೆ ಅವನ ಬಾಯಿ ಕಟ್ಟಬೇಕೆಂದು ರಣಜಿತಸಿಂಗನ ವಿಚಾರವಾಗಿತ್ತು. ಭವಾನಸಿಂಗನನ್ನು ಆಪತ್ತಿಗೆ ಗುರಿಮಾಡಬೇಕೆಂದು ಅವನು ಕನಸು-ಮನಸ್ಸಿನಲ್ಲಿ ಸಹ ನೆನಿಸಲಿಲ್ಲ. ಕ್ರಿಯಾವಂತನಾದ ರಣಜಿತಸಿಂಗನು ಹೀಗೆ ನಿರ್ದುಷ್ಟ ವಿಚಾರಗಳನ್ನು ಮನಸ್ಸಿನಲ್ಲಿ ತಳೆಯುತ್ತಿದ್ದರೆ; ಕ್ರಿಯಾಭ್ರಷ್ಟನಾದ ಭವಾನಸಿಂಗನು ರಣಜಿತಸಿಂಗನಿಗೆ ಸಂಕಟವನ್ನು ಕಲ್ಪಿಸುತ್ತಿದ್ದನು. ದುರ್ಜನರ ಬಯಕೆಗಳು ದುಷ್ಟವಾಗಿಯೇ ಇರುವವು. ಇರಲಿ.

ನಾಲ್ಕಾರು ದಿನಗಳು ಕಳೆದರೂ ತನ್ನ ಬಳಿಗೆ ರಣಜಿತಸಿಂಗನು ಬಾರದ್ದರಿಂದ ಭವಾನಸಿಂಗನು ಚಡಪಡಿಸತೊಡಗಿದನು. ಸುಳ್ಳು ಸುದ್ದಿಗಳನ್ನು ಹೇಳುವ ನೆವದಿಂದ ಅವನು ದಿನಾಲು ಖಾನನ ಮನೆಗೆ ಹೋಗಿ ಮಾತ್ರ ಬರುತ್ತಿದ್ದನು. ಅವನು ಪ್ರಸಂಗ ಸಾಧಿಸಿ ಆಯೇಷಿಯ ದರ್ಶನ ಹೊಂದಿ ನೇತ್ರ ಸಾಫಲ್ಯವನ್ನು ಮಾಡಿಕೊಳ್ಳುತ್ತಿದ್ದನು. ಒಂದುದಿನ ಅವನು ಮಸೀದೆಯಲ್ಲಿ ಕುಳಿತುಕೊಂಡಿರಲು, ಓರ್ವ ಮುಸಲ್ಮಾನ ಸರದಾರನು ಅವನ ಬಳಿಗೆ ಬಂದನು. ಸರದಾರನು ಒಳ್ಳೇ ಗಂಭೀರ ಸ್ವಭಾವದವನಿದ್ದನು; ಅವನು ಎತ್ತರನಿಲುವಿಕೆಯುವನೂ, ಸಾದಗಪ್ಪಿನ ಬಣ್ಣದವನೂ ಆಗಿದ್ದನು. ಅವನ ಅವಯುವಗಳು ತುಂಬಾ ಪುಷ್ಟವಿದ್ದು, ಅವನ ಬಲವನ್ನು ವ್ಯಕ್ತಗೊಳಿಸುತ್ತಿದ್ದವು. ಅವನ ಕಣ್ಣುಗಳು ತೀಕ್ಷ್ಣವೂ ಸತೇಜವೂ ಆಗಿದ್ದವು: ಅವನ ಚಕ್ರಗಡ್ಡವು ಅವನ ಮುಖಕ್ಕೆ ಒಳ್ಳೇ ಶೋಭೆಯನ್ನುಂಟುಮಾಡಿತ್ತು. ಅವನ ನಿಡಿದಾದ ಭುಜಗಳೂ, ಗಟ್ಟಿಮುಟ್ಟಿಯಾದ ತೊಡೆಗಳೂ ಅವನ ಭವ್ಯತೆಯನ್ನು ಹೆಚ್ಚಿಸುತ್ತಿದ್ದವು. ಅವನು ಸಾಧಾರಣ ಪ್ರತಿಯ ವಸ್ತ್ರಗಳನ್ನು ಧರಿಸಿದ್ದನು. ಆತನ ಟೊಂಕದಲ್ಲಿ

ಖಡ್ಗವೊಂದಿತ್ತು. ಅವನು ಉತ್ಕೃಷ್ಟವಾದದ್ದೊಂದು ಕುದುರೆಯನ್ನೇರಿದ್ದನು. ಈ ರೀತಿಯಿಂದ ಬಂದ ಸರದಾರನನ್ನು ನೋಡಿ ಸಾಧುವೇಷಧಾರಿಯಾದ ಭವಾನಸಿಂಗನು ಸ್ವಲ್ಪ ಆಶ್ಚರ್ಯಮಗ್ನನಾಗಿ:—ನಾನು ಇಮಾಮುಖಾನ ಸರದಾರನೊಡನೆ ರಾಜಕಾರಣದ ಸಂಭಾಷಣ ನಡಿಸಿದ್ದರಿಂದ ಇನ್ನುಳಿದ ಸರದಾರರೂ ನನ್ನ ಸ್ನೇಹವನ್ನು ಸಂಪಾದಿಸಲಿಕ್ಕೆ ಹವಣಿಸುತ್ತಿರಬಹುದು. ಇಂಥ ಸರದಾರರಲ್ಲಿ ಇವನು ಒಬ್ಬನಾಗಿರಬಹುದು, ಎಂದು ಯೋಚಿಸಿ ಸರದಾರನಿಗೆ ಯಥೋಚಿತವಾಗಿ ಸ್ವಾಗತವನ್ನು ಮಾಡಿದನು. ಸರದಾರನು ಭಕ್ತಿಯಿಂದ ಸಲಾಮು ಮಾಡಿ ಸಾಧುವು ತೋರಿಸಿದ ಸ್ಥಳದಲ್ಲಿ ಕುಳಿತುಕೊಂಡನು.

ಈ ಆಗಂತುಕ ಸರದಾರನು ಒಳ್ಳೇ ಚಾಣಾಕ್ಷನಿದ್ದನು. ಇನ್ನು ಸಾಧುವು ಏನೋ ಪ್ರಶ್ನಮಾಡುವನು, ಎಂಬ ಧೋರಣ ತಿಳಿದು ಕೂಡಲೆ ತಾನೇ ಇಂತು ನುಡಿದನು. "ಸಾಧುಗಳೇ, ನಾನು ಬಾದಶಾಹೀ ದರ್ಬಾರದಲ್ಲಿಯ ಒಬ್ಬ ಸರದಾರನು, ನನಗೆ ಕರೀಮುಖಾನನೆಂದು ಕರೆಯುವರು. ಇಮಾಮುಖಾನನು ನನ್ನ ಪರಮ ಸ್ನೇಹಿತನು; ಆತನ ಮನೆಗೆ ತಾವು ದಯಮಾಡಿಸಿದ್ದ ಸಂಗತಿಯು ನನಗೆ ಆತನಿಂದಲೇ ತಿಳಿದಿರುವದು. ತಮ್ಮಂಥ ಸಾಧುಗಳ ಅವಶ್ಯಕತೆಯು ಪ್ರಸ್ತುತ ಪ್ರಸಂಗದಲ್ಲಿ ನಮಗೆ ವಿಶೇಷವಿರುವದು. ಬಾದಶಾಹಿಯ ಮೇಲೆ ರಜಪೂತರ ಕಣ್ಣು ಬಹಳವಾಗಿದೆ. ನಮ್ಮ ದರ್ಬಾರದಲ್ಲಿ ಎಷ್ಟೋಜನ ರಜಪೂತ ಸರದಾರರಿರುವರು; ಆದರೆ ಅವರನ್ನು ಹೆಚ್ಚಿಗೆ ನಂಬುವಂತಿರುವದಿಲ್ಲ. ಬಾಧಶಹನು ಅವರೊಂದಿಗೆ ಶರೀರ ಸಂಬಂಧ ಬೆಳಿಸಿದ್ದರೂ ಆ ಕಾಫರರು ವಿಶ್ವಾಸಘಾತ ಮಾಡದೆ ಬಿಡರು. ಆದ್ದರಿಂದಲೇ ನಾವು ಒಳ್ಳೇ ಜಾಗರೂಕತೆಯಿಂದಿರಬೇಕಾಗಿದೆ. ಇರಲಿ; ಅವರೆಲ್ಲರ ಹೆಸರನ್ನು ಹೇಳಿದರೆ ಪ್ರಯೋಜನವಿಲ್ಲ. ನಾನು ತಮ್ಮ ಬಳಿಗೆ ಒಂದು ಮಂತ್ರಾಲೋಚನೆಗಾಗಿ ಬಂದಿರುವೆನು. ಖುದ್ದ ಬಾದಶಹನೇ ಈ ವಿಷಯವನ್ನು ಶೋಧಿಸಿ ಅಪರಾಧಿಯನ್ನು ಹಿಡಿದು ತರಲು ನನಗೆ ಆಜ್ಞಾಪಿಸಿರುವನು. ಈ ವಿಷಯವನ್ನು ತಮ್ಮೆದುರಿಗೆ ಇಡುವದಕ್ಕಾಗಿ ಬಂದಿದ್ದೇನೆ.

ಈ ಮೇರೆಗೆ ನುಡಿದು ಆ ಖಾನನು ಸುತ್ತಲೂ ನೋಡಿದನು. ಅವನ ಇಂಗಿತವನ್ನು ತಿಳಿದು ಸಾಧುವು ತನ್ನ ಶಿಷ್ಯರಿಗೆ ಹೊರಗೆ ಹೋಗಲು

ಅಪ್ಪಣೆ ಮಾಡಿದನು. ಆಗ ಆ ಸ್ಥಳವು ಏಕಾಂತಕ್ಕೆ ಯೋಗ್ಯವಾಗಲು ಸರದಾರನು ಸಾಧುವನ್ನು ಕುರಿತು ಮೆಲ್ಲಗೆ:—ನಾನು ಹೇಳುವ ಮಾತು ಒಳ್ಳೇ ರಹಸ್ಯವಾಗಿದೆ. ಇದನ್ನು ತಾವು ಯಾರ ಮುಂದೂ ಹೇಳಬಾರದು. ತಮಗೆ ಶಕ್ಯವಿದ್ದರೆ ನನಗೆ ಈ ಕೆಲಸದಲ್ಲಿ ಸಹಾಯಮಾಡಿ ಬಾದಶಾಹೀ ಕ್ಷೇಮಚಿಂತನೆಯನ್ನು ಮಾಡಬೇಕು. ಸಾಧ್ಯವಾಗದಿದ್ದರೆ ಸುಮ್ಮನೆ ಇರ ಬೇಕು. ಈಗ ಬಾದಶಾಹೀ ಅಹಿತವನ್ನು ಮಾಡುವದಕ್ಕಾಗಿ ಹಲವು ಜನ ಗುಪ್ತಹೇರರು ಊರಲ್ಲಿ ಬಂದಂತೆ ವದಂತಿಯಿದೆ. ಅವರು ಹಲವು ಬಗೆಯ ವೇಷಗಳಿಂದ ಊರಲ್ಲಿ ತಿರುಗುತ್ತಿರುವದರಿಂದ ನಮಗೆ ಅವರ ಶೋಧಹಚ್ಚುವದು ಅಶಕ್ಯವಾಗಿದೆ. ಆದರೂ ಹಲವುಜನ ನಮ್ಮ ಗೂಢ ಚಾರರು ಆ ಬಗ್ಗೆ ಪ್ರಯತ್ನ ನಡಿಸಿದ್ದಾರೆ; ಬುಂದೇಲಖಂಡದ ಓರ್ವ ಸಂಸ್ಥಾನಿಕನು ಗುಪ್ತಹೇರನಾಗಿ ಇಲ್ಲಿಗೆ ಬಂದಿರುವನಂತೆ! ಅವನಿಗೆ ಅಲ್ಲಿ ಭವಾನಸಿಂಗನೆಂಬ ಹೆಸರು ಇರುವದಂತೆ; ಇಲ್ಲಿಗೆ ಅವನು ಬಂದ ಉದ್ದೇಶ ವೇನಂದರೆ ಬಾದಶಾಹಿಯನ್ನು ಬೊಕ್ಕಬೋರಲು ಹಾಕುವದಲ್ಲದೆ ಇಮಾಮ ಖಾನ ಸರದಾರನ ಬಹು ಚಲುವೆಯಾದ ಮಗಳನ್ನು ಹರಣಮಾಡುವದು. ಇವೆರಡರಲ್ಲಿ ಯಾವದು ಸಾಧಿಸುವದೋ ಅದನ್ನು ಮಾಡಬೇಕೆಂದು ಅವನು ಒಳ್ಳೇ ಪ್ರಯತ್ನ ನಡಿಸಿರುವನಂತೆ, ಅವನ ಅನುಯಾಯಿಗಳಲ್ಲಿ ಕೆಲಜನರೂ ಅವನ ಸಂಗಡ ಇದ್ದು, ಅವನ ಸೈನ್ಯವು ಎಲ್ಲಿಯೋ ಗಿರಿ-ಗಹ್ವರಗಳಲ್ಲಿ ವಾಸವಾಗಿದೆಯೆಂತೆ! ಅವನು ಸಸೈನ್ಯವಾಗಿ ಯಾವ ಹೊತ್ತಿಗೆ ಇಮಾಮಖಾನ ಸರದಾರನ ಮನೆಗೆ ಮುತ್ತಿಗೆ ಹಾಕುವನೋ ತಿಳಿಯದಾಗಿದೆ. ಇಂದೇ ನಾನು ಚೌಕಿಯ ಕೊತವಾಲನಿಗೆ ಚನ್ನಾಗಿ ಪಹರೆಮಾಡಲು ಅಪ್ಪಣೆಮಾಡಿ ಬಂದಿದ್ದೇನೆ. ಆ ಭವಾನಸಿಂಗನು ಮಹಾ ಧೂರ್ತನೂ, ನಾಮಾಂಕಿತ ಶೂರನೂ ಇರುವನಂತೆ! ಅವನಲ್ಲಿ ಸೈನ್ಯಬಲ ವಾದರೂ ತಕ್ಕಮಟ್ಟಿಗೆ ಇದೆಯಂತೆ! ಇವೆಲ್ಲ ಸಂಗತಿಗಳು ಬಾದಶಹನ ಕಿವಿವರೆಗೆ ಹೋದದ್ದರಿಂದ ಭವಾನಸಿಂಗನನ್ನು ಶೋಧಹಚ್ಚಿ ಹಿಡಿದುತರಲು ನನಗೆ ಅಪ್ಪಣೆ ಮಾಡಿದ್ದಾನೆ. ಇನ್ನು ಮೂರೇ ದಿನಗಳಲ್ಲಿ ಆತನನ್ನು ಹಿಡಿದು ಬಾದಶಹನಿಗೆ ಒಪ್ಪಿಸಬೇಕಾಗಿದೆ. ಆದ್ದರಿಂದ ನಿಮ್ಮ ಸಹಾಯ ವನ್ನಿಚ್ಛಿಸಿ ಬಂದಿದ್ದೇನೆ. ನೀವು ನನಗೆ ಕೈಲಾದಮಟ್ಟಿಗೆ ನೆರವಾಗುವಿ ರೇನು? ಬಾದಶಾಹಿಯ ಹಿತಚಿಂತಕರಾದ ತಾವು ನನಗೆ ನಿಶ್ಚಯವಾಗಿ

ನೆರವಾಗುವಿರೆಂದು ನಂಬಿರುತ್ತೇನೆ, ಎಂದು ನುಡಿದು ಸಾಧುವಿನ ಮುಖವನ್ನು ನೋಡತೊಡಗಿದನು.

ಭವಾನಿಸಿಂಗನಿಗೆ ಸರದಾರನ ಈ ಭಾಷಣದಿಂದ ಸಿಡಿಲು ಬಡಿದಂತಾಯಿತು. ಆತನ ಎದೆಯು ದಡದಡ ಬಡಿದುಕೊಳ್ಳಲಾರಂಭಿಸಿತು. ಅವನ ಮುಖವು ಒಮ್ಮೆಲೆ ನಿಸ್ತೇಜವಾಯಿತು. ಇಷ್ಟೇ ಅಲ್ಲ; ಅವನ ಮೈಯು ಒಮ್ಮೆಲೆ ಬೆವೆತು, ಅಗಾಧವಾದ ಸಂಕಟವು ಅವನನ್ನು ಆವರಿಸಿದಂತೆ ಅವನ ಸ್ಥಿತಿಯಾಯಿತು. ಈ ಪ್ರಕಾರದ ಶೋಚನೀಯ ಸ್ಥಿತಿಯಿಂದ ಆ ಸಾಧುವಿಗೆ ಕ್ಷಣಕಾಲ ಮಾತನಾಡಲು ಸಹ ಬಾಯಿ ಬಾರದಾಯಿತು. ಅವನು ಮಂತ್ರಮುಗ್ಧ ಸರ್ಪದಂತೆ ತಣ್ಣಗೆ ಕುಳಿತನು; ಆದರೆ ಉತ್ತರ ಕ್ಷಣದಲ್ಲಿ ಎಚ್ಚತ್ತು:—ಅಹಾ! ನಾನು ಎಂಥ ದೊಡ್ಡ ತಪ್ಪು ಮಾಡಿದೆನಲ್ಲ! ನನ್ನ ಬುದ್ಧಿಯು ಭ್ರಂಶವಾಯಿತು. ಹೀಗಾದರೆ ನಾನು ಶತ್ರುಗಳ ಕೈಯಲ್ಲಿ ನಿಶ್ಚಯವಾಗಿ ಸಿಗುವೆನು, ಎಂದು ಅಂದುಕೊಂಡು ಸ್ವಲ್ಪ ಧೈರ್ಯವ ತಾಳಿ ತನ್ನ ಈ ಶೋಚನೀಯ ಸ್ಥಿತಿಯಿಂದ ಸರದಾರನು ವಿಕಲ್ಪವ ತಿಳಿದುಕೊಳ್ಳಬಾರದೆಂದು ಒಮ್ಮೆಲೆ ನುಡಿದನೇನಂದರೆ:—ಸರದಾರರೇ, ನೋಡಿದಿರಾ! ನಮ್ಮ ಸ್ಥಿತಿಯನ್ನು! ನಾವು ಖುದಾನ ಚಿಂತನೆಯಲ್ಲಿ ಕಾಲಕ್ರಮಿಸತಕ್ಕವರು. ನಮಗೆ ರಾಜಕರಣವೆಂದರೆ ಹೃದಯದಲ್ಲಿ ಕಂಪನವುಂಟಾಗುವದು; ನಾಲಿಗೆಯು ತೊದಲಿಸಹತ್ತುವದು. ಕೇವಲ ರಾಜಕರಣದ ಸುದ್ದಿಯನ್ನು ಕೇಳುವದರಿಂದಲೇ ನಮ್ಮ ಸ್ಥಿತಿಯು ಹೀಗೆ ಶೋಚನೀಯವಾಗುತ್ತಿರುವಾಗ ಇನ್ನು ನಾವು ಆ ಕೆಲಸದಲ್ಲಿ ಪ್ರವೇಶಿಸಿ ಕೆಲಸ ಮಾಡುತ್ತೇವೆಂಬದು ಸಾಹಸದ ಕೆಲಸವೇ ಸರಿ! ನನ್ನ ಸ್ಥಿತಿಯನ್ನು ಪ್ರತ್ಯಕ್ಷವಾಗಿ ನೀವೇ ಕಂಡಿರುತ್ತೀರಿ. ಅಂದಬಳಿಕ ನಿಮಗೆ ಹೆಚ್ಚಿಗಿನ್ನೇನು ಹೇಳಲಿ! ನಾವು ರಾಜಕರಣಕ್ಕೆ ಅಯೋಗ್ಯರು. ಪ್ರಾಪಂಚಿಕ ವ್ಯವಹಾರದಲ್ಲಿ ವೈರಾಗ್ಯವನ್ನು ತಾಳಿಯೇ ನಾವು ಈ ಫಕೀರವೇಷಧಾರಿಗಳಾಗಿ ಖುದಾನ ಚಿಂತನೆಯಲ್ಲಿ ಕಾಲಕಳೆಯುತ್ತೇವೆ. ಇಂಥ ನಮ್ಮನ್ನು ಪುನಃ ನೀವು ವ್ಯವಹಾರದಲ್ಲಿ ತೊಡಗಿಸುವದರಿಂದ ಪ್ರಯೋಜನವೇನು? ನಾನು ನಿಮಗೆ ಖಂಡಿತವಾಗಿ ಹೇಳುತ್ತೇನೆ. ಇದು ನಮ್ಮ ಕೆಲಸವಲ್ಲ. ನಮ್ಮೊಡನೆ ನೀವು ಧರ್ಮಸಂಬಂಧವಾಗಿ ಮಾತನಾಡಬೇಕಲ್ಲದೆ ಇಂಥ ವ್ಯಾವಹಾರಿಕ ರಾಜಕೀಯ ಮಾತುಗಳನ್ನಾಡಬಾರದು. ಈ ಮಾತುಗಳಿಂದ

ನಮಗೆ ಯಾವ ಪ್ರಯೋಜನವೂ ಇಲ್ಲ!

ಈ ರೀತಿಯಾಗಿ ಸಾಧುವೇಷದ ಭವಾನಸಿಂಗನು ಮಾತನಾಡಲು ಆ ಆಗಂತುಕ ಸರದಾರನು ಮನಸ್ಸಿನಲ್ಲಿ:—ಎಲಾ! ಈ ಸಾಧುವು ಬಹು ಧೂರ್ತನಿರುವನು! ನನ್ನ ಪ್ರಶ್ನೆಯಿಂದ ನಿಜವಾಗಿ ಅಂಜಿಕೊಂಡರೂ ತನ್ನ ಸ್ಥಿತಿಯು ನನಗೆ ತಿಳಿಯಬಾರದೆಂದು ಎಷ್ಟು ಹಂಚಿಕೆಯಿಂದ ಮಾತನಾಡಿ ತನ್ನ ಹುಳಕನ್ನು ಮುಚ್ಚಿಕೊಳ್ಳುತ್ತಾನೆ! ಇರಲಿ; ಈತನನ್ನು ಇನ್ನೂ ಹೆಚ್ಚಿಗೆ ತೊಂದರೆಯಲ್ಲಿ ಕೆಡವಬೇಕು! ಎಂದು ಯೋಚಿಸಿ:—ಸಾಧುಗಳೇ, ತಾವು ಅಪ್ಪಣೆ ಕೊಡಿಸಿದ ವಿಷಯವು ನನಗೆ ಮಾನ್ಯವಿದೆ. ವಿರಕ್ತರು ರಾಜಕರಣಕ್ಕೆ ಅಯೋಗ್ಯರೆಂಬದನ್ನು ನಾನು ಒಪ್ಪುತ್ತೇನೆ; ಆದರೆ ವಿರಕ್ತರು ತಾವಾಗಿಯೇ ರಾಜಕಾರಣದಲ್ಲಿ ತೊಡಗಲಿಚ್ಛಿಸಿದ ಬಳಿಕ ನಾವು ಅಂಥವರ ನೆರವನ್ನು ಬಯಸಿದ್ದರಲ್ಲಿ ತಪ್ಪೇನು? ರಾಜಕಾರಣದಲ್ಲಿ ಸೇರುವ ಹೌಸುವುಳ್ಳ ವಿರಕ್ತರು ರಾಜಕಾರಣದ ಸುದ್ದಿಯಿಂದ ಗಾಬರಿಯಾಗುವದೇಕೆ? ಒಬ್ಬರು ಹೇಳುವ ರಾಜಕಾರಣದಿಂದ ವಿರಕ್ತರಿಗೆ ಆನಂದವಾಗಿ ಇನ್ನೊಬ್ಬರು ಹೇಳುವ ರಾಜಕಾರಣದಿಂದ ದುಃಖವಾಗಬೇಕೆಂದರೆ ಇದರ ಇಂಗಿತವೇನು? ಇದನ್ನು ವಿರಕ್ತರಾದ ತಾವೇ ಸ್ಪಷ್ಟೀಕರಿಸಿ ಹೇಳಬೇಕು, ಎಂದು ನುಡಿದನು. ಈ ಮಾತುಗಳನ್ನು ಕೇಳಿ ಸಾಧುವು ತುಂಬಾ ಅಂಜಿದನು. ಆತನಿಗೆ ಮುಂದೆ ಏನು ಮಾತಾಡಬೇಕೆಂಬದು ತಿಳಿಯದಾಯಿತು. ಅವನು ಮನಸ್ಸಿನಲ್ಲಿ:—ಈತನು ನಿಶ್ಚಯವಾಗಿ ಸೈತಾನನಿರುವನು. ಇವನು ನನ್ನ ಗುಟ್ಟನ್ನು ಹೊರಗೆಡವುವದಕ್ಕಾಗಿಯೇ ಬಂದಿರ ಬಹುದೇನು? ಹಾಗಿದ್ದರೆ ಕೆಲಸವೇ ಕೆಟ್ಟು ಹೋದಂತಾಯಿತು! ನಾನೇ ಭವಾನಸಿಂಗನೆಂಬದು ಇವನಿಗೆ ಗೊತ್ತಾಗಿದ್ದರೆ ಇಲ್ಲಿ ನನ್ನ ಆಟವೇನು ನಡೆಯುವದು? ಏನಾಗುವದೋ ಆಗಲಿ! ಈ ಮಾತಿಗೆ ಪ್ರತ್ಯುತ್ತರ ಕೊಡದಿರುವದೇ ಲೇಸು; ಎಂದು ಯೋಚಿಸಿ ಮೌನದಿಂದ ಕುಳಿತನು.

ಸಾಧುವು ಮೌನದಿಂದ ಕುಳಿತದ್ದನ್ನು ನೋಡಿ ಆ ಸರದಾರನು—ಯಾಕೆ ಸಾಧುಗಳೇ, ನನ್ನ ಮಾತಿಗೆ ಪ್ರತ್ಯುತ್ತರವೇ ಇಲ್ಲ. ನಿಜವಾದ ಸಂಗತಿಯು ಬೈಲಿಗೆ ಬೀಳಬಹುದೆಂದು ಮೌನವನ್ನಾಶ್ರಯಿಸಿದಿರೇನು? ಎನ್ನಲು, ಸಾಧುವು ತುಂಬಾ ಗೊಂದಲಕ್ಕೆ ಬಿದ್ದನು. ಅವನಿಗೆ ವಿಲಕ್ಷಣ ದಾಹವಾಗತೊಡಗಿತು! ಇಂದು ತನ್ನನ್ನು ನಿಶ್ಚಯವಾಗಿ ಶೂಲಕ್ಕೇರಿಸು

ವರು, ಎಂಬ ಭ್ರಮೆಯು ಅವನಿಗುಂಟಾಯಿತು. ಇನ್ನು ಆತನು ಏನೋ ಉತ್ತರ ಕೊಡತಕ್ಕವನಿದ್ದನು. ಅಷ್ಟರಲ್ಲಿ ಇಮಾಮುಖಾನನ ಸೇವಕನು ಬಂದು ಸಲಾಮು ಮಾಡಿ—ಹಜರತ್ತ, ಖಾನಸರದಾರರು ಅವಸರದ ಕೆಲಸದ ಸಲುವಾಗಿ ತಮ್ಮನ್ನು ಕರೆದು ತರುವಂತೆ ನನಗೆ ಅಪ್ಪಣೆ ಮಾಡಿರುವರು. ಬಾಗಿಲಲ್ಲಿ ಮೇಣೆಯು ಸಿದ್ಧವಿರುವದು, ಎಂದು ಬಿನ್ನವಿಸಿಕೊಂಡನು. ತಾನು ಒಳ್ಳೇ ವಿಪತ್ತಿನಲ್ಲಿ ಸಿಕ್ಕಾಗ ದೇವರೇ ಈ ಸೇವಕನನ್ನು ಕಳುಹಿಸಿ ನನ್ನನ್ನು ಪಾರುಮಾಡಿದನೆಂದು ಭಾವಿಸಿ ಸಾಧುವು ಹಸನ್ಮುಖಿಯಾದನು. ಬಳಿಕ ಆವನು ಬಳಿಯಲ್ಲಿ ಕುಳಿತಿದ್ದ ಸರದಾರರನನ್ನು ಕುರಿತು—ಸರದಾರರೇ, ಈ ಬಡ ಫಕೀರನ ಅಪರಾಧಗಳನ್ನು ಕ್ಷಮಿಸಿರಿ. ತಮ್ಮೊಡನೆ ಇನ್ನೂ ಕೆಲವು ವೇಳೆ ವಿನೋದದಿಂದ ಮಾತಾಡುತ್ತ ಕೂಡ್ರಬೇಕೆಂದರೆ ಖಾನಸಾಹೇಬರು ಕರೆಯುಕಳುಹಿದರು. ಅತ್ತ ಹೋಗಲೇ ಬೇಕಾಯಿತು. ತಮ್ಮ ಮಾತಿಗೆ ನಾನು ಸಮ್ಮತಿಸಲಿಲ್ಲೆಂದು ತಾವು ಸಿಟ್ಟಾಗಬಾರದು. ತಾವು ನಾಳೆಗೆ ಬಂದರೆ ಈ ವಿಷಯದಲ್ಲಿ ಮಾತಾಡೋಣವಂತೆ! ಎಂದು ನುಡಿದು ಕುಳಿತ ಸ್ಥಳದಿಂದ ಎದ್ದು ನಿಂತನು. ಸಾಧುವು ಎದ್ದದ್ದರಿಂದ ಆ ಸರದಾರನೂ ಅಲ್ಲಿಂದ ಹೊರಡಬೇಕಾಯಿತು. ಅವನು ಸಾಧುವಿಗೆ ಸಲಾಮು ಮಾಡಿ ಕುದುರೆಯನ್ನೇರಿ ಆ ವಿಶಾಲವಾದ ನಗರಿಯಲ್ಲಿ ಎತ್ತೋ ಮಾಯವಾದನು. ಇತ್ತ ಸಾಧುವು ಮೇಣೆಯಲ್ಲಿ ಕುಳಿತು ಸಾಗಿರುವಾಗ—ಪ್ರಸಂಗವು ಕಠಿಣವಿರುತ್ತದೆ ನನ್ನ ಗುಪ್ತವೇಷವು ದರ್ಬಾರದ ಜನರಿಗೆ ಗೊತ್ತಾದಂತೆ ತೋರುತ್ತದೆ. ಇಮಾಮುಖಾನನಿಗೂ ಗೊತ್ತಾಗಿರಬಹುದೇನು? ಯಾರಿಗೆ ಗೊತ್ತು? ಆತನು ಈಗ ನನ್ನನ್ನು ಯಾತಕ್ಕೆ ಕರೆಯಿಸುವನೆಂಬದು? ಮನೆಗೆ ಕರೆಯಿಸಿ ಸೆರೆಯಿರಿಸಿದರೆ ನಾನು ಮಾಡುವದಾದರೂ ಏನು? ಕರೀಮುಖಾನನಿಗೆ ಗೊತ್ತಾದ ಸುದ್ದಿಯು ಇಮಾಮುಖಾನನಿಗೆ ಗೊತ್ತಾಗಿರಲಿಕ್ಕಿಲ್ಲವೇ? ಗೊತ್ತಾಗಿರಬಹುದು. ಈಗ ನಾನು ಅಲ್ಲಿಗೆ ಹೋಗುವದು ಯುಕ್ತವೋ, ಅಯುಕ್ತವೋ ಎಂದು ಬಹು ವಿಧವಾಗಿ ಯೋಚಿಸಿ, ಕೊನೆಗೆ ಆಯೇಷಿಯನ್ನು ನೋಡುತ್ತ ಪ್ರಾಣ ಬಿಟ್ಟರೂ ಚಿಂತೆಯಿಲ್ಲ, ಆಲ್ಲಿಗೆ ಹೋಗಿಯೇ ತೀರಬೇಕೆಂದು ನಿಶ್ಚಯಿಸಿದನು. ಹೀಗೆ ನಿರ್ಧರಿಸಿದರೂ ಅವನಿಗೆ ಮನಸ್ಸಿನಲ್ಲಿ ಸಮಾಧಾನವಿಲ್ಲದಾಯಿತು. ಈ ಪ್ರಕಾರ ಅವನು ಯೋಚಿಸುತ್ತಿರಲು,

ಖಾನನ ಮನೆಯು ಬಂದಿತು. ಬೋಯಿಗಳು ಮೇಣೆಯನ್ನಿಳಿಸಿದರು. ಆಗ ಸಾಧುವೇಷದ ಭವಾನಸಿಂಗನು ಕೆಳಗಿಳಿದು ದಿವಾಣಖಾನೆಗೆ ಹೋದನು.

ಅಲ್ಲಿ ಖಾನನು ಪ್ರಸನ್ನಮುದ್ರೆಯಿಂದ ಕುಳಿತುಕೊಂಡಿದ್ದನು. ಸಾಧುವು ಹೋದ ಕೂಡಲೆ ಮೊದಲು ಖಾನನ ಮುಖಮುದ್ರೆಯನ್ನು ನೋಡಿದನು. ಅವನು ಈ ದಿನ ತುಂಬಾ ಸಂತೋಷದಲ್ಲಿರುವದನ್ನು ತಿಳಿದು ಸಾಧುವಿಗೆ ಸ್ವಲ್ಪ ಸಂಶಯು ಬಂದಿತು. ಆದರೂ ಅವನು ತನ್ನ ಅಧೈರ್ಯವನ್ನು ತೋರ್ಪಡಿಸದೆ ಖಾನನನ್ನು ಆಶೀರ್ವದಿಸಿ ಕುಳಿತು ಕೊಂಡನು. ಆದರೂ ಮನದ ದುಗುಡು ಹೋಗದ್ದರಿಂದ ಮನಬಿಚ್ಚಿ ಮಾತಾಡದಾದನು. ಮನುಷ್ಯನ ಮನಸ್ಸು ಬಹು ವಿಚಿತ್ರವಾಗಿರುತ್ತದೆ. ಅದು ಯಾವದೊಂದು ಪ್ರಸಂಗದ ಆಘಾತದಿಂದ ದುಃಖಿತವಾಯಿತೆಂದರೆ ಆ ಆಘಾತದ ಉಪಶಮನವಾಗುವವರೆಗೆ ಬೇರೆ ಕೆಲಸಕ್ಕೆ ಉತ್ಸಾಹ ವನ್ನೇ ತಳೆಯುವದಿಲ್ಲ. ಅದರಂತೆ ಸಾಧುವಿನ ಮನಸ್ಸಿನ ಮೇಲೆ ಆತ ನಿರುವ ಮಸೀದೆಯಲ್ಲಿ ಆಗಂತುಕ ಸರದಾರನ ಭಾಷಣದಿಂದ ದೊಡ್ಡ ಆಘಾತವಾದ್ದರಿಂದ ಆತನ ಉತ್ಸಾಹವೆಲ್ಲ ಕುಗ್ಗಿಹೋಗಿತ್ತು. ಉತ್ಸಾ ಹವೇ ಮನುಷ್ಯನ ನಿಜವಾದ ಪ್ರಾಣವು. ಉತ್ಸಾಹವು ಹೊರಟು ಹೋದ ಬಳಿಕ ಮನುಷ್ಯನು ಅರ್ಧಮರ್ಧ ಸತ್ತಂತೆಯೇ ಸರಿ! ಹೀಗೆ ಅರೆವಾಸಿ ಪ್ರಾಣವುಳ್ಳವನಂತಿದ್ದ ಸಾಧುವನ್ನು ನೋಡಿ ಖಾನನು:— ಯಾಕೆ ಸಾಧುಗಳೇ, ಈ ದಿನ ನಿಮ್ಮ ಪ್ರಕೃತಿ ಅಸ್ವಸ್ಥವಾಗಿದೆಯೇನು? ಹಾಗಿದ್ದರೆ ಬರುವದನ್ನಾದರೂ ಬಿಡಬೇಕಾಗಿತ್ತು. ನಿಮಗೆ ನಾನು ಸುಮ್ಮನೆ ತೊಂದರೆಪಡಿಸಿದ ಹಾಗಾಯಿತು, ಎಂದು ನುಡಿಯಲು, ಸಾಧುವು:-ಅಹುದು, ನನ್ನ ಪ್ರಕೃತಿಯು ಸ್ವಲ್ಪ ಅಸ್ವಸ್ಥವಾಗಿದೆ. ಬರುವ ಹಾಗೆಯೇ ಇದ್ದಿಲ್ಲ; ಆದರೆ ತಾವು ಅತಿ ಮಹತ್ವದ ಕೆಲಸವಿದೆಯೆಂದು ಹೇಳಿ ಕಳಿಸಿದ್ದರಿಂದ ನಿರ್ವಾಹವಿಲ್ಲದೆ ಬರಬೇಕಾಯಿತು. ತಮ್ಮ ಮನೆಗೆ ಬರುವದೆಂದರೆ ನನಗೆ ತುಂಬಾ ಸಂತೋಷವು ಕರೆಯಿಸಿದ ಕಾರಣವನ್ನು ಹೇಳಬೇಕು, ಎಂದು ನುಡಿದನು. ಆಗ ಖಾನನು:—ಹಿಂದುಗಡೆ ಹೇಳು ವೆನು: ಆದರೆ ಮೊದಲು ನಿಮ್ಮ ಪ್ರಕೃತಿಯನ್ನು ನೋಡುವದಕ್ಕೆ ಹಕೀಮ ನನ್ನು ಕರೆಯಿಸುವೆನು ಎನಲು, ಸಾಧುವು ಗೊಂದಲದಲ್ಲಿ ಬಿದ್ದು:—ಬೇಡ,

ಖಾನಸಾಹೇಬರೇ, ಈ ಬಡ ಫಕೀರನ ಸಲುವಾಗಿ ಅಷ್ಟೊಂದು ಶ್ರಮ ಪಡುವ ಕಾರಣವಿಲ್ಲ. ನಾನು ಇದು ವರೆಗೂ ಯಾರಿಗೂ ಕೈತೋರಿಸಿರುವದಿಲ್ಲ; ಆದ್ದರಿಂದ ಹಕೀಮನನ್ನು ಕರೆಯಿಸಬೇಡಿರಿ. ಮಸೀದೆಗೆ ಹೋಗಿ ಸ್ವಸ್ಥವಾಗಿ ಮಲಗಿಕೊಂಡೆನೆಂದರೆ ನನ್ನ ಪ್ರಕೃತಿಯು ತಾನೇ ಸರಿಯಾಗುವದು, ಎಂದು ನುಡಿದನು.

ಖಾನನು ಹೆಚ್ಚಿಗೆ ಅಗ್ರಹ ಮಾಡಲಿಲ್ಲ. ಸಾಧುವಿನ ಕಿವಿಯಲ್ಲಿ ಏನೋ ಒಂದು ಗುಪ್ತ ಸಂಗತಿಯನ್ನು ಹೇಳಿದನು. ಅದರಿಂದ ಸಾಧುವಿಗೆ ಸ್ವಲ್ಪ ಸಂತೋಷವಾಯಿತು; ಆದರೆ ಅವನು ಖಾನನು ಹೇಳಿದ ಸಂಗತಿಗೂ ಸರದಾರನು ಹೇಳಿದ ಸಂಗತಿಗೂ ಮೇಳುಹಾಕಿ ಮತ್ತೆ ಉದಾಸೀನನಾದನು. ಮುಂದೆ ಅವನು ಅಲ್ಲಿ ಬಹಳ ಹೊತ್ತು ನಿಲ್ಲದೆ ಖಾನನಿಂದ ಅಪ್ಪಣೆಪಡೆದು ಮಸೀದೆಗೆ ಹೊರಟನು. ದಾರಿಯಲ್ಲಿ ಅವನ ಮನಸಿಗೊಂದು ವಿಚಾರವು ಹೊಳೆಯಿತು. ಮೇಣೆಯ ಫಡಕುಗಳನ್ನು ಸರಿಸಿ ಹೊರಗೆ ಹಣಿಕಿ ನೋಡಿದನು. ತನ್ನನ್ನು ಕರೆಯಬಂದ ಖಾನನ ಸೇವಕನು ಮೇಣೆಯ ಬಳಿಯಲ್ಲಿ ಪಾದಚಾರಿಯಾಗಿ ಬರುತ್ತಿದ್ದನು. ಸಾಧುವು ಅವನನ್ನು ಹತ್ತರ ಕರೆದು, ಮಸೀದೆಗೆ ಬಂದಿದ್ದ ಸರದಾರನ ವಿಷಯವಾಗಿ ಕೇಳತೊಡಗಿದನು; ಆದರೆ ಆ ಸೇವಕನು:—ನನಗೆ ಆ ಸರದಾರನ ವಿಷಯವು ಗೊತ್ತಿಲ್ಲ. ಅವನು ಕರೀಮಖಾನ ಸರದಾರನಲ್ಲ, ಕರೀಮಖಾನರೆಂಬ ಒಬ್ಬ ಸರದಾರರು ನಮ್ಮ ಖಾನಸಾಹೇಬರ ಸ್ನೇಹಿತರಿರುವದು ನಿಜ; ಆದರೆ ನಿಮ್ಮ ಬಳಿಗೆ ಬಂದ ಸರದಾರನು ಮಾತ್ರ ಅವರಲ್ಲ, ಎಂದು ಖಂಡಿತವಾಗಿ ಹೇಳಿದನು. ಸೇವಕನ ಈ ಮಾತುಗಳಿಂದ ಸಾಧುವಿಗೆ ಒಳ್ಳೇ ವಿಚಾರವುಂಟಾಯಿತು. ಆಗ ಅವನ ಹೃದಯದಲ್ಲಿ ಸ್ವಚ್ಛವಾದ ಬೆಳಕು ಬಿದ್ದಂತಾಯಿತು. ತನ್ನ ಬಳಿಗೆ ಬಂದ ಸರದಾರನು ಬೇರೆ ಯಾರೂ ಆಗಿರದೆ ಆ ಗುಪ್ತಹೇರನೇ ಆಗಿರಬೇಕೆಂಬದು ಅವನಿಗೆ ಹೊಳೆದು ಹೋಯಿತು. ಆ ಗುಪ್ತಹೇರನು ತನ್ನ ಸಂಗತಿಯನ್ನು ಹ್ಯಾಗೋ ಶೋಧ ಹಚ್ಚಿ, ಸರದಾರನ ವೇಷದಿಂದ ಬಂದಿದ್ದನೆಂಬದು ಅವನ ನಂಬಿಕೆಗೆ ಕಾರಣವಾಯಿತು. ಈ ನಂಬಿಕೆಯಿಂದ ಅವನ ಅಂಜಿಕೆಯು ಕಸವು ಕೆಲಮಟ್ಟಿಗೆ ಕಡಿಮೆಯಾಯಿತು. ತಾನು ಖಾನನ ಮನೆಗೆ ಹೋಗುವಾಗ ಯಾವ ಬಗೆಯ ನಿರುತ್ಸಾಹವನ್ನು ತಾಳಿದ್ದನೋ ಆ ನಿರುತ್ಸಾಹವು ಈಗ ಅವನಲ್ಲಿ

ಉಳಿಯಲಿಲ್ಲ. ಕ್ಷಣಹೊತ್ತಿನ ಪೂರ್ವದಲ್ಲಿ ತನ್ನನ್ನು ಅಳಿಸಿಬಿಟ್ಟಿದ್ದ ಆ ಸರದಾರನ ಕರಾಮತಿಯನ್ನು ತಿಳಿದು ಅವನಿಗೆ ತುಂಬಾ ಆಶ್ಚರ್ಯವಾಯಿತು. ತಾನು ಗೂಢಚಾರರಲ್ಲಿ ಒಳ್ಳೇ ಚಾಣಾಕ್ಷನೆಂದು ತಿಳಿದಿದ್ದರೂ ತನಗೇ ಮಂಕುಬೂದಿ ಹಚ್ಚಿ ಹೋದ ಗೂಢಚಾರನು ತನಗಿಂತಲೂ ಬಲಿಷ್ಠನಿರಬೇಕು. ಹಾಗಲ್ಲದಿದ್ದರೆ ತನ್ನ ಮುಂದೆ ಪಾರಾಗಿ ಹೋಗುವದು ಸಾಮಾನ್ಯನಿಂದ ಆಗದು; ಎಂಬ ವಿಚಾರಗಳು ಅವನಲ್ಲಿ ಉತ್ಪನ್ನವಾಗಲು ಅವನ ಮುಖದಿಂದ ಒಮ್ಮೆಲೆ ಬಾಪುರೆ ಗೂಢಚಾರ! ಎಂಬ ಉದ್ಗಾರವು ಹೊರಟು ಹೋಯಿತು!!

೧೪—ಕೊಡ್ಲೆಯ ಕಾವು ಗಿಡಕ್ಕೆ ಮೂಲ.

ಪ್ರಿಯವಾಚಕರೇ, ಭವಾನಸಿಂಗ-ರಣಜಿತಸಿಂಗರಿಬ್ಬರ ಮೇಲಾಟವನ್ನು ನಡೆಯಗೊಟ್ಟು ನಾವು ಮಾಳವಾರಾಜವಂಶವು ಸೆರೆಮನೆಯಲ್ಲಿ ಎಷ್ಟು ಕಷ್ಟ ಭೋಗಿಸುತ್ತದೆಂಬದನ್ನು ನೋಡೋಣ ನಡೆಯಿರಿ.

ಚಾಣಾಕ್ಷನಾದ ಮಾನಸಿಂಗನು ತನ್ನ ಗುಪ್ತಚಾರನ ಹೇಳಿಕೆಯ ಮೇರೆಗೆ ಯಾವ ಪಾಪವನ್ನೂ ಅರಿಯದೆ ಕಲ್ಲುಕುಟ್ಟಿಗನ ವೇಷದಿಂದ ಉಪಜೀವಿಸುತ್ತಿರುವ ಚಂದ್ರಪಾಲನನ್ನೂ-ನಂದಕುಮಾರನನ್ನೂ ಹಿಡತರಿಸಿ ಸೆರೆಯಿರಿಸಿದ ಸಂಗತಿಯು ಸ್ಮರಣೆಯಲ್ಲಿರುವದಷ್ಟೇ? ಈ ಚಂದ್ರಪಾಲ-ನಂದಕುಮಾರರು ಮಾಳವಾ ರಾಜವಂಶೀಯರೇ ಇರಬಹುದೆಂದು ತರ್ಕವನ್ನು ಮಾಡುತ್ತಿದ್ದ ಮಾನಸಿಂಗನು, ಒಂದು ದಿನ ಸೆರೆಮನೆಗೆ ಬಂದು ತನ್ನ ಕುಶಾಗ್ರಬುದ್ಧಿಯನ್ನುಪಯೋಗಿಸಿ ಅವರನ್ನು ಪರೀಕ್ಷಿಸತೊಡಗಿದನು. ಚಂದ್ರಪಾಲನು ಅಗಾಧವಾದ ದುಃಖರೂಪೀ ಸಮುದ್ರದಲ್ಲಿಯೇ ಮುಳುಗಿಬಿಟ್ಟಿದ್ದರಿಂದ ಅವನಿಗೆ ಯಾದ ಬಗೆಯ ಆಶೆಯೂ ಇರಲಿಲ್ಲ. ದೀರ್ಘಕಾಲದ ದುಃಖಿಗೆ ಒಂದು ಬಗೆಯ ಔದಾಸೀನತೆಯು ಪ್ರಾಪ್ತವಾಗುವಂತೆ ಚಂದ್ರಪಾಲನಿಗೂ ಪ್ರಾಪ್ತವಾಗಿತ್ತು. ನಂದಕುಮಾರನು ಮಾತ್ರ ಒಮ್ಮೆ ಆನಂದವನ್ನು ತಾಳುತ್ತಿದ್ದನು. ಮತ್ತೊಮ್ಮೆ ಅಗಾಧವಾದ ಚಿಂತೆಯಲ್ಲಿ ಮುಳುಗುತ್ತಿದ್ದನು. ಈ ಮೇರೆಗೆ ಅವನು

ಮನಸ್ಸಿನ ಚಾಂಚಲ್ಯದಿಂದ ಶೋಚನೀಯ ಸ್ಥಿತಿಯನ್ನು ಹೊಂದಿ ಒಂದೊಂದು ದಿವಸವನ್ನು ಒಂದೊಂದು ಯುಗವನ್ನಾಗಿ ಕಳೆಯುತ್ತಿದ್ದನು.

ಬಿಡುಗಡೆಯ ಆಶೆಯಿಲ್ಲದೆ ಸೆರೆಮನೆಯಲ್ಲಿ ಕೊಳೆಯುತ್ತ ಬಿದ್ದಿರುವ ಆ ತಂದೆ-ಮಕ್ಕಳನ್ನು ನೋಡಿ ಮಾನಸಿಂಗನು ಮನಸ್ಸಿನಲ್ಲಿ—ಇವರು ರಾಜಲಕ್ಷಣಗಳಿಂದ ಯುಕ್ತರಾಗಿರುವದು ನಿಜ; ನಮ್ಮ ಸರದಾರನು ಹೇಳಿದ ಸುದ್ದಿಯು ನಿಜವೆಂದು ಕಂಡು ಬರುವದು. ಇವರು ನಿಜವಾಗಿ ಯೂ ಮಾಳವಾ ಸಿಂಹಾಸನಕ್ಕೆ ಬಾಧ್ಯಸ್ಥರೆಂದು ಕಂಡುಬಂದರೆ ಇವರಿಗೆ ದೇಹಾಂತ ಶಿಕ್ಷೆಯನ್ನೇ ವಿಧಿಸಬೇಕಾಗುವದು ಅನ್ಯಶಿಕ್ಷೆಯೇ ಇಲ್ಲ. ಆದ್ದ ರಿಂದ ಇವರು ಯಾರೆಂಬದನ್ನು ನಿಶ್ಚಿತವಾಗಿ ತಿಳಿದ ಹೊರತು ಶಿಕ್ಷೆ ವಿಧಿಸಿ ದರೆ ತಪ್ಪಾಗಬಹುದು. ಎಂದು ಯೋಚಿಸಿ ಚಂದ್ರಪಾಲನನ್ನು ಕುರಿತು—

ಮಾನಸಿಂಗ—ಚಂದ್ರಪಾಲ, ನನ್ನ ಮುಂದೆ ನಿಜ ಸಂಗತಿಯನ್ನು ಹೇಳುವಿಯೇನು?

ಚಂದ್ರಪಾಲ—ತಾವು ನನಗೆ ಏನು ಕೇಳುವಿರಿ?

ಮಾನಸಿಂಗ—ನಾನು ಏನಾದರೂ ಕೇಳಲೊಲ್ಲೆನೇಕೆ? ನಾನು ಕೇಳಿದ್ದಕ್ಕೆ ನಿಜ ಸಂಗತಿಯನ್ನು ಹೇಳಿದರಾಯಿತು.

ಚಂದ್ರಪಾಲ—ನಾನು ನಿಜ ಸಂಗತಿಯನ್ನೇ ಹೇಳುವೆನು.

ಮಾನಸಿಂಗ—ಹಾಗಾದರೆ ನೀನು ಯಾರು? ನಿನ್ನ ನಿಜವಾದ ಹೆಸರೇನು?

ಚಂದ್ರಪಾಲ—ನಾನು ಈ ಊರಿನಲ್ಲಿ ಒಬ್ಬ ಪ್ರತಿಮಾಕಾರನು.

ಮಾನಸಿಂಗ—ಸಾಕು, ಇದನ್ನು ನೀವು ಹೇಳುವ ಕಾರಣವಿಲ್ಲ; ಈ ಸಂಗತಿಯು ನನಗೆ ಮೊದಲೇ ಗೊತ್ತದೆ. ಆದರೆ............

ಚಂದ್ರಪಾಲ—ಆದರೆ, ಅಂದರೇನು? ಗೊತ್ತಿದ್ದ ಸಂಗತಿಯನ್ನು ನನಗೇಕೆ ಕೇಳುವಿರಿ?

ಮಾನಸಿಂಗ—ನೀವು ನಿಜ ಸಂಗತಿಯನ್ನು ಮುಚ್ಚಿಟ್ಟಿರುವಿರೆಂದು!

ಚಂದ್ರಪಾಲ—ಏನು? ನಾವು ನಿಜ ಸಂಗತಿಯನ್ನು ಬಚ್ಚಿಟ್ಟಿರು ವೆವೇ? ಹಾಯ್! ಹಾಯ್! ಬಡವರಾದ ನಮ್ಮ ನಿಜ ಸಂಗತಿಯ ರಹ ಸ್ಯವು ಇದಕ್ಕೂ ಹೆಚ್ಚಿಗಿನ್ನೇನು ಇರಬಹುದು? ಮಾನಸಿಂಗ ರಾಜರೇ, ನಮ್ಮನ್ನು ಯಾರೆಂದು ತಿಳಿದಿರುವಿರಿ?

ಮಾನಸಿಂಗ:—ನನಗೆ ತಿಳಿದದ್ದು ಹೇಳಲಿಯಾ! ಆ ಮಾತನ್ನು ನೀವು ಒಪ್ಪಿಕೊಳ್ಳುವಿರೋ?

ಚಂದ್ರಪಾಲ:—ರಾಜರೇ, ಸುಮ್ಮನೆ ಏನಾದರೊಂದು ಕಲ್ಪನೆಮಾಡಿ ನಮ್ಮನ್ನು ಸೆರೆಯಿರಿಸಿ ಗೋಳಾಡಿಸಬೇಡಿರಿ. ಈಗಿನ ರಾಜಕೀಯ ವಾತಾವರಣದಲ್ಲಿ ಯಾರೋ ದುಷ್ಟರು ನಮ್ಮ ವಿಷಯವಾಗಿ ನಿಮಗೆ ಏನಾದರೊಂದು ಹೇಳಿರಬಹುದು. ನಾನು ದೇವರನ್ನು ಸ್ಮರಿಸಿ ಹೇಳುವೆನು, ನಾವು ಬಡವರು. ಶಿಲಾಪ್ರತಿಮೆಯನ್ನು ಕಟಿದು ಹೊಟ್ಟೆ ತುಂಬಿಕೊಳ್ಳುವಂಥವರು. ನಮ್ಮ ನಿಜಸ್ಥಿತಿಯು ಇಷ್ಟಿದೆ. ಇದರ ಮೇಲೆ ನೀವು ನಮ್ಮನ್ನು ಸ್ವರ್ಗಾಧಿಪತಿಗಳೆಂದು ಭಾವಿಸಿದರೆ ಇದರಲ್ಲಿ ನಮ್ಮ ಅಪರಾಧವೇನು!

ಮಾನಸಿಂಗ:—ನೀವು ಸ್ವರ್ಗಾಧಿಪತಿಗಳಾಗಿದ್ದರೆ ನಾವು ನಿಮಗೆ ಅಂಜುತ್ತಿರಲಿಲ್ಲ; ಆದರೆ ನೀವು ಮಾಳವಾ ಸಿಂಹಾಸನಕ್ಕೆ ಬಾಧ್ಯಸ್ಥರಾದ್ದರಿಂದ ನಿಮ್ಮ ಯೋಗಕ್ಷೇಮವನ್ನು ಚನ್ನಾಗಿ ತಕ್ಕೊಳ್ಳಬೇಕಾಗಿದೆ, (ಎಂದು ನುಡಿದು ಸೂಕ್ಷ್ಮವಾಗಿ ನೋಡತೊಡಗಿದನು)

ಚಂದ್ರಪಾಲ:— (ಆಶ್ಚರ್ಯದಿಂದ) ರಾಜರೇ, ಇದೇನು? ಅಬದ್ಧ ತಿಳುವಳಿಕೆಯು! ಕಲ್ಲುಕುಟ್ಟಿಗರಾದ ನಮ್ಮನ್ನು ಯಾವದೊಂದು ರಾಜ್ಯದ ಸಿಂಹಾಸನಾಧಿಪತಿಗಳನ್ನಾಗ ಮಾಡಿಬಿಟ್ಟಿರಲ್ಲ? ಬಡವರಾದ ನಮಗೆ ಹೀಗೆ ಅನ್ನುವದು ನಮ್ಮ ಅಪಹಾಸ್ಯವೇ ಸರಿ!

ಮಾನಸಿಂಗ:—(ಸ್ವಲ್ಪ ಸಿಟ್ಟಿನಿಂದ) ನೀವು ಬದಮಾಷ ಜನರಿರುತ್ತೀರಿ. ನಾನು ಒಳ್ಳೇ ಮಾತಿನಿಂದ ಕೇಳಿದರೆ ನೀವು ನಿಜಸಂಗತಿಯನ್ನು ಹೇಳುವದಿಲ್ಲ, ಇರಲಿ. ನಿಮ್ಮಂಥ ಠಕ್ಕ ಸಾವಿರಾರು ಜನರಿಂದ ನಿಜಸಂಗತಿ ಹೊರಡಿಸಿ ಅವರನ್ನು ದಂಡಿಸಿರುತ್ತೇನೆ. ನೀವು ಈಗಲೇ ನಿಜಸಂಗತಿ ಹೇಳಿದರೆ ನಿಮ್ಮ ಅಪರಾಧವನ್ನು ಕ್ಷಮಿಸಿ ಬಾದಶಹನಿಗೆ ಹೇಳಿಕೊಂಡು ನಿಮ್ಮ ಸಿಂಹಾಸನವನ್ನು ನಿಮಗೆ ಕೊಡಿಸುವೆನು. ಒಂದುವೇಳೆ ನೀವು ಹೀಗೆಯೇ ಸುಳ್ಳು ಸಂಗತಿಯನ್ನೇ ಸಾಧಿಸುತ್ತ ನಡೆದರೆ ಭಯಂಕರ ದುಃಖಕ್ಕೆ ಗುರಿಯಾಗುವಿರಿ!

ಚಂದ್ರಪಾಲ:—ಏನಾದರೊಂದು ಮನಸ್ಸಿನಲ್ಲಿ ಸಂಶಯ ಹಿಡಿದು ಬಡವರಾದ ನಮ್ಮನ್ನು ಗೋಳಾಡಿಸಿಯೇ ತೀರಬೇಕೆಂದು ನಿಮ್ಮ ಇಚ್ಛೆಯಿದ್ದರೆ ಅದಕ್ಕೆ ನಮ್ಮ ಯತ್ನವಿಲ್ಲ. ಈಗ ನಿಮ್ಮ ಕೈಯಲ್ಲಿ ರಾಜಸತ್ತೆ

ಯಿರುವದು. ನಮ್ಮಂಥ ಅನಾಥರನ್ನು ತೋಫಿನ ಬಾಯಿಗೆ ಕೊಟ್ಟರೂ ನಿಮ್ಮ ಕೈಹಿಡಿಯುವವರು ಯಾರೂ ಇಲ್ಲ; ಆದರೆ ನಮ್ಮ-ನಿಮ್ಮ ಮೇಲೆ ದೇವರಿದ್ದಾನೆಂಬದನ್ನು ಲಕ್ಷದಲ್ಲಿಡಿರಿ. ಮರಣದನಂತರ ನಿಮ್ಮ ಈ ರಾಜ ಸತ್ತೆಯು ಮಣ್ಣುಗೂಡಿ ಹೋಗುವದು. ಆಗ ನಾವೂ ನೀವೂ ಸರಿಯಾಗಿ ಯೇ ಯಮರಾಜನ ಮುಂದೆ ಕೈಕಟ್ಟಿಕೊಂಡು ನಿಲ್ಲಬೇಕಾಗುವದು. ಇದನ್ನು ಧ್ಯಾನಕ್ಕೆ ತಂದು ಮಾಡಬೇಕಾದದ್ದನ್ನು ಮಾಡಿರಿ.

ಚಂದ್ರಪಾಲನ ಈ ಮಾತುಗಳನ್ನು ಕೇಳಿ ರಾಜಾ ಮಾನಸಿಂಹನು ಅತ್ಯಂತ ಕ್ಷೋಭಿಸಿದನು. ಈಗಲೇ ಇವರನ್ನು ತೋಫಿನ ಬಾಯಿಗೆ ನಿಲ್ಲಿಸಿ ಇವರನ್ನು ಚೂರು ಚೂರಾಗುವಂತೆ ಹಾರಿಸಿ ಬಿಡಬೇಕೆಂಬ ವಿಚಾರವು ಬಂದಿತು. ಕ್ಷಣಹೊತ್ತು ಅವನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಸಿಟ್ಟು ಸ್ವಲ್ಪ ಶಾಂತವಾದ ಬಳಿಕ ಮಾನಸಿಂಗನು:—ಇವರನ್ನು ಬಗೆ-ಬಗೆ ಯಿಂದ ಗೋಳಾಡಿಸಿ ಇವನ ಬಾಯಿಂದ ನಿಜಸಂಗತಿಯನ್ನು ಹೊರಡಿಸಲೇ ಬೇಕು. ನಿಜ ಸಂಗತಿಯು ಇವರಿಂದ ತಿಳಿದ ಹೊರತು ಈಗಲೇ ಇವರನ್ನು ಕೊಲ್ಲಬಾರದು, ಎಂದು ನಿಶ್ಚಯಿಸಿ ಅವನನ್ನು ಉರಿಗಣ್ಣಿನಿಂದ ನೋಡುತ್ತ ಹೊರಟು ಹೋದನು. ಬಳಿಕ ಅವನು ಸೆರೆಮನೆಯ ಪಾರುಪತ್ಯಗಾರ ನನ್ನು ಕರೆಯಿಸಿ ನುಡಿದನೇನಂದರೆ:—"ಹೊಸದಾಗಿ ಸೆರೆಯಿರಿಸಿದ ಚಂದ್ರ ಪಾಲ- ನಂದಕುಮಾರ ಎಂಬ ಇಬ್ಬರನ್ನು ಒಂದೇ ಕೋಣೆಯಲ್ಲಿರಿಸ ಕೂಡದು. ಅವರನ್ನು ಬೇರೆ ಬೇರೆ ಸ್ಥಳಗಳಲ್ಲಿರಿಸಿ ಅವರ ಮೇಲೆ ಚನ್ನಾಗಿ ಪಹರೆ ಇಡಬೇಕು. ರಾತ್ರಿಯಲ್ಲಿ ಅವರನ್ನು ಮಲಗಗೊಡಬಾರದು. ಮೂರು ದಿನಕ್ಕೊಮ್ಮೆ ಅವರಿಗೆ ಕ್ಲಪ್ತ ಆಹಾರವನ್ನು ಕೊಡಬೇಕು. ಅವರ ಕೈ-ಕಾಲುಗಳಲ್ಲಿ ಬಲವಾದ ಬೇಡಿಗಳನ್ನು ಹಾಕಬೇಕು. ನನ್ನ ಈ ಆಜ್ಞೆ ಯನ್ನು ಮೀರಿ ನಡೆದರೆ ನೀನು ಭಯಂಕರ ಶಿಕ್ಷೆಗೆ ಗುರಿಯಾಗುವಿ!"

ಸೆರೆಮನೆಯ ಪಾರುಪತ್ಯಗಾರನು ಒಂದು ಹೇಳಿದರೆ ಹತ್ತು ಮಾಡು ವಷ್ಟು ಕಠೋರ ಹೃದಯದವನಿದ್ದನು. ಅಂಥವನಿಗೆ ಮಾನಸಿಂಗನು ಹೀಗೆ ಆಜ್ಞೆ ಮಾಡಿದ ಬಳಿಕ ಕೇಳುವದೇನು? ಮಂಗನಿಗೆ ಮದ್ಯ ಕುಡಿಸಿ ಮೇಲೆ ವೃಶ್ಚಿಕದಂಶ ಮಾಡಿಸಿದಂತಾಯಿತು. ಆಗ ಸೆರೆಮನೆಯ ಅಧಿ ಕಾರಿಯು ಈ ನೂತನ ಅತಿಥಿಗಳ ಯೋಗಕ್ಷೇಮವನ್ನು ಹ್ಯಾಗೆ ಹ್ಯಾಗ ತಕ್ಕೊಳ್ಳಬೇಕೆಂದು ಹಂಚಿಕೆ ಹಾಕತೊಡಗಿದನು. ಒಬ್ಬನು ಮತ್ತೊಬ್ಬ

ನಿಗೆ ಹಿತವಾಗುವಂತೆ ಆಚರಿಸುವದು ಕಠಿಣವು. ಆದರೆ ಅಹಿತವಾಗುವಂತೆ ಆಚರಿಸುವದು ಸುಲಭವು. ಇಂಥ ಸುಲಭ ಕೆಲಸವೇ ಆ ಸೆರೆಮನೆಯ ಅಧಿಕಾರಿಯ ಪಾಲಿಗೆ ಬಂದದ್ದರಿಂದ ಅವನು ಹಾ ಹಾ ಅನ್ನುವಷ್ಟರಲ್ಲಿ ಆ ಕಾರ್ಯಕ್ರಮವನ್ನು ನಿರ್ಧರಿಸಿಕೊಂಡನು. ದುಷ್ಟರಿಗೆ ಜನರನ್ನು ಗೋಳಾಡಿಸುವ ವಿದ್ಯೆಯನ್ನು ಯಾರೂ ಹೇಳಿಕೊಡುವ ಕಾರಣವಿಲ್ಲ. ಸಮುದ್ರದಲ್ಲಿ ನೀರಿನ ತೆರೆಗಳು ವಿಪುಲವಾಗಿ ಏಳುವಂತೆ ಅವನಲ್ಲಿ ಆ ದುರ್ವಿಚಾರ ತೆರೆಗಳು ವಿಪುಲವಾಗಿ ಏಳುತ್ತಿರುತ್ತವೆ. ಇರಲಿ.

ಸೆರೆಮನೆಯ ಪಾರುಪತ್ಯಗಾರನು ತನ್ನ ಸೇವಕರೆಲ್ಲರಿಗೂ ಆಜ್ಞೆ ಮಾಡಿ ಬಿಟ್ಟನು. ಚಂದ್ರಪಾಲ-ನಂದಕುಮಾರರನ್ನು ಕೂಳಿಲ್ಲದೆ-ನಿದ್ದೆಯಿಲ್ಲದೆ ಗೋಳಾಡಿಸಬೇಕು. ಅವರಿಗೆ ಆಹಾರ ಕೊಡಬೇಕಾದರೆ ನಾನು ಹೇಳಿದ ಹೊರತು ಕೊಡಕೂಡದು. ಯಾವಾಗಲೂ ಒಬ್ಬ ಮನುಷ್ಯನು ಬೆತ್ತವನ್ನು ಹಿಡಿದುಕೊಂಡು ಕೂಡ್ರಬೇಕು. ಅವರು ಕಣ್ಣು ಮುಚ್ಚಿದ ಕೂಡಲೆ ಒಂದು ಏಟನ್ನು ಅವರಿಗೆ ಕೊಡಬೇಕು. ಅವರಿಬ್ಬರನ್ನು ಬೇರೆ ಬೇರೆ ಕೋಣೆಗಳಲ್ಲಿರಿಸಬೇಕು. ಅವರನ್ನು ಪರಿಪರಿಯಿಂದ ಗೋಳಾಡಿಸಬೇಕು ನೀವು ಎಷ್ಟು ರೀತಿಯಿಂದ ಪೀಡಿಸಿದರೂ ನಿಮ್ಮನ್ನು ನಾನು ಕೇಳುವದಿಲ್ಲ. ನೀವು ಗೋಳಾಡಿಸಿದಷ್ಟು ನನಗೆ ಸಂತೋಷವಾಗುವದು. ಇಷ್ಟೇ ಅಲ್ಲ, ಖುದ್ದ ರಾಜಾಮಾನಸಿಂಗರವರೂ ಸಂತೋಷಬಡುವರು, ಎಂದು ಸ್ಪಷ್ಟವಾಗಿ ಹೇಳಿದನು. ಆಯಿತು; ಅಧಿಕಾರಿಯ ಆಜ್ಞೆಯಿಂದ ಆ ತಂದೆ-ಮಕ್ಕಳ ಗೋಳಾಟಕ್ಕೆ ಪ್ರಾರಂಭವಾಯಿತು. ಅವರ ಗೋಳಿನ ಪುಣ್ಯಾಹವಾಚನವೆಂದು ಅವರನ್ನು ಮೊದಲು ಅಗಲಿಸಿದರು ಶೃಂಖಲಾಬದ್ಧನಾದ ನಂದಕುಮಾರನು ತಂದೆಯನ್ನಗಲಿ ಬೇ-ರೊಂದು ಕಗ್ಗತ್ತಲೆಯ ಕೋಣೆಯಲ್ಲಿ ವಾಸಮಾಡಿದನು.

ಮನುಷ್ಯನಿಗೆ ಜೀವನಕ್ಕೆ ಶುದ್ಧ ಹವೆ, ನೀರು ಅನ್ನ ಇವು ಮುಖ್ಯವಾಗಿ ಬೇಕಾಗುವಷ್ಟೇ; ಸೆರೆಮನೆಯ ಹವೆಯ ಶುಚಿತ್ವವನ್ನಂತೂ ವರ್ಣಿಸಲೇ ತೀರದು. ಇನ್ನು ಆಹಾರ-ನೀರುಗಳನ್ನು ಸಹ ವರ್ಜ್ಯ ಮಾಡಿದ ಬಳಿಕ ಕೇಳುವದೇನು? ಸೆರೆಯಾಳುವು ಜೀವಧಾರಣೆ ಮಾಡಿಕೊಂಡಿರುವದು ಕಷ್ಟವೇ ಸರಿ! ಚಂದ್ರಪಾಲನಾಗಲಿ, ನಂದಕುಮಾರನಾಗಲಿ ಮರಣಕ್ಕೆ ಸ್ವಲವೂ ಅಂಜುತ್ತಿರಲಿಲ್ಲ. ಒಮ್ಮೆಲೆ ಅವನು ಶಿರಚ್ಛೇದ ಮಾಡಿ

ಕೊಂಡು ಬಿಟ್ಟಿದ್ದರೆ ಅವರು ಸೌಖ್ಯದಿಂದ ಮೃತರಾಗುತ್ತಿದ್ದರು; ಆದರೆ ಅವರ ದುರ್ದೈವಕ್ಕೆ ರಾಜಾಮಾನಸಿಂಗನಿಗೆ ಆ ಬಗೆಯ ಬುದ್ಧಿಯು ಉತ್ಪನ್ನವಾಗಲಿಲ್ಲ. ಚಂದ್ರಪಾಲನೂ-ನಂದಕುಮಾರನೂ ಕ್ಷುದ್‌ಬಾಧೆಯಿಂದ ಬಳಲಿ ಬೆಂಡಾಗತೊಡಗಿದರು. ರಾಕ್ಷಸಸದೃಶರಾದ ಸೆರೆಮನೆಯ ಸೇವಕರು ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ಅವರ ಎದೆಯ ಮೇಲೆ ಕುಳಿತು ಅವರನ್ನು ಕಣ್ಣು ಮುಚ್ಚಗೊಡದಾದರು. ಕಣ್ಣು ಮುಚ್ಚಿದ ಕೂಡಲೆ ಅವರಿಗೆ ಬೆತ್ತದ ಪೆಟ್ಟುಗಳು ಬೀಳುತ್ತಿದ್ದವು. ಒಂದು ದಿನ ಒಬ್ಬ ದುಷ್ಟನು ನಂದಕುಮಾರನ ಕಣ್ಣುಗಳಲ್ಲಿ ಕ್ಷಾರವುಳ್ಳ ಅಂಜನವನ್ನು ತುಂಬಿದನು. ಆಗ ಆತನ ಕಣ್ಣುಗಳು ಬ್ರಹ್ಮಾಂಡಕ್ಕೆ ಬೆಂಕಿಹತ್ತಿದಷ್ಟು ಉಗ್ರವಾಗಿ ಅವನಿಗೆ ತಾಪವನ್ನುಂಟುಮಾಡತೊಡಗಿದವು. ಆಗ ಆ ವೀರನು ಅತ್ಯಂತ ಖತಿಗೊಂಡು ಕೈಕಾಲುಗಳನ್ನು ಒಮ್ಮೆಲೆ ಕೆಸುವಿನಿಂದ ಕೊಡವಲು ಅವನ ರಭಸಕ್ಕೆ ಅವು ಮುರಿದು ಪುಡಿಪುಡಿಯಾದವು; ಶೃಂಖಲೆಯಿಂದ ಕೈಕಾಲುಗಳು ಮುಕ್ತವಾಗಲು ಅವನು ಅಲ್ಲಿದ್ದ ಮೂರು ನಾಲ್ಕು ಜನ ಸೇವಕರನ್ನು ಸದೆಬಡಿದು ಹೊರಹೊರಟನು; ಆದರೆ ಅಂಜನದ ಉರಿಯು ಕಣ್ಣಲ್ಲಿ ವಿಶೇಷವಾಗಿದ್ದದರಿಂದ ಅವನಿಗೆ ಮುಂದಕ್ಕೆ ಹೋಗಲು ಕಣ್ಣು ಕಾಣದಂತಾದವು ಅಷ್ಟರಲ್ಲಿ ಸೇವಕರು ಗದ್ದಲ ಮಾಡಿದ್ದರಿಂಧ ಹತ್ತಿಪ್ಪತ್ತು ಜನ ಕಾವಲುಗಾರರು ಓಡಿ ಬಂದು ಆತನನ್ನು ಹಿಡಿದರು. ನಂದಕುಮಾರನು ಆವೇಶಗೊಂಡದ್ದರಿಂದ ಆ ಇಪ್ಪತ್ತು ಜನರಿಗೂ ಅವನನ್ನು ಹಿಡಿಯುವದು ಅಶಕ್ಯವಾಯಿತು. ಅಷ್ಟರಲ್ಲಿ ಸೆರೆಮನೆಯ ಅಧಿಕಾರಿಯು ಬೇರೆ ಕೆಲಜನ ಸಹಾಯಕರನ್ನು ತಂದದ್ದರಿಂದ ಪುನಃ ನಂದಕುಮಾರನು ಕಾಲು-ಕೈಗಳಲ್ಲಿ ಶೃಂಖಲೆಗಳನ್ನು ಹಾಕಬೇಕಾದರೆ ಆ ಜನರಿಗೆ ಸಾಕುಸಾಕಾಯಿತು.

ಈ ಅದ್ಭುತ ವಾರ್ತೆಯನ್ನು ಕೇಳಿ ಮಾನಸಿಂಗನು ಆಶ್ಚರ್ಯಪಟ್ಟನು. ನಂದಕುಮಾರನು ಇಷ್ಟೊಂದು ಶಕ್ತಿಸಂಪನ್ನನಿದ್ದದರಿಂದ ಅವನು ನಿಶ್ಚಯವಾಗಿ ರಾಜಮನೆತನದವನೇ ಇರಬೇಕು. ಆತನು ಬಡವನಾದ ಕಲ್ಲುಕುಟಿಗನ ಮಗನಲ್ಲ, ಎಂದು ಭಾವಿಸಿದನು; ಆದರೆ ಮುಂದೇನು ಮಾಡಬೇಕೆಂಬದು ಆತನಿಗೆ ತೋಚದಾಯಿತು. ಕೂಳಿಲ್ಲದೆ-ನೀರಿಲ್ಲದೆ ಕೊರಗಿಸುವದರಿಂದ ಅವರು ತಾವಾಗಿಯೇ ನಿಜಸಂಗತಿಯನ್ನು ಹೇಳುವರೆಂಬ ಧೈರ್ಯ

ದಿಂದಲೇ ಅವನು ಸುಮ್ಮನಾಗಿ ಬಿಟ್ಟನು. ಇತ್ತ ಸೆರೆಮನೆಯ ರಕ್ಷಕರು ಅವರಿಗೆ ಹಿಂಸೆಯನ್ನು ಕೊಡಲಾರಂಭಿಸಿದರು

ನಂದಕುಮಾರನ ಪ್ರಚಂಡ ಶಕ್ತಿಯ ಅನುಭವವನ್ನು ಹೊಂದಿದ ಸೇವಕರು ಅವನ ಸಮೀಪಕ್ಕೆ ಹೋಗಬೇಕಾದರೆ ಅಂಜತೊಡಗಿದರು. ಅವರಲ್ಲಿ ಧೈರ್ಯಶಾಲಿಗಳಾದವರು ಮೂರು-ಮೂರು ನಾಲ್ಕು-ನಾಲ್ಕು ದಿವಸಕ್ಕೊಮ್ಮೆ ಅವನಿಗೆ ಆಹಾರ ಕೊಡಲಿಕ್ಕೆ ಮಾತ್ರ ಅವನ ಕೋಣೆಗೆ ಹೋಗುತ್ತಿದ್ದರು. ಇದರಿಂದ ನಂದಕುಮಾರನಿಗೆ ಹಿಂಸೆಯು ತಪ್ಪಿತು. ಆದರೆ ಚಂದ್ರಪಾಲನ ಸ್ಥಿತಿಯು ಇದಕ್ಕೆ ವಿರುದ್ಧವಾಯಿತು.

ಚಂದ್ರಪಾಲನು ದಿನಹೋದ ಮನುಷ್ಯನು. ಇಳಿಕೆಯ ವಯಸ್ಸಿನಲ್ಲಿ ಅವನ ದೇಹವು ಜರ್ಜರಿತವಾಗಿತ್ತು. ಮೇಲಾಗಿ ಮುಪ್ಪಿನಲ್ಲಾದ ಅನಿವಾರ ಚಿಂತೆಯಿಂದ ಅವನು ಕ್ಷೀಣಕಾಯನಾಗಿದ್ದನು. ಅವನಲ್ಲಿ ಶಕ್ತಿಯು ಸ್ವಲ್ಪ ಮಾತ್ರಕ್ಕೂ ಇರಲಿಲ್ಲ. ಇಂಥ ಸ್ಥಿತಿಯಲ್ಲಿ ಸೆರೆಮನೆಯ ಅಧಿಕಾರಿಗಳ ಹಿಂಸೆ, ಅನ್ನ-ನೀರು ಕೊಡದಿರೋಣ; ಇದರಿಂದ ಅವನು ಮತ್ತಿಷ್ಟು ಕ್ಷೀಣಶಕ್ತಿಯುಳ್ಳವನಾಗಿದ್ದನು. ಆ ಮುದುಕನಿಗೆ ಬಹು ಭಾರವಾದ ಶೃಂಖಲೆಗಳನ್ನು ಹೊರುವದೇ ಕಷ್ಟವಾಗಿತ್ತು. ಅದರಲ್ಲಿ ಕ್ಷುದ್ಬಾಧೆ, ನಿದ್ರೆಯಿಲ್ಲದ್ದೊಂದು, ಕಾವಲುಗಾರರಿಂದ ಮೈಮುರಿ ಪೆಟ್ಟು ತಿನ್ನೋಣ ಇವುಗಳಿಂದ ಆತನು ಪ್ರತ್ಯಕ್ಷ ಯಮಯಾತನೆಗಳನ್ನು ಅನುಭವಿಸುವಂತೆ ಆಗಿತ್ತು. ಆದರೂ ಆ ನಿಶ್ಚಯೀ ಪುರುಷನು ತಾನು ಯಾರೆಂಬದನ್ನು ಹೇಳಿ ಕ್ಷಮೆಯನು ಯಾಚಿಸಬೇಕೆಂದು ಮನಸ್ಸು ಮಾಡಲಿಲ್ಲ. ತನಗೆ ಈ ರೀತಿ ಹೀನದೆಸೆಯು ಪ್ರಾಪ್ತವಾಗಿರಲು, ತಾನು ಯಾರೆಂಬದನ್ನು ಹೇಳಿ ತನ್ನ ಶೂರ ಹಾಗು ಪವಿತ್ರ ವಂಶಕ್ಕೆ-ಸಿಂಹಾಸನಕ್ಕೆ ಕುಂದನ್ನುಂಟುಮಾಡಬಾರದೆಂದು ನೆನಿಸಿದನು. ಮಾಳವಾ ಸಿಂಹಾಸನದ ಮೇಲೆ ಕೂಡ್ರತಕ್ಕಂಥವರು ಇಂಥ ಹೇಡಿಗಳಿರುವರೆಂಬ ಅಪಕೀರ್ತಿಯು ಪಸರಿಸಬಾರದೆಂದು ಅವನು ತನ್ನಷ್ಟಕ್ಕೆ ತಾನೇ ಆದದ್ದನ್ನು ಅನುಭವಿಸಬೇಕೆಂದು ನಿರ್ಧರಿಸಿದನು. ಹೀಗೆ ನಿರ್ಧರಿಸುತ್ತ ಅವನು ಮನಸ್ಸಿನಲ್ಲಿ—ಅಕಬರ ಬಾದಶಹನು ಮುಸಲ್ಮಾನನಾಗಿದ್ದರೂ ಕ್ರೂರನಲ್ಲವೆಂದು ಕೇಳಿದ್ದೇನೆ. ಆದರೆ ನಮ್ಮ ಸ್ವಜಾತಿಯವನಾದ ಮಾನಸಿಂಗನು ಅತ್ಯಂತ ಕ್ರೂರನಿರುವನು. ನಮ್ಮನ್ನು ಸೆರೆಹಿಡಿಸಿದವನು ನಮ್ಮ ಜಾತಿಯವನು. ನಮ್ಮನ್ನು

ಇಲ್ಲಿ ಈ ಪರಿ ಗೋಳಾಡಿಸುವವರು ನಮ್ಮ ಜಾತಿಯುವರು. ಹಾಯ್! ಹಾಯ್! ದೇವಾ! ಇವರಿಗೆ ಸ್ವಲ್ಪವೂ ದಯೆಯೆಂಬದು ಇಲ್ಲವಲ್ಲ! ಹೀಗೆ ನಮ್ಮ ಜನರೇ ನಮ್ಮ ಗೋಣುಮುರಿಯಹತ್ತಿದ್ದರಿಂದ ಅಕಬರನ ಹೊಟ್ಟೆಯು ದೊಡ್ಡದಾದದ್ದು ಸ್ವಾಭಾವಿಕವೇ ಸರಿ! ನಮ್ಮ ಜನರು ಕೂಡದಿದ್ದರೆ ಅಕಬರನು ಏನು ಮಾಡುವನು? ಕೊಡ್ಲಿಯು ಕಾವು ವೃಕ್ಷಕ್ಕೆ ಮೂಲವಲ್ಲವೇ? ಎಂದು ಅಂದುಕೊಂಡು ಪ್ರಾಪ್ತವಾದ ಸಂಕಟಕ್ಕೆ ಎದೆಗೊಟ್ಟು ನಿಂತನು.

೧೫—ಅಪೂರ್ವಯೋಗ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಸೆರೆಮನೆಯಲ್ಲಿ ಚಂದ್ರಪಾಲನ ದುಃಖವು ದಿನ ದಿನಕ್ಕೂ ಹೆಚ್ಚುತ್ತಿರಲು, ಅವನಿಗೆ ಶುಭ ದಿವಸಗಳು ಉದಯವಾಗುವ ಕಾಲವು ಸಮೀಪಿಸಿತು. ಮನುಷ್ಯನಿಗೆ ಒಂದೇ ಸವನೇ ದುಃಖದ ಕಾಲವು ಇದ್ದರೆ ಅವನು ಎಂದೂ ಸಹಿಸಲಾರನು. ನಡ-ನಡುವೆ ದೇವರು ಆತನಿಗೆ ಪುಣ್ಯದ ಮಧುರ ಫಲಗಳನ್ನು ಒದಗಿಸಿ ಕೊಡುತ್ತಿರುವದರಿಂದ ಅವನು ಜೀವಧಾರಣೆ ಮಾಡಿಕೊಂಡಿರುತ್ತಾನೆ, ಅದರಂತೆ ಚಂದ್ರಪಾಲನಿಗೆ ಪುಣ್ಯದ ಮಧುರ ಫಲಗಳು ಸಿಕ್ಕುವ ಸಮಯವು ಒದಗುವ ಕಾಲವು ಬಂದಿತು. ರಣಮಲ್ಲನು ಚಂದ್ರಪಾಲ-ನಂದಕುಮಾರರನ್ನು ಕಾಣುವದಕ್ಕಾಗಿ ಬಹು ಪ್ರಯತ್ನಪಟ್ಟು ಕೊನೆಗೆ ಸೆರೆಮನೆಯ ಕಾವಲುಗಾರರ ಸ್ನೇಹ ಸಂಪಾದಿಸಿ ಅಲ್ಲಿ ಒಂದು ಕೆಲಸವನ್ನು ಕೈಕೊಂಡನು. ರಣಮಲ್ಲನು ಸ್ವಭಾವದಿಂದ ಬಹು ವಿನೋದೀ ಪುರುಷನಾದ್ದರಿಂದ ಅವನು ಅಲ್ಪಾವಕಾಶದಲ್ಲಿ ಅಲ್ಲಿಯ ಜನರಿಗೆ ಪ್ರಿಯನಾದನು. ಸೆರೆಮನೆಯ ಅಧಿಕಾರಿಯೂ ಅವನ ಮೇಲೆ ಪ್ರೇಮ ಮಾಡಲಾರಂಭಿಸಿದನು. ಬರಬರುತ್ತ ಅವನಿಗೆ ಸಂಬಳವು ಹೆಚ್ಚಿ ಅವನು ಕೈದಿಗಳಿಗೆ ಅನ್ನ-ನೀರು ಒದಗಿಸಿ ಕೊಡುವ ಅಧಿಕಾರಿಯಾದನು. ಈ ಅಧಿಕಾರವು ಸಿಗುವವರೆಗೆ ಅವನು ಚಂದ್ರಪಾಲ-ನಂದಕುಮಾರರ ಬಳಿಗೆ ಹೋಗಿದ್ದಿಲ್ಲ. ಕೇವಲ ದೂರಿನಿಂದಲೇ ಅವರನ್ನು ನೋಡಿ ಮನದಲ್ಲಿ ಮರಗುತ್ತಿದ್ದನು.

ಸೆರೆಮನೆಯ ಎಲ್ಲ ಕಾವಲುಗಾರರೂ ಅಧಿಕಾರಿಗಳೂ ತನ್ನನ್ನು ಪ್ರೀತಿಸಹತ್ತಿ ತನಗೆ ಒಂದು ಜವಾಬದಾರಿಯ ಕೆಲಸವನ್ನು ಕೂಡಾ ಕೊಟ್ಟದ್ದರಿಂದ ಆತನಿಗೆ ತುಂಬಾ ಸಂತೋಷವಾಯಿತು. ತಾನು ಇನ್ನು ಮುಂದೆ ಹೀಗೆ ಸುಮ್ಮನೆ ಕುಳಿತುಕೊಳ್ಳದೆ ತನ್ನ ಒಡೆಯನ ಕಲ್ಯಾಣವನ್ನು ಮಾಡಬೇಕೆಂದು ಯೋಚಿಸಿದನು. ಇನ್ನು ತಾನು ಎಲ್ಲಿ ಹೋದರೂ ಹ್ಯಾಗೆ ವರ್ತಿಸಿದರೂ ಇಲ್ಲಿಯ ಜನರಿಗೆ ಸಂಶಯ ಬರಲಾರದೆಂಬದು ಅವನಿಗೆ ನಂಬಿಗೆಯಾಯಿತು. ಈ ಅವಧಿಯಲ್ಲಿ ಅವನು ರಣಜಿತಸಿಂಗನಿಗಾಗಲೀ, ಅಂಬಾದಾಸನಿಗಾಗಲಿ ಭೆಟ್ಟಿಯಾಗಿರಲಿಲ್ಲ. ಅವರು ಏನೇನು ನಡಿಸಿರುವರೆಂಬದು ಕೂಡಾ ಅವನಿಗೆ ತಿಳಿದಿರಲಿಲ್ಲ. ಇದಕ್ಕಾಗಿ ಅವನಿಗೆ ತುಂಬಾ ಯೋಚನೆಯಾಯಿತು. ತನ್ನ ಸ್ನೇಹಿತರು ಈ ಕಾಲದಲ್ಲಿ ತನ್ನ ಜೊತೆಯಲ್ಲಿಯೇ ಇದ್ದರೆ ಅಲ್ಪಾವಕಾಶದೊಳಗೇ ತಮ್ಮ ರಾಜವಂಶವನ್ನು ಇಲ್ಲಿಂದ ಪಾರುಮಾಡಬಹುದಾಗಿತ್ತಲ್ಲವೇ? ಎಂದು ಸಹ ಯೋಚಿಸಿದನು; ಆದರೆ ಆ ಯೋಚನೆಯು ಕೈಗೂಡುವ ಬಗೆ ಹೇಗೆ? ಸೆರೆಮನೆಯನ್ನು ಬಿಟ್ಟು ಹೊರಗೆ ಹೋಗಲಿಕ್ಕೆ ಸಹ ಆತನಿಗೆ ಅವಕಾಶವಿರಲಿಲ್ಲ. ಇದಕ್ಕೆ ಮುಂದೆ ಏನು ಮಾಡಬೇಕು? ಎಂಬ ಯೋಚನೆಯಲ್ಲಿಯೇ ಮಗ್ನನಾಗಿ ಅವನು ಆ ಸೆರೆಮನೆಯ ಒಂದು ಕೋಣೆಯಲ್ಲಿ ಕುಳಿತುಕೊಂಡಿದ್ದನು. ಅವನ ಬಳಿಯಲ್ಲಿ ಆಗ ಬೇರೆ ಯಾವ ಜನರೂ ಇದ್ದಿಲ್ಲ.

ಹೀಗೆ ರಣಮಲ್ಲನು ಯೋಚಿಸುತ್ತ ಕುಳಿತಿರಲು, ಅಲ್ಲಿಗೆ ರಾಮಸಿಂಗನೆಂಬ ಕಾವಲುಗಾರನು ಬಂದನು. ಈ ರಾಮಸಿಂಗನು ರಣಮಲ್ಲನಿಗೆ ಒಳ್ಳೇ ಸ್ನೇಹಿತನಾಗಿದ್ದನು. ಆತನು ಈ ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ಸಂಪಾದಿಸಲಿಕ್ಕೆ ಈ ರಾಮಸಿಂಗನೇ ಮುಖ್ಯ ಕಾರಣನಾಗಿದ್ದನು. ಆದ್ದರಿಂದ ರಾಮಸಿಂಗನೂ, ರಣಮಲ್ಲನೂ ಏಕಜೀವರಾಗಿದ್ದರು. ಹೀಗಿದ್ದರೂ ರಣಮಲ್ಲನು ತಾನು ಯಾರೆಂಬದನ್ನು ಅವನ ಮುಂದೆ ಹೇಳಿದ್ದಿಲ್ಲ. ಈ ದಿನ ರಣಮಲ್ಲನು ತುಂಬಾ ಯೋಚನೆಯಲ್ಲಿದ್ದುದನ್ನು ನೋಡಿ ರಾಮಸಿಂಗನು—ಯಾಕೆ ರಣಮಲ್ಲಜಿಯವರೇ, ಈ ದಿವಸ ನೀವೇನೋ ಗೂಢ ವಿಚಾರದಲ್ಲಿ ಮಗ್ನವಾದಂತೆ ತೋರುತ್ತದೆ. ಅದಾವ ವಿಚಾರವದು? ಎಂದು ಕೇಳಿದನು. ರಾಮಸಿಂಗನಂಥ ಜೀವದ ಗೆಳೆಯನೆದುರಿಗೆ ತನ್ನ ನಿಜ ಸಂಗತಿಯನ್ನು ಹೇಳಿ ಅವನನ್ನು ತನ್ನ ಕಾರ್ಯಕ್ಕೆ ಅನುಕೂಲ ಮಾಡಿ

ಕೊಳ್ಳಬೇಕೆಂಬ ಆಶೆಯು ಅವನಿಗೆ ಹುಟ್ಟಿತು. ತನ್ನ ನಿಜ ಸಂಗತಿಯನ್ನು ಹೀಗೆ ಹೇಳಿಬಿಟ್ಟರೆ ರಾಮಸಿಂಗನು ಎಲ್ಲಿ ತಿರುಗಿ ಬೀಳುವನೋ ಎಂಬ ವಿಚಾರವು ಅವನಲ್ಲಿ ಉಂಟಾಗದೆ ಇರಲಿಲ್ಲ. ಆದರೆ ರಾಮಸಿಂಗನಿಗೂ ತನಗೂ ಇದ್ದ ಸ್ನೇಹವನ್ನು ಸ್ಮರಿಸಿ ಅವನು ವಿಕಲ್ಪವನ್ನು ಕೂಡಲೆ ಮರೆತು ಬಿಟ್ಟನು. ತನ್ನ ನಿಜ ಸಂಗತಿಯನ್ನು ಹೇಳಿಯೇ ಬಿಡಬೇಕೆಂಬ ಉತ್ಕಟೇಚ್ಛೆಯು ಅವನಲ್ಲುಂಟಾಯಿತು. ಈ ಉತ್ಕಟೇಚ್ಛೆಯ ಮುಂದೆ ಅವನ ಆಟವು ನಡೆಯದಾಯಿತು. ಅವನು ರಾಮಸಿಂಗನನ್ನು ಕುರಿತು ಮೆಲ್ಲಗೆ—ಮಿತ್ರಾ, ನನ್ನ ಯೋಚನೆಯ ಕಾರಣವನ್ನು ಕೇಳುವಿಯಾ? ನಾನು ಹೇಳುವೆನು; ಆದರೆ ನೀನು ಮಾತ್ರ ಆ ಕಾರಣವನ್ನು ಕೇಳಿದರೂ ನನ್ನೊಡನೆ ಏಕರೀತಿಯಾಗಿ ಸ್ನೇಹವನ್ನು ಕಾಯ್ದುಕೊಂಡಿರುವೆನು. ಮತ್ತು ಆ ಸಂಗತಿಯನ್ನು ಯಾರ ಮುಂದೆಯೂ ಹೇಳಲಿಕ್ಕಿಲ್ಲ! ಎಂದು ನನಗೆ ವಚನ ವನ್ನು ಕೊಡು, ಎಂದು ನುಡಿದನು. ಅದಕ್ಕೆ ರಾಮಸಿಂಗನು—ಮಿತ್ರಾ, ಇದಕ್ಕೇಕೆ ವಚನವು? ಬೇಕಾದರೆ ನಿನ್ನಿಷ್ಟದಂತೆ ವಚನವನ್ನೂ ಕೊಡುತ್ತೇನೆ. ಸಂಶಯವಿಲ್ಲದೆ ಹೇಳು, ಎಂದನು. ಆಗ ರಣಮಲ್ಲನು ರಹಸ್ಯವಾಗಿ ತನ್ನ ಸಂಗತಿಯನ್ನು ಹೇಳಿದನು.

ರಣಮಲ್ಲನು ಎಲ್ಲ ಸಂಗತಿಗಳನ್ನು ಪೂರ್ಣವಾಗಿ ಹೇಳಿದ ಬಳಿಕ ರಾಮಸಿಂಗನು ಗಹಗಹಿಸಿ ನಕ್ಕನು. ಅವನ ದೊಡ್ಡ ನಗೆಯನ್ನು ನೋಡಿ ರಣಮಲ್ಲನು ಬೆಪ್ಪನಾಗಿ ಕುಳಿತನು. ತಾನು ಹೇಳುವ ಈ ಹೃದಯ ದ್ರಾವಕ ಸಂಗತಿಯನ್ನು ಕೇಳಿ, ಈತನ ಹೃದಯವು ಕರಗಿ ತನ್ನ ಕೆಲಸಕ್ಕಾಗಿ ಸಹಾನುಭೂತಿಪರ ಉದ್ಗಾರಗಳನ್ನು ತೆಗೆಯಬಹುದೆಂದು ನೆನಸಿದ್ದನು. ಆದರೆ ಈ ನಗೆಯಿಂದ ಅವನ ಆಶೆಯ ಕಸುವು ಕುಗ್ಗಿ ಅವನು ದಿಙ್ಮೂಢನಾದನು. ಆಗ ಅವನು ಸ್ವಲ್ಪ ಧೈರ್ಯವ ತಾಳಿ—ಮಿತ್ರನೇ, ಹೀಗೇಕೆ ನಗುತ್ತಿರುವೆ? ಎನಲು, ರಾಮಸಿಂಗನು—ಮಿತ್ರಾ, ನಗದೆ ಏನು ಮಾಡಲಿ? ಯಾವ ಕಾರ್ಯಕ್ಕಾಗಿ ನಾನು ನಿನ್ನ ಸ್ನೇಹವನ್ನು ಇದುವರೆಗೆ ಮಾಡಿದೆನೋ ಆ ಕಾರ್ಯವು ಇಂದು ಪೂರ್ಣವಾದದ್ದರಿಂದ ನನಗೆ ಯಾಕೆ ಸಂತೋಷವಾಗಬೇಡ? ಸಂತೋಷದ ಬಹಿರ್ಲಕ್ಷಣವೇ ನಗೆಯಲ್ಲವೇ? ಎಂದನು. ರಣಮಲ್ಲನು ಸ್ವಲ್ಪ ಗಾಬರಿಯಾಗಿ—

ರಣಮಲ್ಲ:—ಮಿತ್ರಾ, ನಿನ್ನ ಮಾತುಗಳು ನನಗೆ ಸ್ಪಷ್ಟವಾಗಿ ತಿಳಿಯಲಿಲ್ಲ.

ರಾಮಸಿಂಗ:—ಈಗ ಹ್ಯಾಗೆ ತಿಳಿದಾವು! ನಿನ್ನ ಆ ದೇಶದ್ರೋಹಿ ಸ್ವಾಮಿಯಂತೆ ನಿನ್ನ ಕಾಲಲ್ಲಿಯೂ ಮಣ-ಮಣಭಾರದ ಬೇಡಿಗಳು ಬಂದಾಗ ತಿಳಿಯುವದು.

ರಾಮಸಿಂಗನ ಈ ಮಾತುಗಳನ್ನು ಕೇಳಿ ರಣಮಲ್ಲನು ತೀರಾ ಗಾಬರಿಯಾದನು. ಈತನು ಮಾನಸಿಂಗನ ಗುಪ್ತ ಹೇರನಿದ್ದು, ನನ್ನನ್ನು ಮೋಸಗೊಳಿಸುವದಕ್ಕಾಗಿ ಇಲ್ಲವೆ ನನ್ನ ಹೂರಣವನ್ನು ಹೊರಗೆಡವುವದ ಕ್ಕಾಗಿ ನನ್ನ ಗೆಳೆತನವನ್ನು ಮಾಡಿರುವನು. ಹಾಯ್! ಹಾಯ್! ದೇವಾ! ಹಗ್ಗವೆಂದು ಕೈನೀಡಿದರೆ ಅದು ಕೃಷ್ಣಸರ್ಪವಾಗಬೇಕೆ? ಅಮೃತವೆಂದು ಪಾನ ಮಾಡಿದರೆ ಅದು ಕಾಲಕೂಟ ವಿಷವಾಗಬೇಕೆ? ನಾನು ನಿಶ್ಚಯ ವಾಗಿ ಮೋಸಹೋದೆನು. ಹಾಯ್! ಇನ್ನೇನು ಮಾಡಲಿ ಇವನಿಗೆ ಏನೆಂದು ಉತ್ತರ ಕೊಡಲಿ! ಎಂಬದಾಗಿ ದುಃಖಿಸುತ್ತ ಕುಳಿತನು ಮುಂದೆ ಏನು ಮಾತಾಡಬೇಕೆಂಬದೇ ಅವನಿಗೆ ತಿಳಿಯದಾಯಿತು. ಒಬ್ಬ ಮನುಷ್ಯನು ಮೋಸಹೋಗಿ ಶತ್ರುವಿನ ಕೈಯಲ್ಲಿ ಸಿಕ್ಕು ಬಿಟ್ಟನೆಂದರೆ ಏನು ಮಾಡುವನು? ತನ್ನ ದಡ್ಡತನಕ್ಕೂ, ತನ್ನ ಭಾವೀಸ್ಥಿತಿಯು ವಿಷಯಕ್ಕೂ ಅವನು ಚಿಂತಿಸಬೇಕಾಗುತ್ತದಲ್ಲವೇ? ಆದರಂತೆ ರಣಮಲ್ಲನ ಸ್ಥಿತಿಯಾಗಿ ರಲು, ಅವನು ಕೆಲನಿಮಿಷಗಳ ವರೆಗೆ ಯೋಚಿಸಿ ಕೊನೆಗೆ ವಿಲಕ್ಷಣ ಸಂತಾಪವನ್ನು ಹೊಂದಿದನು. ಈ ರಾಮಸಿಂಗನು ನನಗೆ ಸ್ನೇಹಿತನಂತೆ ಇದುವರೆಗೆ ನಟಿಸಿ ಹೀಗೆ ಮೋಸಮಾಡಿದನಲ್ಲವೇ? ಈಗಲೇ ಇವನ ಗಂಟಲು ಒಡೆದು ಅಸುವನ್ನು ಹೀರಿದರೆ ನಾನು ನಿಷ್ಕಂಟಕನಾಗುವೆನು. ನನ್ನ ಸ್ವಾಮಿಯ ಕಾರ್ಯವೂ ಕೈಗೂಡುವದು, ಎಂದು ಯೋಚಿಸಿ ಒಮ್ಮೆಲೆ ಅವನ ಮೈಮೇಲೇರಿ ಹೋದನು. ರಾಮಸಿಂಗನಾದರೂ ಕಡಿ ಮೆಯವನಿದ್ದಿಲ್ಲ. ಅವನು ರಣಮಲ್ಲನ ಕೈಗಳನ್ನು ಗಟ್ಟಿಯಾಗಿ ಹಿಡಿದು:- ನಾನು ನಿನ್ನಂತೆ ದಡ್ಡನಲ್ಲ. ನೀನು ಹೀಗೆ ಮಾಡುವಿಯೆಂದು ತಿಳಿದೇ ನಾನು ಎಚ್ಚರಿಕೆಯಲ್ಲಿದ್ದೇನೆ. ನಿನ್ನಂಥ ಇಬ್ಬರ-ಮೂವರು ರಣಮಲ್ಲರು ಮೈಮೇಲೇರಿ ಬಂದರೂ ನನ್ನ ಒಂದು ಕೂದಲಕ್ಕಾದರೂ ದಕ್ಕೆಹತ್ತ ಲಾರದು, ಎಂದನು. ರಾಮಸಿಂಗನು ಹಿಡಿದ ಕೈಯನ್ನು ಬಿಡಿಸಿಕೊಳ್ಳಬೇಕಾ

ದರೆ ಅವನು ದಣಿದು ಹೋದನು. ಅವನಿಗೆ ರಾಮಸಿಂಗನ ಶಕ್ತಿಯು ಅನುಭವವು ಬಂದುಹೋಯಿತು. ಇವನ ಮುಂದೆ ತನ್ನ ಆಟವು ನಡೆಯದೆಂದು ರಣಮಲ್ಲನು ಖಂಡಿತವಾಗಿ ತಿಳಿದನು. ಈ ತಿಳುವಳಿಕೆಯಿಂದ ಅವನು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದು ಯೋಚಿಸಿ ನಾಲಿಗೆಯನ್ನು ಕಿತ್ತುಕೊಳ್ಳಲಾರಂಭಿಸಿದನು. ರಣಮಲ್ಲನ ಈ ಸಾಹಸದ ಕೆಲಸವು ರಾಮಸಿಂಗನ ಲಕ್ಷದಲ್ಲಿ ಬಾರದೆ ಇರಲಿಲ್ಲ. ಅವನು ಆತನ ಎರಡೂ ಕೈಗಳನ್ನು ಹಿಡಿದು ಆ ಕಾರ್ಯಕ್ಕೆ ಪ್ರತಿಬಂಧವನ್ನುಂಟು ಮಾಡಿದನು. ಆಗಂತೂ ರಣಮಲ್ಲನು ಪೂರಾ ಹತಾಶನಾದನು. ಅವನ ಮೋರೆಯ ಮೇಲಿನ ಪ್ರಫುಲ್ಲಿತ ಕಳೆಯೆಲ್ಲ ಕಂದಿಹೋಯಿತು. ಇನ್ನು ಮುಂದೆ ಏನು ಮಾಡಬೇಕೆಂಬದೇ ಅವನಿಗೆ ತಿಳಿಯದಾಯಿತು. ತನ್ನ ದಡ್ಡತನಕ್ಕೆ ತನ್ನನ್ನೇ ಮನದಲ್ಲಿ ಹಳಿದುಕೊಳ್ಳಲಾರಂಭಿಸಿದನು.

ರಣಮಲ್ಲನ ಈ ಸ್ಥಿತಿಯನ್ನು ತಿಳಿದು ರಾಮಸಿಂಗನು ಮತ್ತಿಷ್ಟು ನಕ್ಕು—ಯಾಕೆ ರಣಮಲ್ಲಜಿಯವರೇ, ಈಗ ನಿಮಗೆ ಹ್ಯಾಗೆ ಅನಿಸಿರಬಹುದು; ಕಾಲಲ್ಲಿ ಬೇಡಿಗಳು ಬರುವವೆಂದು ಹೆದರಿರಬಹುದಲ್ಲವೇ? ನಿಮ್ಮಂಥ ಮೋಸಗಾರರಿಗೆ ಇಂಥ ಶಿಕ್ಷೆ ಆದರೆ ತಪ್ಪಲ್ಲವಷ್ಟೇ; ಎಂದು ಮಾರ್ಮಿಕವಾಗಿ ನುಡಿದನು. ಆಗ ರಣಮಲ್ಲನು ತಿರಸ್ಕಾರದಿಂದ:—ರಾಮಸಿಂಗ, ನೀನು ಹೀಗೆ ನನ್ನ ಸರ್ವಸ್ವವನ್ನೂ ಘಾತಮಾಡುವಿಯೆಂದು ನಾನು ತಿಳಿದಿರಲಿಲ್ಲ. ನೀನು ನನ್ನನ್ನು ತುಂಬಾ ಮೋಸಗೊಳಿಸಿರುವಿ. ನಾನು ಬೇಡಿಗೂ ಅಂಜುವದಿಲ್ಲ. ಮರಣಕ್ಕೂ ಅಂಜುವದಿಲ್ಲ. ನನ್ನ ಸ್ವಾಮಿಯ ವಿಷಯವಾಗಿ ಮಾತ್ರ ಚಿಂತಿಸುತ್ತೇನೆ. ನೀನು ನನ್ನನ್ನು ಆ ಕುಲಗೇಡಿ ಮಾನಸಿಂಗನ ಬಳಿಗೆ ಕರೆದೊಯ್ದು ತೋಫಿನ ಬಾಯಿಗೆ ಕೊಟ್ಟು ಹಾರಿಸಿದರೂ ನನಗೆ ಸಂತೋಷವಿರುವದು ತಿಳಿಯಿತೇ? ಮಾಳವಾದ ರಜಪೂತರು ಕೆಚ್ಚೆದೆಯವರೆಂಬದನ್ನು ತಿಳಿ. ನಿನ್ನ ಮೋಸಗಾರಿಕೆಯನ್ನು ನಾನು ತಿಳಿಯದೆ ಹೋದದ್ದರಿಂದ ನನಗೆ ಈ ವಿಷಯದಲ್ಲಿ ಮಾತ್ರ ವಿಷಾದವಾಗಿದೆ, ಎಂದು ನುಡಿದನು.

ರಾಮಸಿಂಗ:—ರಣಮಲ್ಲಜೀ, ಮುಂದೇನು ಮಾಡಬೇಕೆನ್ನುತ್ತೀ?

ರಣಮಲ್ಲ:—ಮುಂದೆ ನೀನು ನನಗೆ ಯಾವ ಶಿಕ್ಷೆಯನ್ನು ವಿಧಿಸುವೆಯೋ ಅದನ್ನು ಶಾಂತಮನಸ್ಸಿನಿಂದ ಅನುಭವಿಸಬೇಕೆನ್ನುತ್ತೇನೆ.

ರಾಮುಸಿಂಗ:—ರಣಮಲ್ಲ, ಗಾಬರಿಯಾಗಬೇಡ. ನೀನು ಹೇಳಿದಂತೆ ನಾನು ಕೇಳಿದರೆ ಮುಂದೇನು ಮಾಡುವಿ?

ರಣಮಲ್ಲ:—ನಿನ್ನಂಥ ವಿಶ್ವಾಸ ಘಾತುಕಿಯ ಮುಂದೆ ನಾನು ಇನ್ನೇನೂ ಮಾತಾಡಲಾರೆನು. ನನ್ನ ಯುಕ್ತಿಗಳೆಲ್ಲ ಭಸ್ಮೀಭೂತವಾಗಿ ಹೋದವು. ಇನ್ನು ಆ ಮಾತು ಕೇಳಿ ಏನು ಮಾಡುವಿ?

ರಾಮುಸಿಂಗ:—ನೀನೊಬ್ಬನು ಹೀಗೆ ಮೋಸಹೋಗಿ ನನ್ನ ಕೈಗೆ ಸಿಕ್ಕರೆ ಇನ್ನುಳಿದವರು ಯಾಕೆ ಸಿಕ್ಕಾರು? ಅವರು ನಿಮ್ಮ ರಾಜವಂಶವನ್ನು ಬಿಡಿಸಿಕೊಂಡು ಹೋಗಬಹುದಲ್ಲವೇ?

ರಣಮಲ್ಲ—(ಒಳ್ಳೇ ಪೇಚಿಗೆ ಬಿದ್ದು)ರಾಮುಸಿಂಗಜೀ, ಇಲ್ಲದ್ದೊಂದು ಕಲ್ಪನೆ ಮಾಡಬೇಡಿರಿ. ಇಲ್ಲಿಗೆ ಸಾಯಲಿಕ್ಕೆ ನಾನೊಬ್ಬನೇ ಬಂದಿರುವೆ ನಲ್ಲದೆ. ಮಿಕ್ಕವರಾರೂ ಬಂದಿಲ್ಲ.

ರಾಮುಸಿಂಗ:—ರಣಮಲ್ಲಜೀ, ನೀವು ಮತ್ತೂ ನನ್ನ ಮುಂದೆ ಸುಳ್ಳು ಹೇಳುವಿರೇನು. ನಮ್ಮ ನಿಮ್ಮ ಸ್ನೇಹವು ಎಲ್ಲಿ ಮಾಯವಾಯಿತು! ಇವೊತ್ತಿನ ವರೆಗೆ ನೀವು ನನಗೆ ನಿಜಸಂಗತಿಯನ್ನು ಹೇಳದೆ ಇಂದು ಮಾತ್ರ ಹೇಳಿದಿರಿ, ಈಗ ಮತ್ತೆ ಸುಳ್ಳು ಹೇಳಹತ್ತಿರುವಿರಿ? ನಿಜವಾಗಿ ಹೇಳಿರಿ, ನೀವೊಬ್ಬರೇ ಇಲ್ಲಿಗೆ ಬಂದಿರುವಿರಾ!

ರಣಮಲ್ಲ:—ನಾನೊಬ್ಬನೇ ಬಂದಿರುವೆನು.

ರಾಮುಸಿಂಗ:—ಇದು ಪೂರಾ ಸುಳ್ಳು. ನೀವು ಮೂವರು ಬಂದಿರುತ್ತೀರಿ. ಬೇಕಾದರೆ ಅವರ ಹೆಸರನ್ನು ಹೇಳಲೇನು?

ರಾಮುಸಿಂಗನ ಈ ಬಗೆಯ ಮಾತಿನಿಂದ ರಣಮಲ್ಲನು ಪೂರಾ ನಾಚಿಕೊಂಡನು. ಈ ರಾಮುಸಿಂಗನು ದೊಡ್ಡ ಸೈತಾನನಿರುವನು. ಇವನ ಕೈಯೊಳಗಿಂದ ಪಾರಾಗುವದು ಕಠಿಣವು ಬಂದಿತು. ನಾನು ಈ ಕೆಲಸಕ್ಕೆ ಅಯೋಗ್ಯನಿರುವೆನು. ರಣಜಿತಸಿಂಗ ಮೊದಲಾದವರು ನನ್ನ ಈ ದಡ್ಡತನಕ್ಕೆ ಎಷ್ಟು ಬೈಯ್ಯುವರೋ ತಿಳಿಯದು, ಎಂದು ಅಧೋಮುಖವಾಗಿ ಕುಳಿತುಕೊಂಡನು. ಆಗ ರಾಮುಸಿಂಗನಿಗೆ ಅವನ ವಿಷಯವಾಗಿ ದಯೆ ಉತ್ಪನ್ನವಾಯಿತು. ಆಗ ಅವನು ರಣಮಲ್ಲನನ್ನು ಕುರಿತು—ರಣಮಲ್ಲಜೀ, ಇತ್ತ ನೋಡಿರಿ, ಎಂದು ನುಡಿದು ಮುಗಳು ನಗೆ ನಗಹತ್ತಿದನು. ಅವನ ಮುಖವನ್ನು ನೋಡಿ ರಣಮಲ್ಲನಿಗೆ ತುಂಬಾ ಆಶ್ಚರ್ಯವಾದ

ದ್ದಲ್ಲದೆ ಅವನ ಚಾತುರ್ಯಕ್ಕೆ ತುಂಬಾ ಪ್ರೀತನಾಗಿ, ಒಮ್ಮೆಲೆ ರಣಜಿತ ಸಿಂಗ, ಎಂದು ನುಡಿದು ಅವನನ್ನು ಗಟ್ಟಿಯಾಗಿ ಆಲಿಂಗಿಸಿ ಮಿತ್ರಾ, ನೀನು ಯಾರೆಂಬದು ಇದುವರೆಗೂ ನನಗೆ ತಿಳಿಯದೆ ಹೋಯಿತಲ್ಲ! ಪ್ರತ್ಯಕ್ಷ ಒಂದೇ ಕಡೆಯಲ್ಲಿ ಕೂಡಿ ವ್ಯವಹರಿಸಿದವರಿಗೆ ನಿನ್ನ ವೇಷಾಂತರವು ತಿಳಿಯದಿರಲು ಮಿಕ್ಕವರಿಗೆ ತಿಳಿಯುವದು ಅಶಕ್ಯವೇ ಸರಿ! ಎಂದು ಅವನನ್ನು ಕೊಂಡಾಡಿದನು.

ಪ್ರಿಯ ವಾಚಕರೇ ರಣಮಲ್ಲನನ್ನು ಇಕಟ್ಟನಲ್ಲಿ ಕೆಡವಿದ ರಾಮಸಿಂಗನು ಯಾರೆಂಬದು ನಿಮಗೆ ತಿಳಿದಿರಬಹುದಷ್ಟೇ; ಆ ರಾಮಸಿಂಗನು ನಿಜವಾದ ರಾಮಸಿಂಗನಾಗಿರದೆ ಸುಳ್ಳು ಹೆಸರಿನ ರಾಮಸಿಂಗನಾಗಿದ್ದನು. ಮಾಳವಾ ರಾಜವಂಶವನ್ನು ಹುಡುಕುವದಕ್ಕಾಗಿ ಬಂದ ಚತುರ ರಣಜಿತ ಸಿಂಗನೇ ವೇಷ ಬದಲಾಯಿಸಿ ರಾಮಸಿಂಗನೆಂದು ಹೆಸರಿಟ್ಟುಕೊಂಡು ಆ ಸೆರೆಮನೆಯಲ್ಲಿ ಕಾವಲುಗಾರರ ಕೆಲಸದಲ್ಲಿ ಸೇರಿಕೊಂಡಿದ್ದನು. ರಣಮಲ್ಲನು ಅಲ್ಲಿಗೆ ಬರುವದಕ್ಕೆ ಒಂದೇ ದಿವಸ ಮೊದಲು ಬಂದಿದ್ದನು. ಆದರೆ ರಣಜಿತಸಿಂಗನು ಮುಖಕ್ಕೆ ಒಂದು ಬಗೆಯ ರಸವನ್ನು ಬಳಿದುಕೊಂಡು ಮೀಸೆ-ಗಡ್ಡಗಳನ್ನು ಕೃತ್ರಿಮವಾಗಿ ಮಾಡಿಕೊಂಡದ್ದರಿಂದ ಅವನ ಮುಖಲಕ್ಷಣದಲ್ಲಿ ಪೂರಾ ಹೆಚ್ಚು-ಕಡಿಮೆಯಾಗಿತ್ತು. ಆದ್ದರಿಂದ ರಣಮಲ್ಲನಿಗೆ ಈತನು ನಮ್ಮ ರಣಜಿತಸಿಂಗನೆಂಬದು ತಿಳಿಯದೆ ಹೋಯಿತು. ರಣಜಿತಸಿಂಗನು ಮಾತ್ರ ರಣಮಲ್ಲನನ್ನು ಕಂಡು ಹಿಡಿದು ಯಾರಿಗೂ ತಿಳಿಯದಂತೆ ಅವನ ಮೇಲೆ ಸ್ವಾಭಾವಿಕ ಪ್ರೇಮ ಮಾಡುತ್ತಿದ್ದನು. ಈ ದಿನ ಅವನು ರಣಮಲ್ಲನನ್ನು ಪೇಚಿನಲ್ಲಿ ಕೆಡವಿ ಕೃತ್ರಿಮ ಗಡ್ಡ-ಮೀಸೆಗಳನ್ನು ಕಿತ್ತೊಗೆದು ಮುಖಕ್ಕೆ ಬಳಿದ ರಸವನ್ನು ತೊಳೆದುಕೊಳ್ಳಲು ಆಗ ರಣಮಲ್ಲನಿಗೆ ರಣಜಿತಸಿಂಗನೆಂಬದು ಗೊತ್ತಾಯಿತು.

ಆಗ ರಣಮಲ್ಲನಿಗೆ ಜೀವದಲ್ಲಿ ಜೀವ ಬಂದಿತು. ತಾನು ಇನ್ನು ಬದುಕಿದೆನು; ತನ್ನ ಸ್ವಾಮಿಯೂ ಬದುಕಿದನು, ಎಂದು ಅಂದುಕೊಂಡನು. ಆಗ ರಣಜಿತಸಿಂಗನು ಅವನೊಡನೆ ವಿನೋದಮಾಡಿ ಮತ್ತೆ ಗಡ್ಡ-ಮೀಸೆಗಳನ್ನು ಅಂಟಿಸಿಕೊಂಡು ರಾಮಸಿಂಗನಾದನು. ಎಲ್ಲ ಸಾಧನೆಗಳು ಅವನ ಹತ್ತರ ಸಿದ್ಧವಿದ್ದವು. ರಣಮಲ್ಲನಿಗೆ ರಣಜಿತಸಿಂಗನ ಚಾತುರ್ಯಕ್ಕೆ ಬಹಳ ಸಮಾಧಾನವಾಯಿತು. ಬಳಿಕ ಅವರೀರ್ವರೂ ರಹಸ್ಯವಾಗಿ

[illegible] ತಮ್ಮ [illegible] ಎಲ್ಲಿಂದ ಹ್ಯಾಗೆ [illegible] ಬೇಕೆಂದು ಗೊತ್ತು ಮಾಡಿದರು. ಮಾನಸಿಂಗನು ತಮ್ಮ ರಾಜವಂಶವನ್ನು ಈ ರೀತಿ ಗೋಳಾಡಿಸುವದನ್ನು ನೋಡಿ ಅವರಿಗೆ ಬಹಳ ಸಂತಾಪವಾಯಿತು. ಆದರೆ ಅವರು ಅಲ್ಲಿ ತಮ್ಮ ಸಂತಾಪವನ್ನು ಹೊರಗೆಡವುವಂತೆ ಇದ್ದಿಲ್ಲಾದ್ದರಿಂದ ಮತ್ತೆ ಸಮಾಧಾನವನ್ನು ಧರಿಸಬೇಕಾಯಿತು. ರಣಮಲ್ಲನು ನಂದಕುಮಾರ ಹಾಗು ಚಂದ್ರಪಾಲ ಇವರಿಗೆ ಸರಿಯಾಗಿ ಆಹಾರವನ್ನು ಒದಗಿಸಿಕೊಟ್ಟು, ಅವರ ದೈನ್ಯವನ್ನು ದೂರಮಾಡಬೇಕು. ಮುಂದೆ ನಾಲ್ಕಾರು ದಿನಗಳಲ್ಲಿಯೇ ಅವರನ್ನು ಇಲ್ಲಿಂದ ಹೊರಹೊರಡಿಸಬೇಕು, ಎಂದು ಗೊತ್ತು ಮಾಡಿದರು.

ರಣಜಿತಸಿಂಗನು ಸೆರೆಮನೆಯ ಊಳಿಗತನವನ್ನು ಕೈಕೊಂಡಂದಿನಿಂದ ತಮ್ಮ ರಾಜವಂಶವನ್ನು ಪಾರು ಮಾಡಲಿಕ್ಕೆ ಹಲವು ಹಂಚಿಕೆಗಳನ್ನು ಹಾಕಿದ್ದನು; ಆದರೆ ಅವೆಲ್ಲವನ್ನೂ ರಣಮಲ್ಲನ ಮುಂದೆ ಹೇಳಿದರೆ ಪ್ರಯೋಜನವಿಲ್ಲೆಂದು ತಿಳಿದು ಒಂದೇ ಒಂದು ಯುಕ್ತಿಯನ್ನು ಹೇಳಿದ್ದನು. ರಣಜಿತಸಿಂಗನ ಮನಸ್ಸಿನಲ್ಲಿ ಭವಾನಸಿಂಗನನ್ನು ಒಲಿಸಿಕೊಂಡು ಅವನನ್ನು ತಮ್ಮ ಕೆಲಸಕ್ಕೆ ಸಹಾಯಕನನ್ನಾಗಿ ಮಾಡಿಕೊಳ್ಳುವದಿತ್ತು. ಒಂದು ವೇಳೆ ಹಾಗೆ ಆಗದಿದ್ದರೆ ಅವನನ್ನು ಪೇಚಿನಲ್ಲಿ ಕೆಡವಿ ದಿಲ್ಲಿಯಿಂದ ಓಡಿಹೋಗುವಂತೆಯಾದರೂ ಮಾಡಬೇಕೆಂದಿತ್ತು. ಇದರಲ್ಲಿ ಅವನ ಉದ್ದೇಶವಿಷ್ಟೇ; ಭವಾನಸಿಂಗನು ಧೂರ್ತನಿದ್ದು, ತಮ್ಮ ಸಂಗತಿಯನ್ನು ತಿಳಿದು ಸ್ವೀಕೃತ ಕಾರ್ಯದಲ್ಲಿ ವಿಘ್ನತರಬಾರದೆಂಬದು. ಈ ಕೆಲಸವನ್ನು ಹ್ಯಾಗೆ ಸಾಧಿಸಿಕೊಳ್ಳಬೇಕೆಂಬದನ್ನು ಕೂಡಾ ಅವನು ಯೋಚಿಸಿದ್ದನು. ಇರಲಿ.

ರಣಮಲ್ಲನಿಗೆ ಕೈದಿಗಳಿಗೆ ಅನ್ನ-ನೀರು ಕೊಡುವ ಅಧಿಕಾರ ಸಿಕ್ಕದ್ದರಿಂದ ಚಂದ್ರಪಾಲ-ನಂದಕುಮಾರರ ಗೋಳಾಟವು ಹಿಮ್ಮೆಟ್ಟಿತು. ಸೆರೆಮನೆಯ ಪಾರುಪತ್ಯಗಾರನಿಗೆ ತಿಳಿಯದಂತೆ ರಣಮಲ್ಲನು ಅವರಿಗೆ ದಿನಾಲು ಆಹಾರವನ್ನು ಒದಗಿಸಿ ಕೊಡಲುಪಕ್ರಮಿಸಿದನು; ಮತ್ತು ಅವರ ಸಂಗಡ ಪ್ರೇಮದಿಂದ ವರ್ತಿಸತೊಡಗಿದನು. ಈ ವಿಪರೀತ ಸ್ಥಿತಿಯನ್ನು ನೋಡಿ ನಂದಕುಮಾರನಿಗೂ, ಚಂದ್ರಪಾಲನಿಗೂ ತುಂಬಾ ಆಶ್ಚರ್ಯವಾಯಿತು.

ನಮ್ಮನ್ನು ಕಂಡು ಪ್ರೀತಿಸುವ ಈ ಸೇವಕನು ಯಾರಾಗಿರಬಹುದು? ಎಂಬ ಶಂಕೆಯು ಅವರಲ್ಲುಂಟಾಯಿತು.

ಒಂದು ದಿನ ರಣಮಲ್ಲನು ಚಂದ್ರಪಾಲನಿಗೆ ಅನ್ನ-ನೀರು ಕೊಡಹೋಧಾಗಚಂದ್ರಪಾಲನು ತನ್ನ ಸಂಶಯವನ್ನು ಬೈಲಿಗಿಟ್ಟನು. ಆಗ ರಣಮಲ್ಲನು ಮೆಲ್ಲಗೆ ಅವನ ಕಿವಿಯಲ್ಲಿ ವಸ್ತುಸ್ಥಿತಿಯನ್ನು ಹೇಳಿ ತಾನು ಯಾರೆಂಬದನ್ನು ತಿಳಿಸಿದನು. ಅದರಿಂದ ಚಂದ್ರಪಾಲನಿಗೆ ತುಂಬಾ ಸಂತೋಷವಾಯಿತು. ತಮ್ಮವರು ತಮ್ಮ ಬಿಡುಗಡೆಗಾಗಿ ವಿಶ್ವಪ್ರಯತ್ನ ಮಾಡಹತ್ತಿದ್ದಾರೆಂದು ತಿಳಿದು ಆ ಸ್ವಾಮಿಭಕ್ತರವಿಷಯವಾಗಿ ತುಂಬಾಕೃತಜ್ಞತೆಯುಂಟಾಯಿತು. ರಣಮಲ್ಲ ಹಾಗು ರಣಜಿತಸಿಂಗರ ಪ್ರಯತ್ನದಿಂದ ಈಗ ಚಂದ್ರಪಾಲನಿಗೆ ಸೆರೆಮನೆಯ ಸೇವಕರಿಂದ ಪೆಟ್ಟುಗಳು ಬೀಳುವದು ತಪ್ಪಿದವು. ಅವನು ಕಣ್ಣುತುಂಬ ನಿದ್ದೆಯನ್ನೂ, ಹೊಟ್ಟೆತುಂಬ ಆಹಾರ ಸೇವನೆಯನ್ನೂ ಮಾಡುತ್ತಿದ್ದನು. ಇದರಿಂದ ಅವನ ಮನಸ್ಸು ಉಲ್ಲಸಿತವಾಗಿ ರಣಮಲ್ಲ-ರಣಜಿತಸಿಂಗರಂಥ ಸ್ವಾಮಿನಿಷ್ಠ ಸೇವಕರು ಇದ್ದ ಬಳಿಕ ನಾನು ನಿಶ್ಚಯವಾಗಿ ಮತ್ತೆ ಮಾಳವಾ ಸಿಂಹಾಸನವನ್ನಲಂಕರಿಸುವೆನು, ಎಂಬ ಮನೋರಾಜ್ಯದಲ್ಲಿ ಈಸಾಡತೊಡಗಿದನು. ಹೀಗಿರಲು ರಣಮಲ್ಲನು ಹೊತ್ತು ಸಾಧಿಸಿ ಚಂದ್ರಪಾಲನಿಗೆ ರಣಜಿತಸಿಂಗನ ಭೆಟ್ಟಿಯನ್ನು ಮಾಡಿಸಿದನು. ಆಗ ಆ ಸ್ವಾಮಿ ಹಾಗು ಸ್ವಾಮಿಸೇವಕರ ನೇತ್ರಗಳಿಂದ ಅಂಥ ದುಸ್ಥಿತಿಯಲ್ಲಿಯೂ ಆನಂದಬಾಷ್ಪಗಳು ಉದುರಿದವು. ಅವರು ಮಾತಾಡದಿದ್ದರೂ ಪರಸ್ಪರರ ಮನೋಭಾವಗಳು ಪರಸ್ಪರರಿಗೆ ಸ್ಪಷ್ಟವಾಗಿ ತಿಳಿದವು. ಚಂದ್ರಪಾಲನಿಗೂ, ರಣಜಿತಸಿಂಗನಿಗೂ ಇದೊಂದು ಅಪೂರ್ವಯೋಗವಾಗಿ ಪರಿಣಮಿಸಿತು!

೧೬—ಪಲಾಯನ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ರಣಜಿತಸಿಂಗನಿಗೂ, ಚಂದ್ರಪಾಲನಿಗೂ ಭೆಟ್ಟಿಯಾದ ಬಳಿಕ ಅವರಿಬ್ಬರಲ್ಲಿ ಉಂಟಾದ ಆನಂದ-ದುಃಖಗಳೆರಡರ ಕಸುವು ಕಡಿಮೆಯಾದ ಬಳಿಕ ರಣಜಿತಸಿಂಗನು ವೆಲ್ಲಗೆ:—ಒಡೆಯರೇ, ಇಂದು ನಾವು ಧನ್ಯರಾದೆವು ನಿಮ್ಮನ್ನು ಈ ದುಸ್ಥಿತಿಯಿಂದ ಪಾರುಮಾಡಿ ಮಾಳವಾ ಸಿಂಹಾಸನದ ಮೇಲೆ ಕೂಡ್ರಿಸುವಷ್ಟು ಬಲವು ನಮ್ಮಲ್ಲಿ ಸಂಚರಿಸತೊಡಗಿದೆ ನಮ್ಮ ಒಡೆಯರಾದ ನಿಮ್ಮ ದರ್ಶನಮಾತ್ರದಿಂದಲೇ ನಮ್ಮ ಬಾಹು ಸ್ಫುರಣವಾಗತೊಡಗಿದೆ ಏಳಿರಿ! ಇನ್ನು ತಡಮಾಡಬೇಡಿರಿ, ಎಂದು ನುಡಿದು ಕೈಯೊಳಗಿನ ಉಕ್ಕಿನ ಚಾನದಿಂದ ಚಂದ್ರಪಾಲನ ಕಾಲುಗಳಲ್ಲಿದ್ದ ಬೇಡಿಯನ್ನು ತುಂಡರಿಸಿ ಚಲ್ಲಿದನು. ಬೇಡಿಗಳು ಕತ್ತರಿಸಲ್ಪಡಲು ಚಂದ್ರಪಾಲನಿಗೂ ವಿಲಕ್ಷಣ ಸ್ಫೂರ್ತಿಯು ಬಂದಿತು. ಆತನಲ್ಲಿ ಪೂರ್ವದ ಕ್ಷಾತ್ರತೇಜವು ಸಂಚರಿಸಿತು. ರಣಮಲ್ಲನಿಗೂ ಉತ್ಸಾಹವು ಹೆಚ್ಚಿತು. ಆ ಮೂವರೂ ಸೇರಿ ನಂದಕುಮಾರನಿದ್ದಲ್ಲಿಗೆ ಹೋದರು ಅವರು ಆತನ ಬೇಡಿಯನ್ನು ಕಡಿದೊಗೆದು ತಮ್ಮ ಉದ್ದೇಶವನ್ನು ಅರುಹಿದರು. ವೀರಮೂರ್ತಿಯಾದ ನಂದಕುಮಾರನು ಒಮ್ಮೆಲೆ ಉಡ್ಡಾಣಮಾಡಿ ಸೆರೆಮನೆಯ ಪಟಾಂಗಣದಲ್ಲಿ ಬಂದು ನಿಂತುಕೊಂಡನು. ಆ ನಾಲ್ವರಿಗೂ ವಿಲಕ್ಷಣ ಸ್ಫೂರ್ತಿಯುಂಟಾಗಿತ್ತು. ತಮ್ಮನ್ನು, ಸೆರೆಮನೆಯ ಬೇರೆ ಕಾವಲುಗಾರರು ನೋಡಿದರೆ ತಮ್ಮ ಅವಸ್ಥೆ ಏನಾದೀತೆಂಬ ಅರಿವು ಕೂಡಾ ಅವರಿಗೆ ಉಳಿಯಲಿಲ್ಲ. ಇಷ್ಟು ವೈರಿಮರಸುತನವು ಘಾತುಕವಾಗಿದ್ದರೂ ಶೂರರಿಗೆ ಆವೇಶದ ಭರದಲ್ಲಿ ವೈರಿಮೇಲೆ ಪ್ರಜ್ಞೆ ಉಳಿಯುವದಿಲ್ಲ. ಕರ್ಮಧರ್ಮಸಂಯೋಗದಿಂದ ಆ ದಿನ ಎಲ್ಲ ಕಾವಲುಗಾರರಿಗೂ ಗಡದ್ದುನಿದ್ರೆ ಹತ್ತಿತ್ತು. ಆ ನಾಲ್ವರೂ ಹೆಬ್ಬಾಗಿಲ ಬಳಿಗೆ ಬಂದು ಅಲ್ಲಿರುವ ದಿಡ್ಡಿಯ ಬಾಗಿಲವನ್ನು ತೆರೆದು ಪ್ರಚ್ಛನ್ನವಾಗಿ ಹೊರಟು ಹೋದರು.

ಸೆರೆಮನೆಯಿಂದ ಪಾರಾಗಿ ಬಂದ ಬಳಿಕ ರಣಜಿತಸಿಂಗನಿಗೆ ಆವೇ

ಶದ ಭರವು ತಗ್ಗಿ, ತಾವು ಹೀಗೆ ಒಮ್ಮೆಲೆ ಸಾಹಸ ಮಾಡಿದ್ದು ತಪ್ಪೆಂದು ಆವನಿಗೆ ಅನಿಸಿತು. ಆದರೆ ದೇವರ ದಯದಿಂದ ಸುರಕ್ಷಿತವಾಗಿ ಪಾರಾದದ್ದಕ್ಕೆ ಅವನು ಸಮಾಧಾನಪಟ್ಟನು. ನಗರಿಯಿಂದ ಹ್ಯಾಗೆ ಪಾರಾಗಿ ಹೋಗಬೇಕೆಂಬ ಯೋಚನೆಯು ಅವನಲ್ಲಿಂಟಾಯಿತು. ಹೆಬ್ಬಾಗಿಲ ಬಳಿಗೆ ಹೋದರೆ ಕಾವಲುಗಾರರು ಎಚ್ಚತ್ತಿದ್ದರೆ ಅವರ ಕೈಗೆ ಅನಾಯಾಸವಾಗಿ ಸಿಗಬೇಕಾದೀತು, ಎಂದು ಯೋಚಿಸಿ ತಾನು ಮೊದಲು ಯೋಚನೆ ಮಾಡಿಟ್ಟಂತೆ ಕೋಟೆಯ ಗೋಡೆಯ ಮೇಲಿಂದ ಕಂದಕದಲ್ಲಿ ಹಾರಿ ಅಲ್ಲಿಂದ ಪಾರಾಗಿ ಹೋಗಬೇಕೆಂದು ನಿರ್ಧರಿಸಿದನು. ಅವನು ಆ ಕೂಡಲೆ ತನ್ನ ನಿರ್ಧಾರವನ್ನು ಉಳಿದವರಿಗೆ ತಿಳಿಸಿದನು. ಅವರೂ ಕೂಡಲೆ ಅದಕ್ಕೆ ತಮ್ಮ ಒಪ್ಪಿಗೆಯಿತ್ತರು. ಯಾವ ಭಾಗದಲ್ಲಿ ಕಂದಕದಲ್ಲಿ ಹಾರಲು ಸುಲಭವಿತ್ತೋ ಅಂಥ ಭಾಗವಿದ್ದೆಡೆಗೆ ರಣಜಿತಸಿಂಗನು ಎಲ್ಲರೊಡನೆ ನಡೆದನು. ಆಗ ನಡುರಾತ್ರಿ ಮೀರಿದ್ದರಿಂದ ಪಹರೆ ಮಾಡತಕ್ಕವರೆಲ್ಲರೂ ಗೊರಕೆ ಹೊಡೆಯುತ್ತಿದ್ದರು. ಅಕಬರನ ಆಳಿಕೆಯು ವಿಶೇಷ ದರ್ಪಿನದಾಗಿದ್ದರೂ, ಕೋಟೆಯು ಬಹು ಭದ್ರವಾದದ್ದಿದ್ದದರಿಂದ ರಾತ್ರೀ ಪಹರೆಯ ವಿಷಯದಲ್ಲಿ ಯುದ್ಧಪ್ರಸಂಗವಿಲ್ಲದಾಗ ಯಾರೂ ಹೆಚ್ಚಿಗೆ ದಕ್ಷತೆಯನ್ನು ವಹಿಸುತ್ತಿರಲಿಲ್ಲ. ಕೋಟೆಗಿರುವ ನಾಲ್ಕು ದಿಕ್ಕುಗಳ ಹೆಬ್ಬಾಗಿಲಲ್ಲಿ ಮಾತ್ರ ಕಾವಲುಗಾರರು ಸರ್ವದಾ ಜಾಗರೂಕತೆಯಿಂದಿರುತ್ತಿದ್ದರು. ಅಲ್ಲಿಯ ಕಾವಲುಗಾರರು ನೈಮರೆತು ಮಲಗುವದು ಕ್ವಚಿತ್ತಾಗಿತ್ತು. ಇರಲಿ. ರಣಜಿತಸಿಂಗನು ತನ್ನ ವಿಚಾರದಂತೆ ಕೋಟೆಯ ಗೋಡೆಯನ್ನೇರಿ ಆ ಕತ್ತಲಲ್ಲಿಯೇ ಉಳಿದವರಿಗೆ ಮುಂದಿನ ಕಾರ್ಯಕ್ರಮವನ್ನು ತೋರಿಸಿಕೊಟ್ಟನು. ಅವರೆಲ್ಲರೂ ರಣಜಿತಸಿಂಗನ ಹಿಂದಿನಿಂದ ಕಂದಕದಲ್ಲಿ ಹಾರಿದರು. ಕಂದಕದಲ್ಲಿ ನೀರು ಬಹಳ ಆಳ ಇರುವದೆಂಬದನ್ನು ರಣಜಿತಸಿಂಗನು ಈ ಮೊದಲೇ ತಿಳಿದುಕೊಂಡಿದ್ದನು. ಬಹು ಎತ್ತರವಾದ ಗೋಡೆಯ ಮೇಲಿಂದ ಹಾರಿದ್ದರಿಂದ ಚಂದ್ರಪಾಲನ ಹೊರತು ಉಳಿದವರಿಗೆ ಯಾವ ಅಪಾಯವೂ ಆಗಲಿಲ್ಲ. ಚಂದ್ರಪಾಲನು ಮಾತ್ರ ಆಹಾರವಿಲ್ಲದೆ ಕೊರಗಿದ್ದರಿಂದಲೂ, ಚಿಂತೆಯಿಂದ ಮುಪ್ಪಾದ್ದರಿಂದಲೂ ನೀರಲ್ಲಿ ಬಿದ್ದ ಕೂಡಲೆ ಅವನಿಗೆ ಬವಳಿ ಬಂದಿತು. ತ್ರಾಣಗುಂದಿದ ಚಂದ್ರಪಾಲನು ಇಷ್ಟು ಎತ್ತರದ ಮೇಲಿಂದ ನೀರಲ್ಲಿ ಧುಮುಕಿದರೆ ತಡಕೊಳ್ಳ

ಲಾರನೆಂಬದು ರಣಜಿತಸಿಂಗನಿಗೆ ಗೊತ್ತಿದ್ದದರಿಂದ ಅವನು ಚಂದ್ರಪಾಲನು ಮುಳುಗಿ ಏಳುವವರೆಗೆ ಆ ನೀರಲ್ಲಿಯೇ ಇದ್ದನು. ಚಂದ್ರಪಾಲನು ನೀರಲ್ಲಿ ಮುಳುಗಿ ಎದ್ದಾಗ ಅವನ ಮೈಮೇಲೆ ಸ್ಮೃತಿಯಿರಲಿಲ್ಲ. ರಣಜಿತ ಸಿಂಗನು ಅವನನ್ನು ಹಿಡಿದೆತ್ತಿ ಸಂಗಡಿಗರ ಸಹಾಯದಿಂದ ಕಂದಕದ ಗೋಡೆಯನ್ನೇರಿ ಕೆಳಗಿರುವ ಚಿಕ್ಕ ಕಂದಕವನ್ನೂ ದಾಟಿ ಸಮನೆಲಕ್ಕೆ ಬಂದನು. ಇಷ್ಟಾದರೂ ಚಂದ್ರಪಾಲನಿಗೆ ಎಚ್ಚರವಾಗಲಿಲ್ಲ. ರಣಜಿತ ಸಿಂಗನು ಗಾಬರಿಯಾಗದೆ ಉಷ್ಣ ಉಪಚಾರಗಳನ್ನು ನಡಿಸಿದನು. ಇದ ರಿಂದ ಚಂದ್ರಪಾಲನು ಮೆಲ್ಲ ಮೆಲ್ಲಗೆ ಸ್ಮೃತಿಯು ಮೇಲೆ ಬರತೊಡಗಿದನು. ಕೆಲ ಹೊತ್ತಿನ ಮೇಲೆ ಅವನು ತಾನೇ ಚನ್ನಾಗಿ ಎದ್ದು ಕುಳಿತನು. ಆಗ ಸರ್ವರಿಗೂ ಸಂತೋಷವಾಯಿತು. ಬಳಿಕ ಆ ನಾಲ್ವರೂ ಅಲ್ಲಿಂದ ಕಾಲ್ತೆಗೆದು ಮೊದಲು ಅಂಬಾದಾಸನಿದ್ದಲ್ಲಿಗೆ ಹೋದರು. ಅವನು ಕಾಡಿನಲ್ಲಿ ಒಂದು ಮರದ ಹೊದರಿನಲ್ಲಿರುತ್ತಿದ್ದನು ತಮ್ಮವರು ಸ್ವೀಕೃತ ಕಾರ್ಯ ದಲ್ಲಿ ವಿಜಯವನ್ನೇ ಸಂಪಾದಿಸಿ ತನ್ನ ಬಳಿಗೆ ಬಂದದ್ದಕ್ಕೆ ಅವನಿಗೆ ತುಂಬಾ ಆನಂದವಾಯಿತು. ಅವನು ಚಂದ್ರಪಾಲ ಹಾಗು ನಂದಕುಮಾರರನ್ನು ಗೌರವಿಸಿದನು. ಬಳಿಕ ಅವರೆಲ್ಲರೂ ಸೇರಿ ಆ ಕೂಡಲೆ ಆ ಸ್ಥಳವನ್ನು ತ್ಯಜಿಸಿ ಅರವಲೀ ಪರ್ವತದ ಮಾರ್ಗವಿಡಿದು ನಡೆದರು.

ಪೂರ್ವಕಾಲದ ಜನರಿಗೆ ಕಾಡಿನಲ್ಲಿ ರಾತ್ರೀಕಾಲದಲ್ಲಿ ಸಂಚರಿಸುವ ದೆಂದರೆ ಬಹು ಆನಂದ; ಹಗಲುಹೊತ್ತಿನಲ್ಲಿ ಶತ್ರುಗಳ ದೃಷ್ಟಿಗೆ ಬಿದ್ದರೆ ಕೆಲಸ ಕೆಟ್ಟೀತೆಂಬ ಅಂಜಿಕೆಯಿದ್ದದರಿಂದ ಬಹುಶಃ ತಪ್ಪಿಸಿಕೊಂಡು ಹೋಗ ತಕ್ಕವರೆಲ್ಲ ರಾತ್ರೀ ಪ್ರಯಾಣವನ್ನೇ ಇಟ್ಟುಕೊಳ್ಳುತ್ತಿದ್ದರು. ಅದರಂತೆ ನಮ್ಮ ಈ ಐವರೂ ಈ ಕಾಯಕವನ್ನೇ ಕೈಕೊಂಡರು

ಇತ್ತ ಸೆರೆಮನೆಯಲ್ಲಿ ಬೆಳಗಾದ ಬಳಿಕ ಕಾವಲುಗಾರರು ಎಚ್ಚ ತ್ತರು. ಹೆಬ್ಬಾಗಿಲದ ಸಣ್ಣ ಕದವು ತೆರೆಯಲ್ಪಟ್ಟಿತ್ತು. ಏನೋ ಘಾತ ವಾಗಿರ್ಧೆಯೆಂದು ಅವರ ಎದೆಯು ಧಸ್ಸೆಂದಿತು. ಕೂಡಲೆ ಅವರೆಲ್ಲರೂ ಒಟ್ಟುಗೂಡಿ ಜೇಲಖಾನೆಯಲ್ಲಿಯ ಕೈದಿಗಳೆಲ್ಲರೂ ಇರುವರೋ ಅಥವಾ ಯಾರಾದರೂ ಓಡಿಹೋಗಿರುವರೋ ಎಂಬದನ್ನು ಶೋಧಿಸತೊಡಗಿದರು. ಎಲ್ಲ ಕೈದಿಗಳು ಇದ್ದು, ಚಂದ್ರಪಾಲ ಮತ್ತು ನಂದಕುಮಾರರಿಬ್ಬರು ಇಲ್ಲ ವೆಂದು ಅವರಿಗೆ ಗೊತ್ತಾಯಿತು. ಅವರಿಬ್ಬರ ಕೋಣೆಯ ಬಾಗಿಲುಗಳು

ತೆರೆಯಲ್ಪಟ್ಟಿದ್ದವು. ಹಾಗೂ ಕೋಣೆಗಳಲ್ಲಿ ಬೇಡಿಗಳು ತುಂಡುತುಂಡಾಗಿ ಬಿದ್ದಿದ್ದವು. ಇದನ್ನೆಲ್ಲ ತಿಳಿದು, ಆ ಕಾವಲುಗಾರರು ಗಾಬರಿಯಾದರು. ಇನ್ನು ತಮ್ಮ ಅವಸ್ಥೆಯು ನೆಟ್ಟಗಾಗದೆಂದು ಅವರು ತಿಳಿದರು. ಜೇಲ ಖಾನೆಯ ಮುಖ್ಯಸ್ಥನು ಈ ಸಂಗತಿಯನ್ನು ತಿಳಿದರೆ ತಮ್ಮನ್ನು ಮಾನಸಿಂಗ ರಾಜರ ಮುಂದೆ ಕಳುಹಿಸಿ ಕೊಡುವನು. ಮಾನಸಿಂಗರಾಜನು ಅತಿನಿಷ್ಠುರ ನಾದ್ದರಿಂದ ನಮ್ಮನ್ನು ಆನೆಯ ಕಾಲಿಗೆ ಕಟ್ಟಿಯಾಗಲಿ, ತೋಫಿನ ಬಾಯಿಗೆ ಕೊಟ್ಟಾಗಲಿ ಕೊಲ್ಲಿಸುವನು, ಎಂಬ ಸಂಗತಿಯು ಅವರ ಮನ ಸ್ಸಿನಲ್ಲಿ ಬಂದಿತು ಈ ಕಲ್ಪನೆಯಿಂದ ಅವರ ಹಲ್ಲಣವೇ ಹಾರಿಹೋಯಿತು. ಮುಂದೆ ಏನು ಮಾಡಬೇಕೆಂಬದೇ ಅವರಿಗೆ ತಿಳಿಯದಾಯಿತು ಕೆಲ ಹೊತ್ತಿನ ವರೆಗೆ ಅವರು ದಿಂಙ್ಮೂಢರಾಗಿ ಕುಳಿತುಬಿಟ್ಟರು; ಆದರೆ ಅಪ ರಾಧಿಯಾದವರು ಎಷ್ಟು ಚಿಂತಿಸಿದರೇನು? ಅದರಿಂದ ಅಪರಾಧವು ಸುಳ್ಳಾಗ ಲಾರದಷ್ಟೇ; ಕೊನೆಗೆ ಆ ಕಾವಲುಗಾರರು ನಡೆದ ಸಂಗತಿಯನ್ನು ಸೆರೆ ಮನೆಯ ಅಧಿಕಾರಿಗೆ ತಿಳಿಸಿಬಿಡಬೇಕೆಂದು ನಿರ್ಧರಿಸಿ ಅವನಿದ್ದಲ್ಲಿಗೆ ಹೋದರು.

ಮುಸಲ್ಮಾನ ಅಧಿಕಾರಿಗಳೆಂದರೆ ಬಹಳ ಮನ್ನಣೆ ಅವರಿಗೆ ಹೇರಳವಾದ ಐಶ್ವರ್ಯ, ದರ್ಬಾರದಲ್ಲಿ ಅವರ ಪ್ರತಿಷ್ಠೆ ಹೆಚ್ಚು; ಅಂದ ಬಳಿಕ ಕೇಳುವದೇನು? ಅವರು ಸರ್ವದಾ ಐಶ್ವರ್ಯದ ಮಬ್ಬಿನಲ್ಲಿಯೇ ಕಾಲಕ್ರಮಣ ಮಾಡುತ್ತಿದ್ದರು ಕಾವಲುಗಾರರು ಹೋದಾಗ ಸೆರೆ ಮನೆಯ ಅಧಿಕಾರಿಯು ಸುಖನಿದ್ರೆಯನ್ನು ಮಾಡುತ್ತಿದ್ದನು. ಊರ ತುಂಬೆಲ್ಲ ಸ್ವಚ್ಛ ಬಿಸಿಲು ಬಿದ್ದಿದ್ದರೂ ಆ ಅಧಿಕಾರಿಯು ಸರಿರಾತ್ರಿಯಂತೆ ಗೊರಕೆ ಹೊಡೆಯುತ್ತಿದ್ದನು. ಕಾವಲುಗಾರರು ಯುಕ್ತಿಯಿಂದ ಅವ ನನ್ನು ಎಚ್ಚರಗೊಳಿಸಿ ನಡೆದ ಸಂಗತಿಯನ್ನು ಅವನ ಕಿವಿಯ ಮೇಲೆ ಹಾಕಿ ದರು. ಆ ಅಧಿಕಾರಿಗೆ ನಿದ್ರೆಗೇಡಾದದ್ದೊಂದು ಸಿಟ್ಟು, ಕಾವಲುಗಾರರು ಕೈದಿಗಳನ್ನು ಕಳೆದದ್ದೊಂದು ಸಿಟ್ಟು, ಹೀಗೆ ಇಬ್ಬಗೆಯ ಸಿಟ್ಟಿನಿಂದ ಅವನು ತಪ್ತನಾದನು. ಅವನ ಸಿಟ್ಟಿನ ರಭಸವನ್ನು ನೋಡಿ ಕಾವಲುಗಾರರು ಮೆಲ್ಲನೆ ಅಲ್ಲಿಂದ ಕಾಲ್ತೆಗೆದರು. ಅಧಿಕಾರಿಯು ಆ ಆವೇಶದ ಭರದಲ್ಲಿ ಸೆರೆ ಮನೆಗೆ ಬಂದುಬಿಟ್ಟನು ಕಾವಲುಗಾರರು ಹೇಳಿದ ಸಂಗತಿಯು ನಿಜ ವಾಗಿತ್ತು. ಕೈದಿಗಳು ಬೇಡಿಯನ್ನು ಕಡಿದೊಗದು ಓಡಿಹೋಗಿದ್ದರು.

ಹೆಚ್ಚು ಶೋಧನೆಯಿಂದ ರಾಮಸಿಂಗನೆಂಬ ಒಬ್ಬ ಕಾವಲುಗಾರನೂ, ರಣಜಿತಸಿಂಗನೆಂಬ ಇನ್ನೊಬ್ಬ ಶಿಪಾಯಿಯೂ ಇಲ್ಲದಂತಾಗಿರುವರೆಂದು ಕಂಡು ಬಂದಿತು. ರಾಮಸಿಂಗನೂ, ರಣಜಿತಸಿಂಗನೂ ಕೈದಿಗಳ ಪಕ್ಷದವರಿದ್ದು, ಮೋಸದಿಂದ ನಮ್ಮಲ್ಲಿದ್ದು ಅವರನ್ನು ಈದಿನ ಸರಿರಾತ್ರಿಯಲ್ಲಿ ಓಡಿಸಿಕೊಂಡು ಹೋಗಿರಬೇಕೆಂಬ ಕಲ್ಪನೆಯು ಆ ಸೆರೆಮನೆಯ ಅಧಿಕಾರಿಯ ಮನಸ್ಸಿನಲ್ಲಿ ಬಾರದೆ ಇರಲಿಲ್ಲ.

ಹೀಗೆ ಆಗಬಾರದ ಕೆಲಸವು ಆಗಿಹೋದ್ದರಿಂದ ಅಧಿಕಾರಿಯು ಬಹಳ ತೊಂದರೆಯಲ್ಲಿ ಬಿದ್ದನು ಮಾನಸಿಂಗನು ಈ ಸಂಗತಿಯನ್ನು ಕೇಳಿದರೆ ಎಷ್ಟು ಕೋಪವನ್ನು ತಾಳುವನೋ ಎಂದು ಆತನಿಗೆ ಸ್ವಲ್ಪ ಅಂಜಿಕೆಯಾಯಿತು; ಆದರೆ ಉತ್ತರಕ್ಷಣದಲ್ಲಿ ಆತನು ಮನಸ್ಸಿನಲ್ಲಿ ಇಂತು ಯೋಚಿಸಿದನು:—ನಡೆದ ಸಂಗತಿಯ ವಿಷಯವಾಗಿ ಯಾಕೆ ಅಂಜಬೇಕು? ಮಾನಸಿಂಗನೇನು ನನ್ನ ಮೇಲಿನ ಅಧಿಕಾರಿಯಲ್ಲ ಈ ಕಾಫರರೆಲ್ಲರೂ ಒಂದೇ; ಎಂದು ನಾನು ಬಾದಶಹನಿಗೆ ಖಂಡಿತ ಹೇಳಿಬಿಡುವೆನು. ಚಂದ್ರಪಾಲ-ನಂದಕುಮಾರರನ್ನು ಸೆರೆಯಲ್ಲಿ ಹಾಕಿದಂತೆ ಮಾಡಿ, ಬಾದಶಹನ ಮೆಚ್ಚುವಿಕೆಗೆ ಪಾತ್ರನಾದ ಮಾನಸಿಂಗನು ರಾಮಸಿಂಗ-ರಣಜಿತಸಿಂಗರೆಂಬ ಇಬ್ಬರು ಮೋಸಗಾರರನ್ನು ಸೆರೆಮನೆಯಲ್ಲಿ ಆಳಾಗಿರಿಸಿ ಈ ಮೋಸಕೃತ್ಯವನ್ನು ಮಾಡಿಸಿದನೆಂದು ಯಾಕೆ ಅನ್ನಬಾರದು? ಮಾನಸಿಂಗನ ಬೆಂಬಲವಿಲ್ಲದಿದ್ದರೆ ಅದಾವ ರಜಪೂತನು ಇಷ್ಟು ಮೋಸದ ಕೆಲಸಮಾಡಲು ಧೈರ್ಯಗೊಳ್ಳುತ್ತಿದ್ದನು? ಇದರಲ್ಲಿ ಮಾನಸಿಂಗನ ಪಾರುಪಾತ್ಯ ಮಾಡಿಸಿಯೇ ಬಿಡುವೆನು.

ಪ್ರಿಯವಾಚಕರೇ, ದುರ್ಜನರ ಯೋಚನೆಯು ಹ್ಯಾಗಿದೆ? ನೋಡಿರಿ! ಸ್ವಜಾತಿಯ ಅರಸನಿರುವನೆಂಬ ಬಿಂಕದಿಂದ ಆ ಮುಸಲ್ಮಾನ ಅಧಿಕಾರಿಯು ತನ್ನ ತಪ್ಪನ್ನು ಮಾನಸಿಂಗನ ಮೇಲೆ ಹೊರಿಸಬೇಕೆಂದು ಯೋಚಿಸಿದನು; ಆದರೆ ಆ ಅಧಿಕಾರಿಯು ಯೋಚಿಸಿದಂತೆ ಅಕಬರನು ಮಾತ್ರ ಜಾತಿಯ ಸ್ವಾಭಿಮಾನವನ್ನು ಹಿಡಿಯತಕ್ಕವನಿದ್ದಿಲ್ಲ. ಆತನಿಗೆ ಯೋಗ್ಯರು ಯಾರು? ಅಯೋಗ್ಯರು ಯಾರು? ಎಂಬದರ ಯೋಗ್ಯ ಪರಿಶ್ರಮವಿತ್ತು. ಇರಲಿ ಹೀಗೆ ಯೋಚಿಸುತ್ತಿದ್ದ ಅಧಿಕಾರಿಯು ನೆಟ್ಟಗೆ ಅಕಬರ ಬಾದಶಹನ ಬಳಿಗೆ ಹೋಗಿ ತಾನು ಮನಸ್ಸಿನಲ್ಲಿ ಮಾಡಿಕೊಂಡ ಸಂಗತಿಯನ್ನೆಲ್ಲ ಬಹ

ಬಡ ತೋಡಿಕೊಂಡು ಬಿಟ್ಟನು. ಇದರಿಂದ ತಾನು ನಿರಪರಾಧಿಯೆಂದು ನಿರ್ಣಯಿಸಲ್ಪಡುವದೆಂದೂ, ಮಾನಸಿಂಗನೇ ಅಪರಾಧಿಯಾಗುವನೆಂದೂ ಆ ಮರುಳ ಅಧಿಕಾರಿಯು ತಿಳಿದಿದ್ದನು; ಆದರೆ ಅಕಬರನು ಚಾಣಾಕ್ಷನಿದ್ದದದರಿಂದ ಅವನ ಮುಂದೆ ಯಾವ ಮಾತನ್ನೂ ಆಡದೆ ಅವನನ್ನು ಮನೆಗೆ ಕಳುಹಿ ಮಾನಸಿಂಗನನ್ನು ಕರೆಯಿಸಿದನು.

ಮಾನಸಿಂಗನಿಗೆ ಈ ಯಾವ ಸಂಗತಿಯೂ ಗೊತ್ತಿರಲಿಲ್ಲ. ಅವನು ಒಮ್ಮೆಲೆ ಗಾಬರಿಯಾಗಿ ಸೆರೆಮನೆಯಲ್ಲಿದ್ದ ಚಂದ್ರಪಾಲ-ನಂದಕುಮಾರರು ಓಡಿಹೋದರೆ? ಎಂದು ನುಡಿದು, ಘಾತವಾಯಿತೆಂದು ಚಡಪಡಿಸತೊಡಗಿದನು ಆತನಲ್ಲಿ ನಿಜವಾದ ಅಸಮಾಧಾನವುಂಟಾದದ್ದನ್ನು ಬಾದಶಹನು ಕಂಡುಹಿಡಿದನು ಸೆರೆಮನೆಯ ಅಧಿಕಾರಿಯು ಬಿಗಿಯಾದ ಪಹರೆಯನ್ನಿರಿಸದೆ, ಮತ್ತು ಗುಪ್ತಚಾರರು-ಫಿತೂರಿಜನರು ಸೆರೆಮನೆಯಲ್ಲಿ ಸೇರದಂತೆ ನೋಡಿಕೊಳ್ಳದೆ ಅಪರಾಧವ ಮಾಡಿ ನಮ್ಮ ಕಡೆಗೆ ಸುಳ್ಳು ಸುದ್ದಿಯನ್ನು ಹೇಳಿ ಪಾರಾಗಬೇಕೆಂದು ಬಂದಿರುವನು! ಭಲಾ! ನನ್ನನ್ನು ಮೋಸಗೊಳಿಸ ಬಂದಿರುವೆಯಾ? ಈ ಅಕಬರನು ಸ್ವಜಾತಿ ಅಭಿಮಾನವನ್ನು ಹಿಡಿದು, ಮಾನಸಿಂಗನನ್ನು ಶಿಕ್ಷಿಸುವನೆಂದು ನೀನು ಮನಸ್ಸಿನಲ್ಲಿ ತಿಳಿದಿರಬಹುದು; ಆದರೆ ಈ ಅಕಬರನು ಅಂಥ ಮೂಢನಲ್ಲ. ನಿಜವಾದ ಕರ್ತೃತ್ವಶಾಲಿಯನ್ನೇ ಪ್ರೋತ್ಸಾಹಿಸುವನು, ಹೇಡಿಗಳು ಸ್ವಜಾತಿಯವರಿದ್ದರೂ ನಿರಾಕರಿಸಿಬಿಡುವನು, ಎಂದು ಬಾದಶಹನು ತನ್ನ ಮನಸ್ಸಿನಲ್ಲಿ ಅಂದುಕೊಂಡು ಸೆರೆಮನೆಯ ಅಧಿಕಾರಿಯನ್ನು ಕರೆಯಿಸಿದನು. ಸೆರೆಮನೆಯ ಅಧಿಕಾರಿಯು ಬಾದಶಹನ ಮುಂದೆ ಏನು ಹೇಳಿರುವನೆಂಬದು ಮಾನಸಿಂಗನಿಗೆ ಗೊತ್ತಿರಲಿಲ್ಲ. ಆತನು ಬಂದಬಳಿಕ ಬಾದಶಹನು ಒಳ್ಳೇ ದರ್ಪನಿಂದ ನಿಜಸಂಗತಿಯನ್ನು ಹೇಳೆಂದು ನುಡಿಯಲು, ಆ ಮುಸಲ್ಮಾನ ಅಧಿಕಾರಿಯು ಬೆದರಿದನು. ಬಾದಶಹನು ಸಿಟ್ಟಿಗೆದ್ದದರಿಂದಲೂ, ಎದುರಿಗೆ ಮಾನಸಿಂಗನು ಇದ್ದದರಿಂದಲೂ ಅವನ ಹಲ್ಲಣವೇ ಹಾರಿಹೋಯಿತು. ಆಗ ಅವನಿಗೆ ಮಾತಾಡಲಿಕ್ಕೆ ಬಾಯಿ ಬಾರದಾಯಿತು ಆಗ ಅಕಬರ ಬಾದಶಹನಿಗೆ ಆ ಅಧಿಕಾರಿಯ ದುರ್ವರ್ತನವು ಹೊಳೆದು ಹೋಯಿತು ಅವನು ಮಾನಸಿಂಗನ ಮುಂದೆ ಎಲ್ಲ ಸಂಗತಿ ಹೇಳಿ ಈತನಿಗೆ ಯಾವ ಶಿಕ್ಷೆಯನ್ನು ವಿಧಿಸಬೇಕೆಂದು ಕೇಳಿದನು.

ಬಾದಶಹನ ಈ ಮಾತುಗಳನ್ನು ಕೇಳಿ ಮಾನಸಿಂಹನು ಚಕಿತನಾದನು. ಸೆರೆಮನೆಯ ಅಧಿಕಾರಿಯು ತನ್ನ ವಿಷಯಕ್ಕೆ ಹೀಗೇಕೆ ಸುಳ್ಳು ಸುದ್ದೀ ಹುಟ್ಟಿಸಿದನೆಂಬದು ಅವನಿಗೆ ತಿಳಿಯದಾಯಿತು. ಆಗ ಅವನು— ಖಾವಿಂದ! ಈಗ ಇದರಲ್ಲಿ ವೇಳೆಗಳೆಯುತ್ತ ಕೂಡ್ರುವದರಲ್ಲಿ ಅರ್ಥವಿಲ್ಲ. ಜನರು ಏನು ಅಂದರೂ ಬಾದಶಾಹಿಯ ಹಿತಚಿಂತನ ಮಾಡುವದು ನನ್ನ ಕೆಲಸವು ಕೈದಿಗಳು ಓಡಿ ಹೋಗಿ ಬಹಳ ಹೊತ್ತಾಯಿತು. ಈಗಲೇ ಅವರನ್ನು ಬೆನ್ನಟ್ಟಿ ಹಿಡಿತರಲು ಚತುರರಾದ ರಾಹುತರನ್ನು ನಾಲ್ಕು ದಿಕ್ಕುಗಳಿಗೂ ಕಳಿಸುವ ಕೆಲಸವು ಮಹತ್ವದ್ದಿರುವದು. ಸೆರೆಮನೆಯ ಅಧಿಕಾರಿಗಳ ಹಾಗು ಕಾವಲುಗಾರರ ದುರ್ಲಕ್ಷದಿಂದ ಇಂಥ ಮೋಸಕ್ಕೆ ಗುರಿಯಾಗಬೇಕಾಯಿತು. ಈ ಬಗ್ಗೆ ಇವರೆಲ್ಲರಿಗೆ ಯಾವ ಶಿಕ್ಷೆ ಮಾಡಬೇಕೆಂಬದನ್ನು ಖಾವಂದರವರೇ ಯೋಚಿಸಿ ಮಾಡಬಹುದು. ಈಗ ನನಗೆ ಅಪ್ಪಣೆ ಕೊಟ್ಟರೆ ಮುಂದಿನ ವ್ಯವಸ್ಥೆಯನ್ನು ಮಾಡುವೆನು. ವೇಳೆಯು ಬಹಳವಾದರೆ ಕೈದಿಗಳು ನಮಗೆ ಸಿಗದಷ್ಟು ದೂರ ಹೋಗಬಹುದು. ಈ ಕೆಲಸದಲ್ಲಿ ಕಾಲವಿಲಂಬವು ಸ್ವಲ್ಪ ಮಾತ್ರಕ್ಕೂ ಸರಿಯಾದದ್ದಲ್ಲ. ಈ ದಿನ ಬೆಳಗಿನಲ್ಲಿಯೇ ನನಗೆ ಸುದ್ದಿ ಹತ್ತಿದ್ದರೆ ಆ ಕೂಡಲೆ ವ್ಯವಸ್ಥೆ ಮಾಡುತ್ತಿದ್ದೆನು. ಎಂದು ನುಡಿಯಲು, ಅಕಬರನು ಆತನ ಮಾತಿಗೆ ಒಪ್ಪಿಕೊಂಡು ಅವನನ್ನು ಕಳುಹಿಸಿ ಕೊಟ್ಟನು; ಮತ್ತು ಸೆರೆಮನೆಗೆ ಬೇರೆ ಅಧಿಕಾರಿಗಳನ್ನೂ ಕಾವಲುಗಾರರನ್ನೂ ನೇಮಿಸಿ, ಅಪರಾಧಿಗಳಾದ ಕಾವಲುಗಾರರನ್ನೂ, ಸೆರೆಮನೆಯ ಅಧಿಕಾರಿಗಳನ್ನೂ ಅಲ್ಲಿಯೇ ಅಂಧಃಕಾರಕೋಟಡಿಯಲ್ಲಿ ಹಾಕಿಸಿಬಿಟ್ಟನು. ಮಾನಸಿಂಹನು ಕೈದಿಗಳನ್ನು ಹಿಡತರಿಸುವವರೆಗೆ ಇವರು ಈ ಅಂಧಃಕಾರ ಕೋಟಡಿಯಲ್ಲಿಯೇ ಇರತಕ್ಕದ್ದೆಂದು ಕಟ್ಟಪ್ಪಣೆ ಮಾಡಿದನು.

ಇತ್ತ ಮಾನಸಿಂಹನು ಮನೆಗೆ ಬಂದು ತನ್ನ ಸೈನ್ಯದಲ್ಲಿ ಚುರುಕಾದವರನ್ನು ಆರಿಸಿ ಕೆಲವರನ್ನು ಉತ್ತರ-ಪಶ್ಚಿಮಗಳ ಕಡೆಗೆ ಕಳುಹಿ ಕೆಲವರನ್ನು ದಕ್ಷಿಣ-ಪೂರ್ವಗಳ ಕಡೆಗೆ ಕಳುಹಿದನು.

೧೭—ಬಳಸಂಚು

ಹೀಗೆ ಮಾನಸಿಂಗನು ಚಂದ್ರಪಾಲ-ನಂದಕುಮಾರರನ್ನು ಹಿಡಿಯಲು ಅನೇಕ ಜನರನ್ನು ಕಳುಹಿಸಿ ಆತನು ಕೈದಿಗಳು ಎಂದು ಸಿಗುವರೋ ಎಂದು ಚಿಂತಿಸುತ್ತಿರಲು ಇತ್ತ ಚಂದ್ರಪಾಲ, ನಂದಕುಮಾರ, ರಣಜಿತ ಸಿಂಗ, ರಣಮಲ್ಲ, ಅಂಬಾದಾಸ ಇವರೇ ಐವರು ಪಯಣದ ಮೇಲೆ ಪಯಣ ಮಾಡುತ್ತ ರಾತ್ರಿಕಾಲದಲ್ಲಿಯೇ ಪ್ರಯಾಣ ಬೆಳಿಸುತ್ತ ಅರವಲೀ ಪರ್ವತದಲ್ಲಿರುವ ಸಮಾಧಿಸ್ಥಾನಕ್ಕೆ ಸುರಕ್ಷಿತವಾಗಿ ಬಂದರು. ಅವರು ಅಲ್ಲಿಗೆ ಬಂದಾಗ ಸೂರ್ಯೋದಯ ಸಮಯವಾಗಿತ್ತು. ಪೂರ್ವ ದಿಕ್ಕು ಹೊಂಬಣ್ಣದಿಂದ ಪರಿಶೋಭಿಸುತ್ತಿತ್ತು. ತಂಗಾಳಿಯು ಸುಳ್ಳನೆ ಸುಳಿದು ಮನಸ್ಸಿಗೆ ಸೊಗಸನ್ನುಂಟು ಮಾಡುತ್ತಿತ್ತು. ಪಕ್ಷಿಗಳು ಕಿಲಿಬಿಲಿ ಶಬ್ದಗಳಿಂದ ಜನರ ಕಿವಿಗಳನ್ನು ಗಡಚಿಕ್ಕಿಸುತ್ತಿದ್ದವು. ಭೂಮಂಡಲವೆಲ್ಲ ಪ್ರಶಾಂತವಾಗಿರುವದೆಂದು ಭಾಸವಾಗುತ್ತಿತ್ತು. ಈ ಸಮಯವು ಚಟುವಟಿಕೆಯು ಗಂಡಸರು ಹೆಂಗಸರಿಗೆ ಮಿತ್ರನೋಪಾದಿಯಲ್ಲಿ ಕಾಣುವದು ಸೋಮಾರಿಗಳಿಗೆ ಮಾತ್ರ ಶತ್ರುಸದೃಶವಾಗಿ ತೋರುವದು. ಅವರು ಈ ಪ್ರಭಾತವು ಯಾಕೆ ಬಂದಿತೆಂದು ಮುಸುಕಿನಲ್ಲಿಯೇ ಶಪಿಸುತ್ತಲಿರುವರು. 12 ತಾಸು ರಾತ್ರಿಯಲ್ಲದೆ ಇನ್ನೂ ಹನ್ನೆರಡು ತಾಸು ರಾತ್ರಿಯಾದರೂ ಅವರ ಕಣ್ಣಲ್ಲಿರುವ ನಿದ್ರೆಯು ತೀರುತ್ತಿರುವದಿಲ್ಲ. ಇಂಥ ಕುಂಭಕರ್ಣನ ಅಂಶಸಂಭೂತರು ಭೂತಳದಲ್ಲಿ ಹೇರಳವಾಗಿರುವರು. ಅವರೆಲ್ಲರೂ ಪ್ರಭಾತವನ್ನು ಹ್ಯಾಗೆ ಪ್ರೀತಿಸುವರು? ಆದರೆ ಪ್ರಭಾತವನ್ನು ಆದರದಿಂದ ಎದುರ್ಗೊಳ್ಳುವವರೆಂದರೆ ಚಟುವಟಿಕೆಯ ಜನರೇ ಸರಿ! ಪ್ರಭಾತದಿಂದಾಗುವ ನಿಜವಾದ ಲಾಭವಾದರೂ ಇವರಿಗೇ ಆಗುವದಲ್ಲದೆ ಅನ್ಯರಿಗೆ ಆಗಲಾರದು. ಇರಲಿ.

ಸಮಾಧಿ ಸ್ಥಾನದಲ್ಲಿರುವ ಕೀರ್ತಿಸಿಂಹ-ಪದ್ಮಿನಿಯರು ಇಂಥ ಆಲಸ್ಯಕ್ಕೆ ಸ್ವಲ್ಪಾದರೂ ಇಂಬುಗೊಡತಕ್ಕವರಿದ್ದಿಲ್ಲ. ಅವರು ಪ್ರತಿನಿತ್ಯದಂತೆ ಈ ದಿನವೂ ದೊಡ್ಡ ನಸುಕಿನಲ್ಲೆದ್ದು ಸಮಾಧಿಯ ಬಳಿಯಲ್ಲಿ ಕಸಗೂಡಿಸಿ ಥಳಿ ಹಾಕಿ ಅಲ್ಲಿ ಕಾಲಿಟ್ಟವರ ಮನಸ್ಸು ಪ್ರಸನ್ನವಾಗುವಂತೆ ಮಾಡಿದ್ದರು.

ಅವರ ನಿರಾಲಸ್ಯದ ದುಡಿತದಿಂದ ಆ ಸ್ಥಳಕ್ಕೆ ಒಳ್ಳೇ ಮನೋಹರತ್ವವು ಪ್ರಾಪ್ತವಾಗಿತ್ತು.

ಪದ್ಮಿನಿ-ಕೀರ್ತಿಸಿಂಹರು ಸ್ನಾನಮಾಡಿ ಮಡಿಯುಬಟ್ಟೆಗಳನ್ನು ಧರಿಸಿ ಸಮಾಧಿಸ್ಥಾನದ ಬಳಿಗೆ ಬಂದಿದ್ದರು. ಕೀರ್ತಿಸಿಂಹನು ಸಮಾಧಿಯ ಪೂಜೆಯಲ್ಲಿ ನಿರತನಾಗಿದ್ದನು. ಪದ್ಮಿನಿಯು ಸಮಾಧಿಯ ಬಳಿಯಲ್ಲಿರುವ ಲತಾಮಂಟಪದಲ್ಲಿ ಹೂ ಕೊಯ್ಯುತ್ತಿದ್ದಳು. ಆಕೆಯು ಸಹಜವಾಗಿ ಮುಖವನ್ನು ಮೇಲಕ್ಕೆತ್ತಲು, ದೂರದಲ್ಲಿ ಯಾರೋ ಐವರು ಸಮಾಧಿಯ ಕಡೆಗೆ ಬರುತ್ತಿರುವದು ಕಂಡುಬಂದಿತು. ಆಗ ಆಕೆಯು ತೀಕ್ಷ್ಣದೃಷ್ಟಿಯಿಂದ ಅತ್ತಕಡೆಗೇ ನೋಡಲು, ತನಗೆ ಪೂರ್ವಪರಿಚಿತನಾದ ನಂದಕುಮಾರನೂ, ರಣಜಿತಸಿಂಗ ರಣಮಲ್ಲಾದಿ ರಜಪೂತರೂ ಬರುತ್ತಿರುವರೆಂದು ತಿಳಿಯಿತು. ಕೂಡಲೆ ಆಕೆಯು ಹೂವೆತ್ತುವ ಕೆಲಸವನ್ನು ಅಷ್ಟಕ್ಕೇ ನಿಲ್ಲಿಸಿ ಸಮಾಧಿಯ ಪೂಜೆಮಾಡುತ್ತಿರುವ ತಂದೆಯ ಬಳಿಗೆ ಹೋದಳು. ಮತ್ತು ಕೈಸನ್ನೆಯಿಂದ ತಿಳಿಸಬೇಕಾದ ಸಂಗತಿಯನ್ನು ತಿಳಿಸಿ ಅಲ್ಲಿಯೇ ಮರೆಗೆ ನಿಂತುಕೊಂಡಳು. ಕೀರ್ತಿಸಿಂಹನು ಪೂಜೆಯನ್ನು ಅಷ್ಟಕ್ಕೇ ನಿಲ್ಲಿಸಿ ಅಲ್ಲಿಂದೆದ್ದು ನಾಲ್ಕುಹೆಜ್ಜೆ ಮುಂದಕ್ಕೆ ಬರುವಷ್ಟರಲ್ಲಿ ಆ ಐವರೂ ಅಲ್ಲಿಗೆ ಬಂದೇಬಿಟ್ಟರು! ಕೀರ್ತಿಸಿಂಹನಿಗೆ ಚಂದ್ರಪಾಲ-ನಂದಕುಮಾರರ ಗುರ್ತು ಚನ್ನಾಗಿ ಹತ್ತಿತು. ಚಂದ್ರಪಾಲನೂ ಕೀರ್ತಿಸಿಂಹನನ್ನು ಗುರ್ತಿಸಿದನು.

ಹೀಗೆ ತಮ್ಮ ಮಾಳವಾ ಸಿಂಹಾಸನದ ಪದಚ್ಯುತ ಸ್ವಾಮಿಯ ದರ್ಶನವು ಆಗಲು, ಕೀರ್ತಿಸಿಂಹನಿಗೆ ಶೋಕ-ಹರಷುಗಳೆರಡೂ ಒಮ್ಮೆಲೆ ಉತ್ಪನ್ನವಾದವು. ಅವು ನಾ ಮುಂದೆ ನಾ ಮುಂದೆ ಎಂದು ಮನೋಭೂಮಿಕೆಯಲ್ಲಿ ಗೊಂದಲವನ್ನೆಬ್ಬಿಸಿರಲು, ಕೀರ್ತಿಸಿಂಹನು ಅವುಗಳ ಆಘಾತದಿಂದ ಘಾಸಿಯಾಗುತ್ತ ಚಂದ್ರಪಾಲನನ್ನು ಬಹುಭಕ್ತಿಯಿಂದ ನಮಸ್ಕರಿಸಿ ಅವನ ಸ್ವಾಗತ ಮಾಡಿದ್ದಲ್ಲದೆ ಉಳಿದ ರಜಪೂತ ಬಂಧುಗಳ ಸ್ವಾಗತವನ್ನೂ ಮಾಡಿದನು. ಅವರೆಲ್ಲರೂ ಸಮಾಧಿಯ ಹತ್ತರ ಬಂದು ನಮಸ್ಕರಿಸಿ ಕುಳಿತುಕೊಂಡರು. ಆ ಸಮಾಧಿಯಲ್ಲಿ ಅವುದೋ ಒಂದು ದಿವ್ಯ ಸಾಮರ್ಥ್ಯವು ಇರುವಂತೆ ಅವರೆಲ್ಲರಿಗೆ ಕಂಡು ಬಂದಿತು. ಚಂದ್ರಪಾಲನಂತೂ ಚಕಿತ ಮುದ್ರೆಯಿಂದ ಆ ಸಮಾಧಿಯನ್ನು ನೋಡತೊಡಗಿದನು. ಅಷ್ಟರಲ್ಲಿ ಸಮಾಧಿಯ ಬಳಿಯಿಂದ “ಪಾತಿವ್ರತ್ಯದ ಪ್ರಭಾವ-ಪಾತಿವ್ರತ್ಯದ ಪ್ರಭಾವ”!

ಎಂಬ ಮಧುರಧ್ವನಿಯು ಕೇಳಬಂದಿತು. ಚಂದ್ರಪಾಲನು ಮತ್ತಷ್ಟು ಆಶ್ಚರ್ಯಕ್ಕೊಳಗಾದನು. ಅಷ್ಟರಲ್ಲಿ ಕೀರ್ತಿಸಿಂಹನು ಮಗಳನ್ನು ಕರೆದದ್ದರಿಂದ ಆಕೆಯು ಬಂದು ಎಲ್ಲರಿಗೂ ವಿನಯದಿಂದ ನಮಸ್ಕರಿಸಿ ಮತ್ತೆ ಸಮಾಧಿಯ ಹಿಂದೆ ಹೋದಳು. ಈಗ ಕೇಳಬಂದ ಮಧುರಧ್ವನಿಯು ಈ ತರುಣಿಯದೇ ಇದ್ದು, ಈ ಸಮಾಧಿಯು ಈಕೆಯ ತಾಯಿಯದಿರಬೇಕೆಂದು ಭಾವಿಸಿ ಚಂದ್ರಪಾಲನು ಮನಸ್ಸನ್ನು ಸಮಾಧಾನಪಡಿಸಿಕೊಂಡನು.

ಪ್ರಾಸಂಗಿಕ ಮಾತುಕಥೆಗಳಾದ ಬಳಿಕ ಕೀರ್ತಿಸಿಂಹನು ಅವರೆಲ್ಲರನ್ನು ಝರಿಗೆ ಕರೆದೊಯ್ದು ಸ್ನಾನಾದಿಗಳನ್ನು ತೀರಿಸಿಕೊಂಡು ಬರುವಂತೆ ವಿಜ್ಞಾಪಿಸಿ, ಗುಡಿಸಿಲಿಗೆ ಬಂದು ಪಕ್ವವಾದ ಹಣ್ಣುಗಳನ್ನು ಹರಿದುತಂದು ಫಲಾಹಾರದ ಸಿದ್ಧತೆಯನ್ನು ಮಾಡಿದನು. ಅಷ್ಟರಲ್ಲಿ ಎಲ್ಲರೂ ಸ್ನಾನ ಮಾಡಿ ಬರಲು, ಕೀರ್ತಿಸಿಂಹನು ಎಲ್ಲರಿಗೂ ಕ್ಷುಧಾಶಾಂತಿಗಾಗಿ ಫಲಗಳನ್ನು ಸಮರ್ಪಿಸಿದನು. ಆ ಮಧುರ ಫಲಗಳನ್ನು ಸವಿಯಲು ಅವರೆಲ್ಲರ ಮಾರ್ಗಾಯಾಸವು ತೊಲಗಿತು. ಬಳಿಕ ಪ್ರಸನ್ನಚಿತ್ತರಾದ ಅವರು ಆ ಸಮಾಧಿಯ ಬಳಿಗೆ ಹೋಗಿ ಕುಳಿತುಕೊಂಡರು.

ಮೊದಲು ರಣಜಿತಸಿಂಗನು ತಾವು ಅಪ್ಪಣೆಪಡೆದು ಹೋದಂದಿನಿಂದ ಕೆಲಸಗಳು ಹ್ಯಾಗೆ-ಹ್ಯಾಗೆ ಸಾಧಿಸಿದವೆಂಬ ಸಂಗತಿಯನ್ನೆಲ್ಲ ಸ್ವಲ್ಪದರಲ್ಲಿಯೇ ಹೇಳಿ, ಇನ್ನು ಮುಂದಿನ ಕೆಲಸವು ನಿಮ್ಮನ್ನೇ ಕೂಡಿದೆ, ಎಂದು ನುಡಿದು ಸುಮ್ಮನಾದನು. ಬಳಿಕ ಕೀರ್ತಿಸಿಂಹನು ಏನೋ ಮಾತಾಡುತ್ತಿದ್ದನು ಅಷ್ಟರಲ್ಲಿ ಚಂದ್ರಪಾಲನು ಗುಡುಗಿನಂಥ ಧ್ವನಿಯಿಂದ ನುಡಿದನೇನಂದರೆ:-ಪ್ರಿಯಸರದಾರರೇ, ನೀವು ಮಾಳವಾಸಿಂಹಾಸನದ ಅಭಿಮಾನವನ್ನು ಹಿಡಿದು ಇಂದಿನವರೆಗೆ ಕಷ್ಟಪಟ್ಟದ್ದನ್ನು ನೋಡಿ, ನನಗೆ ತುಂಬಾ ಸಂತೋಷವೆನಿಸುತ್ತದೆ. ನಿಮ್ಮಂಥ ಸ್ವಾಮಿನಿಷ್ಠ ಸೇವಕರು ದೊರೆಯುವದು ದುರ್ಲಭವೇ ಸರಿ! ನಿಮ್ಮ ಈ ತಪಸ್ಸಿನ ಫಲವು ಈಗ ದೊರೆಯುವ ಸಮಯವು ಪ್ರಾಪ್ತವಾದ ಹಾಗೆ ತೋರುತ್ತಿದೆ; ಯಾಕಂದರೆ ನನ್ನ ಮನಸ್ಸೇ ಅದಕ್ಕೆ ಸಾಕ್ಷಿಯು. ದಿಲ್ಲಿಯಲ್ಲಿ ನಾನು ಚಂದ್ರಪಾಲನೆಂಬ ಹೆಸರಿನಿಂದ ಕಲ್ಲುಕುಟ್ಟಿಗನಾಗಿದ್ದಾಗ ನನ್ನ ಮನಸ್ಸು ಎಷ್ಟು ದುರ್ಬಲವಾಗಿತ್ತೆಂಬದನ್ನು ಸ್ಮರಿಸಿದರೆ ಈಗ ನನಗೇ ನಾಚಿಕೆಯುತ್ಪನ್ನವಾಗುವಂತಿದೆ. ಇಷ್ಟು ದುರ್ಬಲವಾದ ನನ್ನ ಮನಸ್ಸು ಈಗ ಸ್ವತಂತ್ರ ವಾತಾವರಣದ ಸ್ಪರ್ಶದಿಂದ

ತುಂಬಾ ಶಕ್ತಿಸಂಪನ್ನವಾಗಿದೆ. ವೀರಸಿಂಹನೆಂಬ ಹೆಸರಿಗೆ ತಕ್ಕಹಾಗೆ ನನ್ನ ಬಾಹುಗಳು ಸ್ಫುರಣಹೊಂದತೊಡಗಿವೆ. ನಮ್ಮ ಸಿಂಹಾಸನದ ಸೇವಕರನ್ನೆಲ್ಲ ಒಟ್ಟುಗೂಡಿಸೋಣ! ಅವರಲ್ಲಿ ಮೂರುಭಾಗ ಮಾಡಿ ಒಂದಕ್ಕೆ ನಾನು ಸೇನಾಪತಿಯಾಗುತ್ತೇನೆ, ಇನ್ನೊಂದಕ್ಕೆ ನಂದಕುಮಾರನು ಸೇನಾಪತಿಯಾಗಲಿ! ಮೂರನೇದಕ್ಕೆ ಕೀರ್ತಿಸಿಂಹನು ಅಧಿಪತಿಯಾಗಲಿ, ಹೀಗೆ ನಾವು ಮೂವರು ನಮ್ಮ-ನಮ್ಮ ಸೇನೆಗಳನ್ನು ಸಾಗಿಸಿಕೊಂಡು ನಮ್ಮ ರಾಜಧಾನಿಗೆ ಮುತ್ತಿಗೆಯನ್ನು ಹಾಕೋಣ! ಹಾಗು ಅಲ್ಲಿದ್ದ ಮೊಗಲ ಸುಭೇದಾರನನ್ನು ಸೋಲಿಸಿ ಮೊದಲು ನಮ್ಮ ಸಿಂಹಾಸನವನ್ನು ನಮ್ಮ ಕೈವಶಮಾಡಿಕೊಳ್ಳೋಣ! ಏಳಿರಿ ಇನ್ನು ತಡಮಾಡಬೇಡಿರಿ.!!

ಈ ಮೇರೆಗೆ ಚಂದ್ರಪಾಲನು ಅಲ್ಲ! ಅಲ್ಲ! ವೀರಸಿಂಹಮಹಾರಾಜನು ನುಡಿಯಲು, ಕೀರ್ತಿಸಿಂಹ, ರಣಜಿತಸಿಂಗ ಮೊದಲಾದ ಸ್ವಾಮಿನಿಷ್ಠ ಸೇವಕರಿಗೆ ಹೇಳಕೂಡದಷ್ಟು ಆನಂದವಾಯಿತು. ಅವರ ಬಾಹುಗಳು ಸ್ಫುರಣಹೊಂದ ತೊಡಗಿದವು. ಹತಭಾಗ್ಯನಾದ ತಮ್ಮ ರಾಜನಲ್ಲಿ ಈ ಮೇರೆಗೆ ಉತ್ಸಾಹವು ಉಂಟಾದದ್ದನ್ನು ನೋಡಿ ಆ ಸ್ವಾಮಿಭಕ್ತರು ಥೈ ಥೈ ಕುಣಿದರು. ನಂದಕುಮಾರನಂತೂ—ಇನ್ನೇನು? ನಮ್ಮ ರಾಜ್ಯವು ನಮ್ಮ ಕೈವಶವಾಯಿತೆಂದು ತಿಳಿಯಿರಿ, ಎಂದು ಗಂಭೀರ ಸ್ವರದಿಂದ ನುಡಿಯತೊಡಗಿದನು.

ಮನುಷ್ಯನ ಶಕ್ತಿಯೆಲ್ಲ ಮನಸ್ಸಿನ ಹಿಡತದಲ್ಲಿ ಸಿಕ್ಕಿಕೊಂಡಿರುವದು. ಮನಸ್ಸು ಪ್ರಸನ್ನವಾದಾಗ ಇಲ್ಲವೇ ಆವೇಶಯುಕ್ತವಾದಾಗ ಶರೀರಕ್ಕೆ ವಿಲಕ್ಷಣ ಶಕ್ತಿ ಬರುತ್ತದೆ. ಎಂಥ ಕಾರ್ಯವನ್ನಾದರೂ ಹೊಡೆದು ಹಾಕುವೆನೆಂಬ ಧೈರ್ಯವುಂಟಾಗುತ್ತದೆ. ಅದೇ ಮನಸ್ಸು ದುರ್ಬಲವಾಯಿತೆಂದರೆ ಯಾವ ಕೆಲಸಕ್ಕೂ ಮನಸ್ಸಾಗುವದಿಲ್ಲ. ಮನುಷ್ಯನು ಹೇಡಿಯಾಗುತ್ತಾನೆ. ಈ ನಿಯಮವು ವೀರಸಿಂಹಮಹಾರಾಜನಲ್ಲಿ ಸ್ಪಷ್ಟವಾಗಿ ಪ್ರಕಟವಾಗತೊಡಗಿತು. ಆಗ ಕೀರ್ತಿಸಿಂಹ-ರಣಜಿತಸಿಂಗರು ಯೋಚಿಸಿ ವೀರಸಿಂಹಮಹಾರಾಜನಿಗೆ ಒಂದು ವಿಜ್ಞಾಪನೆಯನ್ನು ಮಾಡಿಕೊಂಡರು. ಆ ಸೂಜ್ಞ ವೀರಸಿಂಹಮಹಾರಾಜನು ಆ ಸೇವಕರ ಬಿನ್ನಹವನ್ನು ಮಾನ್ಯ ಮಾಡಿದನು. ಬಳಿಕ ಅವರೆಲ್ಲರೂ ಆ ದಿನ ರಾತ್ರಿಯಲ್ಲಿಯೇ ಆ ಸಮಾಧಿಸ್ಥಾನವನ್ನು ತ್ಯಜಿಸಿ ಬೇರೊಂದು ಅತಿಗುಪ್ತವಾದ ಗುಹೆಗೆ ಹೋದರು. ಅಲ್ಲಿ ವೀರಸಿಂಹಮಹಾರಾಜನನ್ನೂ, ನಂದಕುಮಾರನನ್ನೂ, ಪದ್ಮಿನಿಯನ್ನೂ

ಇರಿಸಿದ್ದಲ್ಲದೆ ರಣಜಿತಸಿಂಗನೂ, ಅಂಬಾದಾಸನೂ ಅವರ ಸೇವೆಗಾಗಿ ನಿಂತುಕೊಂಡರು. ಉಳಿದ ರಣಮಲ್ಲ, ಕೀರ್ತಿಸಿಂಹ, ಇವರಿಬ್ಬರು ಮಾಳವಾ ಸಿಂಹಾಸನಾಭಿಮಾನಿಗಳನ್ನು ಹುರಿದುಂಬಿಸುವದಕ್ಕಾಗಿ ಹೊರಟು ಹೋ-ದರು. ಅವರ ಈ ಒಳಸಂಚು ಅಕಬರನಿಗಾಗಲಿ, ಮಾನಸಿಂಗನಿಗಾಗಲಿ, ತಿಳಿಯಬಾರದಾದ್ದರಿಂದ ಅವರು ಬಹು ಗೌಪ್ಯವಾಗಿಯೇ ಈ ಕೆಲಸವನ್ನು ನಡಿಸಿದರು. ರಜಪೂತರ ಈ ಒಳಸಂಚಿನ ಸುತ್ರಾಂಮ ಸುದ್ದಿಯು ತಿಳಿಯದ್ದರಿಂದ ಮಾನಸಿಂಗನು ಆಗಲೇ ಅವರನ್ನು ಸಂಹರಿಸಿದ್ದರೆ ವಿಹಿತವಾಗುತ್ತಿತ್ತೆಂದು ಮನಸ್ಸಿನಲ್ಲಿಯೇ ಚಡಪಡಿಸತೊಡಗಿದನು.

೧೮—ರಾಜಪುತ್ರರ ವಿಜಯ.

ಕೀರ್ತಿಸಿಂಹನು ಮಾಳವಾ ರಾಜ್ಯದಲ್ಲಿ ಬಲಿಷ್ಠನೂ, ಪ್ರಮುಖನೂ ಆದ ಸರದಾರನಾಗಿದ್ದನು. ಆತನಲ್ಲಿ ಮಾಳವಾದ ರಜಪೂತರೆಲ್ಲರೂ ಒಳ್ಳೇ ವಿಶ್ವಾಸವನ್ನಿಟ್ಟು ನಡೆಯುತ್ತಿದ್ದರು. ಹಿಂದೆ ಹೇಳಿದಂತೆ ಮಾಳವಾ ಸಿಂಹಾಸನವು ಮೊಗಲರ ಕೈಸೇರಿದ ಬಳಿಕ ರಜಪೂತರೆಲ್ಲರೂ ಅಲ್ಲಿಯೊಬ್ಬರು, ಇಲ್ಲಿಯೊಬ್ಬರು ಹೀಗೆ ಗುಹೆಯಲ್ಲಿ ವಾಸಿಸಿ ಕಾಲಕ್ರಮಣ ಮಾಡುತ್ತಿದ್ದರು. ಬೇರೆ ಎಷ್ಟೋ ಜನರು ಕೃತ್ರಿಮ ಗಡ್ಡಗಳನ್ನು ಧರಿಸಿ, ಮುಸಲ್ಮಾನರಂತೆ ನಟಿಸುತ್ತ ಬೇಸಾಯದ ಉದ್ಯೋಗವನ್ನು ಮಾಡುತ್ತ ಗುಹೆಯಲ್ಲಿದ್ದ ಸರದಾರರಿಗೆ ಆಹಾರವನ್ನು ಒದಗಿಸಿ ಕೊಡುತ್ತಿದ್ದರು. ಕೆಲವರು ಶತ್ರುಗಳಿಗೆ ಶರಣಾಗತರಾದಂತೆ ನಟಿಸುತ್ತ ಮಾಳವಾ ಸಿಂಹಾಸನದ ಅಭಿಮಾನವನ್ನು ಪ್ರಚ್ಛನ್ನವಾಗಿಟ್ಟುಕೊಂಡು ಆ ಸಿಂಹಾಸನದ ಉತ್ಕರ್ಷಕಾಲವು ಎಂದು ಬರುವದೋ ಎಂದು ಮಾರ್ಗ ನಿರೀಕ್ಷಿಸುತ್ತಿದ್ದರು. ಇಂಥವರೆಲ್ಲರಿಗೂ ಕೀರ್ತಿಸಿಂಹನು ಇಂತಿಷ್ಟು ದಿವಸಗಳಲ್ಲಿ ಇಂಥ ಗುಹೆಗೆ ಬರಬೇಕೆಂದು ಸೂಚಿಸುತ್ತ ನಡೆದನು ಈ ಅಮೃತಕ್ಕೆ ಸಮಾನವಾದ ಸುದ್ದಿಯ ಶ್ರವಣದಿಂದ ಆ ರಜಪೂತರೆಲ್ಲರಿಗೂ ತುಂಬಾ ಸಮಾಧಾನವಾಯಿತೆಂಬದನ್ನು ಹೇಳುವ ಅವಶ್ಯಕತೆಯಿರುವದಿಲ್ಲ. ಯಾಕಂದರೆ ಆಗಿನ ಕಾಲದಲ್ಲಿ ಜನರಲ್ಲಿ ಯುದ್ಧೋತ್ಸಾಹವು ಕುಗ್ಗಿದ್ದಿಲ್ಲ; ವಿಷಯಲಂಪಟತ್ವವು ಹೆಚ್ಚಾಗಿ ಮನುಷ್ಯನಲ್ಲಿ ಜೀವಗಳ್ಳತನವು ಉತ್ಪನ್ನವಾಗಿ

ದ್ದಿಲ್ಲ. ಪರದಾಸ್ಯದಿಂದ ಸ್ವಾಭಿಮಾನವು ನಷ್ಟವಾಗಿದ್ದಿಲ್ಲ. ಪಾರತಂತ್ರ್ಯವೇ ಮೇಲಾದ ಸೌಖ್ಯವೆಂಬದು ಅವರ ಮನದಟ್ಟಾಗಿದ್ದಿಲ್ಲ.

ಕೀರ್ತಿಸಿಂಹನು ಒಂದು ದಿಕ್ಕಿನಲ್ಲಿ ಈ ಸುದ್ದಿಯನ್ನು ಪ್ರಸಾರಗೊಳಿಸುತ್ತಿರುವಷ್ಟರಲ್ಲಿ, ಅದು ಎಂಟೂ ದಿಕ್ಕುಗಳಲ್ಲಿಯೂ ಹಬ್ಬಿಹರಿಬಿದ್ದಿತು. ದೂರ-ದೂರಿನಲ್ಲಿದ್ದ ಎಲ್ಲ ರಜಪೂತರೂ ಹುರಿಯಾದರು. ಅವರೆಲ್ಲರೂ ಕೀರ್ತಿಸಿಂಹನು ಹಾಕಿಕೊಟ್ಟ ಅವಧಿಯಲ್ಲಿ ಆ ಸಾಂಕೇತಿಕ ಸ್ಥಳಕ್ಕೆ ಬಂದರು. ಅವರೆಲ್ಲರಿಗೂ ವೀರಸಿಂಹ ಮಹಾರಾಜನನ್ನು ನೋಡಿ ತುಂಬಾ ಸಂತೋಷವಾಯಿತು. ಅವಧಿಯು ಮುಗಿಯುವಷ್ಟರಲ್ಲಿ ಆ ಸ್ಥಳದಲ್ಲಿ ಪ್ರಚಂಡ ಸೈನ್ಯವೇ ಒಟ್ಟುಗೂಡಿದಂತಾಯಿತು. ಅಷ್ಟರಲ್ಲಿ ಕೀರ್ತಿಸಿಂಹನೂ, ರಣಮಲ್ಲನೂ ಬರಲು, ವೀರಸಿಂಹ ಮಹಾರಾಜನ ಅಪ್ಪಣೆಯ ಮೇರೆಗೆ ಆ ಸೈನ್ಯದಲ್ಲಿ ಮೂರು ವಿಭಾಗವ ಮಾಡಿದರು; ಮತ್ತು ಪೂರ್ವ ಸಂಕೇತದಂತೆ ಒಂದೊಂದು ಭಾಗಕ್ಕೆ ಒಬ್ಬೊಬ್ಬರು ಅಧಿಪತಿಗಳಾದರು.

ರಜಪೂತರು ಮೊಗಲರ ಹಾವಳಿಯಲ್ಲಿ ದೆಸೆಗೆಟ್ಟು ಓಡಿಹೋಗಿದ್ದರೂ ಶಸ್ತ್ರಶೂನ್ಯರಾಗಿದ್ದಿಲ್ಲ. ಅವರ ಬಳಿಯಲ್ಲಿ ಖಡ್ಗ-ಭಲ್ಲೆ ಮೊದಲಾದ ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಎಲ್ಲ ಆಯುಧಗಳೂ ಇದ್ದವು. ಈ ಮೇರೆಗೆ ಸೈನ್ಯವು ಸಿದ್ಧವಾದ ಕೂಡಲೆ ವೀರಸಿಂಹನು ಕೀರ್ತಿಸಿಂಹನಿಗೆ ಬೇಗನೇ ಮಾಳವಾ ರಾಜಧಾನಿಯನ್ನು ಮುತ್ತುವಂತೆ ಆಜ್ಞಾಪಿಸಿದನು. ಒಂದು ಶುಭದಿನದಲ್ಲಿ ಆ ಗುಹೆಯ ಪ್ರದೇಶದಿಂದ ರಜಪೂತರ ಸೈನ್ಯವು ಮಾಳವಾ ರಾಜಧಾನಿಗೆ ಅಭಿಮುಖವಾಗಿ ಹೊರಟಿತು. ಸೈನ್ಯದಲ್ಲಿ ಕಾಲಾಳುಗಳ ಸಂಖ್ಯೆಯೇ ವಿಶೇಷವಾಗಿತ್ತು. ಈ ಕಾಲಾಳುಗಳ ಸಂಖ್ಯೆಯು ಹದಿನೈದು ಸಾವಿರಕ್ಕೆ ಮೀರಿತ್ತು. ಕುದುರೆಗಳು ಮಾತ್ರ ಎರಡುನೂರು ಇದ್ದವು.

ಈ ಪ್ರಕಾರ ಸೇನಾಪರಿವೃತನಾದ ವೀರಸಿಂಹನು ಶೀಘ್ರಗತಿಯಿಂದ ಮಾಳವಾ ರಾಜಧಾನಿಯ ಕಡೆಗೆ ಸಾಗಿರಲು, ಇತ್ತ ದಿಲ್ಲಿಯಲ್ಲಿ ಮಾನಸಿಂಗನು ಚಂದ್ರಪಾಲನೂ, ಅವನ ಮಗನೂ ಎಲ್ಲಿಗೆ ಹೋಗಿರಬಹುದೆಂದು ಚಿಂತಿಸುತ್ತ, ಅವರನ್ನು ಹುಡುಕುವದಕ್ಕೆ ಆಕಾಶ-ಪಾತಾಳಗಳನ್ನು ಒಂದು ಮಾಡತೊಡಗಿದನು. ಊರೊಳಗಿನ ಬಾವಾ-ಬೈರಾಗಿ, ಸಾಧು-ಸಂನ್ಯಾಸಿಗಳನ್ನೆಲ್ಲ ಹಿಡತರಿಸಿದನು. ಶತ್ರುಗಳ ಗುಪ್ತಹೇರರು ಈ ವೇಷಗಳಿಂದ ಊರಲ್ಲಿ ವಾಸಮಾಡಿ, ಹೀಗೆ ಫಿತೂರೀ ನಡಿಸಿರಬೇಕೆಂಬ ಕಲ್ಪನೆಯು

ಉಂಟಾದ್ದರಿಂದಲೇ ಅವನು ಹೀಗೆ ಆಚರಿಸಿದನು; ಆದರೆ ಕಾರ್ಯವು ಕೈ-ಮೀರಿ ಹೋದದ್ದರಿಂದ ಯಾವದನ್ನು ಮಾಡಿದರೂ ಅವನಿಗೆ ಸಮಾಧಾನವು ಸಿಕ್ಕದೆ ಹೋಯಿತು. ಮಾನಸಿಂಗನ ಈ ರೌದ್ರಾವತಾರದ ಅಬ್ಬರದಲ್ಲಿ ನಮ್ಮ ವಾಚಕರ ಪೂರ್ವ ಪರಿಚಿತನಾದ ಭವಾನಸಿಂಗನು ಮಾತ್ರ ಸಿಲ್ಕಿದನು. ಆತನು ಆಯೇಷಿಯ ಅಭಿಲಾಷೆಯಿಂದ ಮುಸಲ್ಮಾನ ಸಾಧುವಿನ ವೇಷದಿಂದ ದಿಲ್ಲಿಯಲ್ಲಿದ್ದನೆಂಬದನ್ನು ಇಲ್ಲಿ ಮತ್ತೆ ಹೇಳುವ ಕಾರಣವಿಲ್ಲ.

ಈ ಸಮಯದಲ್ಲಿ ಭವಾನಸಿಂಗನು ಮುಸಲ್ಮಾನ ಸರದಾರರಲ್ಲಿ ಒಳ್ಳೇ ಪ್ರಸಿದ್ಧಿಯನ್ನು ಪಡೆದಿದ್ದನು. ನಿಜವಾದ ಸಾಧುಗಳು ತಮ್ಮ ಪ್ರಸಿದ್ಧಿಯಾಗದಂತೆ ಗುಪ್ತವಾಗಿರುವರು; ಆದರೆ ನಕಲೀಸಾಧುಗಳು ಬುದ್ಧಿಪೂರ್ವಕವಾಗಿ ಪ್ರಸಿದ್ಧಿಯನ್ನು ಹೆಚ್ಚಿಸಿಕೊಳ್ಳುವರು. ಅವರಂತೆ ನಕಲೀಸಾಧುವಾದ ಭವಾನಸಿಂಗನು ಬುದ್ಧಿಪೂರ್ವಕವಾಗಿ ತನ್ನ ಪ್ರಸಿದ್ಧಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದನು. ಅವನ ಕಪಟತಂತ್ರಗಳನ್ನು ತಿಳಿಯದೆ ಮುಸಲ್ಮಾನ ಸರದಾರರು ತಮ್ಮ ಸಮಾಜದಲ್ಲಿ ಅವನ ಪ್ರಸ್ಥವನ್ನು ಚನ್ನಾಗಿ ಬೆಳಿಸಿದರು. ಆಯೇಷಿಯ ಸೊಬಗಿಗೆ ಮರುಳಾಗಿ ಸಾಧುವೇಷವ ಧರಿಸಿದ ಆ ಭವಾನಸಿಂಗನು—ಇನ್ನು ಅಲ್ಪಾವಧಿಯಲ್ಲಿ ಮನೋರಥವನ್ನು ಪೂರ್ಣಪಡಿಸಿಗೊಳ್ಳುವೆನು, ಎಂಬ ಉಬ್ಬಿನಲ್ಲಿ ಕಾಲಕ್ರಮಿಸುತ್ತಿದ್ದನು; ಆದರೆ ಆತನ ದುಷ್ಟ ಹೇತುವು ಪೂರ್ಣವಾಗುವ ಯೋಗವು ಒದಗದ್ದರಿಂದ ಅವನಿಗೆ ಕಾರ್ಯದಲ್ಲಿಯ ವಿಜಯಪ್ರಾಪ್ತಿಯು ಕಣ್ಣಿಗೆ ಕಾಣಿಸುತ್ತಿದ್ದರೂ ಅನುಭವಕ್ಕೆ ಬಾರದಂತಾಯಿತು. ಮಾನಸಿಂಗನ ಬ್ರಹ್ಮಾಸ್ತ್ರದಲ್ಲಿ ಸಿಕ್ಕದ್ದರಿಂದ ಅವನ ಮನೋರಥವೆಲ್ಲ-ಪಟ್ಟಶ್ರಮವೆಲ್ಲ ವ್ಯರ್ಥವಾಯಿತು.

ಈ ಭವಾನಸಿಂಗನನ್ನು ಹಿಡಿದು ಮಾನಸಿಂಗನು ಮುಸಲ್ಮಾನ ಸರದಾರರ ಕೋಪಕ್ಕೆ ಕಾರಣನಾಗಬೇಕಾಯಿತು. ಯಾಕಂದರೆ ತಮ್ಮ ಧರ್ಮದ ಸಾಧುವನ್ನು ಮಾನಸಿಂಗನು ಹಿಡಿದು ಅವಮಾನಗೊಳಿಸಿದನೆಂಬದು ಆ ಸರದಾರರಿಗೆ ಸಹನವಾಗದಂತಾಯಿತು. ಈ ದೂರು ಅಕಬರನವರೆಗೂ ಹೋಯಿತು; ಆದರೆ ಮಾನಸಿಂಗನು ಈ ಕೆಲಸದಲ್ಲಿ ತಾನೇ ಮುಂದಾಗಿ ಹಿಡಿದುತಂದ ಬಾವಾಬೈರಾಗಿಗಳಲ್ಲಿ ಸ್ವಾಭಾವಿಕ ಬಾವಾಬೈರಾಗಿಗಳಾರು? ವೇಷಾಂತರದ ಬಾವಾಬೈರಾಗಿಗಳಾರು? ಎಂಬಧನ್ನು

ಶೋಧಿಸಲುಪಕ್ರಮಿಸಿದನು. ಮಾನಸಿಂಗನ ಈ ಶೋಧವೆಂದರೆ ಅತ್ಯಂತ ಕಠಿಣತರವಾದದ್ದು; ಬೇಕಾದ ವೇಷದಿಂದ ಅವನು ಪ್ರತಿಪಕ್ಷಿಯ ಹೃದಯು ವನ್ನು ಪರೀಕ್ಷಿಸಲು ಬಲ್ಲವನಾಗಿದ್ದನು.

ಭವಾನಸಿಂಗನಿಗೆ ಮಾನಸಿಂಗನ ಈ ಯೋಗ್ಯತೆಯ ವಿಷಯವಾಗಿ ಚೆನ್ನಾಗಿ ಅವಗತವಿದ್ದಿತು. ತಾನು ಈ ಹದ್ದಿನ ಕಣ್ಣಿನವನ ಕೈಯೊಳಗಿಂದ ಪಾರಾಗಲಾರೆನೆಂದು ಅವನು ಸಂಪೂರ್ಣವಾಗಿ ತಿಳಿದು ಬಿಟ್ಟದ್ದನು. ಅವನ ತಿಳುವಳಿಕೆಯು ವ್ಯರ್ಥವಾಗಲಿಲ್ಲ. ಮಾನಸಿಂಗನು ಆತನ ಹೃದ್ಗತ ವನ್ನು ತಿಳಿದು ಅವನು ಮುಸಲ್ಮಾನ ಸಾಧುವಲ್ಲೆಂಬದನ್ನು ಬೈಲಿಗೆಳೆದನು. ಆಗ ಮುಸಲ್ಮಾನ ಸರದಾರರ ಮೋರೆಗಳು ಬಾಡಿದವು. ಬಾದಶಹನು ನಮಗೆ ಏನು ಶಾಸನ ಮಾಡುವನೋ ಎಂದು ಚಿಂತಿಸತೊಡಗಿದರು. ಆಗ ಮಾನಸಿಂಗನು ಬಾದಶಹನ ಬಳಿಗೆ ಭವಾನಸಿಂಗನನ್ನು ಕರೆದೊಯ್ದು ಮುಸಲ್ಮಾನೀ ಧರ್ಮಾಂಧರಾದ ಈ ಸರದಾರರು ಹೀಗೆ ಗುಪ್ತಹೇರರಿಗೆ ಆಶ್ರಯಕೊಟ್ಟು ಮಾಳವಾ ರಾಜವಂಶೀಯರ ಪಲಾಯನಕ್ಕೆ ಮಾರ್ಗವ ಮಾಡಿ ಕೊಟ್ಟಿರುವರು. ನಾನು ಇಂಥ ನೀಚರನ್ನು ಸೆರೆ ಹಿಡಿದರೆ ನನ್ನ ಮೇಲೆಯೇ ಇವರು ಪ್ರತಿಹಲ್ಲೆ ಮಾಡಬಂದು ಖಾವಂದರವರಿಗೆ ನನ್ನ ಹರಲಿಯನ್ನು ಮಾಡಬಂದರು. ಹೀಗಾದರೆ ಈ ಮೊಗಲಸಾಮ್ರಾಜ್ಯವು ಮೂರುದಿನಗಳಲ್ಲಿ ಗೊತ್ತಿಗೆ ಹತ್ತುವದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂದಿನಿಂದ ನನಗೆ ಬಾದಶಾಹಿಯ ಈ ಯಾವ ಸೇವೆಯೂ ಬೇಕಿಲ್ಲ, ಎಂದು ನುಡಿದನು. ನಡೆದ ಪ್ರಸಂಗದಿಂದ ಅಕಬರಬಾದಶಹನು ಮುಸಲ್ಮಾನ ಸರದಾರರ ಮೇಲೆ ತುಂಬಾ ಸಿಟ್ಟಾಗಿದ್ದನು. ಇಂಥದ ರಲ್ಲಿ ಮಾನಸಿಂಗನು ಹೀಗೆ ನುಡಿಯಲು, ಆತನ ರೌದ್ರತೆಯು ಮತ್ತಿಷ್ಟು ಹೆಚ್ಚಿತು. ಇನ್ನು ಆತನು ಮುಸಲ್ಮಾನ ಸರದಾರರನ್ನೆಲ್ಲ ಈಗಲೇ ಆನೆಯ ಕಾಲಲ್ಲಿ ತುಳಿಸಿ ಬಿಡುವನೋ ಎಂಬ ಹಾಗೆ ತೋರಿದನು. ಆಗ ಸರದಾರ ರೆಲ್ಲರೂ ಗಾಬರಿಯಾಗಿ ಮಾನಸಿಂಗನ ಕ್ಷಮೆ ಯಾಚಿಸತೊಡಗಿದರು. ಮಾನಸಿಂಗನು ವಿಶ್ವಪ್ರಯತ್ನದಿಂದ ಬಾದಶಹನ ಸಿಟ್ಟು ಇಳಿಸಿ ಸರದಾರ ರಿಗೆ ಜೀವದಾನ ಕೊಡಿಸಬೇಕಾದರೆ ಆತನಿಗೆ ಸಾಕು ಸಾಕಾಗಿ ಹೋಯಿತು. ಭವಾನಸಿಂಗನನ್ನು ನಂಬಿದ ಆ ಸರದಾರರು ತಮ್ಮ ಕಿವಿಗಳನ್ನು ತಾವೇ ಹಿಂಡಿಕೊಂಡು ಮಾನಸಿಂಗನ ದಯೆಗೆ ಪಾತ್ರರಾಗಿ ಬದುಕಿ ಉಳಿದದ್ದೇ

ಪುನರ್ಜನ್ಮವೆಂದು ನುಡಿಯುತ್ತ ಮನೆಗೆ ಹೊರಟು ಹೋದರು.

ಇಷ್ಟೆಲ್ಲ ಅನರ್ಥಕ್ಕೆ ಕಾರಣನಾದ ಭವಾನಸಿಂಗನು ಮಹಾ ಅಪರಾಧಿಯೆಂದು ತಿಳಿಯಲ್ಪಟ್ಟು ದೇಹಾಂತ ಶಿಕ್ಷೆಗೆ ಗುರಿಯಾದನು. ಆಯೇಷೆ ಎಂಬ ಹೆಣ್ಣಿಗೆ ಮರುಳಾಗಿ ಬಂದು ಅವನು ಲೋಕಾಂತರಕ್ಕೇ ತೆರಳಬೇಕಾಯಿತು. ಪರಹೆಣ್ಣಿಗೆ ಮರುಳಾದ ದುರ್ಜನರ ಬಾಳು ಹೀಗೆಯೇ ಸರಿ! ಇರಲಿ.

ಅಕಬರನು ಮಾನಸಿಂಗನನ್ನು ಬಹಳವಾಗಿ ಪ್ರೋತ್ಸಾಹಿಸಿದನು. ಅವನ ಗೌರವವು ಮೊದಲಿನಕ್ಕಿಂತಲೂ ಹೆಚ್ಚಾಯಿತು. ಸಾಮ್ರಾಜ್ಯದ ಹಿತಕರ್ತನೆಂದು ಹೊಸಹೊಸ ಜಹಾಗೀರುಗಳು ಬಾದಶಹನಿಂದ ಕೊಡಲ್ಪಟ್ಟವು. ಈ ಪಾರಿತೋಷಕದಿಂದ ಮಾನಸಿಂಹನು ಮತ್ತಿಷ್ಟು ಉಬ್ಬಿದನು. ಮಾಳವಾರಾಜವಂಶೀಯರು ಎಲ್ಲಿದ್ದರೂ ಹಿಡಿದು ತರಿಸುವೆನು, ಎಂದು ಮನದಲ್ಲಿ ನಿಶ್ಚಯಿಸತೊಡಗಿದನು. ಹೀಗೆ ಆತನು ನಿಶ್ಚಯಿಸುತ್ತಿರಲು, ಜಾಸೂದನು ಅವಸರದಿಂದ ಒಳಗೆ ಬಂದು, ಸರಕಾರದ ಭೆಟ್ಟಿಗಾಗಿ ಮಾಳವಾಪ್ರಾಂತದಿಂದ ಒಬ್ಬ ಹೇಜೀಬನು ಬಂದಿರುವನು ಎಂದು ಬಿನ್ನವಿಸಿದನು. ಮಾನಸಿಂಗನು ಆತನನ್ನು ಒಳಗೆ ಬಿಡಲು ಅಪ್ಪಣೆಕೊಟ್ಟು ಹೇಜೀಬನು ಯಾವ ಸುದ್ದಿಯನ್ನು ತಂದಿರುವನೋ ಎಂದು ಯೋಚಿಸತೊಡಗಿದನು. ಅಷ್ಟರಲ್ಲಿ ಹೇಜೀಬನು ಬಂದು ಕುರ್ನಿಸ ಮಾಡಿ—ಸರಕಾರ! ಮಾಳವಾಪ್ರಾಂತವು ನಮ್ಮ ಕೈಬಿಟ್ಟಿತು ಎಂತು ಖಿನ್ನಮುಖದಿಂದ ನುಡಿದನು. ಆ ಸಂಗತಿಯನ್ನು ಕೇಳಿ ಮಾನಸಿಂಗನು ಆ ಏನಂದಿ? ನೆಟ್ಟಗೆ ಹೇಳು ಸುಭೇದಾರನು ಪತ್ರ ಕೊಟ್ಟಿರುವನೇನು? ಎಂದು ಕೇಳಿದನು. ಆಗ ಹೇಜೀಬನು:—ರಜಪೂತರೆಲ್ಲರೂ ಒಟ್ಟುಗೂಡಿ ವೀರಸಿಂಹಮಹಾರಾಜನನ್ನು ಮುಂದೆ ಮಾಡಿಕೊಂಡು ರಾಜಧಾನಿಗೆ ಮುತ್ತಿಗೆಹಾಕಿದ ಸಂಗತಿಯನ್ನೂ, ಮೊಗಲ ಸೈನ್ಯವು ಪರಾಜಯ ಹೊಂದಿದ ಸಂಗತಿಯನ್ನೂ ಒಂದೂ ಬಿಡದಂತೆ ಹೇಳಿದನು. ಮಾನಸಿಂಗನು ಒಂದು ದೀರ್ಘಶ್ವಾಸವನ್ನು ಬಿಟ್ಟು, ಮುಸಲ್ಮಾನ ಸರದಾರರೇ ಇಷ್ಟೆಲ್ಲ ಅನರ್ಥಕ್ಕೆ ಕಾರಣರಾದರು. ನಮ್ಮ ಸೆರೆಯಲ್ಲಿದ್ದ ಚಂದ್ರಪಾಲನೇ ವೀರಸಿಂಹನಿರಬೇಕು. ಸುಭೇದಾರನು ಕೂಡಾ ಯುದ್ಧದಲ್ಲಿ ಮಡಿದು ಹೋದದ್ದರಿಂದ ಮೊಗಲ ಸೈನಿಕರು ಬಹಳ ಕಷ್ಟಕ್ಕೊಳಗಾಗಿ ದಾರಿಸಿಕ್ಕತ್ತ ಓಡಿರಬಹುದು. ಇರಲಿ; ಈ ರಜಪೂತರ ಸೊಕ್ಕು ಇನ್ನೂ ಅಡಗಿದಂತೆ ತೋರುವದಿಲ್ಲ. ಈಗಲೇ ಬಾದ

ಶಹನ ಬಳಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಅರುಹಿ, ದೊಡ್ಡ ಸೈನ್ಯದೊಡನೆ ನಾನೇ ದಂಡೆತ್ತಿಹೋಗಿ ಅವರ ಪಾರುಪತ್ಯ ಮಾಡಿ ಬರುವೆನು, ಎಂದು ನುಡಿದು ಹೇಜೀಬನಿಗೆ ವಿಶ್ರಾಂತಿಗಾಗಿ ಅಪ್ಪಣೆಕೊಟ್ಟು ರಾಜಪುತ್ರರ ಈ ವಿಜಯದ ವಿಷಯದಲ್ಲಿ ಬಾದಶಹನೊಡನೆ ಮಂತ್ರಾಲೋಚನೆಗಾಗಿ ಹೊರಟು ಹೋದನು.

೧೮—ಮೊಗಲರ ಪೂರ್ಣ ಪರಾಜಯ.

ಮಾನಸಿಂಗನು ತುಂಬಾ ಬಲಗರ್ವಿತನಾಗಿದ್ದನು. ತನ್ನ ಸಮಾನ ಶೂರರೂ, ಬುದ್ಧಿಶಾಲಿಗಳೂ ಇನ್ನಾರೂ ಇಲ್ಲವೆಂದು ತಿಳಿದಿದ್ದನು. ಅದರಲ್ಲಿ ಮಾಳವಾ ಪ್ರಾಂತವನ್ನು ಪುನಃ ಕೈವಶಮಾಡಿಕೊಳ್ಳಲಿಕ್ಕೆ ಬಾದಶಹನು ತನಗೇ ಅಪ್ಪಣೆಕೊಟ್ಟದ್ದರಿಂದಂತೂ ಅವನ ಆ ಗರ್ವವು ಮತ್ತಿಷ್ಟು ಹೆಚ್ಚಾಯಿತು. ಈ ಗರ್ವಭರದಲ್ಲಿ ಅವನು ಬಾದಶಹನ ಮುಂದೆ ಮಾಳವಾ ಪ್ರಾಂತವನ್ನು ಕೈವಶಮಾಡಿಕೊಂಡೇ ಬರುತ್ತೇನೆಂದು ನುಡಿದು, ವೀಳ್ಯವನ್ನೆತ್ತಿ ಯುದ್ಧದ ಸೌರಣೆಯನ್ನು ನಡಿಸಿದನು. ರಜಪೂತರೆಂದರೆ ಅವನ ಲಕ್ಷದಲ್ಲಿಯೇ ಇದ್ದಿಲ್ಲ ಆದರೂ ಅವನು ರಜಪೂತರ ಸೈನ್ಯದ ಇಮ್ಮಡಿ ಸೈನ್ಯವನ್ನು ತಕ್ಕೊಂಡು ಒಳ್ಳೇ ಹುರುಪಿನಿಂದ ಮಾಳವಾದ ಮೇಲೆ ಸ್ವಾರೀ ಮಾಡಿದನು.

ಇತ್ತ ಮಾಳವಾ ರಾಜಧಾನಿಯನ್ನು ಕೈವಶ ಮಾಡಿಕೊಂಡ ವೀರಸಿಂಹನು ರಣಜಿತಸಿಂಗ ಇವರೇ ಮೊದಲಾದ ಪ್ರಮುಖ ಸರದಾರರ ಸಹಾಯ್ಯದಿಂದ ಮಾಳವಾಪ್ರಜೆಗಳನ್ನು ಹುರಿದುಂಬಿಸಿ ಅವರ ಸೈನ್ಯವನ್ನು ಕೂಡಿಸಿದನು. ರಜಪೂತರು ಸ್ವಾಭಿಮಾನಿಗಳು, ಸ್ವಾತಂತ್ರ್ಯಪ್ರಿಯರು ಎಂಬ ಮಾತನ್ನು ಸಿದ್ಧವಾಗ ಮಾಡಿ ತೋರಿಸಿದರು ಹಾ ಹಾ ಅನ್ನುವಷ್ಟರಲ್ಲಿ ಅರವತ್ತು ಸಾವಿರ ಸೈನ್ಯವು ಸಿದ್ಧವಾಯಿತು. ಪ್ರತಿಯೊಬ್ಬ ರಜಪೂತನು ತನ್ನ ಮಕ್ಕಳು ದೊಡ್ಡವರಾದ ಕೂಡಲೆ ಅವರಿಗೆ ಯುದ್ಧ ಶಿಕ್ಷಣವನ್ನು ಕೊಡುತ್ತಿದ್ದನು. ಅವರು ಪ್ರಾಯಕ್ಕೆ ಬರುವಷ್ಟರಲ್ಲಿ ಅವರಿಗೆ ಯುದ್ಧಶಿಕ್ಷಣವು ಪೂರ್ಣವಾಗುತ್ತಿತ್ತು. ಆದ್ದರಿಂದ ಆಗಿನ ಕಾಲದಲ್ಲಿ ಸೈನಿಕರಿಗೆ ಕೊರತೆ

ಯಾಗುತ್ತಿರಲಿಲ್ಲ. ಯುದ್ಧಕಲೆಯಲ್ಲಿ ನಿಪುಣರಾದ ಬೇಕಾದಷ್ಟು ಜನರು ಬೇಕಾದಾಗ ದೊರೆಯುತ್ತಿದ್ದರು ಈಗ ವೀರಸಿಂಹಮಹಾರಾಜನಿಗೆ ಸಹಾಯ ಮಾಡುವದೆಂದರೆ ಸ್ವಾತಂತ್ರ್ಯದೇವತೆಯ ಆರಾಧನೆಯೇ ಆದಂತಾಗಿತ್ತು. ಮಾಳವಾಭೂಮಾತೆಯ ಗೌರವವನ್ನು ಕಾಯುವದಾಗಿತ್ತು. ಅಂದಬಳಿಕ ಯುದ್ಧಕಲಾವಿಶಾರದರಾದ ರಜಪೂತರೆಲ್ಲರೂ ವೀರಸಿಂಹ ಮಹಾರಾಜರ ಸೈನ್ಯವನ್ನು ಕೂಡಿಕೊಂಡರು.

ಮಾಳವಾ ರಾಜಧಾನಿಯು ಕೈಬಿಟ್ಟಿತೆಂಬ ಸುದ್ದಿಯು ಹತ್ತುವದೊಂದೇ ತಡ, ಅಕಬರನು ಹೆಬ್ಬಲದೊಂದಿಗೆ ರಾಜಧಾನಿಗೆ ಮುತ್ತಿಗೆ ಹಾಕುವನೆಂದು ತಿಳಿದು, ರಜಪೂತರು ಆ ಮೊಗಲರ ಅಬ್ಬರಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕೆಂದು ರಾಜಧಾನಿಯಲ್ಲಿ ಒಳ್ಳೇ ಸಿದ್ಧತೆಯನ್ನು ನಡಿಸಿದರು. ಅಸಂಖ್ಯ ಖಡ್ಗ-ಢಾಲು-ಭಲ್ಲೆ ಮೊದಲಾದ ಉಪಕರಣಗಳು ಸಿದ್ಧವಾದವು ಕೋಟೆಯಲ್ಲಿ ಅನ್ನಸಾಮಗ್ರಿಯು ವಿಪುಲವಾಗಿ ಸಂಗ್ರಹಿಸಲ್ಪಟ್ಟಿತು. ಶತ್ರುಸೈನ್ಯಕ್ಕೆ ಆಹಾರವು ಸಿಗದಂತೆ ವೀರಸಿಂಹನು ಒಳ್ಳೇ ದಕ್ಷತೆಯಿಂದ ವ್ಯವಸ್ಥೆ ಮಾಡಿದನು. ತಂದೆಯು ವೀರನಲ್ಲವೆಂದು ಭಾವಿಸಿದ್ದ ತರುಣನಾದ ನಂದಕುಮಾರನು ಈಗ ಆತನ ಚಟುವಟಿಕೆಯನ್ನು ಕಂಡು ದಂಗಾಗಿ ಹೋದನು.

ಮಾಳವಾ ರಾಜಧಾನಿಗೆ ಅಭಿಮುಖವಾಗಿ ಹೊರಟ ಮಾನಸಿಂಹನು ಒಂದೆರಡು ದಿನಗಳ ದಾರಿಯನ್ನು ನಡಿಯುವಷ್ಟರಲ್ಲಿಯೇ ದಾರಿಯಲ್ಲಿ ಆತನಿಗೆ ಕೃಷ್ಣಮುಖದಿಂದ ಹಿಂತಿರುಗಿದ ಮೊಗಲ ಸೈನ್ಯದ ಅವಶಿಷ್ಟ ಭಾಗವು ಭೆಟ್ಟಿಯಾಯಿತು ಆ ಜನರು ಮಾನಸಿಂಗನ ಬಳಿಗೆ ಬಂದು ವಿದ್ಯಮಾನ ಸಂಗತಿಗಳನ್ನೆಲ್ಲ ತಿಳಿಸಿದರು. ಹೇಜೀಬನು ಹೇಳಿದ ಸಂಗತಿಗಳಿಗಿಂತ ಹೆಚ್ಚಿನ ಸಂಗತಿಯು ಈ ಜನರಿಂದ ತಿಳಿಯಲು, ಮಾನಸಿಂಹನು ಸ್ವಲ್ಪ ವಿಚಾರಮಗ್ನನಾದನು. ದಿಲ್ಲಿಯಲ್ಲಿ ಹೊರಡುವಾಗ ಈ ಮಾಳವಾ ರಜಪೂತರನ್ನು ಎಷ್ಟು ಸುಲಭವಾಗಿ ಗೆಲ್ಲಬಹುದೆಂದು ಭಾವಿಸಿದ್ದನೋ ಈಗ ಆ ಕೆಲಸವು ಅಷ್ಟು ಸುಲಭವಲ್ಲೆಂದು ಕಂಡುಬರತೊಡಗಿತು. ರಜಪೂತರ ಸೈನ್ಯಭರತಿಯ ಪ್ರಮಾಣವು ದಿನ-ದಿನಕ್ಕೆ ಬೆಳೆಯ ಹತ್ತಿದೆಯೆಂಬ ವಿಶ್ವಸನೀಯವಾದ ಸುದ್ದಿಯಿಂದ ಅವನು ಹೀಗೆ ಚಿಂತೆಗೆ ಒಳಗಾಗಬೇಕಾಯಿತು. ಬಳಿಕ ಅವನು ಪರಾಜಿತರಾಗಿ ಬಂದ ಸೈನಿಕರಿಗೆ ಧೈರ್ಯವ ಹೇಳಿ

ಒಬ್ಬ ಹೇಜೀಬನ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟು, ಬಾದಶಹನಿಗೆ ಮುಟ್ಟಸೆಂದು ಆಜ್ಞೆ ಮಾಡಿದನು. ಆ ಪತ್ರದಲ್ಲಿ ಸಹಾಯಕ್ಕಾಗಿ ಇನ್ನೂ ಮೂವತ್ತುಸಾವಿರ ಸೈನ್ಯವನ್ನು ಕಳುಹಿಸಬೇಕೆಂದು ಪ್ರಾರ್ಥಿಸಿದ್ದನು. ಈ ಪ್ರಕಾರ ಸಹಾಯಕ ಸೈನ್ಯವು ಬರುವಂತೆ ವ್ಯವಸ್ಥೆಮಾಡಿ ಆತನು ಮುಂದಕ್ಕೆ ಪ್ರಯಾಣ ಬೆಳಿಸಿದನು.

* § * § *

ಮಾನಸಿಂಹನ ಸೈನ್ಯವು ಮಾಳವಾ ರಾಜಧಾನಿಯ ಬಳಿಯಲ್ಲಿ ತಳ ವೂರಿತು. ಕೋಟೆಗೆ ಬಲವಾದ ಮುತ್ತಿಗೆಯನ್ನಿಕ್ಕಿ ಒಳಗಿನ ರಜಪೂತರನ್ನು ಹಣ್ಣಿಗೆ ತರಬೇಕೆಂದು ಆತನ ಆಶಯವಾಗಿತ್ತು; ಆದರೆ ಶತ್ರುವು ಆರು ತಿಂಗಳ ವರೆಗೆ ಮುತ್ತಿಗೆಯನ್ನಿಕ್ಕಿದರೂ ತಮಗೆ ಯಾವಬಗೆಯ ತೊಂದರೆ ಯಾಗದಂತೆ ವ್ಯವಸ್ಥೆ ಮಾಡಿಕೊಂಡಿದ್ದ ರಜಪೂತರು ಮಾನಸಿಂಹನ ಮುತ್ತಿಗೆಗೆ ಸೊಪ್ಪುಹಾಕಲಿಲ್ಲ. ಮಾನಸಿಂಹನು ಒಂದುತಿಂಗಳ ವರೆಗೆ ಮುತ್ತಿಗೆಯನ್ನಿರಿಸಿದರೂ ಪ್ರಯೋಜನವಿಲ್ಲದೆ ಹೋಯಿತು. ಅಷ್ಟರಲ್ಲಿ ಬಾದಶಹನಿಂದ ಬರತಕ್ಕ ಸಹಾಯಕದಂಡು ಅವನನ್ನು ಸೇರಿತು. ತನ್ನಲ್ಲಿದ್ದ ಸೈನ್ಯದ ಸಂಖ್ಯೆಯು ಇಮ್ಮಡಿಯಾದದ್ದರಿಂದ ಅವನಿಗೆ ಇನ್ನು ಮುಂದೆ ಹೀಗೆ ಮುತ್ತಿಗೆಯನ್ನಿರಿಸುವದರಲ್ಲಿ ಪ್ರಯೋಜನವಿಲ್ಲೆಂದು ಕಂಡುಬಂದಿತು. ಕೋಟೆಗೆ ಸುರಂಗಹಾಕಿ, ಇಲ್ಲವೆ ತೋಫನ್ನು ಹಚ್ಚಿ ಅದನ್ನು ಒಡೆದು, ಒಳ ನುಗ್ಗಬೇಕೆಂದು ಯೋಚಿಸಿದನು ಕೊನೆಗೆ ಅವನು ಇದೇ ಮಾತನ್ನೇ ನಿರ್ಧರಿಸಿದನು.

ರಾಜಕರಣದಲ್ಲಿ ಗುಪ್ತಸಂಗತಿಗಳನ್ನು ತಿಳಿದುಕೊಳ್ಳುವದರಲ್ಲಿಯೇ ವಿಶೇಷ ಮಹತ್ವವಿರುತ್ತದೆ ಅದರಲ್ಲಿಯೂ ಯುದ್ಧದ ಪ್ರಸಕ್ತಿಯು ನಡೆದಾಗ ಗುಪ್ತಸಂಗತಿಗಳ ಅರಿವು ಆದಷ್ಟು ಹೆಚ್ಚು ಪ್ರಯೋಜನವಾಗುತ್ತದೆ. ಗುಪ್ತಹೇರರ ಕೆಲಸದಲ್ಲಿ ಒಳ್ಳೇ ನಿಷ್ಣಾತನಾದ ಕೀರ್ತಿಸಿಂಹನು ಈ ಕೆಲಸವನ್ನು ತಾನೇ ಕೈಕೊಂಡು ಮಾನಸಿಂಹನ ಸೈನ್ಯದಲ್ಲಿಯ ಗುಪ್ತ ಸಂಗತಿಗಳ ಜ್ಞಾನವನ್ನು ವೀರಸಿಂಹನಿಗೆ ಮಾಡಿಕೊಡುತ್ತಿದ್ದನು ಮಾನಸಿಂಹನ ಸೈನ್ಯದ ಸಂಖ್ಯೆಯೆಷ್ಟು? ಸೈನಿಕರಲ್ಲಿ ಹುರುಪು ಎಷ್ಟರಮಟ್ಟಿಗಿರುವದು! ಆಹಾರದ ಸಾಮುಗ್ರಿಯೆಷ್ಟಿದೆ? ಎಂಬ ಎಲ್ಲ ಸಂಗತಿಗಳನ್ನು ತಿಳಿದು ಆಗಾಗ್ಗೆ ಕೋಟೆಯೊಳಗಿನವರಿಗೆ ತಿಳಿಸುತ್ತಿದ್ದನು; ಆದರೆ ಈ ದಿನ

ಮಾನಸಿಂಹನು ತನ್ನ ವಿಶ್ವಾಸುಕ ಸರದಾರರೊಡನೆ ಆಲೋಚಿಸಿದ ಈ ಸಂಗತಿಯನ್ನು ಕೀರ್ತಿಸಿಂಹನು ಹ್ಯಾಗೆ ತಿಳಿದುಕೊಂಡನೋ ಏನೋ ಕೂಡಲೆ ಅವನು ಆ ಸಂಗತಿಯನ್ನು ಕೋಟೆಯೊಳಕ್ಕೆ ತಿಳಿಸಿದ್ದಲ್ಲದೆ ನಾಳೆಗೆ ಬೆಳಗಿನಲ್ಲಿ ಮೂವತ್ತು ಸಾವಿರ ಸೈನಿಕರು ಕೋಟೆಯ ಬಾಗಿಲತೆರೆದು ಹೊರ ಬಿದ್ದು ಶತ್ರುಗಳ ಮೈಮೇಲೆ ಬೀಳಬೇಕೆಂದು ಸೂಚಿಸಿದನು ವೀರಸಿಂಹನು ಕೀರ್ತಿಸಿಂಹನ ಈ ಸೂಚನೆಯನ್ನು ಆಲೋಚಿಸಿ ರಣಜಿತಸಿಂಗ-ರಣಮಲ್ಲ ಮೊದಲಾದವರಿಗೂ ಹೇಳಿದನು. ಅವರೆಲ್ಲರೂ ಈ ಸಂಗತಿಯನ್ನು ಬಹು ವಿಧವಾಗಿ ಯೋಚಿಸಿ ಆತನು ಹೀಗೆಯೇ ಯೋಚಿಸಿ ಈ ಸೂಚನೆಯನ್ನು ಮಾಡಿರಬೇಕು. ಹೀಗೆ ಹೀಗೆ ಆಚರಿಸಿದರೇ ನಮಗೆ ಜಯವು ತಪ್ಪದೆ ದೊರಕುವದು, ಎಂದು ನಿರ್ಧರಿಸಿದರು. ಹಲವು ಯುದ್ಧಗಳಲ್ಲಿ ನುರಿತ ವೀರಸಿಂಹ-ರಣಜಿತಸಿಂಗ ಮೊದಲಾದವರಿಗೆ ಕೀರ್ತಿಸಿಂಹನ ಆಶಯ ತಿಳಿಯಲಿಕ್ಕೆ ಹೆಚ್ಚು ಅವಕಾಶ ಹಿಡಿಯಲಿಲ್ಲ. ಅವರು ಅದರಂತೆ ವರ್ತಿಸುವದನ್ನು ನಿಶ್ಚಯಿಸಿ ರಣಜಿತಸಿಂಗನೇ, ಹೊರಬೀಳುವ ಸೈನ್ಯಕ್ಕೆ ಸೇನಾನಾಯಕನಾಗಬೇಕೆಂದು ಗೊತ್ತುಪಡಿಸಿದರು. ಮತ್ತು ಮೂವತ್ತುಸಾವಿರ ಸೈನ್ಯಕ್ಕೆ ಬೆಳಗಾಗುವಷ್ಟರಲ್ಲಿ ಕೋಟೆಯಿಂದ ಹೊರಬೀಳುವಂತೆ ಸುಸಜ್ಜಿತರಾಗಿರಬೇಕೆಂದು ಅಪ್ಪಣೆ ಮಾಡಿದರು.

ರಣಜಿತಸಿಂಗನು ಒಳ್ಳೇಯೋದ್ಧಾಪುರುಷನಾಗಿದ್ದನು. ಹಿಂದಕ್ಕೆ ಅಕಬರನು ಮುತ್ತಿಗೆ ಹಾಕಿದಾಗ ಮಹಾರಾಜನ ಹುಂಬ ಸಾಹಸದಿಂದ ಲಾಗ ತಪ್ಪಿ ಇಂಥ ಯೋದ್ಧಾಪುರುಷರ ಪೌರುಷವು ಪ್ರಕಟವಾಗುವದಕ್ಕೆ ತಡೆಯುಂಟಾಗಿತ್ತು. ಇದರ ಅರಿವು ವೀರಸಿಂಹನಿಗೆ ಚನ್ನಾಗಿ ಇದ್ದದರಿಂದ ಅವನು ಈ ವೇಳೆಯಲ್ಲಿ ಒಳ್ಳೇ ಸಾವಧಾನದಿಂದ ನಡೆಯಬೇಕಾಗಿತ್ತು. ಆದ್ದರಿಂದ ಅವನು ರಣಜಿತಸಿಂಗನಿಗೇ ಸೈನ್ಯಾಧಿಪತ್ಯವನ್ನು ಕೊಟ್ಟು ತಾನು ಉಳಿದ ಸರದಾರರೊಡನೆ ಕೋಟೆಯ ಸಂರಕ್ಷಣೆಯ ಕಡೆಗೆ ದಕ್ಷತೆಯನ್ನು ವಹಿಸಿದನು.

ಸಂಕೇತದಂತೆ ಅರುಣೋದಯ ಸಮಯಕ್ಕೆ ರಜಪೂತ ಸೈನ್ಯವು ಕೋಟೆಯಿಂದ ಹೊರಬಿದ್ದಿತು. ರಜಪೂತರು ಈ ದಿನ ತಮ್ಮೊಡನೆ ಕಾಳಗ ನಡಿಸುವರೆಂಬ ಅರಿವು ಮೊಗಲಸೈನ್ಯಕ್ಕಿದ್ದಿಲ್ಲ. ಆದ್ದರಿಂದ ಅದು ಅಸಾವಧಸ್ಥಿತಿಯಲ್ಲಿದ್ದಿತು. ಮಧ್ಯರಾತ್ರಿಯಲ್ಲಿ ರಜಪೂತರು ಕೋಟೆಯಿಂದ

ಹೊರಬಿದ್ದು, ಶತ್ರುಗಳ ಮೈಮೇಲೆ ಬಿದ್ದಿದ್ದರೆ ಮೊಗಲಸೈನ್ಯದಲ್ಲಿ ಒಬ್ಬನೂ ಜೀವದಿಂದ ಪಾರಾಗಿ ಹೋಗುವಂತಿದ್ದಿಲ್ಲ; ಆದರೆ ಹೀಗೆ ಮಾಡುವದು ಧರ್ಮಯುದ್ಧವಲ್ಲೆಂದು ರಜಪೂತರು ತಿಳಿಯುತ್ತಿದ್ದ[illegible] ಕೆಲಸಕ್ಕೆ ಅವರು ಮನಸ್ಸು ಮಾಡಲಿಲ್ಲ. ಶತ್ರುವು ಎಚ್ಚತ್ತಿರಬೇ[illegible] ಅವನು ಖಡ್ಗಧಾರಿಯಾಗಿರಬೇಕು. ಅಂದರೇ ಅವನೊಡನೆ ಮಾಡಿದ ಯುದ್ಧವು ಧರ್ಮಯುದ್ಧವೆನಿಸುವದು, ಎಂದು ಅವರು ತಿಳಿಯುತ್ತಿದ್ದರು. ತಮ್ಮ ಈ ತಿಳುವಳಿಕೆಗೆ ಸರಿಯಾಗಿಯೇ ರಜಪೂತರು ಬೆಳಗಾದ ಬಳಿಕ ಯುದ್ಧವನ್ನು ಸಾರಿದರು. ರಜಪೂತರು ಕೋಟೆಯಿಂದ ಹೊರಬೀಳುವಾಗ ಗರ್ಜಿಸಿದ ರಣಗರ್ಜನೆಗೆ ಮೊಗಲಸೈನಿಕರು ಸಾವಧರಾಗಿ ಖಡ್ಗಧಾರಿಗಳಾಗಿ ಶತ್ರುಗಳ ಮೇಲೆ ಬೀಳುವ ಹವಣಿಕೆಯಲ್ಲಿದ್ದರು. ಗುಪ್ತವೇಷಧಾರಿಯಾದ ಕೀರ್ತಿಸಿಂಹನು ಅಶ್ವಾರೂಢನಾಗಿ ರಣಜಿತಸಿಂಗನಿಗೆ ಸಹಾಯಕನಾದನು. ಹಾ-ಹಾ ಅನ್ನುವಷ್ಟರಲ್ಲಿ ರಜಪೂತಸೈನ್ಯಕ್ಕೂ, ಮೊಗಲಸೈನ್ಯಕ್ಕೂ ಕೈಗೆಕೈಹತ್ತಿ ಕಾಳಗಕ್ಕೆ ಪ್ರಾರಂಭವಾಯಿತು.

ಕೀರ್ತಿಸಿಂಹನು ಮೊಗಲಸೈನ್ಯವನ್ನೆಲ್ಲ ಸಂಪೂರ್ಣವಾಗಿ ನಿರೀಕ್ಷಿಸಿದ್ದರಿಂದ ತನ್ನ ಯೋಜನೆಯು ಸಫಲವಾಗಬೇಕೆಂದು ತಮ್ಮ ರಜಪೂತ ಸೈನ್ಯವನ್ನು ಮೊಗಲರೊಡನೆ ಕಾದುತ್ತ ಕಡೆಯ ಉಕ್ಕಡಕ್ಕೆ ಒಯ್ದನು. ರಜಪೂತರು ಹೀಗೇಕೆ ಮಾಡಿದರೆಂಬ ರಹಸ್ಯವು ಮೊಗಲ ಸೇನಾಧಿಪತಿಗೆ ಹೊಳೆಯಲಿಲ್ಲ. ಮಾನಸಿಂಗನು ಸುರಂಗಹಾಕುವ ಎತ್ತುಗಡೆಗಾಗಿ ರಾತ್ರಿಯಲ್ಲಿಯೇ ಗಡದ ಪಶ್ಚಿಮಭಾಗಕ್ಕೆ ಹೋದದ್ದರಿಂದ ಅವನು ಯುದ್ಧಪ್ರಾರಂಭವಾದಾಗ ಸೈನ್ಯದಲ್ಲಿರಲಿಲ್ಲ.

ಆಗ ಮೊಗಲ ಸೇನಾಧಿಪತಿಯು ಮನದಲ್ಲಿ ಇಂತು ಯೋಚಿಸಿದನು: “ಶತ್ರುಗಳು ಕೋಟೆಯನ್ನು ತೆರವುಮಾಡಿ ಓಡಿಹೋಗುವ [illegible]ಸದ್ದದ್ದರಿಂದ ಅವರು ಹೀಗೆ ಆಚರಿಸಿದಂತೆ ತೋರುತ್ತಿದೆ. ನಾ[illegible] ಕೆಲ ಸೈನ್ಯದೊಡನೆ ಮೇಲೇರಿ ಹೋದರೆ ಕೋಟೆಯು ನನಗೆ [illegible]ನಾಯಾಸವಾಗಿ ಕೈಸೇರುವದು. ಶತ್ರುಗಳು ನಮ್ಮ ಕೈಯಲ್ಲಿಯೇ [illegible]ದ್ದರಿಂದ ಅವರು ಓಡಿಹೋಗುವದಂತೂ ಅಶಕ್ಯವೇ ಸರಿ!”

ಈ ಮೇರೆಗೆ ಯೋಚಿಸಿ ಆ ಸೇನಾನಾಯಕನು [illegible] ಸೈನಿಕರಿಗೆ ಅಪ್ಪಣೆ ಮಾಡಿದನು. ಆ ಸೈನಿಕರಲ್ಲಿ ಕೆಲವರು ಶತ್ರುಸೈ[illegible] ಕಾದಾಡ

ಲಾರಂಭಿಸಿದರು. ಕೆಲವರು ದೀನ! ದೀನ! ಎಂದು ಗರ್ಜಿಸುತ್ತ ಗುಡ್ಡ ವನ್ನೇರಿ ಕೋಟೆಯ ಹೆಬ್ಬಾಗಿಲ ವರೆಗೆ ಸಾಗಿಹೋದರು. ಅಲ್ಲಿ ರಜಪೂತ ಸೈನ್ಯವು ಶತ್ರುಗಳ ನಿರೀಕ್ಷಣೆಯಲ್ಲಿಯೇ ಇದ್ದಿತು. ಆಗ ವೀರಸಿಂಹನು ರಣಮಲ್ಲನಿಗೆ ಇಪ್ಪತ್ತುಸಾವಿರ ಸೈನ್ಯದೊಡನೆ ಶತ್ರುಗಳ ಮೈಮೇಲೆ ಬೀಳ ಲಿಕ್ಕೆ ಅಪ್ಪಣೆ ಕೊಟ್ಟನು; ಮತ್ತು ಉಳಿದ ಹತ್ತುಸಾವಿರ ಸೈನ್ಯವನ್ನು ಕೋಟೆಯಲ್ಲಿರಿಸಿ, ಕೋಟೆಯಲ್ಲಿ ಶತ್ರುಸೈನ್ಯವು ನುಗ್ಗದಂತೆ ವ್ಯವಸ್ಥೆಯ ನ್ನಿಡುವದಕ್ಕೆ ನಂದಕುಮಾರನಿಗೆ ಆಜ್ಞಾಪಿಸಿದನು. ಅಪ್ಪಣೆಯ ಮೇರೆಗೆ ರಣಮಲ್ಲನು ಇಪ್ಪತ್ತುಸಾವಿರ ಸೈನ್ಯದೊಡನೆ ಮೊಗಲರ ಮೇಲೆ ಬಿದ್ದನು. ರಜಪೂತರ ಈ ಬಗೆಯ ವ್ಯವಸ್ಥೆಯಿಂದ ಮೊಗಲ ಸೈನ್ಯವು ಗಾಬರಿಯಾ ಯಿತು. ಸೇನಾಪತಿಯು ಕೈಕಾಲಬಿಟ್ಟನು. ಇನ್ನೂ ಕೋಟೆಯಲ್ಲಿ ಶತ್ರು ಸೈನ್ಯವು ಎಷ್ಟಿದೆಯೋ ಎಂಬದು ಅವನಿಗೆ ತಿಳಿಯದಾಯಿತು ತಾನು ಹೀಗೆ ಮಾಡಿದ್ದು ಅನುಚಿತವೆಂದು ಅವನಿಗೆ ತುಂಬಾ ಪಶ್ಚಾತ್ತಾಪವಾಯಿತು; ಆದರೆ ಪ್ರಸಂಗವು ಮೈಮೇಲೆ ಬಂದದ್ದರಿಂದ ಹೆಚ್ಚಿನ ವಿಚಾರಕ್ಕೆ ಹೋಗದೆ ಧೈರ್ಯವತಾಳಿ ಶತ್ರುಸಂಹಾರವನ್ನು ನಡಿಸಿದನು.

ರಜಪೂತರು ಮಾಡಿದ ರಣಗರ್ಜನೆಯಿಂದ ಸುರಂಗದ ವ್ಯವಸ್ಥೆಯಲ್ಲಿ ತೊಡಗಿದ್ದ ಮಾನಸಿಂಹನು ಎಚ್ಚತ್ತು, ಪಾಳಯಕ್ಕೆ ಬರುವಷ್ಟರಲ್ಲಿಯೇ ದಂಡಿನಲ್ಲಿ ತುಂಬಾ ಅವ್ಯವಸ್ಥೆಯುಂಟಾಗಿ ಹೋಗಿತ್ತು. ತಮ್ಮ ಸೈನ್ಯದ ಕಡೆಯ ಉಕ್ಕಡದಲ್ಲಿ ರಜಪೂತರ ಹಾವಳಿ ಹೆಚ್ಚಾದ್ದರಿಂದ ಸೈನಿಕರಲ್ಲಿ ಅಸಂಖ್ಯಜನರು ಮಡಿದು ಹೋಗಿದ್ದರು. ಇತ್ತ ಕೋಟೆಯ ದಿನ್ನೆಯ ಮೇಲಿಂದ ಯಾಅಲ್ಲಾ! ಯಾಅಲ್ಲಾ! ತೋಬಾ, ತೋಬಾ! ಎಂದು ಉಚ್ಚ ರಿಸುತ್ತ ಅಸಂಖ್ಯಜನರು ನೆಲಕ್ಕುರುಳುತ್ತಿದ್ದರು. ಇದನ್ನೆಲ್ಲ ನೋಡಿ ಮಾನಸಿಂಹನಿಗೆ ತುಂಬಾ ಸಂತಾಪವಾಯಿತು. ಅವನು ಹಾಗೆಯೇ ಕುದುರೆಯನ್ನೋಡಿಸುತ್ತ ಸೈನ್ಯದಲ್ಲಿ ಸೇರಿ ತಮ್ಮ ಜನರಿಗೆ ಧೈರ್ಯವನ್ನು ಕೊಡುತ್ತ ವ್ಯವಸ್ಥೆಯಿಂದ ಕಾದಾಡುವದಕ್ಕೆ ಸೂಚಿಸತೊಡಗಿದನು; ಆದರೆ ಸೈನ್ಯದ ವ್ಯೂಹವು ಕೆಟ್ಟುಹೋದದ್ದರಿಂದ ಈ ಕಾಳಗದಲ್ಲಿ ತನಗೆ ಜಯವು ಸಿಗಲಾರದೆಂದು ಖಂಡಿತವಾಗಿ ತಿಳಿದನು. ಅವನ ಈ ತಿಳುವಳಿಕೆಯಿಂದ ಅವನಿಗೆ ವಿಲಕ್ಷಣ ಸಂತಾಪವಾಯಿತು. ಸೇನಾಪತಿಯ ಇಂಥ ಅಧಿಕ ಪ್ರಸಂಗತನಕ್ಕೆ ಸಿಟ್ಟು ಬೆಂಕಿಯಾದನು; ಆದರೆ ಈತನ ಸಿಟ್ಟಿನಿಂದ

ಆಗುವ ಪ್ರಯೋಜನವೇನು! ಆಗುವ ಭವಿಷ್ಯವು ಆಗಿಯೇ ತೀರ ಬೇಕಾಯಿತು.

ಕಾಳಗವು ಪ್ರಾರಂಭವಾಗಿ ಸುಮಾರು ಮೂರುತಾಸುಗಳ ಅವಧಿಯು ಆಗುತ್ತ ಬಂದಿತು. ಅಷ್ಟರಲ್ಲಿ ಸೇನಾಪತಿಯು ಹತನಾದ್ದರಿಂದ ದಿನ್ನೆಯ ಮೇಲಿನ ಅವಶಿಷ್ಟ ಸೈನ್ಯವು ಬೀಳುತ್ತ-ಏಳುತ್ತ ತಮ್ಮ ಸೈನ್ಯವಿದ್ದೆಡೆಗೆ ಓಡುತ್ತ ಬಂದಿತು. ಮೊಗಲ ಸೈನ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಸಂಹೃತರಾಗಿದ್ದರೂ ರಜಪೂತ ಸೈನ್ಯದಲ್ಲಿ ಕಾಲುಭಾಗದಷ್ಟು ಜನರು ಕೂಡಾ ಮಡಿದಿದ್ದಿಲ್ಲ. ಈ ವಿಷಮಸ್ಥಿತಿಯನ್ನು ನೋಡಿ ಮಾನಸಿಂಗನು ತೀರಾ ಹತಾಶನಾದನು. ಸೈನಿಕರಿಗೆ ಹುರುಪು ಕೊಡಲಿಕ್ಕೆ ಅವನ ನಾಲಿಗೆಯೇ ಚಲಿಸದಂದಾಯಿತು. ಕ್ಷಣಕ್ಷಣಕ್ಕೆ ಸೈನ್ಯವು ಕ್ಷಯಿಸ ಹತ್ತಿದ್ದರಿಂದ ಇನ್ನು ಎರಡೇ ತಾಸುಗಳಲ್ಲಿ ತಮ್ಮ ಸೈನ್ಯವೆಲ್ಲ ಧಾರಾತೀರ್ಥದಲ್ಲಿ ಪತನಹೊಂದುವದೆಂಬ ಲಕ್ಷಣವು ತೋರಿತು. ಆ ಕೂಡಲೆ ಅವನು ಮಾನಾಪಮಾನಗಳನ್ನೆಲ್ಲ ತೊರೆದು ಕಾಳಗದ ಕಣದಿಂದ ಕಾಲ್ದೆಗೆದನು. ತಮ್ಮ ಮುಖ್ಯಸ್ಥನೇ ಹೀಗೆ ಪಲಾಯನ ಸೂಕ್ತವನ್ನು ಪಠಿಸಿದ್ದನ್ನು ನೋಡಿ ಮೊಗಲಸೈನಿಕರೂ ದಾರಿಸಿಕ್ಕತ್ತ ಓಡಿದರು. ರಜಪೂತರು ಅವರಲ್ಲಿ ಎಷ್ಟೋ ಜನರನ್ನು ಬೆನ್ನಟ್ಟಿ ಸಂಹರಿಸಿದರು. ಎಷ್ಟೋ ಜನರನ್ನು ಸೆರೆಹಿಡಿದರು. ಮೊಗಲರ ಅರವತ್ತುಸಾವಿರ ಸೈನಿಕರಲ್ಲಿ ಆರುಸಾವಿರ ಜನರು ಬದುಕಿ ಉಳಿದರೋ ಅಥವಾ ಮೂರುಸಾವಿರಜನರು ಬದುಕಿ ಉಳಿದರೋ ನಿರ್ಧಾರವಾಗಿ ಹೇಳಲು ಅಶಕ್ಯವೇ ಸರಿ! ರಜಪೂತರಿಗೆ ಸಂಪೂರ್ಣವಾಗಿ ವಿಜಯವು ದೊರೆಯಿತು. ಮೊಗಲರು ಸಂಪೂರ್ಣವಾಗಿ ಪರಾಜಿತರಾಗಿ ಓಡಿದರು. ವಿಜಯಶಾಲಿಗಳಾದ ರಜಪೂತರೆಲ್ಲರೂ ಅತ್ಯಂತ ಉತ್ಸಾಹದಿಂದ ಕೋಟೆಯನ್ನು ಪ್ರವೇಶಿಸಿದರು.

೨೦—ರಾಜದಂಡ.

ಒಂದು ಮಾಳವಾ ರಾಜಧಾನಿಯಲ್ಲಿ ಬಹು ಸಂಭ್ರಮ; ಎಲ್ಲೆಲ್ಲಿ ನೋಡಿದರೂ ಆನಂದವೇ ಆನಂದ; ಸ್ವರಾಜ್ಯ ಸುಖ; ಅರಮನೆಯಲ್ಲಿ ದೊಡ್ಡ ಉತ್ಸವ; ವೀರಸಿಂಹಮಹಾರಾಜನಿಗೆ ಪಟ್ಟಾಭಿಷೇಕ; ಕೀರ್ತಿ

ಸಿಂಹಾದಿ ವೀರಶ್ರೇಷ್ಠರಿಗೆ ಆದ ಆನಂದವನ್ನು ಹೇಳಲೇ ತೀರದು. ಈ ಆನಂದವು ಅವರ್ಣನೀಯವಾದುದು. ಕಳೆದು ಹೋದ ಸಾಮ್ರಾಜ್ಯವು ಪುನಃ ಸ್ವಾಧೀನವಾದಾಗೆ ಆಗುವ ಆನಂದವನ್ನು ನಾವೆಂತು ಬಣ್ಣಿಸೋಣ!

ನಂದಕುಮಾರನು ಯುವರಾಜಪದವಿಯನ್ನು ಹೊಂದಿದನು. ಮಾಳವಾನಿವಾಸಿಗಳೆಲ್ಲರೂ ಈ ಮಹೋತ್ಸವವನ್ನು ಕಣ್ಣು ತುಂಬಾ ನೋಡಿ ಧನ್ಯರಾದರು. [illegible]ವು ವರುಷಗಳ ಹಿಂದೆ ಮಾಳವಾಸಿಂಹಾಸನವು ಮುಸಲ್ಮಾನರ ಸ್ವೈವಶವಾದಾಗೆ ಆ ಸ್ವಾಭಿಮಾನೀ ರಜಪೂತರಿಗೆ ಎಷ್ಟು ದುಃಖವಾಗಿತ್ತೋ ಅದರ ಇಮ್ಮಡಿ ಸಂತೋಷವು ಈ ದಿನ ಆಯಿತೆಂದು ಹೇಳಬಹುದು. ಪುನಃ ರಜಪೂತ ರಾಜಸತ್ತೆಯು ಮಾಳವಾದಲ್ಲಿ ನೆಲೆಗೊಂಡಿತು. ರಜಪೂತ ರಾಜದಂಡವು ರಾಷ್ಟ್ರದಲ್ಲಿ ಮೆರೆಯತೊಡಗಿತು. ಪ್ರಿಯ ವಾಚಕರೇ, ಮೂರ್ತಿಮಂತ ಸ್ವಾಭಿಮಾನವಾದ ಈ ರಾಜದಂಡವನ್ನು ನೋಡಿ ಅಲ್ಲಿಯ ಪ್ರಜೆಗಳಿಗೆ ಎಷ್ಟು ಆನಂದವಾಗಿರಲಿಕ್ಕಿಲ್ಲ?

* * * * * * * * * * * * * * *

ಕೀರ್ತಿಸಿಂಹನ ಸಹೋದರಿಯಾದ ಪದ್ಮಿನಿಯು ಯುವರಾಜನಾದ ನಂದಕುಮಾರನ ಪಾಣಿಗ್ರಹಣವಾಡಿ, ಮಾಳವಾರಾಷ್ಟ್ರದ ಭಾವೀರಾಜ್ಞಿಯ ಪದವಿಯನ್ನು ಹೊಂದಿದಳು. ಈ ಕಾದಂಬರಿಯ ಮೊದಲನೆಯ ಪ್ರಕರಣದಲ್ಲಿ ಹೇಳಿದಂತೆ ನಂದಕುಮಾರನು ಯಾವ ತರುಣಿಯ ಬಂಧವಿಮೋಚನೆಯನ್ನು ಮಾಡಿದ್ದನೋ [illegible] ತರುಣಿಯು ರಣಮಲ್ಲನ ಮಗಳಾದ ರೂಪಮತಿಯೆಂಬದು ನಮ್ಮ ವಾಚಕರ ಸ್ಮರಣೆಯಲ್ಲಿರಬಹುದು. ಈ ರೂಪಮತಿಯು ನಂದಕುಮಾರನನ್ನಲ್ಲದೆ ಬೇರೆ ಯಾರನ್ನೂ ಪತಿಯನ್ನಾಗಿ ಭಾವಿಸಲಾರೆನೆಂದು ಖಂಡಿತವಾಗಿ ಹೇಳಿಬಿಟ್ಟದ್ದರಿಂದ ನಂದಕುಮಾರನು ಆಕೆಯ ಪಾಣಿಗ್ರಹಣವನ್ನೂ ಮಾಡಿದನು.

* * * * *

ಕೀರ್ತಿಸಿಂಹನು ಮುಖ್ಯ ಮಂತ್ರಿಪದವನ್ನು ವಹಿಸಿ ವೀರಸಿಂಹನಿಗೆ ಸಹಾಯ ಮಾಡತೊಡಗಿದನು. ರಣಮಲ್ಲನೂ, ರಣಜಿತಸಿಂಗನೂ ಸೇನಾಪತಿಗಳಾದರು.

* * * * * *

ಭಗ್ನಮನೋರಥನಾದ ಮಾನಸಿಂಗನು ಮೂರು ತಿಂಗಳವರೆಗೆ ಬಾದಶಹನಿಗೆ ಮೋರೆಯನ್ನು ತೋರಿಸಲಿಲ್ಲ. ಕೊನೆಗೆ ಬಾದಶಹನೇ

ಅವನಿದ್ದಲ್ಲಿಗೆ ಹೋಗಿ, ಅವನನ್ನು ಸಮಾಧಾನಗೊಳಿಸಬೇಕಾಯಿತು. ರಜಪೂತರ ಸಾಮರ್ಥ್ಯವೆಷ್ಟೆಂಬದನ್ನು ಚೆನ್ನಾಗಿ ಮನಗಂಡ ಮಾನಸಿಂಗನು ಮುಂದೆ ಮಾಳವಾದ ಮೇಲೆ ಸ್ವಾರಿಯನ್ನು ಮಾಡಲಿಲ್ಲ. ಕೆಲದಿನಗಳ ಮೇಲೆ ವೀರಸಿಂಹ ಮಹಾರಾಜನು ಮಗನಿಗೆ ಪಟ್ಟಗಟ್ಟಿ ತಾನು ಈಶ್ವರ ಚಿಂತನೆಯಲ್ಲಿ ಕಾಲಕಳೆಯತೊಡಗಿದನು. ಹಾಗು ಮಾನವೀದೇಹದ ಕೊನೆಯ ಧ್ಯೇಯವನ್ನು ಸಾಧಿಸಿಕೊಂಡನು.

ನಂದಕುಮಾರನು ಸಿಂಹಾಸನಾರೂಢನಾಗುವಾಗ ಒಂದು ಚಮತ್ಕಾರವು ವರ್ತಿಸಿತು. ಏನೆಂದರೆ:—ಓರ್ವ ಜಟಾಧಾರೀಪುರುಷನು ಒಮ್ಮೆಲೆ ಅಲ್ಲಿ ಪ್ರಕಟನಾದನು. ನೆರೆದ ಜನರಿಗೆ ತುಂಬಾ ಆಶ್ಚರ್ಯವಾಯಿತು. ನಂದಕುಮಾರನು ದಿಟ್ಟಿಸಿ ನೋಡಿದನು. ತನ್ನ ಗುರುವೆಂಬದು ಗೊತ್ತಾಯಿತು. ಕೂಡಲೆ ಅವನು ಧಾವಿಸಿ ಆ ಮಹಾತ್ಮರ ಚರಣಕಮಲಗಳಲ್ಲಿ ಮಸ್ತಕವನ್ನಿಟ್ಟನು. ನೆರೆದ ಸರದಾರರಿಗೂ, ವೀರಸಿಂಹ ಮಹಾರಾಜರಿಗೂ ಇದರ ರಹಸ್ಯವು ತಿಳಿಯದಾಯಿತು. ಅವರು ಕೌತುಕಪಡುತ್ತ ನಿಂತಿರಲು, ಆ ಜಟಾಧಾರೀಪುರುಷನನ್ನು ನಂದಕುಮಾರನು ಉಚ್ಚಾಸನದಲ್ಲಿ ಕುಳ್ಳಿರಿಸಿ, ನೆರೆದವರನ್ನು ಕುರಿತು ನುಡಿದನೇನೆಂದರೆ: "ಈ ಮಹಾತ್ಮರು ನನ್ನ ಗುರುಗಳು; ಇವರ ಸಂಗತಿಯು ತಮಗೆ ಇನ್ನು ಮುಂದೆ ತಿಳಿಯುವದು. ನಾನು ಸಿಂಹಾಸನವೇರುವ ಮಂಗಲ ಸಮಯದಲ್ಲಿ ಈ ಮಹಾತ್ಮರ ಆಗಮನವಾದದ್ದು ಎಂಥ ಅಪೂರ್ವಯೋಗವೆಂಬದನ್ನು ನಾನು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ನಮಗೆ ಈ ರಾಜ್ಯವು ದೊರೆತದ್ದು ಈ ಮಹಾತ್ಮರ ಆಶೀರ್ವಾದದಿಂದಲೇ ಎಂಬದು ನನಗೆ ನಂಬಿಕೆಯಾಗಿದೆ."

ಈ ಮೇರೆಗೆ ನಂದಕುಮಾರನು ಮಾತನಾಡುತ್ತಿರಲು, ಜಟಾಧಾರಿಗಳು ರಾಜಕುಮಾರ, ಎಂದು ಒಮ್ಮೆ ಉಚ್ಚರಿಸಿದರು. ನಂದಕುಮಾರನು ಅಪ್ಪಣೆ ಎಂದು ಅವರ ಚರಣಸನ್ನಿಧಿಯಲ್ಲಿ ನಿಂತುಕೊಂಡನು. ಆಗ ಆ ಮಹಾತ್ಮರು ತಮ್ಮ ಗಂಭೀರವಾದ ಧ್ವನಿಯಿಂದ:—ನಿನಗೆ ಒಂದೆರಡು ಹಿತದ ಮಾತುಗಳನ್ನು ಹೇಳುವದಕ್ಕೆ ಬಂದಿದ್ದೇನೆ. ಅವನ್ನು ಮನಸ್ಸುಗೊಟ್ಟು ಲಾಲಿಸಿ, ಅದರಂತೆ ಆಚರಿಸು; ಅಂದರೆ ನಿನ್ನ ಧವಲಕೀರ್ತಿಯು ದಿಗಂತಗಳಲ್ಲಿ ಪಸರಿಸುವದು. ನೀನು ಈಗ ಮಾಳವಾ ಸಿಂಹಾಸನದ

ಅಧಿಪತಿಯು! ಮಾಳವಾ ಪ್ರಜೆಗಳ ತಾಯಿ-ತಂದೆಯು! ನಿನ್ನ ಮೇಲೆ ಬಹುಸಂಖ್ಯಾಕ ಪ್ರಜೆಗಳನ್ನು ಸಂರಕ್ಷಿಸುವ ಭಾರವು ಬಿದ್ದಿದೆ. ಇಂಥ ಕೆಲಸವನ್ನು ನಿಸ್ತರಿಸಿಕೊಳ್ಳಲು, ನೀನು ಅರ್ಹನಿರುತ್ತೀ; ಆದರೂ ಈ ಕಾಲಕ್ಕೆ ನಿನಗೆ ಸದುಪದೇಶ ಮಾಡುವದು ನನ್ನ ಕರ್ತವ್ಯವಾಗಿದೆ. ನಿನ್ನ ತಂದೆಯು ಕೃತಕೃತ್ಯನಾದನು. ಅವನು ಕಳೆದು ಹೋದ ಸಾಂಮ್ರಾಜ್ಯವನ್ನು ಸಂಪಾದಿಸಿ ನಿನಗೆ ಅರ್ಪಿಸಿದ್ದರಿಂದ ಇನ್ನು ಮುಂದಿನ ಕೆಲಸವೆಲ್ಲ ನಿನ್ನದೇ ಎಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ರಾಜನಿಗೆ ಮುಖ್ಯವಾಗಿ ಪ್ರಜಾಪಾಲನವೇ ಶ್ರೇಷ್ಠ ಧರ್ಮವು; ಪ್ರಜೆಗಳನ್ನು ಪಾಲಿಸುವದಕ್ಕೇ ರಾಜನ ಯೋಜನೆಯು! ಕೆಲಜನ ರಾಜರು ಈ ಮೂಲಭೂತ ವಿಷಯವನ್ನು ಐಶ್ವರ್ಯದ ಮದದಿಂದ ಮರೆತುಬಿಡುವರು. ಅವರ ಈ ಮರೆಯುವಿಕೆಗೆ ಪ್ರಜಾಪೀಡನವೇ ಫಲವಾಗಿ ಪರಿಣಮಿಸುವದು; ಆದರೆ ಕುಮಾರ, ನೀನು ಅಂಥ ಪ್ರಜಾದ್ರೋಹಕ್ಕೆ ಎಂದೂ ಮನಸ್ಸು ಮಾಡಬೇಡ. ಪ್ರಜಾಕ್ಷೋಭವು ಸಾಮಾನ್ಯವಾದದ್ದಲ್ಲ. ಈ ಪ್ರಜಾಕ್ಷೋಭದಿಂದ ಎಷ್ಟೋ ಜನ ರಾಜರು ಧೂಳಿಸಾತ್ ಆಗಿರುವರು. ಇಹದಲ್ಲಿ ಹೀಗೆ ಅಕಲ್ಯಾಣವಾಗುವದಲ್ಲದೆ ಪರದಲ್ಲಿ ನರಕಪ್ರಾಪ್ತಿಯೂ ಆಗುವದು. ಆದ್ದರಿಂದ ಇಹ-ಪರಗಳೆರಡರಲ್ಲಿ ದುಃಖದಾಯಕವಾದ ಪ್ರಜಾಕ್ಷೋಭವನ್ನು ಯಾವ ರಾಜನೂ ಕಟ್ಟಿಕೊಳ್ಳಬಾರದು.

ರಾಜನಾದವನಿಗೆ ಮೈತುಂಬ ಕಣ್ಣುಗಳಿರಬೇಕಾಗುತ್ತದೆ. ಅವನು ಮೂರ್ತಿಮಂತ ಧರ್ಮವೇ ಆಗಿರಬೇಕು. ನೀತಿಗೆ ಆಗರವಾಗಿರಬೇಕು. ರಾಜನೇ ಅನೀತಿವಂತನಾದರೆ ಪ್ರಜೆಗಳ ನೀತಿಯಾದರೂ ಕೆಟ್ಟುಹೋಗುವದು. ಯಾಕಂದರೆ ಅನೀತಿಗೆ ದಂಡನೆ ಇಲ್ಲವೆಂದ ಬಳಿಕ ಅವರ ಪ್ರಸಾರವು ಹೆಚ್ಚಾಗುವದು ಸ್ವಾಭಾವಿಕವೇ ಸರಿ! ನಿನ್ನ ರಾಜ್ಯದಲ್ಲಿಯ ಪ್ರಜೆಗಳು ಒಳ್ಳೇ ನೀತಿವಂತರಾಗಬೇಕಾದರೆ ನೀನು ನೀತಿವಂತನಾಗಲೇಬೇಕು. ರಾಜಕುಮಾರ! ಈ ನೀತಿಪಥದಿಂದ ನೀನು ಎಂದು ಚ್ಯುತನಾಗುವೆಯೋ ಅಂದೇ ನೀನು ಸಕಲ ವೈಭವಕ್ಕೆ ಅಂತರಿಸುತ್ತೀ, ಇದನ್ನು ಚೆನ್ನಾಗಿ ಧ್ಯಾನದಲ್ಲಿಡು. ನಿನಗೆ ದೇವರು ರಾಜ್ಯೈಶ್ವರ್ಯವನ್ನು ಕೊಟ್ಟದ್ದು ನಿನ್ನ ಸುಖಕ್ಕಾಗಿ ಅಲ್ಲ, ಈ ಐಶ್ವರ್ಯವನ್ನು ಕೇವಲ ನಿನ್ನ ವಿಷಯಸುಖಕ್ಕಾಗಿಯೇ ಹಾಳುಮಾಡಲು ನಿನಗೆ ಅಧಿಕಾರವಿಲ್ಲ. ನ್ಯಾಯುವಾದ ವಿಷಯಸುಖ

ವನ್ನು ಅನುಭವಿಸಲಿಕ್ಕೆ ಮಾತ್ರ ನಿನಗೆ ಅಧಿಕಾರವಿದೆ. ನೀನು ನಿನ್ನ ಬಳಿಯಲ್ಲಿರುವ ಸಂಪತ್ತಿನ ಬಹುಭಾಗವನ್ನು ರಾಜ್ಯರಕ್ಷಣೆಯಲ್ಲಿ ವೆಚ್ಚ ಮಾಡಬೇಕು. ರಾಜ್ಯದಲ್ಲಿಯ ಅನಾಥರಿಗೆ, ಅಂಗವಿಹೀನರಿಗೆ, ವಿದ್ಯಾವಂತರಿಗೆ ನಿನ್ನ ಸಂಪತ್ತಿನ ಉಪಯೋಗ ಮಾಡಿಕೊಡಬೇಕು. ಎಷ್ಟೋ ಜನ ಮೂರ್ಖರು ತಮ್ಮ ಬಳಿಯಲ್ಲಿದ್ದ ಸಂಪತ್ತಿಗೆ ತಾವೇ ಒಡೆಯರೆಂದು ದೇವರ ಅಂಜಿಕೆಯನ್ನು ಕೂಡಾ ಹಿಡಿಯದೆ ಮನಬಂದಂತೆ ನಡೆದು ಪುಣ್ಯಕ್ಷೀಣ ಮಾಡಿಕೊಂಡು ನರಕಭಾಗಿಗಳಾಗುವರು. ಇದರಿಂದ ಐಶ್ವರ್ಯವು ಅನೀತಿಗೆ ಕಾರಣವೆಂದು ಅಪಕ್ವವಿಚಾರದ ಜನರು ಅನ್ನುವರು. ಯಾವನು ಐಶ್ವರ್ಯದಿಂದ ಮತ್ತನಾಗುವದಿಲ್ಲವೋ ಅಂಥವನಿಂದ ಅನೀತಿಯು ಎಂದೂ ಸಂಭವಿಸಲಾರದು.

ರಾಜಕುಮಾರ! ನಿನಗೆ ಹೆಚ್ಚಿಗೆ ಹೇಳಲಿನ್ನೇನು? ನಿನ್ನಲ್ಲಿ ಸರ್ವದಾ ವಿವೇಕವು ಜಾಗ್ರತವಾಗಿರಲಿ; ಪ್ರಜೆಗಳ ಹಿತಕ್ಕಾಗಿ ದೇವರು ನನ್ನ ಕೈಯಲ್ಲಿ ಆರಸೊತ್ತಿಗೆಯನ್ನು ಕೊಟ್ಟಿರುವನೆಂಬ ಸ್ಮರಣವು ಸರ್ವದಾ ಜಾಗ್ರತವಾಗಿರಲಿ. ಪ್ರಜೆಗಳಿಗೆ ಯೋಗ್ಯನ್ಯಾಯವು ದೊರೆಯಬೇಕು. ಅವರ್ಷಣಾದಿ ಪ್ರಸಂಗಗಳಲ್ಲಿ ಪ್ರಜೆಗಳಿಗೆ ಜೀವನಕ್ಕೆ ಅನುಕೂಲ ಮಾಡಿಕೊಡಬೇಕು. ನಿನ್ನಲ್ಲಿ ಸರ್ವದಾ ಪ್ರಜೆಗಳ ಪ್ರೇಮಹೆಚ್ಚುವಂತೆ ನಡಿಯಬೇಕು. ಶ್ರೀರಾಮಚಂದ್ರಪ್ರಭುವು ಪ್ರಜೆಗಳನ್ನು ಸಂರಕ್ಷಿಸುವಲ್ಲಿ ಯಾವ ದಕ್ಷತೆಯನ್ನು ವಹಿಸಿದ್ದನೋ ಅಂಥ ದಕ್ಷತೆಯಿದ್ದವನೇ ಉತ್ತಮರಾಜನೆನಿಸುವನು. ನೀನು ಅಂಥ ಉತ್ತಮರಾಜನಾಗಬೇಕೆಂದು ನಾನು ಇಚ್ಛಿಸುತ್ತೇನೆ.

ದುಷ್ಟರನ್ನು ದಂಡಿಸುವದಕ್ಕೆ ತಪ್ಪಬೇಡ. ಶಿಷ್ಟರನ್ನು ಪಾಲಿಸುವದರಲ್ಲಿ ಉದಾಸೀನನಾಗಬೇಡ. ಕ್ಷಮೆಯನ್ನು ಎಲ್ಲಿ ಉಪಯೋಗಿಸಬೇಕು? ರೌದ್ರವನ್ನು ಎಲ್ಲಿ ಉಪಯೋಗಿಸಬೇಕು? ಎಂಬ ತಾರತಮ್ಯವು ನಿನಗೆ ಅವಗತವಿರಬೇಕು. ಯುಕ್ತಾಯುಕ್ತ ವಿಚಾರವಿಲ್ಲದವನು ಜಗತ್ತಿನಲ್ಲಿ ಯಾವ ಕಾರ್ಯದಲ್ಲಿಯೂ ಯಶಸ್ಸನ್ನು ಹೊಂದಲಾರನು. ಈ ವಿಷಯದಲ್ಲಿ ನಿನಗೆ ಉಪದೇಶ ಮಾಡತಕ್ಕ ಭಾಗವು ಇನ್ನೂ ಹೆಚ್ಚಾಗಿದೆ. ಆದರೆ ಅದನ್ನೆಲ್ಲ ಸಮಗ್ರವಾಗಿ ಇಂದೇ ಹೇಳುತ್ತ ಕುಳಿತರೆ ವೇಳೆಯು ಸಾಲಲಿಕ್ಕಿಲ್ಲ. ಹೇಳಿದ್ದೆಲ್ಲ ನಿನ್ನ ಸ್ಮರಣೆಯಲ್ಲಿಯೂ ಉಳಿಯಲಿಕ್ಕಿಲ್ಲ!!

ಆದ್ದರಿಂದ ಪ್ರಸಂಗವರಿತು ನಾನು ಆಗಾಗ್ಗೆ ನಿನಗೆ ಭೆಟ್ಟಿಯಾಗಿ ಉಪದೇಶ ಮಾಡುತ್ತ ಹೋಗುವೆನು.

ಈ ಮೇರೆಗೆ ನುಡಿದು ಆ ಮಹಾತ್ಮರು ಸುಮ್ಮನೆ ಕುಳಿತುಕೊಳ್ಳಲು, ನಂದಕುಮಾರನಿಗೂ, ವೀರಸಿಂಹ ಮಹಾರಾಜನಿಗೂ, ಉಳಿದ ಪರಿವಾರಕ್ಕೂ ತುಂಬಾ ಸಂತೋಷವಾಯಿತು. ಆಗ ನಂದಕುಮಾರನು ತನಗೆ ಈ ಮಹಾತ್ಮರ ದರ್ಶನವಾದ ಸಂಗತಿಯನ್ನೂ, ತಾನು ಅವರಲ್ಲಿ ಒಂದು ರಾತ್ರಿಯನ್ನು ಕಳೆದ ಸಂಗತಿಯನ್ನೂ ಸಂಪೂರ್ಣವಾಗಿ ಹೇಳಿದನು. ಆ ಸಂಗತಿಯ ಶ್ರವಣದಿಂದ ಆ ಮಹಾತ್ಮರ ವಿಷಯಕ್ಕೆ ಎಲ್ಲರಲ್ಲಿಯೂ ಪೂಜ್ಯಬುದ್ಧಿಯುಂಟಾಯಿತು. ಬಳಿಕ ಆ ಮಹಾತ್ಮರು ಕುಳಿತ ಆಸನದಿಂದ ಕೆಳಗಿಳಿದು ನಂದಕುಮಾರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಆತನಿಗೆ ಅಖಂಡ ರಾಜ್ಯ ಲಕ್ಷ್ಮಿಯು ಲಭಿಸುವಂತೆ ಆಶೀರ್ವದಿಸಿದರು. ಈ ಅಲಭ್ಯ ಪ್ರಸಂಗದಿಂದ ಮಾಳವಾ ರಾಜಪರಿವಾರದ ಹೃದಯಗಳು ಪ್ರೇಮದಿಂದ ಪರಿಪೂರ್ಣವಾದವು. ತಮ್ಮ ರಾಜವಂಶವು ಸ್ಥಿರವಾಯಿತು; ತಮ್ಮ ಸ್ವಾತಂತ್ರ್ಯವು ಅಕ್ಷಯವಾಯಿತು, ಎಂದು ಕುಣಿದಾಡಿದರು. ಬಳಿಕ ಆ ಮಹಾತ್ಮರು ಸರ್ವರೂ ನೋಡುತ್ತಿರಲು ಗುಪ್ತರಾದರು.

* * * * *

ಆ ಮಹಾತ್ಮರ ಕೃಪಾದೃಷ್ಟಿಯಿಂದ ನಂದಕುಮಾರನ ಅರಸೊತ್ತಿಗೆಯು ಪ್ರಜೆಗಳಿಗೆ ಕ್ಷೇಮಕರವಾಯಿತು. ಆತನು ಶತ್ರುಗಳಿಗೆ ಅಜಿಂಕ್ಯನಾದನು. ರಜಪೂತ ಸ್ವಾತಂತ್ರ್ಯ ರಾಜದಂಡವನ್ನು ಧರಿಸಿದ ರಾಜದೂತರು ಹಳ್ಳಿ ಹಳ್ಳಿಗೆ ಹೆಚ್ಚಿ, ಮಾಳವಾ ನಿವಾಸಿಗಳ ಸುಖಸಂಪತ್ತನ್ನು ಹೆಚ್ಚಿಸಿದನು. ಪ್ರಿಯ ವಾಚಕ ವೃಂದ! ಇಂಥ ಸುಖಸಾಮ್ರಾಜ್ಯವನ್ನು ಕಂಡ ಆ ಮಾಳವಾ ನಿವಾಸಿಗಳೇ ಧನ್ಯರಲ್ಲವೇ!!

ಸಂಪೂರ್ಣ.

